UNIVERSAL
LIBRARY
OU_200421
UNIVERSAL
LIBRARY

ಐದನೆಯ ಪ್ರಕಟನೆ:-

# ದೇವದಾಸ

ದಿವಂಗತ ಶರಚ್ಚಂದ್ರ ಚಟರ್ಜಿಯವರ ಕಾದಂಬರಿ

ಶ್ರೀ ಗುರುನಾಥ ಜೋಶಿ

ಸಾಹಿತ್ಯ ಭಾಂಡಾರ, ಹುಬ್ಬಳ್ಳಿ

೧೯೩೯

ಪ್ರಕಾಶಕರು :

ಮಂಗಳೂರು ಗೋವಿಂದರಾಯರು

ಸಾಹಿತ್ಯ ಭಾಂಡಾರ, ಹುಬ್ಬಳ್ಳಿ

ಬೆಲೆ ಸಾದಾ ಪ್ರತಿ ೧—೦—೦

ಕ್ಯಾಲಿಕೊ ,, ೧—೮—೦

ಮುದ್ರಕರು :

ಶೇಷಗಿರಿರಾವ ಗೋವಿಂದರಾವ ಕುಲಕರ್ಣಿ

ಸಾಧನ ಪ್ರೆಸ್, ಧಾರವಾಡ

೪೧—೩೯

ಸಮಾಜದೊಳಗಿನ

# ದೇವದಾಸ-ಪಾರ್ವತಿಯರಿಗೆ

# ಪರಿವಿಡಿ


| | | | |
|---|---|---|---|
| ೧) | ಪ್ರಕಾಶಕರ ಮಾತು | .. | ೧–೨ |
| ೨) | ಮುನ್ನುಡಿ | .. | ೩–೫ |
| ೩) | ಶರಚ್ಚಂದ್ರರ ಜೀವನ ಮತ್ತು ಸಾಹಿತ್ಯ | .. | ಒಂದು–ಇಪ್ಪತ್ತು |
| ೪) | ದೇವದಾಸ | .. | ೧–೧೬೪ |

# ಪ್ರಕಾಶಕರ ಮಾತು

ಕನ್ನಡ ವಾಚಕರ ಕೈಸೇರುತ್ತಿರುವ ಈ 'ದೇವದಾಸ' ಕಾದಂಬರಿ ನಮ್ಮ ಐದನೆಯ ಪ್ರಕಟನೆ. ಈ ಮೊದಲಿನ ನಾಲ್ಕು ಪುಸ್ತಕಗಳಿಗೆ ಸಿಕ್ಕ ಪ್ರೋತ್ಸಾಹನದಿಂದ ಧೈರ್ಯಗೊಂಡು ಇದನ್ನು ಪ್ರಕಾಶಗೊಳಿಸಲಾಗಿದೆ. ಈ ವರೆಗೆ ನಮ್ಮ 'ಭಾಂಡಾರ'ದಿಂದ ಕಾದಂಬರಿ ಪ್ರಕಟವಾಗಿರಲಿಲ್ಲ; ಆ ಕೊರತೆ ಈಗ ತುಂಬಿ ಬಂತು. ನಮ್ಮ ಇತರ ಪ್ರಕಟನೆಗಳಿಗೆ ಪ್ರೋತ್ಸಾಹ ಕೊಟ್ಟಂತೆ—ಅದಕ್ಕೂ ಹೆಚ್ಚಾಗಿ—ವಾಚಕರು ಇದಕ್ಕೂ ಪ್ರೋತ್ಸಾಹ ಪನ್ನೀಯುವರೆಂದು ನಂಬುಗೆ.

'ದೇವದಾಸ' ಕಾದಂಬರಿಯೊಳಗಿನ ನಾಲ್ಕು ವ್ಯಕ್ತಿಗಳು—ದೇವ ದಾಸ, ಪಾರ್ವತಿ, ಚಂದ್ರಾ, ಧರ್ಮದಾಸ—ಯಾವಾಗಲೂ ನೆನಪಿನಲ್ಲು ಳಿಯತಕ್ಕವ್ರಗಳು. ದೇವದಾಸ—ಪಾರ್ವತಿಯರನ್ನಂತೂ ಮರೆಯುವುದೇ ಅಸಾಧ್ಯ. ಅವರ ದುಃಸ್ಥಿತಿಯನ್ನು ಕಂಡು ಯಾರೂ ಮರುಗದಿರರು. ಅವರ ಒಗೆಗೆ ಮನಸ್ಸು ಕರಗುತ್ತದೆ; ಅನುಕಂಪ, ಆತ್ಮೀಯ ಭಾವನೆ ಉಂಟಾಗು ತ್ತದೆ. ಈ ಎರಡೂ ಪಾತ್ರಗಳು ಓದುಗರ ಹೃದಯವನ್ನೆ ಹಿಂಡುತ್ತವೆ. ಇವು ಬರಿಯ ಸಾಹಿತ್ಯ—ಸೃಷ್ಟಿಯೊಳಗಿನ ಪಾತ್ರಗಳಲ್ಲ; ಜೀವಂತಸೃಷ್ಟಿ ಯಲ್ಲಿಯೂ ಇಂಥ ಪಾತ್ರಗಳನ್ನು ಹೇರಳವಾಗಿ ಕಾಣಬಹುದು. ನಮ್ಮ ಸಮಾಜದಲ್ಲಿ ದೇವದಾಸ—ಪಾರ್ವತಿಯರು ಇಡಿಯಾಗಿಯೊ ಬಿಡಿ ಯಾಗಿಯೊ ಬೇಕಾದಷ್ಟು ಸಿಕ್ಕುತ್ತಾರೆ. ಎಷ್ಟು ಜನ ಪ್ರೇಮಿಗಳು ಪವಿತ್ರ ಪ್ರೇಮಕ್ಕೆರವಾಗಿ ಸಂಕಟಪಡುತ್ತಿಲ್ಲ! ಅವರ ಪ್ರತಿರೂಪವೇ ಈ ಕಾದಂಬರಿಯೊಳಗಿನ ವ್ಯಕ್ತಿಗಳೆಂದೆನಿಸುವುದು. 'ದೇವದಾಸ' ಕಾದಂಬ ರಿಯ ಹಸ್ತಪ್ರತಿಯನ್ನು ಶ್ರೀ. ಗುರುನಾಥ ಜೋಶಿಯವರಿಂದ ಪಡೆದು ಕಣ್ಣೀರು ಮಿಡಿಯುತ್ತಲೇ ಸಂಪೂರ್ಣವಾಗಿ ಓದಿದೆ. ಅಂತಹ ಒಳ್ಳೆಯ ಪುಸ್ತಕ ಕನ್ನಡ ಸಾಹಿತ್ಯದಲ್ಲಿರದಿರುವುದು ಅದೊಂದು ಕೊರತೆಯೆಂದೆನಿ ಸಿತು. ಪ್ರಕಾಶನಕ್ಕೆ ಶ್ರೀ. ಗುರುನಾಥ ಜೋಶಿಯವರನ್ನು ಕೇಳಿದೆ.

ಅವರು ಸಂತೋಷದಿಂದ ಒಪ್ಪಿಕೊಂಡರು. ಹೀಗೆ ಶರತ್‌ಚಂದ್ರರಂತಹ ಜಗದ್ವಂದ್ಯ ವ್ಯಕ್ತಿಗಳ ಅತ್ಯುತ್ತಮ ಕಾದಂಬರಿಗಳಲ್ಲೊಂದಾದ ಇದನ್ನು ಸುಂದರವಾಗಿ ಕನ್ನಡಿಸಿ ಪ್ರಸಿದ್ಧಿಸಲು ನಮಗೆ ಒದಗಿಸಿಕೊಟ್ಟುದಕ್ಕಾಗಿ ಶ್ರೀ. ಗುರುನಾಥ ಜೋಶಿಯವರಿಗೆ ನಾವು ಆಭಾರಿಗಳು.

ಶರತ್‌ಚಂದ್ರರ ನಾಲ್ಕಾರು ಕಾದಂಬರಿಗಳು ಈಗ ಕನ್ನಡ ಓದುಗರ ಕೈಸೇರಿವೆ; ಅವುಗಳನ್ನು ಓದಿ ಓದುಗರು ಮೆಚ್ಚಿದ್ದಾರೆ. ಆದರೆ ಅವರ ಪರಿಚಯ ಕನ್ನಡಿಗರಿಗೆ ಬಹು ಸ್ವಲ್ಪ–ಏನೂ ಇಲ್ಲವೆನ್ನುವಷ್ಟು–ಮಾತ್ರ ಇದೆ. ಆದುದರಿಂದ ಅವರ 'ಜೀವನ ಮತ್ತು ಸಾಹಿತ್ಯ'ದ ಪರಿಚಯವನ್ನೂ ಒದಗಿಸಿಕೊಡುವುದು ಯೋಗ್ಯವೆಂದೆನಿಸಿತು. ಅದಕ್ಕಾಗಿ ಶಾಂತಿನಿಕೇತನದಲ್ಲಿದ್ದು ಬಂಗಾಲಿಯನ್ನು ಚೆನ್ನಾಗಿ ಅಭ್ಯಾಸ ಮಾಡಿ ಆ ಸಾಹಿತ್ಯವನ್ನೂ ಅಲ್ಲಿಯ ಜನಜೀವನವನ್ನೂ ತಿಳಿದುಕೊಂಡಿದ್ದ ನನ್ನ ಸ್ನೇಹಿತರಾದ ಶ್ರೀ. ಹಳ್ಳಿಪ್ಪನವರು ಗೋವಿಂದರಾಯರನ್ನು ಕೇಳಿದಾಗ ಅವರೂ ಸಂತೋಷದಿಂದ ಒಪ್ಪಿಕೊಂಡು, ನಾಲ್ಕೇ ಸರಳ–ವಕ್ರ ಗೆರೆಗಳಿಂದ ಇಡೀ ವ್ಯಕ್ತಿತ್ವವನ್ನೇ ಸ್ಪಷ್ಟವಾಗಿ ತೋರಿಸುವ ಚಿತ್ರಕಾರನಂತೆ ಸಂಕ್ಷೇಪವಾಗಿ, ಮುದ್ದಾಗಿ ಬರೆದುಕೊಟ್ಟರು. ನಮಗೆ ಅನುಕೂಲವಿಲ್ಲದಾಗ ಪ್ರೂಫನ್ನು ತಿದ್ದಿ ನೆರವಾದವರು ಶ್ರೀ. ಚುಳಕಿ ಗೋವಿಂದರಾಯರು. ಇವರೆಲ್ಲರಿಗೂ, ಮುದ್ದಾಗಿ ಸುಂದರವಾಗಿ ಅಚ್ಚು ಹಾಕಿದ ಸಾಧನ ಮುದ್ರಣಾಲಯದ ಒಡೆಯರಿಗೂ ಹೃತ್ಪೂರ್ವಕ ವಂದನೆಗಳು. ನಮ್ಮ ಭಾವೀ ಸಮಾಜದೊಳಗಿನ ಒಬ್ಬ ದೇವದಾಸನ, ಒಬ್ಬ ಪಾರ್ವತಿಯ ದುಃಖಶಮನವಾಯಿತೆಂದರೆ ಕನ್ನಡದಲ್ಲಿ ಈ ಕಾದಂಬರಿಯ ಪ್ರಕಾಶನಕ್ಕೆ ಕಾರಣರಾದ ಎಲ್ಲರ ಶ್ರಮವೂ ಸಾರ್ಥಕವೆಂದು ನಮ್ಮ ಭಾವನೆ.

ಹುಬ್ಬಳ್ಳಿ
೨೮–೨–೩೯

**ಪ್ರಕಾಶಕ**

# ಮುನ್ನುಡಿ

ದಿವಂಗತ ಶರತ್‌ಬಾಬುಗಳ ಕತೆ–ಕಾದಂಬರಿಗಳಲ್ಲಿ ಮಧ್ಯಮ ತರಗತಿಯ ಜನರ ಜೀವನದ ಸನ್ನಿವೇಶ ಸಮಸ್ಯೆಗಳ ವಿಚಾರವೇ ಹೆಚ್ಚಾಗಿ ಕಂಡು ಬರುವುದು. ಮನುಷ್ಯನ ಜೀವನವನ್ನು ವ್ಯರ್ಥವನ್ನಾಗಿ ಮಾಡಿಬಿಡುವ ಎಲ್ಲ ಸಂಸ್ಕಾರಗಳ, ಆಚಾರ–ವಿಚಾರಗಳ ವಿರುದ್ಧ ಶರತ್‌ಬಾಬುಗಳು ಕಟುವಾದ ಟೀಕೆಯನ್ನು ಮಾಡಿರುವರು. ಕುಲ–ಮರ್ಯಾದೆ, ಧನ–ಸಂಪತ್ತುಗಳ ನೆಳಲಿನಲ್ಲಿ ಬೆಳೆಯುವವರಲ್ಲಿ ತಪ್ಪುಗಳು, ಕೆಟ್ಟ ನಡತೆಗಳು ಹೇರಳವಾಗಿ ಇರುವುವೆಂಬುದನ್ನೂ; ನೀಚರು, ಪತಿತರು, ಅಂತ್ಯ-ಜರು, ಕೆಟ್ಟವರು ಎನಿಸಿಕೊಳ್ಳುವವರಲ್ಲಿ ಮನುಷ್ಯತ್ವ ಅಥವಾ ಆತ್ಮೀ-ಯತೆ ಇರುವುದೆಂಬುದನ್ನೂ ತಮ್ಮ ಕೃತಿಗಳ ಮೂಲಕ ತೋರಿಸಿಕೊಟ್ಟಿದ್ದಾರೆ. ಶರತ್‌ಬಾಬುಗಳು ಲೆಕ್ಕಣಿಕೆ ಹಿಡಿದುದು ಮನುಷ್ಯನನ್ನು ಆದರ ಭಾವನೆಯಿಂದ, ಶ್ರದ್ಧೆಯಿಂದ ನೋಡಿರೆಂದು ಹೇಳುವುದಕ್ಕಾಗಿ; ಮಾನವನ ಜನ್ಮಸಿದ್ಧವಾದ ಹಕ್ಕನ್ನು ಸ್ಥಾಪಿಸುವುದಕ್ಕಾಗಿ. ಜೀವನವನ್ನು ಅವರು ತಮ್ಮ ಕಣ್ಣಿನಿಂದಲೇ ಕಂಡಿದ್ದರು; ಅದರ ಆಘಾತ-ಪ್ರತ್ಯಾಘಾತಗಳನ್ನು ಸಹಿಸಿದ್ದರು. ಸಮಾಜದಲ್ಲಿ ಅವರು ಕಂಡ ದುಃಖ, ವೇದನೆಗಳೆ ಅವರ ಸಾಹಿತ್ಯ ಸೃಷ್ಟಿಗೆ ಅಮೃತವನ್ನುಣಿಸಿದ್ದಿತು. ಅದರಿಂದಲೇ ಅವರ ಶೈಲಿಯಲ್ಲಿ ಮಾಧುರ್ಯವು ತುಂಬಿದೆ. ಅವರ ಕೃತಿಗಳಲ್ಲಿ ಚರಿತ್ರ ಚಿತ್ರಣವೂ ಸನ್ನಿವೇಶಗಳೂ ಕಲಾತ್ಮಕವಾಗಿ ಕಂಗೊಳಿಸುತ್ತವೆ. ಮನೋವಿಜ್ಞಾನದ ದೃಷ್ಟಿಯಿಂದಲೂ ಅವರ ಕೃತಿಗಳು ಶುದ್ಧವಾಗಿಯೂ ನೈಜವಾಗಿಯೂ ಇವೆಯೆಂದು ಪ್ರಸಿದ್ಧ ಸಾಹಿತಿಗಳೆಲ್ಲರೂ ಒಪ್ಪಿಕೊಂಡಿದ್ದಾರೆ.

ಶರತ್‌ಚಂದ್ರರ ಸಾಹಿತ್ಯವನ್ನು ಕುರಿತು ನನ್ನ ಸ್ನೇಹಿತರಾದ ಶ್ರೀ. ಹಳ್ಳಿಪ್ಪನವರ್ ಗೋವಿಂದರಾಯರು ಸಾಕಷ್ಟು ಬರೆದಿದ್ದಾರೆ.

ಆದುದರಿಂದ ಇದಕ್ಕೂ ಹೆಚ್ಚಿಗೆ ಹೇಳುವುದು ಅನವಶ್ಯಕ. ಆದರೂ ಇಷ್ಟು ಮಾತ್ರ ನಾನಿಲ್ಲಿ ಹೇಳಬಯಸುತ್ತೇನೆ. ಶರತ್‌ಬಾಬುಗಳ ಕಡೆಗೆ ನನ್ನನ್ನು ಸಂಪೂರ್ಣವಾಗಿ ಸೆಳೆದೊಯ್ದುದು 'ದೇವದಾಸ' ಕೃತಿ. 'ದೇವದಾಸ' ಬಂಗಾಲಾ ಚಿತ್ರಪಟವನ್ನು ನಾನು ಕಾಶಿಯಲ್ಲಿದ್ದಾಗ ನೋಡಿದೆ. ಮರುದಿನವೇ ಕಾದಂಬರಿಯನ್ನು ಕೊಂಡೂ ಓದಿದೆ. ಅಂದಿನಿಂದ ಅವರ ಕೃತಿಗಳನ್ನು ಒಂದೊಂದಾಗಿ ಓದತೊಡಗಿದೆ. ಓದಿ ಓದಿದಂತೆ ಅವರ ಬಗೆಗೆ ನನ್ನಲ್ಲಿ ಆದರ, ಭಕ್ತಿ, ವಿಶ್ವಾಸಗಳು ಮನೆಮಾಡಿದುವು. ಅದರ ಫಲರೂಪವಾಗಿ ನಾನು ಈಗಾಗಲೇ ಅವರ ಎರಡು ಕೃತಿಗಳನ್ನು- 'ಪರಿಣೀತಾ,' 'ಚಂದ್ರನಾಥ'-ಕನ್ನಡಿಸಿ ವಾಚಕವೃಂದಕ್ಕೆ ಸಲ್ಲಿಸಿದ್ದೇನೆ. ಶರತ್‌ಚಂದ್ರರ ಶ್ರೇಷ್ಠ ಕಾದಂಬರಿಗಳಲ್ಲಿ ಒಂದಾದ 'ದೇವದಾಸ'ವನ್ನು ಮೂಲ ಬಂಗಾಲಾ ಮತ್ತು ಹಿಂದಿಯಿಂದ ಕನ್ನಡಿಸಿ ಕನ್ನಡ ಸಾರಸ್ವತ ಸಮುದಾಯದ ಮುಂದೆ ಇಟ್ಟಿದ್ದೇನೆ. ನನ್ನೀ ಕನ್ನಡ ಸೇವೆಯು ನನ್ನ ನಾಡಬಂಧುಗಳಿಗೆ ಪ್ರಿಯವಾಗಿ ಅವರು ಬೆಂಬಲ, ಪ್ರೋತ್ಸಾಹ, ಪ್ರೀತಿ, ಸಹಾಯದ ಕೈನೀಡಿದರೆ ಅವರ ಅತ್ಯಂತ ಶ್ರೇಷ್ಠವಾದ 'ಶ್ರೀಕಾಂತ' ಕಾದಂಬರಿಯನ್ನೂ ಆದಷ್ಟು ಬೇಗನೆ ಪ್ರಕಟಿಸಬೇಕೆಂದಿದ್ದೇನೆ.

'ದೇವದಾಸ' ಕಾದಂಬರಿಯನ್ನು ಬೇಗ ಬರೆಯಬೇಕೆಂದು ಒತ್ತಾಯಪಡಿಸಿದವರು ಶ್ರೀ. ಅ. ನ. ಕೃಷ್ಣರಾಯರು ಮತ್ತು ಶ್ರೀ. ಬಿ. ಅಶ್ವತ್ಥನಾರಾಯಣರಾಯರು. ಪುಸ್ತಕರೂಪದಲ್ಲಿ ಮುದ್ರಿಸುವುದಕ್ಕಾಗಿ ನನ್ನಲ್ಲಿಂದ ಹಸ್ತಪ್ರತಿಯನ್ನು ಒತ್ತಾಯ-ಪ್ರೀತಿಯಿಂದ ಹೊತ್ತುಕೊಂಡು ಹೋದವರು ಹುಬ್ಬಳ್ಳಿಯ 'ಸಾಹಿತ್ಯ ಭಾಂಡಾರ'ದ ಶ್ರೀ. ಮಂಗಳೂರು ಗೋವಿಂದರಾಯರು. ಅವಸರದಲ್ಲಿ ಬರೆದ ಹಸ್ತಪ್ರತಿಯಲ್ಲಿ ಹೆಚ್ಚಾಗಿ ಉಳಿದ ದೋಷಗಳೆಲ್ಲವನ್ನೂ ತಿದ್ದಿ ಅಚ್ಚಿಗೆ ಸಿದ್ಧ ಮಾಡಿದವರು ನನ್ನ ಬಾಲ್ಯ ಸ್ನೇಹಿತರಾದ ಶ್ರೀ. ಹಳ್ಳೈಪ್ಪನವರ್ ಗೋವಿಂದರಾಯರು ಮತ್ತು ಮೋವುಂಡಿ ಮಲ್ಲಾರಿಯವರು. ಇವರೀರ್ವರೂ ಈ ಕೆಲಸವನ್ನು ಹಗಲು ರಾತ್ರಿಯೆನ್ನದೆ ಮಾಡಬೇಕಾಯಿತು. ಇದಲ್ಲದೆ ಶ್ರೀ. ಹಳ್ಳೈಪ್ಪನವರು

ಗೋವಿಂದರಾಯರು ಶರತ್‌ಚಂದ್ರರ ' ಜೀವನ ಮತ್ತು ಸಾಹಿತ್ಯ 'ವನ್ನು ಕುರಿತು ಸಂಕ್ಷಿಪ್ತವಾಗಿ ಆದರೆ ಚೆನ್ನಾಗಿ ಬರೆದು ಈ ಕಾದಂಬರಿಗೆ ಅದೊಂದು ತರದ ಸೌಂದರ್ಯವನ್ನು ತಂದಿದ್ದಾರೆ. ಇವರೆಲ್ಲರಿಗೂ ನನ್ನ ಹೃತ್ಪೂರ್ವಕ ಅಭಿವಂದನೆಗಳು.

ಶರತ್‌ಬಾಬುಗಳ ಎಲ್ಲ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಲು ಒಪ್ಪಿಗೆಯನ್ನು ಮುಂಬಯಿಯ ಹಿಂದೀ ಗ್ರಂಥ ರತ್ನಾಕರ ಕಾರ್ಯಾಲಯದಿಂದ ದೊರಕಿಸಿಕೊಟ್ಟವರು ನನ್ನ ಅಭಿನ್ನ ಬಂಧು ಶ್ರೀ. ಸಿದ್ಧನಾಥ ಪಂತರು. ಅವರಿಗೂ, ಹಿಂದೀ ಗ್ರಂಥ ರತ್ನಾಕರ ಕಾರ್ಯಾಲಯದ ಒಡೆಯರಿಗೂ ಆದರ—ಅಂತಃಕರಣಪೂರ್ವಕವಾದ ಅಭಿವಂದನೆಗಳು.

ಬೆಂಗಳೂರು
೧೫-೧೨-೧೯೩೮

**ಗುರುನಾಥ ಜೋಶಿ**

## ಮುಂದಿನ ಪ್ರಕಟನೆ

ಬಂಗಾಲಿ ಸಾಹಿತ್ಯದ ಕಾದಂಬರಿ ಪ್ರಪಂಚದಲ್ಲಿ ಹೆಸರು
ಪಡೆದ ಶ್ರೀಮತಿ ನಿರುಪಮಾದೇವಿಯವರ
'ದಿದಿ' ಎಂಬ ಸಾಮಾಜಿಕ ಕಾದಂಬರಿಯ
ಕನ್ನಡ ಅನುವಾದ

# ಅಕ್ಕ

**ಬೇಗನೆ ಪ್ರಕಟವಾಗುವದು.**

ಅನುವಾದಕರು :—

ಶಾಂತಿನಿಕೇತನದ ಕಲಾಕೋವಿದರೂ ಬಂಗಾಲಿ ಭಾಷಾ
ವಿಶಾರದರೂ ಆದ

**ಶ್ರೀ. ನಾರಾಯಣ ಸಂಗಮರು**

# ಶರಚ್ಚಂದ್ರರ ಜೀವನ ಮತ್ತು ಸಾಹಿತ್ಯ

ಶರಚ್ಚಂದ್ರರು ಬಂಗಾಲೀ ಕಾದಂಬರೀಕಾರರಲ್ಲಿ—ಅಲ್ಲ, ಭಾರತೀಯ ಕಾದಂಬರೀಕಾರರಲ್ಲಿಯೆ—ಅಗ್ರಗಣ್ಯರು. ಅವರ ಕೃತಿರತ್ನಗಳು ಭಾರತೀಯ ಸಾಹಿತ್ಯ ಭಾಂಡಾರದ ಅಮೌಲ್ಯ ನಿಧಿ. ಕಲೆಯೆ ನೆಲೆಯಾಗಿ ನಿಂತಿರುವ ಅವರ ಕತೆ—ಕಾದಂಬರಿಗಳು ಅಕ್ಷಯವಾಗಿ ಬಾಳತಕ್ಕವುಗಳು. ವಿಶ್ವಸಾಹಿತ್ಯದಲ್ಲಿಯೂ ಅವುಗಳಿಗೆ ಮಿಗಿಲಾದ ಸ್ಥಾನವಿದೆ. ಮಾನವಪ್ರೇಮದ ದಿವ್ಯಸಂದೇಶವನ್ನು ಅವು ಸಾರುತ್ತಿವೆ.

ಶರಚ್ಚಂದ್ರರ ಜೀವನ ಹಾಗು ಸಾಹಿತ್ಯ ಅಭಿನ್ನವಾಗಿವೆ. ಅವರ ಜೀವನದ ವಿಶಾಲ, ವೈವಿಧ್ಯಪೂರ್ಣ, ವೈಚಿತ್ರ್ಯಮಯ ಅನುಭವವೆ ಅವರ ಸಾಹಿತ್ಯದಲ್ಲಿ ಪ್ರತಿಬಿಂಬಿತವಾಗಿದೆ. ಅವರ ಕತೆ-ಕಾದಂಬರಿಗಳಲ್ಲಿಯ ಅನೇಕ ಪಾತ್ರಗಳು ಸತ್ಯಸೃಷ್ಟಿಯಲ್ಲಿಯ ವ್ಯಕ್ತಿಗಳನ್ನು ಪಲಕ್ಷಿಸಿ ರಚಿತವಾದವುಗಳು. 'ಶ್ರೀ ಕಾಂತ'ವೆಂಬ ಅವರ ಕಾದಂಬರಿಯು ಅವರ ಆತ್ಮಚರಿತ್ರೆಯಂತಿದೆ.

೧

ಹುಗಳೀ ಜಿಲ್ಲೆಯಲ್ಲಿರುವ ದೇವಾನಂದಪುರವೆಂಬ ಹಳ್ಳಿಯಲ್ಲಿ ಶರಚ್ಚಂದ್ರರು ಸನ್ ೧೮೭೬ನೇ ಇಸ್ವಿಯಲ್ಲಿ ಹುಟ್ಟಿದರು. ಅವರ ತಂದೆ ಮತಿಲಾಲ ಚಟ್ಟೋಪಾಧ್ಯಾಯರು ಅತ್ಯಂತ ಧಾರ್ಮಿಕ ವೃತ್ತಿಯವರಾಗಿದ್ದರು. ಮತಿಲಾಲರ ಆರ್ಥಿಕ ಪರಿಸ್ಥಿತಿಯು ಚೆನ್ನಾಗಿರದ ಮೂಲಕ ಶರಚ್ಚಂದ್ರರ ಬಾಲ್ಯವು ನಾನಾ ತೊಂದರೆಗಳಿಗೆ ಈಡಾಗಿದ್ದಿತು. ಸಣ್ಣವರಿರುವಾಗಲೆ ತಮ್ಮ ತಂದೆಯ ಕೂಡ ಊರು ಬಿಟ್ಟು, ಭಾಗಲಪುರದಲ್ಲಿರುವ ದೂರ ಸಂಬಂಧದ ಸೋದರ ಮಾವನ ಮನೆಗೆ ಬಂದರು. ಭಾಗಲಪುರದಲ್ಲಿಯ ಪ್ರಾಥಮಿಕ ಶಾಲಾಭ್ಯಾಸವನ್ನು ಮುಗಿಸಿ ಶಿಷ್ಯವೃತ್ತಿಯನ್ನು ಪಡೆದು ಇಂಗ್ಲೀಷು ಸಾಲೆಯನ್ನು ಸೇರಿದರು.

ಇಂಗ್ಲೀಷು ಸಾಲೆಯನ್ನು ಸೇರಿದ ಸ್ವಲ್ಪ ದಿನಗಳಲ್ಲಿಯೆ ಅವರು ಅಲ್ಲಿಯ ಶಿಕ್ಷಕರ ಪ್ರೀತಿಪಾತ್ರರಾದರು. ಒಳ್ಳೇ ಅಭ್ಯಾಸುಗಳೆಂದು ಅವರ ಹೆಸರಾಯಿತು. ಆದರೆ ಅವರು ಬರೀ ಓದಿನಲ್ಲಿಯೆ ಹೊತ್ತುಗಳೆಯದೆ ಆಟ–ನೋಟಗಳ ಕಡೆಗೂ ಸಾಕಷ್ಟು ಲಕ್ಷ್ಯಕೊಡುತ್ತಿದ್ದರು. ಹುಡುಗರಿಗೆಲ್ಲ ಇವರನ್ನು ಕಂಡರೆ ತುಂಬ ಮೆಚ್ಚಿಕೆ. ಆಟದಲ್ಲಿ ಶರಚ್ಚಂದ್ರರು ಯಾವಾಗಲೂ ಹಿರಿಯ ಹುದ್ದರಿಗಳು. 'ಶಿಸ್ತು'ಕಾಯ್ದುಕೊಳ್ಳುವಲ್ಲಿ ಬಹು ದಕ್ಷರು. ಅವರ ಹೃದಯವು ವಜ್ರದಂತೆ ಕಠಿಣವಾಗಿದ್ದರೂ ಕುಸುಮದಂತೆ ಕೋಮಲ. ಅನ್ಯಾಯವನ್ನು ತೊಡೆದುಹಾಕುವ ದೃಢ ಸಂಕಲ್ಪದ ಜೊತೆಗೆ ದುರ್ಬಲರ ವಿಷಯವಾಗಿ ಅತ್ಯಂತ ಕಾರುಣ್ಯವೂ ಅವರಲ್ಲಿದ್ದಿತು. ಅವರ ಸ್ವಭಾವದ ಈ ವೈಶಿಷ್ಟ್ಯವು ಆಗಲೇ ಕಂಡು ಬರುವಂತಿತ್ತು.

'ಎಂಟ್ರೆನ್ಸ್' ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಶರಚ್ಚಂದ್ರರು ಕಾಲೇಜನ್ನು ಸೇರಿದರು. ಎಫ್. ಎಯ್. ಅಭ್ಯಾಸ ಮುಗಿಸಿ ಇನ್ನು ಪರೀಕ್ಷೆಗೆ ಕೂಡುವವರಿದ್ದರು. ಆದರೆ ಪರೀಕ್ಷೆಯ ಫೀ ಇಪ್ಪತ್ತು ರೂಪಾಯಿ ಎಲ್ಲಿಂದ ತುಂಬಬೇಕು? ಅಷ್ಟರಲ್ಲಿ ಅವರ ತಾಯಿಯೂ ತೀರಿಕೊಂಡರು. ತಾಯಿಯ ಸಾವು, ಹಣದ ಕೊರತೆ, ಆಪ್ತೇಷ್ಟರ ಉದಾಸೀನತೆಗಳ ಮೂಲಕ ಬೇಸತ್ತು ಶರಚ್ಚಂದ್ರರು ಕಾಲೇಜಿಗೆ ಅಷ್ಟಕ್ಕೆ ಶರಣು ಹೊಡೆದರು. ಆ ಮೇಲೆ ಪಣ ಮಾಡಿದರು: 'ಇನ್ನು ಹದಿನಾಲ್ಕು ವರ್ಷ ದಿನಾಲು ಹದಿನಾಲ್ಕು ತಾಸಿನಂತೆ ಸ್ವಾಧ್ಯಾಯ ನಡೆಸುವೆನೆಂ'ದು; ಹಾಗೂ ಆ ಪಣವನ್ನು ಕೊನೆಗಾಣಿಸಿದರು.

ಕಾಲೇಜಿನಲ್ಲಿರುವಾಗಲೆ ಶರಚ್ಚಂದ್ರರು ಸಾಹಿತ್ಯಸಾಧನೆಯನ್ನು ನಡೆಸಿದ್ದರು. ಅವರ ಸೋದರ ಮಾವನ ಮನೆಯಲ್ಲಿ ಹುಡುಗರಿಗೆ ಪಾಠ ಹೇಳುವ ಕೆಲಸವು ಶರಚ್ಚಂದ್ರರಿಗೆ ಒಪ್ಪಿಸಲ್ಪಟ್ಟಿತ್ತು. ಹುಡುಗರಿಗೆ ಪಾಠ ಹೇಳಿ ಊಟ ಮುಗಿಸಿ ಶರಚ್ಚಂದ್ರರು ರಾತ್ರಿ ಒಂದು ಗಂಟೆಯ ವರೆಗೆ ಅಭ್ಯಾಸದಲ್ಲಿ ತೊಡಗಿರುತ್ತಿದ್ದರು. ಏಕಾಂತದಲ್ಲಿ ನಡೆದ ಈ ಸಾಹಿತ್ಯ ಸಾಧನೆಯ ಸುಳಿವು ಅವರ ಒಳ್ಳೊಳ್ಳೆ ಸ್ನೇಹಿತರಿಗೂ ಸಿಕ್ಕಿರಲಿಲ್ಲ.

ಕಾಲೇಜಿನಲ್ಲಿರುವಾಗ ಶರಚ್ಚಂದ್ರರು 'ಸಾಹಿತ್ಯ–ಸಭೆ'ಯನ್ನು ಸ್ಥಾಪಿಸಿದ್ದರು. ಸಭೆಯವರು ಕೈಬರಹದ ಪತ್ರಿಕೆಗಳನ್ನು ಹೊರಡಿಸುತ್ತಿದ್ದರು. ಆಗ 'ಸಾಹಿತ್ಯ–ಸಭೆ'ಯ ಸದಸ್ಯರಾಗಿದ್ದವರನೇಕರು ಈಗ ಪ್ರಸಿದ್ಧ ಬಂಗಾಲೀ ಲೇಖಕರಾಗಿದ್ದಾರೆ.

ಕಾಲೇಜನ್ನು ಬಿಟ್ಟನಂತರ ಕೆಲವು ದಿನ ಭಾಗಲಪುರದಲ್ಲಿಯೆ ಇದ್ದು ಆ ಮೇಲೆ ಶರಚ್ಚಂದ್ರರು ಭಾಗ್ಯಾನ್ವೇಷಣಕ್ಕಾಗಿ ಹೊರಬಿದ್ದರು.

ಬಿಹಾರದಲ್ಲಿರುವ ಒಬ್ಬ ದೊಡ್ಡ ಜಮೀನುದಾರನ ಆಸ್ತಿಯ ಆಡಳಿತಗಾರರಾಗಿ ಕೆಲವು ದಿನ ಕೆಲಸ ಮಾಡಿದರು. ಆ ಮೇಲೆ ಮತ್ತೊಬ್ಬ ಜಮೀನುದಾರನ ಕೂಡ ಬಿಹಾರದಲ್ಲಿಯ ಅನೇಕ ಸ್ಥಳಗಳನ್ನು ಸಂಚರಿಸಿದರು. ಆಗ ಶರಚ್ಚಂದ್ರರ ವಯಸ್ಸು ೨೨–೨೩ ಮಾತ್ರ. ಶರಚ್ಚಂದ್ರರು ಕೆಲವು ಸಲ ಬಾವಾಜಿಯಂತೆ ಕಾವಿಯ ಬಟ್ಟೆಗಳನ್ನು ತೊಟ್ಟುಕೊಂಡು ಅನೇಕ ತೀರ್ಥ–ಕ್ಷೇತ್ರಗಳನ್ನು ಸಂದರ್ಶಿಸಿದರು. ಯಾವ ಬಗೆಯ ಪಾರಿವಾರಿಕ ಅಥವಾ ಗ್ರಾಹಸ್ಥ್ಯ ಬಂಧನವೂ ಅವರಿಗೆ ಸಹನವಾಗುತ್ತಿದ್ದಿಲ್ಲ.

ಶರಚ್ಚಂದ್ರರು ಬಹಳ ಚೆನ್ನಾಗಿ ಹಾಡುತ್ತಿದ್ದರು. ಮನೋಹರವಾಗಿ ಕೊಳಲೂದುತ್ತಿದ್ದರು. ಸುಂದರವಾಗಿ ಚಿತ್ರ ತೆಗೆಯುತ್ತಿದ್ದರು. ತಬಲೆ ಬಾರಿಸುವವರಲ್ಲಂತೂ ಒಳ್ಳೇ ನಿಪುಣರಾಗಿದ್ದರು. ಅಭಿನಯ ವಿಶಾರದರೂ ಆಗಿದ್ದರು. ಆಗಿನ ಕಾಲಕ್ಕೆ ಇವೆಲ್ಲ ಗುಣಗಳು ಅವಗುಣಗಳೆಂದೆನಿಸಲ್ಪಡುತ್ತಿದ್ದವೆಂಬ ಮಾತು ಬೇರೆ. ಬಂದೂಕು ತೆಗೆದುಕೊಂಡು ಬೇಟೆಯಾಡುವದರಲ್ಲಿಯೂ ಶರಚ್ಚಂದ್ರರು ಪ್ರಸಿದ್ಧರು.

ಹೀಗೆ ಎಷ್ಟೋ ದಿನ ತಿರುಗಾಟದಲ್ಲಿ ಕಳೆದು ಶರಚ್ಚಂದ್ರರು ೧೯೦೨ರಲ್ಲಿ ಕಲಕತ್ತೆಗೆ ಬಂದರು. ಆ ಸುಮಾರಿಗೆ ಅವರ ತಂದೆ ತೀರಿಕೊಂಡರು. ಕಲಕತ್ತೆಯಲ್ಲಿ ಏಳೆಂಟು ತಿಂಗಳು ಇದ್ದು ಯಾರಿಗೂ ಹೇಳದೆ ಕೇಳದೆ ದೇಶವನ್ನು ಬಿಟ್ಟು ರಂಗೂನಿಗೆ ಪ್ರಯಾಣ ಬೆಳೆಸಿದರು. ರಂಗೂನನ್ನು ಮುಟ್ಟಿದಾಗ ಅವರ ಬಳಿಯಲ್ಲಿ ಎರಡು ರೂಪಾಯಿ ಮಾತ್ರ ಇದ್ದುವು. ಎಲ್ಲೆಲ್ಲಿಯೋ ಹುಡುಕಿ ಕೊನೆಗೆ ಒಂದು ಆಫೀಸಿನಲ್ಲಿ ನೌಕರಿ ದೊರಕಿಸಿದರು. ಸಂಬಳ ತೀರ ಸ್ವಲ್ಪ ದೊರೆಯುತ್ತಿತ್ತು. ಅದರಿಂದ ಹೊಟ್ಟೆ

ತುಂಬುವದು ಬಿಗಿಯಾಗಿತ್ತು. ಕೆಲವು ದಿನಗಳ ನಂತರ ಅವರ ಆರ್ಥಿಕ ಪರಿಸ್ಥಿತಿಯು ತುಸು ಸುಧಾರಿಸಿತು. ಆದರೂ ಒಂದು ಕುಟುಂಬವನ್ನು ಸಂರಕ್ಷಿಸಲು ಆಗುವಂತಿದ್ದಿಲ್ಲ.

ರಂಗೂನಿಗೆ ಹೋಗುವ ಮೊದಲು ಶರಚ್ಚಂದ್ರರು ತಮ್ಮ ಆಪ್ತರಾದ ಸುರೇಂದ್ರನಾಥ ಗಂಗೋಪಾಧ್ಯಾಯರ ಕಡೆಗೆ ತಮ್ಮ ಇತರ ಕತೆ-ಕಾದಂಬರಿಗಳೊಡನೆ 'ಬರೋದಿದಿ' (ಅಕ್ಕ) ಎಂಬ ನೀಳ್ಗತೆಯನ್ನು ಕೊಟ್ಟು ಹೋಗಿದ್ದರು. ಶರಚ್ಚಂದ್ರರು ರಂಗೂನಿನಲ್ಲಿರುವಾಗ ಸುರೇಂದ್ರನಾಥರು ಆ ನೀಳ್ಗತೆಯನ್ನು ಶರಚ್ಚಂದ್ರರನ್ನು ಕೇಳದೆಯೆ 'ಭಾರತಿ' ಎಂಬ ಪತ್ರಿಕೆಯಲ್ಲಿ ಪ್ರಕಟಿಸಿದರು. ಕತೆ ಮೂರು ಸಂಚಿಕೆಗಳಲ್ಲಿ ಮುಗಿದಿತ್ತು. ಮೊದಲಿನ ಎರಡು ಸಂಚಿಕೆಗಳಲ್ಲಿ ಲೇಖಕನ ಹೆಸರು ಇರಲಿಲ್ಲ. ಮೂರನೆಯ ಸಂಚಿಕೆಯಲ್ಲಿ ಕತೆಯ ಕೊನೆಗೆ ಶರಚ್ಚಂದ್ರರ ಹೆಸರು ಕೊಡಲ್ಪಟ್ಟಿತ್ತು. 'ಬರೋದಿದಿ' ಪ್ರಕಟವಾದ ಕೂಡಲೆ ಸಾಹಿತ್ಯ ಪ್ರಪಂಚದಲ್ಲಿ ವಿಲಕ್ಷಣ ಚಲ-ವಿಚಲವುಂಟಾಯಿತು. ಲೇಖಕನ ಅದ್ಭುತ ಪ್ರತಿಭೆಯನ್ನು ಕಂಡು ಜನರು ಮುಗ್ಧರಾದರು. ಈ ಅಜ್ಞಾತ, ಶಕ್ತಿಮಾನ್ ಲೇಖಕನು ಯಾರು? ಆತನು ಇರುವುದೆಲ್ಲಿ? ಎಂದು ಜನತೆಯಲ್ಲಿ ಅತ್ಯಂತ ಕುತೂಹಲವುಂಟಾಯಿತು. ಆದರೆ ಯಾರಿಗೂ ತಿಳಿಯದಂತೆ ಶರಚ್ಚಂದ್ರರು ಬ್ರಹ್ಮದೇಶದಲ್ಲಿದ್ದುಬಿಟ್ಟಿದ್ದರು.

ರವೀಂದ್ರನಾಥರೆ 'ಬರೋದಿದಿ'ಯನ್ನು ಬೇರೆ ಹೆಸರಿಟ್ಟುಕೊಂಡು ಬರೆದಿರಬೇಕೆಂದು ಕೆಲವರೆಂದರು. ಈ ಬಗ್ಗೆ ಒಂದು ಸ್ವಾರಸ್ಯವಾದ ಕತೆಯಿದೆ: ಆಗ ರವೀಂದ್ರನಾಥರು 'ವಂಗದರ್ಶನ'ವೆಂಬ ಪತ್ರಿಕೆಯ ಸಂಪಾದಕರಾಗಿದ್ದರು. ರವೀಂದ್ರರ ಎಲ್ಲ ಲೇಖಗಳೂ ಅದರಲ್ಲಿ ಪ್ರಕಟವಾಗುತ್ತಿದ್ದುವು. 'ಬರೋದಿದಿ'ಯು 'ಭಾರತಿ'ಯಲ್ಲಿ ಪ್ರಕಟವಾಗಲು 'ವಂಗದರ್ಶನ'ದ ವ್ಯವಸ್ಥಾಪಕರು ರವೀಂದ್ರನಾಥರಿಗೆ 'ನಿಮ್ಮದೇ ಆದ ಪತ್ರಿಕೆಯು ಇರಲಾಗಿ ಬೇರೊಂದು ಪತ್ರಿಕೆಗೆ ನಿಮ್ಮ ಕತೆಯನ್ನು ಏಕೆ ಕೊಟ್ಟಿರಿ?' ಎಂದು ಕೇಳಿದರು. ಅದಕ್ಕೆ ರವೀಂದ್ರರು 'ಕತೆಯೇನೋ

ಬಹಳ ಸೊಗಸಾಗಿದೆ. ಆದರೆ ಅದನ್ನು ನಾನು ಬರೆದಿಲ್ಲವೆಂದ ಮೇಲೆ ನನ್ನದೆಂದು ಹೇಗೆ ಎನ್ನಲಿ?" ಎಂದರು.

ಬಂಗಾಲೀ ಸಾಹಿತ್ಯಕ್ಷೇತ್ರದಲ್ಲಿ ಶರಚ್ಚಂದ್ರರು ಕಂಡು ಬಂದದ್ದು ಇದೇ ಮೊದಲನೆಯ ಸಲ. ಆ ಮೇಲೆ ೫-೬ ವರ್ಷ ಅವರ ಸಮಾಚಾರವೆ ತಿಳಿದಿರಲಿಲ್ಲ. ಅಜ್ಞಾತವಾಗಿದ್ದುಬಿಟ್ಟಿದ್ದರು.

ಆ ಮೇಲೆ ೧೯೧೩ ರಲ್ಲಿ ಶರಚ್ಚಂದ್ರರು ಅಕಸ್ಮಾತ್ ಕಲಕತ್ತೆಗೆ ಬಂದರು. ಆರೋಗ್ಯ ಚೆನ್ನಾಗಿರಲಿಲ್ಲ. ಗಡ್ಡ-ಮೀಸೆ ಬೆಳೆದಿದ್ದವು. ಅರ್ಧ ಬಾವಾಜಿಯಂತೆ ಬಟ್ಟೆ ತೊಟ್ಟಿದ್ದರು. ಸಂಗಡ ಒಂದು ದೊಡ್ಡ ನಾಯಿಯಿತ್ತು. ಪ್ರಸನ್ನ ಮುಖದ ಮೇಲೆ ನಗೆ ಮೂಡಿತ್ತು. ಆ ವಿಚಿತ್ರ ವೇಷದಲ್ಲಿಯೂ ಶರಚ್ಚಂದ್ರರ ಅಂತರ್ರಹಸ್ಯವು ಎದ್ದು ಕಾಣುತ್ತಿತ್ತು. ಇವರೇ ಶರಚ್ಚಂದ್ರರೆಂದು ತಿಳಿದ ಕೂಡಲೆ ಅವರ ಸ್ನೇಹಿತರೂ ಆಪ್ತೇಷ್ಟರೂ ಅವರ ಸುತ್ತು ಮುಕುರಿದರು. ಇನ್ನು ಮೇಲೆ ಕೇವಲ ಸಾಹಿತ್ಯಸೇವೆಯಲ್ಲಿಯೆ ತೊಡಗಬೇಕೆಂದು ಎಲ್ಲರೂ ಅವರಿಗೆ ಗಂಟುಬಿದ್ದರು. ಆದರೆ ನೂರಾರು ರೂಪಾಯಿ ಸಂಬಳದ ನೌಕರಿಯನ್ನು ಬಿಟ್ಟು ಸಾಹಿತ್ಯ ಸೇವೆಗೆ ನಿಲ್ಲುವ ಧೈರ್ಯ ಅವರಿಗಾಗಲಿಲ್ಲ. ಮತ್ತೆ ಬ್ರಹ್ಮದೇಶಕ್ಕೆ ಹೋಗಿಬಿಟ್ಟರು.

ಕಲಕತ್ತೆಯಲ್ಲಿದ್ದಾಗ ಅವರ ಗೆಳೆಯರು ಅವರಿಗೆ 'ಬರೋದಿದಿ' ಯನ್ನು ಓದಿ ತೋರಿಸಿದರು. ತಾವೇ ಬರೆದ ಕತೆಯನ್ನು ಕೇಳಿ ಶರಚ್ಚಂದ್ರರು ಮುಗ್ಧರಾದರು. ಆನಂದ ಬಾಷ್ಪಗಳನ್ನು ಸುರಿಸುತ್ತ 'ಈ ಕತೆಯನ್ನು ನಾನು ಬರೆದೆನೆ? ನಾನೇ ಇದನ್ನು ಬರೆದೆನೆ?' ಎಂದು ನುಡಿದರು. ಆ ಮೇಲೆ 'ಬರೆಯುವೆ, ಇನ್ನು ಮೇಲೆ ಹೀಗೆಯೇ ಬರೆಯುವೆ. ಬರೆಯುವದನ್ನು ಬಿಟ್ಟದ್ದು ಸರಿಯಾಗಲಿಲ್ಲ' ಎಂದರು.

ಕೊನೆಯ ವರೆಗೂ ರಂಗೂನಿನಲ್ಲಿ ನೌಕರಿ ಮಾಡುವದು ಅವರಿಗೆ ಸಾಧ್ಯವಾಗಲಿಲ್ಲ. ಮೂರು ತಿಂಗಳ ನಂತರ ಕಲಕತ್ತೆಗೆ ತಿರುಗಿ ಬಂದುಬಿಟ್ಟರು. ಅವರ ನೌಕರಿಯ ಜೀವನವಾದರೂ ಅವರ ಜೀವನದ ಇತರ ಕ್ಷೇತ್ರಗಳಂತೆ ಅಸಾಧಾರಣವಾಗಿದ್ದಿತು.ಅವರು ರಂಗೂನಿನ Accountant

General ರ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದರು. ಸರ್ವಸಾಧಾರಣ ಜನರಿಗೆ ಕ್ಷುಲ್ಲಕವೆನಿಸಬಹುದಾದ ಕಾರಣಕ್ಕಾಗಿ ಅವರಿಗೂ ಅಲ್ಲಿಯ ಸಣ್ಣ ಸಾಹೇಬನಿಗೂ ಜಗಳವಾಯಿತು. ಶರಚ್ಚಂದ್ರರು ಕೆಲಸಕ್ಕೆ ಶರಣು ಹೊಡೆದರು. ಆ ಮೇಲೆ ಈ ಸ್ವತಂತ್ರ, ಸಂಚಾರೀ ಸಾಹಿತಿಯು ಸ್ವದೇಶಕ್ಕೆ ನಿರ್ವಾಹವಿಲ್ಲದೆ ತಿರುಗಿ ಬರಬೇಕಾಯಿತು.

ಸ್ವದೇಶಕ್ಕೆ ಹಿಂದಿರುಗಿದ ಮೇಲೆ ಅವರು ಸಾಹಿತ್ಯಸೇವೆಯಲ್ಲಿ ತೊಡಗಿದರು. ತುಸು ದಿನಗಳಲ್ಲಿಯೆ ಅವರ ಕೀರ್ತಿದುಂದುಭಿಯು ಎಲ್ಲೆಲ್ಲಿಯೂ ಮೊಳಗಿತು. ಪ್ರತಿಕೂಲ ಪರಿಸ್ಥಿತಿಯ ಮೂಲಕ ಸುಪ್ತವಾಗಿದ್ದ ಅವರ ಪ್ರತಿಭೆಯು ಅನುಕೂಲಾವಸ್ಥೆಯಲ್ಲಿ ಸ್ಫುರಣಹೊಂದಿತು. ಒಂದರ ಮೇಲೊಂದು ಕತೆ–ಕಾದಂಬರಿಗಳು ಹೊರಡಲು ಮೊದಲಾದುವು. ಬಹಳವಾಗಿ ಹಣವೂ ಅದರಿಂದ ದೊರೆಯುತಿತ್ತು. ಹೀಗಿದ್ದರೂ ಅವರಲ್ಲಿ ಅಹಂಭಾವವು ತಲೆದೋರಲಿಲ್ಲ. ಜೀವನದ ಕೊನೆಯ ಗಳಿಗೆಯ ವರೆಗೂ ಹತ್ತುಜನರಲ್ಲಿ ಕೂಡಿಕೊಂಡೆ ಇರಲು ಬಯಸುತ್ತಿದ್ದರು. ಶ್ರೀಮಂತ ರಾಗಿಯೂ ಶರಚ್ಚಂದ್ರರು ಅಭಿಜಾತ್ಯ ಸಾಂಪ್ರದಾಯದಲ್ಲಿ ಸೇರಲಿಲ್ಲ. ಯಾವ ಬಗೆಯ ಆಡಂಬರವೂ ಇಲ್ಲದೆ ಸಾಧಾರಣ ಮನುಷ್ಯನಂತೆಯೆ ಇರುತ್ತಿದ್ದರು. ನಿರಾದೃತ, ಪೀಡಿತ ವ್ಯಕ್ತಿಗಳ ವಿಷಯವಾಗಿ ಸಮವೇದನೆಯು ಅವರ ಸಾಹಿತ್ಯದಲ್ಲಷ್ಟೆ ಕಾಣದೆ ಅವರ ಜೀವನದಲ್ಲಿಯೂ ಕಂಡು ಬರುತ್ತಿತ್ತು. ಕಲಕತ್ತೆಯಲ್ಲಿ ಭವ್ಯ ಭವನವನ್ನು ಕಟ್ಟಿದ್ದರೂ ನಗರದ ಕೋಲಾಹಲದಿಂದ ದೂರವಿರುವ ಪಾನಿತ್ರಾಸ ಎಂಬ ಹಳ್ಳಿಯಲ್ಲಿಯೇ ಅವರು ಹೆಚ್ಚಾಗಿ ಇರುತ್ತಿದ್ದರು. ಅವರು ಹಳ್ಳಿಗರ ಪರಮ ಹಿತೈಷಿಗಳಾಗಿದ್ದರು. ಆ ಹಳ್ಳಿಗರಿಗೆ ಸಾಹಿತಿ ಶರಚ್ಚಂದ್ರರ ಪರಿಚಯ ವಿರಲಿಲ್ಲ. ವ್ಯಕ್ತಿ ಶರಚ್ಚಂದ್ರರನ್ನು ಅರಿತಿದ್ದರು. ಶರಚ್ಚಂದ್ರರ ಮನೆಯಲ್ಲಿ ದಿನಾಲು ಹಳ್ಳಿಗರ ಸುಖ-ದುಃಖದ ಮಾತು-ಕತೆಗಳು ನಡೆಯುತ್ತಿದ್ದವು. ಶರಚ್ಚಂದ್ರರು ಸ್ವತಃ ಹೋಮಿಯೋಪಥಿಯ ಅಭ್ಯಾಸ ಮಾಡಿ ಹಳ್ಳಿಯಲ್ಲಿ ಬೇನೆ ಬಿದ್ದವರ ಔಷಧೋಪಚಾರವನ್ನು ಪುಕ್ಕಟೆಯಾಗಿ ಮಾಡುತ್ತಿದ್ದರು. ಅನೇಕರ ಪಥ್ಯದ ವ್ಯವಸ್ಥೆಯನ್ನು ಸಹ ಕೈಯಿಂದ ಮಾಡಬೇಕಾಗುತ್ತಿತ್ತು.

ಮಹಾತ್ಮರ ಅಸಹಯೋಗ ಆಂದೋಲನವು ಶರಚ್ಚಂದ್ರರನ್ನು ರಾಜನೀತಿ ಕ್ಷೇತ್ರಕ್ಕೆ ಎಳೆಯದೆ ಬಿಡಲಿಲ್ಲ. ಆಗ ಕಲಕತ್ತೆಯಲ್ಲಿ ಹೊರಟ ರಾಷ್ಟ್ರೀಯ ವಿದ್ಯಾಪೀಠದ ಸಂಸ್ಥಾಪಕರಲ್ಲೊಬ್ಬರಾಗಿದ್ದರು ಇವರು. ಶರಚ್ಚಂದ್ರರು ರಾಜಕಾರಣದಲ್ಲಿ ಭಾಗವಹಿಸಿದ್ದನ್ನು ನೋಡಿ ಒಬ್ಬ ಪ್ರಸಿದ್ಧ ಸಾಹಿತಿಗಳು ಅವರಿಗೆ 'ಲೇಖನಿಯನ್ನು ಬಿಟ್ಟು ರಾಜಕೀಯ ಆಂದೋಲನದಲ್ಲಿ ಸೇರುವದು ಸಾಹಿತಿಗಳ ಕರ್ತವ್ಯವಲ್ಲ' ಎಂದರು. ಅದಕ್ಕೆ ಶರಚ್ಚಂದ್ರರು : ಅದೇನೋ ನಿಜ. ಆದರೆ ಕೆಲವು ದಿನಗಳ ಮಟ್ಟಿಗೆ ಲೇಖನಿಯನ್ನು ಬಿಟ್ಟು ರಾಟೆಯನ್ನೆ ನನ್ನ ಕೈಯಲ್ಲಿ ತೆಗೆದುಕೊಂಡಿರುವೆ' ಎಂದರು. ಸ್ವಾತಂತ್ರ್ಯ ಯುದ್ಧವು ನಡೆದಾಗ ದೇಶಪ್ರೇಮಿಗಳಾದ ಶರಚ್ಚಂದ್ರರು ಸುಮ್ಮನೇ ಇರುವುದು ಹೇಗೆ? ಶರಚ್ಚಂದ್ರರು ಎಷ್ಟೋ ದಿನ ಹೌರಾ ಜಿಲ್ಲಾ ಕಾಂಗ್ರೆಸ್ ಕಮೀಟಿಯ ಅಧ್ಯಕ್ಷರಾಗಿದ್ದರು. ಎ. ಆಯ್. ಸಿ. ಸಿ. ಯ ಸದಸ್ಯರೂ ಆಗಿದ್ದರು. ಆದರೂ ತಮ್ಮ ಲಜ್ಜಾಶೀಲ ಸ್ವಭಾವದ ಮೂಲಕ ಪ್ರಚಂಡ ರಾಜಕಾರಣದಲ್ಲಿ ಅವರು ಹೆಚ್ಚಾಗಿ ಸೇರುತ್ತಿದ್ದಿಲ್ಲ. ಅವರು ಕಾಂಗ್ರೆಸ್ ಭಕ್ತರಾಗಿದ್ದರೂ ಕಾಂಗ್ರೆಸ್ಸಿನ ರೀತಿ-ನೀತಿಗಳ ವಿಷಯವಾಗಿ ಪ್ರಸಂಗವಶಾತ್ ತಮ್ಮ ಮತಭೇದವನ್ನೂ ನಿರ್ಭಿಡೆಯಾಗಿ ಆಡಿತೋರಿಸುತ್ತಿದ್ದರು.

* * * *

ಶರಚ್ಚಂದ್ರರ 'ಶ್ರೀಕಾಂತ' ಎಂಬ ಕಾದಂಬರಿಯ ಇಂಗ್ಲಿಷ್ ಅನುವಾದವು ಪ್ರಕಟವಾಗಿದೆ. ಅದರ ಭೂಮಿಕೆಯಲ್ಲಿ ಶರಚ್ಚಂದ್ರರು ವಿವರಿಸಿದ ತಮ್ಮ ಆತ್ಮಚರಿತ್ರೆಯು ಪ್ರಕಟವಾಗಿದೆ. ಅದು ಇಂತು :

'ನನ್ನ ಬಾಲ್ಯವೂ ಯೌವನದ ಆರಂಭದ ದಿನಗಳೂ ಕಠೋರ ದಾರಿದ್ರ್ಯದಲ್ಲಿ ಕಳೆದಿವೆ. ಅರ್ಥಾಭಾವದ ಮೂಲಕ ನನಗೆ ಶಿಕ್ಷಣವೆ ದೊರೆಯಲಿಲ್ಲವೆನ್ನಬಹುದು. ತಂದೆಯ ಉತ್ತರಾಧಿಕಾರಿಯೆಂದು ನನಗೆ ದೊರೆತಿದ್ದೆಂದರೆ ಅವರ ಅಸ್ಥಿರ ಚಿತ್ತ; ಹಾಗು ಸಾಹಿತ್ಯದ ಬಗೆಗೆ ಅಪಾರವಾದ ಅನುರಾಗ; ಇದಿಷ್ಟು ಮಾತ್ರ. ಮೊದಲನೆಯದು ನನ್ನನ್ನು ತಿರುಗಲನನ್ನಾಗಿ ಮಾಡಿತು. ಅದರ ಫಲವಾಗಿ ನಾನು ಚಿಕ್ಕವನಾಗಿರುವಾಗಲೆ

ಭಾರತ ದೇಶದಲ್ಲಿಯು ಅನೇಕ ಸ್ಥಳಗಳನ್ನು ಸಂಚರಿಸಿದೆನು. ಎರಡನೆಯದು ನನ್ನನ್ನು ಆಜೀವನವೂ ಸ್ವಪ್ನವಿಲಾಸಿಯನ್ನಾಗಿ ಮಾಡಿದೆ. ನನ್ನ ತಂದೆ ಒಳ್ಳೇ ಜ್ಞಾನಿಗಳಾಗಿದ್ದರು. ಕತೆ, ಕಾದಂಬರಿ, ನಾಟಕ, ಕವಿತೆಗಳ ನ್ನೆಷ್ಟೋ ಬರೆದಿದ್ದರು. ಆದರೆ ಯಾವುದನ್ನೂ ಪೂರ್ಣ ಮಾಡಿರಲಿಲ್ಲ. ಅವರು ಬರೆದವುಗಳಲ್ಲಿ ಯಾವುದೂ ಈಗ ನನ್ನ ಬಳಿಯುಲ್ಲಿಲ್ಲ. ಹೇಗೋ ಕಳೆದುಹೋಗಿವೆ. ಆದರೆ ಇಷ್ಟು ಮಾತ್ರ ನೆನಪಿದೆ: ಬಾಲ್ಯ ಜೀವನದಲ್ಲಿ ನಾನು ಅವರ ಆ ಅಸಮಾಪ್ತ ಕೃತಿಗಳನ್ನು ಅದೆಷ್ಟೋ ಸಾರೆ ಓದಿದ್ದೇನೆ. ಎಷ್ಟೋ ರಾತ್ರಿ ನಿದ್ದೆಗೇಡಾಗಿದ್ದೇನೆ. ಆ ಕೃತಿಗಳು ಅಪೂರ್ಣವಾಗಿ ಉಳಿ ದದ್ದಕ್ಕೆ ನನಗೆ ಬಹಳ ದುಃಖವಾಗಿದೆ. ಅವುಗಳನ್ನುವರು ಮುಗಿಸಿದ್ದರೆ ಅದೆಷ್ಟು ಸೊಗಸಾಗಿರುತ್ತಿದ್ದವೊ ಏನೊ! ಅವುಗಳ ಮೂಲಕವೆ ನನ್ನ ಹದಿ ನೇಳನೆಯ ವಯಸ್ಸಿನಲ್ಲಿಯೆ ಕತೆ ಬರೆಯುವ ಪ್ರವೃತ್ತಿ ನನಗುಂಟಾಯಿತು. ಆದರೆ ಬರೆದು ಮಾಡುವದೇನೆಂದು ಯೋಚಿಸಿ ಬರೆಯುವ ಅಭ್ಯಾಸವನ್ನು ಬಿಟ್ಟುಬಿಟ್ಟೆದ್ದೆ. ಕೆಲವು ದಿನಗಳ ನಂತರ ನಾನೊಂದು ಕಾಲದಲ್ಲಿ ಬರೆಯು ತ್ತಿದ್ದೆನೆಂಬ ನೆನಪು ಸಹ ಉಳಿಯಲಿಲ್ಲ. ಆ ಮೇಲೆ ಮತ್ತೆ ಬರೆಯತೊಡ ಗಿದೆ. ಕೆಲವು ವರ್ಷಗಳ ನಂತರ ನನ್ನ ಬಾಲ್ಯ ಸ್ನೇಹಿತರು ಕೆಲವರು ಒಂದು ಚಿಕ್ಕ ಪತ್ರಿಕೆಯನ್ನು ಹೊರಡಿಸಿದರು. ಆದರೆ ಪ್ರಸಿದ್ಧ ಲೇಖಕರು ಯಾರೂ ಈ ಪತ್ರಿಕೆಗೆ ಬರೆಹ ಬರೆಯಲು ಬಯಸುತ್ತಿದ್ದಿಲ್ಲ. ನನ್ನ ಗೆಳೆಯರು ನಿರಾಶರೇ ಆದರು. ಆಗ ಅವರಲ್ಲಿ ಒಬ್ಬಿಬ್ಬರಿಗೆ ಅದೇನೋ ನನ್ನ ನೆನಪಾಯಿತು. ಅವರು ನನಗೆ ಒಂದೇ ಸಮನೆ ಗಂಟುಬಿದ್ದು ಲೇಖ ಕೊಡಲು ನಾನು ಸಮ್ಮತಿಸುವಂತೆ ಮಾಡಿದರು. ಇದು ೧೯೧೩ರಲ್ಲಿ. ಇವರ ಕಾಟ ತಪ್ಪಿದರೆ ಸಾಕೆಂದು ನಾನು ಒಪ್ಪಿದೆ. ಆ ಮೇಲೆ ರಂಗೂನಿಗೆ ಹೋದೆ. ನಾನು ಮಾತು ಕೊಟ್ಟದ್ದು ಮರೆತುಹೋಯಿತು. ಆದರೆ ಗೆಳೆಯರ ನಿರಂತರ ಆಗ್ರಹದ ಮೂಲಕ ಬರೆಯಬೇಕೆಂದು ನಿರ್ಧರಿಸಿ ಕೊನೆಗೆ ಅವರ 'ಯಮುನಾ' ಪತ್ರಿಕೆಗೆ ಒಂದು ಚಿಕ್ಕ ಕಥೆ ಕಳಿಸಿದೆ. ಅದೊಳ್ಳೇ ಸನ್ಮಾನಿತವಾಗಿ ಒಂದು ದಿನದಲ್ಲಿಯೆ ನಾನು ಪ್ರಖ್ಯಾತನಾದೆ. ಅಂದಿನಿಂದ ಬರೆಯುತ್ತಲಿದ್ದೇನೆ. ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸ

ಬೇಕಾದ ಪ್ರಸಂಗಬಾರದ ಭಾಗ್ಯವಂತ ಬಂಗಾಲೀ ಲೇಖಕನು ಸಾಸಿರ ಬ್ಬನೇ ಎನ್ನಬಹುದು.'

'ಬರೋದಿದಿ'ಯು ಪ್ರಕಟವಾದಾಗಲೇ ಜನಸಾಮಾನ್ಯರಲ್ಲಿ ಶರಚ್ಚಂದ್ರರು ಪ್ರಖ್ಯಾತರಾಗಿದ್ದರು. 'ರಾಮೇರ ಸುಮತಿ'ಯು ಸುಶಿಕ್ಷಿತ ಸಮಾಜದ ಮನಸನ್ನೂ ಸೆಳೆಯಿತು. ಅಂದಿನಿಂದ ಅವರ ಕೀರ್ತಿಯು ಇನ್ನೂ ಅಷ್ಟು ಹೆಚ್ಚಿತು. ಶರಚ್ಚಂದ್ರರ ಸ್ಥಾನವು ಬಂಕಿಮಚಂದ್ರ, ರವೀಂದ್ರನಾಥರ ಬಳಿಯಲ್ಲಿ ಎಂದು ಸಿದ್ಧವಾಯಿತು.

*   *   *   *

ಶರಚ್ಚಂದ್ರರು ೧೯೨೯ರಲ್ಲಿ ಕೂಡಿದ ಬಂಗಾಲೀ ಯುವಕ ಪರಿಷತ್ತಿನಲ್ಲಿ ಮಾಡಿದ ಅಧ್ಯಕ್ಷೀಯ ಭಾಷಣದಲ್ಲಿಯ ಕೆಲವು ಮಾತುಗಳಿವು: 'ಪರಕೀಯರ ಆಳಿಕೆಯು ನಮ್ಮನ್ನು ದುರ್ಬಲರನ್ನಾಗಿಯೂ ಅಸ್ತ್ರಹೀನರನ್ನಾಗಿಯೂ ಮಾಡಿದೆಯೆಂಬುದೇನೋ ನಿಜ. ಆದರೆ ನಮ್ಮ-ನಮ್ಮೊಳಗಿನ ಭೇದ-ಭಾವಗಳೇ ನಮ್ಮನ್ನು ಹೆಚ್ಚು ದುರ್ಬಲರನ್ನಾಗಿ ಮಾಡಿವೆ. ನಮ್ಮ ಮುನ್ನಡೆಗೆ ಅಡ್ಡ ಬಂದಿವೆ. ಈ ಹೃದಯ ಹೀನ ಸಮಾಜ, ಪ್ರೇಮ ಹೀನ ಧರ್ಮ, ಜಾತಿ-ಜಾತಿಗಳಲ್ಲಿಯ ದ್ವೇಷ, ಆರ್ಥಿಕ ವೈಷಮ್ಯ, ಸ್ತ್ರೀಯರ ನಿರಾದರ—ಇವೇ ನಮ್ಮ ಇಂದಿನ ದುರ್ದೆಶೆಯ ಕಾರಣಗಳು.' ಶರಚ್ಚಂದ್ರರ ವಿಚಾರ ಸರಣಿಯು ಹೇಗಿದೆಯೆಂಬುದು ಇದರಿಂದ ತಿಳಿಯುವಂತಿದೆ.

*   *   *   *

ಶರಚ್ಚಂದ್ರರಿಗೆ ಐವತ್ತೈದು ವರ್ಷಗಳು ತುಂಬಿದನೆಂದು ೧೯೩೨ನೇ ಇಸ್ವಿಯಲ್ಲಿ ಅವರ ಜನ್ಮದಿನೋತ್ಸವವು ಬಂಗಾಲದ ಮೂಲೆ-ಮೂಲೆಗಳಲ್ಲಿ ಬಹು ವಿಜೃಂಭಣೆಯಿಂದ ಪಾಲಿಸಲ್ಪಟ್ಟಿತು. ಆ ಸಮಯದಲ್ಲಿ ರವೀಂದ್ರನಾಥರು ಶರಚ್ಚಂದ್ರರಿಗೆ ಶುಭವನ್ನೂ ದೀರ್ಘಾಯುಷ್ಯವನ್ನೂ ಬಯಸಿ ಆಶೀರ್ವಾದಪರ ಪತ್ರವನ್ನು ಬರೆದಿದ್ದರು.

ಕಾದಂಬರೀ ಲೇಖನದಲ್ಲಿ ರವೀಂದ್ರನಾಥರಿಗಿಂತ ಶರಚ್ಚಂದ್ರರ ಕೈ ಮೇಲಾದುದರಿಂದಲೂ ಶರಚ್ಚಂದ್ರರ ಕಾದಂಬರಿಗಳು ರವೀಂದ್ರರ ಕಾದಂಬರಿಗಳಿಗಿಂತ ವಿಶೇಷ ಲೋಕಪ್ರಿಯವಾದುದರಿಂದಲೂ ಶರಚ್ಚಂದ್ರರ

ಬಗೆಗೆ ರವೀಂದ್ರನಾಥರಲ್ಲಿ ಅಸೂಯೆ ಉಂಟಾಗಿದೆಯೆಂದು ಹಲವರು ಅನ್ನುತ್ತಿದ್ದರು. ಆದರೆ ವಸ್ತುಸ್ಥಿತಿ ಹಾಗಿರಲಿಲ್ಲ. ರವೀಂದ್ರರು ಶರತ್ ಸಾಹಿತ್ಯವನ್ನು ಗೌರವದಿಂದಲೆ ಕಂಡಿದ್ದಾರೆ. ಶರಚ್ಚಂದ್ರರಾದರೂ ರವೀಂದ್ರರ ಬಗೆಗೆ ಬಹಳ ಶ್ರದ್ಧೆಯುಳ್ಳವರಾಗಿದ್ದರು. ರವೀಂದ್ರರ ಕಾವ್ಯ ಗಳ ಬಗೆಗೆ ಅವರಿಗೆ ಬಹಳ ಪ್ರೀತಿಯಿತ್ತು. ರವೀಂದ್ರರ ಎಷ್ಟೋ ಕವಿತೆ ಗಳನ್ನು ಅವರು ಮುಖಪಾಠ ಮಾಡಿದ್ದರು. 'ರವೀಂದ್ರರ ಸಾಹಿತ್ಯದಿಂದ ನಾನೆಷ್ಟೋ ಸ್ಫೂರ್ತಿಪಡೆದಿದ್ದೇನೆ. ಭಾರತದ ಇಂದಿನ ಹೀನ ಸ್ಥಿತಿಯಲ್ಲಿ ರವೀಂದ್ರರಂತಹ ಮಹಾಕವಿಗಳು ಹುಟ್ಟಿದ್ದು ದೇಶದ ಮಹದ್ಭಾಗ್ಯ' ಎಂದು ಶರಚ್ಚಂದ್ರರು ಯಾವಾಗಲೂ ಹೇಳುತ್ತಿದ್ದರು. ಶರಚ್ಚಂದ್ರರ ಜನ್ಮದಿನೋತ್ಸವವನ್ನು ಪಲಕ್ಷಿಸಿ ರವೀಂದ್ರನಾಥರು 'ಕಾಲನ ಯಾತ್ರೆ' ಎಂಬ ನಾಟಿಕೆಯನ್ನು ಶರಚ್ಚಂದ್ರರಿಗೆ ಅರ್ಪಿಸಿದ್ದಾರೆ.

೧೯೩೫ರಲ್ಲಿ ಕಾನಪುರದಲ್ಲಿ ಸೇರಿದ ಪ್ರವಾಸೀ ವಂಗ ಸಾಹಿತ್ಯ ಸಮ್ಮೇಲನದ ಅಧ್ಯಕ್ಷಸ್ಥಾನಕ್ಕೆ ಶರಚ್ಚಂದ್ರರನ್ನು ಆರಿಸಿದ್ದರು. ಆದರೆ ಅಸ್ವಸ್ಥತೆಯ ಮೂಲಕ ಅಲ್ಲಿಗೆ ಹೋಗಲು ಶರಚ್ಚಂದ್ರರಿಗೆ ಆಗಲಿಲ್ಲ.

ಬಂಗಾಲೀ ಸಾಹಿತ್ಯ ಕ್ಷೇತ್ರದಲ್ಲಿ ಶರಚ್ಚಂದ್ರರು ಮಾಡಿದ ಕಾರ್ಯ ಕ್ಕಾಗಿ ಕಲಕತ್ತಾ ವಿಶ್ವವಿದ್ಯಾಲಯದವರು ಅವರಿಗೆ 'ಜಗತ್ತಾರಿಣೀ' ಸ್ವರ್ಣಪದಕವನ್ನು ಕೊಟ್ಟು ಸನ್ಮಾನಿಸಿದರು. ರವೀಂದ್ರನಾಥರ ನಂತರ ಈ ಮಾನ ದೊರೆತದ್ದು ಇವರಿಗೇ. ಈಗ ಎರಡು ವರ್ಷಗಳ ಹಿಂದೆ ಢಾಕಾ ವಿಶ್ವವಿದ್ಯಾಲಯದವರು ಶರಚ್ಚಂದ್ರರಿಗೆ D. Litt ಎಂಬ ಪದವಿಯನ್ನು ಕೊಟ್ಟರು.

* * * *

ಶರಚ್ಚಂದ್ರರು ಸ್ವಭಾವತಃ ಆತ್ಮಗೋಪನಶೀಲ ಮನುಷ್ಯರಾಗಿ ದ್ದರು. ತಮ್ಮನ್ನು ಸಂಪೂರ್ಣವಾಗಿ ತೆರೆದು ತೋರಿಸುವದು ಅವರ ಸ್ವಭಾವದ ವಿರುದ್ಧವಾಗಿತ್ತು. ಅವರ ಜೀವನದಲ್ಲಿ ವಿವಿಧ ವ್ಯಕ್ತಿತ್ವದ ವಿಕಾಸವಾದುದು ಕಂಡುಬರುತ್ತಿತ್ತು. ಜೀವನದ ಅವರ ಅಭಿಜ್ಞತೆಯು ಬಹು ಗಭೀರವೂ ವೈಚಿತ್ರ್ಯಪೂರ್ಣವೂ ಆಗಿತ್ತು. ಅವರ ಜೀವನದ ಅನೇಕ

ಘಟನೆಗಳನ್ನು ಅವರ ಬಾಯಿಂದಲೇ ಕೇಳಿ ಚಮತ್ಕೃತರಾದ ಜನರು ಶರಚ್ಚಂದ್ರರಿಗೆ ತಮ್ಮ ಆತ್ಮಚರಿತ್ರೆಯನ್ನು ಬರೆಯಲು ಆಗ್ರಹಪಡಿಸಿದಾಗ ಶರಚ್ಚಂದ್ರರು ನಕ್ಕು 'ಜೀವನದ ಪ್ರತ್ಯಕ್ಷ ಘಟನೆಗಳನ್ನು ಇದ್ದಕ್ಕಿದ್ದ ಹಾಗೆಯೆ ಸಾಹಿತ್ಯದಲ್ಲಿಡುವದು ಸರಿಯಲ್ಲ. ನಿಜವಾದ ಸಾಹಿತ್ಯ ನಿರ್ಮಿತಿಗೆ ಆ ಅಭಿಜ್ಞತೆಯು ಸಹಾಯಕಾರಿಯಾಗುವದು ಮಾತ್ರ' ಎಂದರು.

ಶರಚ್ಚಂದ್ರರ ಜೀವನದಲ್ಲಿ ಸುಖ–ದುಃಖ, ಆಶೆ–ನಿರಾಶೆ, ಮೋಹ-ವಿರಕ್ತಿ, ಗ್ಲಾನಿ–ಕ್ಷೋಭೆಗಳ ತೆರೆಗಳು ಎದ್ದಿವೆ, ಬಿದ್ದಿವೆ. ಆದರೆ ಯಾವುದರಿಂದಲೂ ಅವರ ಮನಸ್ಸನ್ನು ಕದಲಲಿಲ್ಲ. ವಿರಾಗಿಯಂತೆ ಇದ್ದುಬಿಟ್ಟಿದ್ದರು. ಯಾವ ಬಗೆಯ ಬಂಧನಕ್ಕೂ ಅವರು ಒಳಗಾಗಲಿಲ್ಲ. ಅಕೃತ್ರಿಮವಾದ ಪ್ರೇಮವೇ ಅವರು ಒಳಗಾದ ಒಂದು ಬಂಧನ. ಈ ವಸ್ತುವಿಗಾಗಿ ಅವರು ಎಲ್ಲವನ್ನೂ ತ್ಯಜಿಸಲು ಸಿದ್ಧರಿದ್ದರು. ಅವರು ಅನುಭವಿಸಿದ ದುಃಖಗಳಿಂದ ಅವರ ಹೃದಯವು ಪರಿಶುದ್ಧತರವಾಗಿ ಜೀವನದ ಆಳವನ್ನು ಕಂಡಿತ್ತು. ಅಂತರ್ವೇದನೆಯು ಇಂತಹ ಅನುಭವವಿಲ್ಲದೆ ರಸಸೃಷ್ಟಿಯಾಗುವದು ಅಸಾಧ್ಯ. ಅಂತೆಯೆ ಶರಚ್ಚಂದ್ರರ ಸಾಹಿತ್ಯದಲ್ಲಿ ಜೀವನದ ವಾಸ್ತವತೆಯು ಕೂಡ ಕಲ್ಪನೆಯ ಸುಂದರ ಸಾಮರಸ್ಯವಿದೆ.

ಶರಚ್ಚಂದ್ರರು ಬಹು ಪರಿಹಾಸಪ್ರಿಯರಾಗಿದ್ದರು. ಅವರೊಳ್ಳೇ ಭಾಷಣಕಾರರಾಗಿದ್ದರೂ ಅವರ ಮಾತು-ಕತೆಗಳು ಬಹು ಸರಸವಾಗಿರುತ್ತಿದ್ದವು. ಅವರು ಅತ್ಯಂತ ಸ್ನೇಹಪರಾಯಣರೂ ಅತಿಥಿ ಸೇವಾಸಕ್ತರೂ ಅಹುದು. ಶರಚ್ಚಂದ್ರರು ಚಹದ ಭಕ್ತರಾಗಿದ್ದರು. ತಂಬಾಕನ್ನಾದರೂ ಸೇದುತ್ತಿದ್ದರು. ಬಾಲ್ಯದಲ್ಲಿ ಎಲ್ಲ ಬಗೆಯ ಮಾದಕ ಪದಾರ್ಥಗಳ ಸೇವನೆಯನ್ನೂ ಮಾಡಿದರು. ಅನೇಕ ದುಶ್ಚಟಗಳು ಅವರಲ್ಲಿ ಮನೆಮಾಡಿಕೊಂಡುಬಿಟ್ಟವು.

ಮನುಷ್ಯನ ದುಃಖಗಳಷ್ಟೆ ಶರಚ್ಚಂದ್ರರನ್ನು ವಿಚಲಿತರನ್ನಾಗಿ ಮಾಡುತ್ತಿದ್ದಿಲ್ಲ; ಎಲ್ಲ ಜೀವ-ಜಂತುಗಳನ್ನೂ ಅವರು ಬಹಳವಾಗಿ ಪ್ರೀತಿಸುತ್ತಿದ್ದರು. ಭೇಲೂ ಎಂಬ ಹೆಸರಿನ ಅವರ ನಾಯಿಯೊಂದಿತ್ತು. ಜವಾರಿ

ನಾಯಿ. ನೋಡಲು ಕುರೂಪಿ. ಸ್ವಭಾವವೂ ಉಗ್ರ. ಶರಚ್ಚಂದ್ರರ ಮನೆಗೆ ಹೋದವರಿಗೆ ಮಾತ್ರ ಈ ನಾಯಿಯ ಉಗ್ರತೆ ಗೊತ್ತು. ಭೇಲೂ ಒಮ್ಮೆ ಬೇನೆ ಬಿತ್ತು. ಮನೆಯಲ್ಲಿಯೆ ಅದರ ಚಿಕಿತ್ಸೆ ನಡೆಸಿದರು ಶರಚ್ಚಂದ್ರರು. ಅದಕ್ಕಾಗಿ ನೀರಿನಂತೆ ರೊಕ್ಕ ವೆಚ್ಚಮಾಡಿದರು. ಗುಣ ವಾಗಲಿಲ್ಲ. ಕೊನೆಗೆ ತಾವೇ ಅದನ್ನು ತೆಗೆದುಕೊಂಡು ಹೋಗಿ ಪಶು ಚಿಕಿತ್ಸಾಲಯದಲ್ಲಿಟ್ಟರು. ದಿನಾಲು ಎರಡೂ ಹೊತ್ತು ಅದನ್ನು ನೋಡಲು ಹೋಗುತ್ತಿದ್ದರು. ಏನಾದರೂ ಅದು ಬದುಕಲಿಲ್ಲ. ಅದಕ್ಕೆ ತಮ್ಮ ಮನೆಯ ಹತ್ತಿರ ಸಮಾಧಿಯನ್ನು ಕೊಟ್ಟು ಸಣ್ಣ ಹುಡುಗರಂತೆ ಅಳ ಲಾರಂಭಿಸಿದರು. ಅತ್ಯಂತ ಪ್ರಿಯ ಜನರ ವಿಯೋಗದಿಂದ ಆಗುವಷ್ಟು ದುಃಖವು ಅವರಿಗಾಗಿತ್ತು.

* * * *

ಶರಚ್ಚಂದ್ರರು ೨೦–೨೫ ಕಾದಂಬರಿಗಳನ್ನು ಬರೆದಿದ್ದಾರೆ. ಅವೆಲ್ಲವೂ ಅತ್ಯಂತ ಲೋಕಪ್ರಿಯವಾಗಿವೆ. ಕೆಲವು ಕಾದಂಬರಿಗಳು ೧೫–೨೦ ಆವೃತ್ತಿ ಗಳನ್ನು ಕಂಡಿವೆ. ಅನೇಕ ಭಾಷೆಗಳಲ್ಲಿ ಅನುವಾದಿಸಲ್ಪಟ್ಟಿವೆ. ಅವುಗಳಲ್ಲಿ ಮುಖ್ಯವಾದವುಗಳು 'ಶ್ರೀಕಾಂತ,' (ನಾಲ್ಕುಭಾಗ) 'ಚರಿತ್ರಹೀನ,' 'ಪರಿಣೀತಾ,' 'ದೇವದಾಸ,' 'ಬಿಂದೂರ್ ಛೇಲೆ,' 'ಬರೋದಿದಿ,' 'ಪಲ್ಲೀಸಮಾಜ,' 'ಗೃಹದಾಹ,' 'ಶೇಷ ಪ್ರಶ್ನ,' 'ಪಥೇರ್‌ದಾಬಿ' (ಇದು ಸರಕಾರದಿಂದ ಜಪ್ತಾಗಿದೆ) ಮುಂತಾದುವುಗಳು. ಅಸಂಖ್ಯ ಸಣ್ಣ ಕತೆಗಳನ್ನು ಬರೆದಿದ್ದಾರೆ. ಅವುಗಳಲ್ಲಿ 'ರಾಮೇರ್ ಸುಮತಿ' ಮತ್ತು 'ಪಥನಿರ್ದೇಶ್' ಎಂಬವುಗಳು ವಿಶೇಷ ಪ್ರಸಿದ್ಧವಾಗಿವೆ. 'ಷೋಡಶಿ' ಎಂಬ ನಾಟಕವನ್ನೂ ಬರೆದಿದ್ದಾರೆ. ಈಚೆಗೆ ಬಾಲಸಾಹಿತ್ಯದಲ್ಲಿ ಮನಸ್ಸು ಹಾಕಿದ್ದರು. ಬಾಲಕರಿಗಾಗಿ ಅವರು ಬರೆದ ಕತೆಗಳ ಸಂಗ್ರಹವು ಇಷ್ಟ ರಲ್ಲಿಯೆ ಪ್ರಕಟವಾಗಿರಬಹುದು. ಶರಚ್ಚಂದ್ರರ ಅನೇಕ ಪ್ರಬಂಧಗಳೂ ಪ್ರಸಿದ್ಧವಾಗಿವೆ.

'ದೇವದಾಸ,' 'ಗೃಹದಾಹ,' 'ದೇನಾಪಾಓನಾ,' 'ಬರೋ ದಿದಿ' ಈ ಕಾದಂಬರಿಗಳ ವಾಕ್ಪಟಗಳೂ ಸಿದ್ಧವಾಗಿದ್ದು ಅವು ಪ್ರೇಕ್ಷಕರ

ಮನವನ್ನು ಸೂರೆಗೊಂಡಿವೆ. ಇನ್ನೂ ಕೆಲವು ಕಾದಂಬರಿಗಳ ವಾಕ್ಪಟಗಳಾಗುವವಿವೆ.

ಹೀಗೆ ತಮ್ಮ ಹದಿನಾರನೆಯ ವಯಸ್ಸಿನಿಂದ ಸಾಹಿತ್ಯರಚನೆಯಲ್ಲಿ ತೊಡಗಿದ ಶರಚ್ಚಂದ್ರರು ತಮ್ಮ ಅರವತ್ತೆರಡನೆಯ ವಯಸ್ಸಿನಲ್ಲಿ—ಕಳೆದ ವರ್ಷ ಜಾನೇವರಿಯಲ್ಲಿ ಇಹಲೋಕಯಾತ್ರೆಯನ್ನು ಮುಗಿಸಿದರು.

ಶರಚ್ಚಂದ್ರರು ಆದರ್ಶ ಲೇಖಕರು. ಆದರ್ಶ ದೇಶಪ್ರೇಮಿಗಳು. ಎಲ್ಲಕ್ಕೂ ಹೆಚ್ಚಾಗಿ ಆದರ್ಶ ವ್ಯಕ್ತಿಗಳು.

೨

ಶರಚ್ಚಂದ್ರರು ಇಂದಿನ ಯುಗದ ಕಾದಂಬರೀಕಾರರು. ಆದರೆ ಅವರದೊಂದು ವೈಶಿಷ್ಟ್ಯವಿದೆ. ಇಂದಿನ ಕಾದಂಬರಿಗಳು ಮುಖ್ಯವಾಗಿ ಸಮಸ್ಯಾಪ್ರಧಾನವಾದವುಗಳು; ಮನೋವಿಶ್ಲೇಷಣಾತ್ಮಕವಾದವುಗಳು. ಅವುಗಳಲ್ಲಿರುವದು ಬುದ್ಧಿಯ ವಿಲಾಸ. ಕಥೆ ಎಲ್ಲಿಯೋ ಉಳಿದುಬಿಟ್ಟಿರುತ್ತದೆ. ಹೀಗಾಗಿ ಅವು ನೀರಸವೆನಿಸುವದುಂಟು. ಶರಚ್ಚಂದ್ರರ ಕಾದಂಬರಿಗಳಲ್ಲಿ ವಿಚಾರ ಪ್ರವಾಹದ ಜೊತೆಗೆ ರಸವೂ ಹರಿಯುತ್ತಿರುತ್ತದೆ. ಅವು ನಮ್ಮ ವಿಚಾರಗಳನ್ನು ಉದ್ದೀಪಿಸುವ ಜೊತೆಗೆ ನಮ್ಮ ಹೃದಯವನ್ನೂ ಕಲಕಿಬಿಡುವವು. ಅವರ ಕಾದಂಬರಿಗಳನ್ನು ಓದಿದ ನಂತರ ಎಷ್ಟೋ ದಿನಗಳ ವರೆಗೆ ಅವುಗಳ ಗುಂಗು ತಲೆಯನ್ನು ಬಿಟ್ಟಿರುವುದಿಲ್ಲ. ಅಂತಹ ಅದ್ಭುತ ಪರಿಣಾಮವನ್ನುಂಟುಮಾಡುವ ಶಕ್ತಿ ಅವುಗಳಲ್ಲಿದೆ.

ನಮ್ಮ ಸಮಾಜದ ವಿವಿಧ ಅಂಗಗಳನ್ನು ಶರಚ್ಚಂದ್ರರು ಬಹು ಸೂಕ್ಷ್ಮವಾಗಿ ನಿರೀಕ್ಷಿಸಿದ್ದಾರೆ. ತಮ್ಮ ದೀರ್ಘ ಪ್ರವಾಸೀ ಜೀವನದಲ್ಲಿ ಶರಚ್ಚಂದ್ರರು ಶ್ರೀಮಂತಿಕೆಯಲ್ಲಿ ಲೋಲಾಡುವ ಜನರನ್ನು ನೋಡಿದ್ದಾರೆ; ಬಡತನದಲ್ಲಿ ಗೋಳಾಡುವ ಜನರನ್ನೂ ನೋಡಿದ್ದಾರೆ. ಧರ್ಮಮಾರ್ತಾಂಡರನ್ನು ನೋಡಿದ್ದಾರೆ; ಪಾಪಿ—ಚಾಂಡಾಲರನ್ನೂ ನೋಡಿದ್ದಾರೆ. ಅತ್ಯಾಚಾರಿಗಳನ್ನು ನೋಡಿದ್ದಾರೆ; ಪೀಡಿತರನ್ನೂ ನೋಡಿದ್ದಾರೆ.

ಪ್ರತಿಷ್ಠಿತರನ್ನು ನೋಡಿದ್ದಾರೆ; ಪಾಮರರನ್ನೂ ನೋಡಿದ್ದಾರೆ. ಹೀಗೆ ವಿಭಿನ್ನ ಶ್ರೇಣಿಯ, ವಿಭಿನ್ನ ಪ್ರಕೃತಿಯ, ವಿಭಿನ್ನ ಪರಿಸ್ಥಿತಿಯ ಜನ ಸಮುದಾಯದ ಯಥೇಷ್ಟ ಪರಿಚಯವು ಅವರಿಗಾಗಿದೆ. ಇದೆಲ್ಲ ಅವರ ಸಾಹಿತ್ಯಕ್ಕೆ ಸಾಮಗ್ರಿಯನ್ನೊದಗಿಸಿದೆ.

ಈ ತೆರದ ವೈಚಿತ್ರ್ಯಪೂರ್ಣ ಅನುಭವದ ಫಲವಾಗಿ ಶರಚ್ಚಂದ್ರರು ತಮ್ಮ ಕತೆ–ಕಾದಂಬರಿಗಳಲ್ಲಿ ಎರಡು ವಿಷಯಗಳು ಎದ್ದು ಕಾಣುವಂತೆ ಬರೆದಿದ್ದಾರೆ. ಮೊದಲನೆಯದಾಗಿ ಅವರ ಅನುಭವಕ್ಕೆ ಬಂದಿದ್ದೇನೆಂದರೆ ಹಿರಿಮೆ ಎಂಬುದು ಎಲ್ಲ ವರ್ಗಗಳ ಜನರಲ್ಲಿಯೂ ಕಂಡುಬರುತ್ತದೆ; ಪತಿತ ರೆಂದು ನಮ್ಮ ತಿರಸ್ಕಾರಕ್ಕೆ ಈಡಾದವರಲ್ಲಿ ಸಹ. ಮೇಲಿನ ವರ್ಗಕ್ಕೇನೂ ಅದನ್ನು ದತ್ತು ಕೊಟ್ಟಿಲ್ಲ. ಕೆಳಗಿನವರನ್ನು ಕೀಳೆಂದು ಬಗೆದು ಮೂಗು ಮುರಿಯುವ ಮೇಲಿನ ವರ್ಗದವರು ತಮ್ಮ ದಂಭವನ್ನು ಮಾತ್ರ ತೋರ್ಪಡಿಸುತ್ತಾರೆ. ಹೀಗಾಗಿ ಅವರ ಮನಸ್ಸಿನಲ್ಲಿ ಒಂದು ಬಗೆಯ ಸಾಮ್ಯಭಾವವೂ ಸಕಲ ಜನ ಪ್ರೀತಿಯೂ ಉಂಟಾದುವು. ಪ್ರಚಲಿತ ಸಾಮ್ಯವಾದಕ್ಕಿಂತ ಅವು ಹೆಚ್ಚು ಗಭೀರವಾದವುಗಳು. ಶರಚ್ಚಂದ್ರರ ಸಾಮ್ಯವಾದವು ವರ್ಗಭೇದವನ್ನೊಪ್ಪುವದಿಲ್ಲ. ಮನುಷ್ಯ–ಮನುಷ್ಯ ರಲ್ಲಿಯ ವೈಷಮ್ಯವನ್ನು ಅಲ್ಲಗಳೆಯುತ್ತದೆ. ಈ ಬಗೆಯ ಸಾಮ್ಯವಾದವು Humanism ನ ಶ್ರೇಷ್ಠರೂಪ. ಶರಚ್ಚಂದ್ರರು ಈ ಉಚ್ಚತರ ಸಾಮ್ಯ ವಾದದ ಭೂಮಿಕೆಯ ಮೇಲೆ ಅಧಿಷ್ಠಿತರಾಗಿ ಮನುಷ್ಯ-ಮನುಷ್ಯರಲ್ಲಿಯ ಜನ್ಮಗತ ಅಥವಾ ಐಶ್ವರ್ಯಗತ ಭೇದಗಳ ಕೂಡ, ಪುರಾತನ ನೈತಿಕ ಸಂಸ್ಕಾರಗಳ ಮೂಲಕ ರೂಢವಾದ ಭೇದಗಳನ್ನು ಸಹ ನಷ್ಟಮಾಡಲು ಸಮರ್ಥರಾದರು. ಜನ್ಮ ಅಥವಾ ಸಂಪತ್ತಿನ ಮೂಲಕ ಪ್ರಾಪ್ತವಾದ ಪ್ರತಿಷ್ಠೆಯನ್ನು ಉಪೇಕ್ಷಿಸುವ ಎಷ್ಟೋ ಜನರಿದ್ದಾರೆ. ಆದರೆ ಭ್ರಷ್ಟ ಸ್ತ್ರೀ–ಪುರುಷರನ್ನು ಇತರ ಸ್ತ್ರೀ–ಪುರುಷರಂತೆ ಸಮದೃಷ್ಟಿಯಿಂದ ನೋಡಲು ಅವರು ಹಿಂಜರಿಯುವದುಂಟು. ಆದರೆ ಶರಚ್ಚಂದ್ರರ ದೃಷ್ಟಿ ಯಲ್ಲಿ ಎಲ್ಲರೂ ಒಂದೇ ಸಮರು. ಶರಚ್ಚಂದ್ರರ ವೈಶಿಷ್ಟ್ಯವಿರುವದು ಇಲ್ಲಿ.

ಅವರ ಕಾದಂಬರಿಗಳಲ್ಲಿ ಕಂಡುಬರುವ ಎರಡನೆಯ ವಿಷಯು ವೇನೆಂದರೆ ಸ್ತ್ರೀಯರ ವಿಷಯವಾಗಿ ಶರಚ್ಚಂದ್ರರ ಆದರ ಭಾವ. ಶರಚ್ಚಂದ್ರರಿಗೆ ಸ್ತ್ರೀ ಸ್ವಭಾವದ ಅಸಾಧಾರಣ ಜ್ಞಾನವುಂಟಾಗಿತ್ತು, ಜೀವನದ ವಿಚಿತ್ರ ಅಭಿಜ್ಞತೆಯು ಮೂಲಕವಾಗಿ. ಸಾಮಾನ್ಯವಾಗಿ ಹೆಂಗುಸು ದುರ್ಬಲಳೂ ಚಂಚಲಚಿತ್ತಳೂ ಎಂದು ನಾವು ತಿಳಿಯುತ್ತೇವೆ. ಆದರೆ ಶರಚ್ಚಂದ್ರರು ಹಾಗೆ ತಿಳಿದಿರಲಿಲ್ಲ. ಹೆಂಗುಸರಲ್ಲಿ ಸಹ ಎಂತಹ ಸಂಯಮ, ಎಂತಹ ತೇಜಸ್ಸು ಇವೆಯೆಂಬುದನ್ನು ತಮ್ಮ ಪ್ರತಿಯೊಂದು ಕಾದಂಬರಿಯಲ್ಲಿ ಅವರು ಮನಗಾಣಿಸಿಕೊಟ್ಟಿದ್ದಾರೆ. ಸ್ತ್ರೀಯು ಪುರುಷನಿಗಿಂತ ಯಾವ ವಿಷಯದಲ್ಲಿಯೂ ಹೀನಳಲ್ಲವೆಂದೇ ಅವರ ಅಭಿಪ್ರಾಯ.

ಶರಚ್ಚಂದ್ರರ ಎಲ್ಲ ಕೃತಿಗಳಲ್ಲಿ ಮಾನವನ ಬಗೆಗೆ-ಆತನು ಯಾವುದೇ ಜಾತಿಯವನಿರಲಿ, ಧರ್ಮದವನಿರಲಿ—ಅಪಾರವಾದ ಪ್ರೇಮವು ಕಂಡು ಬರುತ್ತದೆ. ಅವರು ಮನುಷ್ಯನನ್ನು ಮನುಷ್ಯನೆಂದೇ ಕಂಡಿದ್ದಾರೆ. ಶಾಸ್ತ್ರ-ಪುರಾಣಗಳ ಒರೆಗಲ್ಲಿಗೆ ಅವನನ್ನು ತಿಕ್ಕಿಲ್ಲ. ಮನುಷ್ಯನಲ್ಲಿಯ ಕುಂದು-ಕೊರತೆಗಳು ಆತನನ್ನು ಅವರ ಸಹಾನುಭೂತಿಗೆ ಪಾತ್ರನನ್ನಾಗಿ ಮಾಡಿವೆ. ಮನುಷ್ಯನ ಅಧಿಕಾರಕ್ಕೆ ನಿರ್ಬಂಧವನ್ನು ಹಾಕುವ ಸಮಾಜದ ವಿಧಿ-ನಿಷೇಧಗಳು ಅವರ ತಿರಸ್ಕಾರಕ್ಕೆ ಗುರಿಯಾಗಿವೆ. ಶರಚ್ಚಂದ್ರರ ಮಾನವಪ್ರೇಮವು ಒಂದು ಮಹಾನದಿಯಂತೆ ಹರಿಯುತ್ತಿದ್ದು ಎಲ್ಲರೂ ಅಲ್ಲಿ ಸಮಾನಾಧಿಕಾರಿಗಳು. ಆದರೂ ತಾಯಿಯ ಪ್ರೇಮವು ಎಲ್ಲ ಮಕ್ಕಳ ಮೇಲೆ ಸಮಾನವಾಗಿಯೆ ಇರುತ್ತಿದ್ದರೂ ಅಶಕ್ತ ಮಗುವಿನ ಮೇಲೆ ಹೆಚ್ಚಾಗಿರುವ ಹಾಗೆ ಕಂಡುಬರುವಂತೆ ಶರಚ್ಚಂದ್ರರ ಅಖಿಲ ಮಾನವ ಪ್ರೇಮವು ಅದರ ಅವಶ್ಯಕತೆಯು ಹೆಚ್ಚಾಗಿರುವ ದಲಿತ, ಅಪಮಾನಿತ ಸ್ತ್ರೀ-ಪುರುಷರ ಬಗೆಗೆ ಹೆಚ್ಚಾಗಿ ವ್ಯಕ್ತವಾಗಿದೆ. ಇಂತಹ ಗಭೀರ ಸಹಾನುಭೂತಿಯು ಮತ್ತೆ ಯಾವ ಬಂಗಾಲೀ ಲೇಖಕನಲ್ಲಿಯೂ ಕಾಣದು. ಬಂಕಿಮಚಂದ್ರರಲ್ಲಿ ಅಭಿಜಾತವರ್ಗದ ಅಭಿಮಾನವಿದೆ. ಕವೀಂದ್ರ ರವೀಂದ್ರರ ಮಾನವಪ್ರೇಮವು ಅಸಾಧಾರಣವಾದರೂ ಅವರು ಎಲ್ಲ ಮನುಷ್ಯರನ್ನು ಶರಚ್ಚಂದ್ರರಂತೆ ತೀರ ಸಮದೃಷ್ಟಿಯಿಂದ ನೋಡುವ

ರೆಂದು ಹೇಳಲು ಬರುವಂತಿಲ್ಲ. ಈ ವಿಷಯದಲ್ಲಿ ಶರಚ್ಚಂದ್ರರನ್ನು ಇಂಗ್ಲಿಷ್ ಕಾದಂಬರಿಕಾರನಾದ ಡಿಕಿನ್ಸನಿಗೆ ಹೋಲಿಸಬಹುದು.

ಸ್ತ್ರೀಚಾರಿತ್ರ್ಯದ ವಿಷಯವಾಗಿರುವ ಶರಚ್ಚಂದ್ರರ ಅಭಿಜ್ಞತೆಯು ಅಸಾಮಾನ್ಯವಾದುದು. ಈ ವಿಷಯದಲ್ಲಿ ಯಾವ ಬಂಗಾಲೀ ಲೇಖಕರೂ ಅವರನ್ನು ಸರಿಗಟ್ಟರು. ಬಂಕಿಮಚಂದ್ರರ ನಾಯಿಕೆಯರು ನಿರ್ಜೀವರು. ಸಾಂಪ್ರದಾಯ ಶರಣರು ಅವರು. ಶರಚ್ಚಂದ್ರರು ಸ್ತ್ರೀಚಾರಿತ್ರ್ಯದಲ್ಲಿ ಎಂತಹ ಧೈರ್ಯ–ಸ್ಥೈರ್ಯಗಳನ್ನೂ ವಿದ್ರೋಹೀಭಾವವನ್ನೂ ತೋರಿಸಿರುವರೋ ಅದರ ಸಂಪೂರ್ಣ ಅಭಾವವು ಬಂಕಿಂಚಂದ್ರರ ಸ್ತ್ರೀಪಾತ್ರಗಳಲ್ಲಿದೆ. ಬಂಕಿಮರಿಗಿಂತ ರವೀಂದ್ರರು, ಸ್ತ್ರೀಸ್ವಭಾವದಲ್ಲಿ ಹೆಚ್ಚು ದೃಢತೆ, ಹೆಚ್ಚು ಆತ್ಮಬಲವನ್ನು ತೋರಿಸಿದ್ದಾರೆ. ಬಂಗಾಲೀ ಸಾಹಿತ್ಯದಲ್ಲಿ ಸ್ತ್ರೀಯನ್ನು ಸ್ತ್ರೀಯ ದೃಷ್ಟಿಕೋನದಿಂದ ನೋಡಿದವರು ಎಲ್ಲಕ್ಕೂ ಮೊದಲು ರವೀಂದ್ರರೆಂದು ಹೇಳಬಹುದು. ಹೀಗಿದ್ದರೂ ಈ ವಿಷಯದಲ್ಲಿ ಶರಚ್ಚಂದ್ರರು ರವೀಂದ್ರರನ್ನು ಹಿಂದೆ ಹಾಕಿದ್ದಾರೆ. ಅವರ ಸ್ತ್ರೀಪಾತ್ರಗಳು ಅತುಲನೀಯವಾದವುಗಳು.

ಶರಚ್ಚಂದ್ರರು 'ಷೋಡಶಿ' ಎಂಬ ನಾಟಕವನ್ನು ಬರೆದಿದ್ದಾರೆ. ಅದರಲ್ಲಿ ಮುಖ್ಯ ನಾಯಿಕೆಯಾದ ಭೈರವಿಯ ಪಾತ್ರ ಕಲ್ಪನೆಯು ಅದ್ಭುತವಾಗಿದ್ದು ಬೇರೆ ಯಾವ ಸಾಹಿತ್ಯದಲ್ಲಿಯೂ ಅಂತಹ ಪಾತ್ರವು ದೊರೆಯುವದಿಲ್ಲವೆನ್ನುತ್ತಾರೆ. ಸ್ತ್ರೀಸ್ವಭಾವವನ್ನು ಚಿತ್ರಿಸುವದರಲ್ಲಿ ಶರಚ್ಚಂದ್ರರು ಅಸಮಾನರು.

ಸ್ತ್ರೀಚರಿತ್ರ ಚಿತ್ರಣದಂತೆ ಪ್ರೇಮವನ್ನು ಚಿತ್ರಿಸುವದರಲ್ಲಿಯೂ ಶರಚ್ಚಂದ್ರರು ಹೊಸ ಹಾದಿಯನ್ನು ಹಿಡಿದಿದ್ದಾರೆ. ಬಂಕಿಂಚಂದ್ರರಂತಹ ಕಾದಂಬರಿಕಾರರು ರೂಢಪದ್ಧತಿಯನ್ನನುಸರಿಸಿ ನಮ್ಮೆದುರಿಗೆ ವೈಧ ಪ್ರೇಮದ ಚಿತ್ರವನ್ನೇ ಇಟ್ಟಿದ್ದಾರೆ. ಕ್ವಚಿತ್ತಾಗಿ ಅವೈಧ ಪ್ರೇಮದ ಬಗೆಯನ್ನು ತೋರಿಸಿದ್ದರೂ ಅದರ ಭೀಕರ ಪ್ರಾಯಶ್ಚಿತ್ತವನ್ನೂ

ಅದರೊಂದಿಗೆ ತೋರಿಸಿದ್ದಾರೆ. ಬಂಗಾಲೀ ಸಾಹಿತ್ಯದಲ್ಲಿ ಮೊಟ್ಟಮೊದಲು ರವೀಂದ್ರನಾಥರೇ 'ಚೋಖೇರ್ ಬಾಲಿ' ಎಂಬ ಕಾದಂಬರಿಯಲ್ಲಿ ಅವೈಧ ಪ್ರೇಮವನ್ನು ಸ್ವಾಭಾವಿಕ ಸ್ವರೂಪದಲ್ಲಿ ತೋರಿಸಿದ್ದಾರೆ. ಆದರೆ ಶರಚ್ಚಂದ್ರರು ರವೀಂದ್ರರಿಗಿಂತ ತೀವ್ರಗಾಮಿಗಳು. ಶರಚ್ಚಂದ್ರರು ಪ್ರೇಮವನ್ನು ಪ್ರೇಮವೆಂದೇ ನೋಡಲು ಬಯಸುತ್ತಾರೆ. ಲೇಖಕನು ಪ್ರೇಮವನ್ನು ಚಿತ್ರಿಸುವಾಗ ಆ ಪ್ರೇಮವು ವೈಧಪ್ರೇಮದ ಸೀಮೆಯನ್ನು ದಾಟಲೇಬಾರದೆಂದು ಅವರು ಅನ್ನುವದಿಲ್ಲ. ಅಂತೆಯೇ ಅವರಿಗೆ ದೇವ ದಾಸ–ಪಾರ್ವತಿಯರ ಅಥವಾ 'ಹಳ್ಳಿಯ ಸಮಾಜ' ದೊಳಗಿನ ರಮಾ-ರಮೇಶರ ಪ್ರೇಮವನ್ನು ಚಿತ್ರಿಸುವದು ಸಾಧ್ಯವಾಗಿದೆ. ಇಂತಹ ಸನ್ನಿವೇಶದಲ್ಲಿ ಅವರು ಪರಂಪರಾಗತ ರೂಢಿಗಳನ್ನು ಸಂಪೂರ್ಣವಾಗಿ ತಿರಸ್ಕರಿಸಿ ಸನಾತನಿಗಳ ಕೋಪಕ್ಕೂ ಗುರಿಯಾಗಿದ್ದಾರೆ. ಅವರ 'ಚರಿತ್ರಹೀನ'ವೆಂಬ ಕಾದಂಬರಿಯನ್ನು ಪ್ರಕಟಿಸುತ್ತಿದ್ದ ಒಂದು ಪತ್ರಿಕೆಗೆ ಸಮಾಜದ ಬಹಿಷ್ಕಾರ ಬಿದ್ದು ಅದು ನಿಲ್ಲುವ ವರೆಗೆ ಪ್ರಸಂಗ ಬಂದಿತ್ತು.

ಶರಚ್ಚಂದ್ರರು ನಮ್ಮ ಪಾರಿವಾರಿಕ ಹಾಗು ಸಾಮಾಜಿಕ ಜೀವನದ ದುರ್ಬಲಸ್ಥಾನಗಳ ಕಡೆಗೆ ನಮ್ಮ ದೃಷ್ಟಿಯನ್ನೆಳೆದಿದ್ದಾರೆ. ಈ ಕಾರ್ಯವನ್ನು ಅಷ್ಟು ಸಹಜವಾಗಿ, ಸುಂದರವಾಗಿ, ಪರಿಣಾಮಕಾರಕವಾಗಿ ಮತ್ತೆ ಯಾರೂ ಮಾಡಿಲ್ಲ. ಸಮಾಜ ಸುಧಾರಕರೆಂದು ಜಂಭಕೊಚ್ಚುವವರಿಗಿಂತ ನಿಜವಾದ ಸಮಾಜ ಸುಧಾರಕರು ಇವರು. 'ಹಳ್ಳಿಯ ಸಮಾಜ' ದಲ್ಲಿ ಇವರು ಹಳ್ಳಿಗರ ಜೀವನದ ಚಿತ್ರವನ್ನು ನಮ್ಮೆದುರಿಗೆ ಇಟ್ಟಿದ್ದಾರೆ. ಅದು ಇಡೀ ಹಿಂದುಸ್ಥಾನದ ಹಳ್ಳಿಗರ ವಾಸ್ತವಿಕ ಚಿತ್ರವೆನ್ನಬಹುದು. ನಮ್ಮ ಸಮಾಜದಲ್ಲಿ ಸೇರಿಕೊಂಡು ನಮ್ಮನ್ನು ಹಾಳು ಮಾಡುತ್ತಿರುವ ದೋಷಗಳನ್ನೂ ಅದರಲ್ಲಿ ತೋರಿಸಿಕೊಟ್ಟಿದ್ದಾರೆ.

ಶರಚ್ಚಂದ್ರರಿಗೆ ಸಾಧಾರಣ ಜನರ, ಸಾಧಾರಣ ಜೀವನದ ಘಟನಾವಳಿಗಳನ್ನೇ ಚಿತ್ರಿಸುವದು ಸೇರುತ್ತಿತ್ತು. ನಮ್ಮ ಪಾರಿವಾರಿಕ ಜೀವನದ ಸುಖ-ದುಃಖ, ಈರ್ಷೆ–ದ್ವೇಷ, ಮಾನ–ಅಭಿಮಾನ, ಜಗಳ–ತೋಟಿ ಇವೇ

ಮೊದಲಾದವುಗಳು ಅವರ ಕತೆ–ಕಾದಂಬರಿಗಳ ವಿಷಯಗಳು. ಆದರೆ ಈ ಸಾಧಾರಣ ವಿಷಯಗಳೂ ಅವರ ಪ್ರತಿಭಾಪೂರ್ಣ ಲೇಖನಿಯ ಪ್ರಭಾವದಿಂದ ಹೊಸದೊಂದು ಚೆಲುವನ್ನು ತಳೆದು ಕಂಗೊಳಿಸುತ್ತಿವೆ.

ಐತಿಹಾಸಿಕ ಅಥವಾ ಪೌರಾಣಿಕ ಕಾದಂಬರಿಗಳಲ್ಲಿಯ ಘಟನೆಗಳು ದೂರ, ಪುರಾತನ ಕಾಲದಲ್ಲಿ ನಡೆದವುಗಳು. ಅವುಗಳ ಸುತ್ತಲೂ ಒಂದು ಬಗೆಯ ರಹಸ್ಯಜಾಲವು ಹಬ್ಬಿದ್ದು ಅದೊಂದು ಅದ್ಭುತ ಸೌಂದರ್ಯವನ್ನು ಬೀರುತ್ತವೆ. ಮನುಷ್ಯ ಸ್ವಭಾವದ ದೌರ್ಬಲ್ಯವೋ ಏನೋ, ಆತನ ಒಲವು ಅಜ್ಞಾತದ ಕಡೆಗೆ, ಅಸ್ಪಷ್ಟತೆಯ ಕಡೆಗೆ ಇರುತ್ತದೆ. ಆದುದರಿಂದ ವಿಗತ ಕಾಲದ ಘಟನೆಗಳು ಅದ್ಭುತವಾಗಿ ತೋರುತ್ತವೆ. ಐತಿಹಾಸಿಕ ಕಾದಂಬರಿಗಳು ನಮ್ಮ ಮನಸ್ಸನ್ನು ಆಕರ್ಷಿಸುವದು ಈ ಮೂಲಕ. ಶರಚ್ಚಂದ್ರರ ಕಾದಂಬರಿಗಳಲ್ಲಿ ಹಿಂದಿನ ಕಾಲದ ಮೋಹಜನಿತ ಆಕರ್ಷಣೆಯು ಎಷ್ಟೂ ಇಲ್ಲ. ಅತ್ಯಾಧುನಿಕ ಬಂಗಾಲೀ ಜೀವನದ ಘಟನೆಗಳೆ ಅವರ ಕತೆ-ಕಾದಂಬರಿಗಳ ವಸ್ತುವಾಗಿವೆ.

ಕವಿ ರವೀಂದ್ರರು ಕಥಾಸಾಹಿತ್ಯದ ಸ್ವರೂಪವನ್ನು ಕುರಿತು ಹೀಗೆ ಹೇಳಿದ್ದಾರೆ: ‘ ಸೂರ್ಯಾಸ್ತದ ಸಮಯದಲ್ಲಿ ಮೋಡಗಳ ಮೇಲಿನ ಬಣ್ಣದಾಟದ ಚಿತ್ರಕ್ಕಿಂತ ಹೊಳೆ, ಬಯಲು, ಊರುಗಳ ಚಿತ್ರದ ಬೆಲೆ ಸಂಪೂರ್ಣ ಭಿನ್ನವಾಗಿದೆ. ಸೌಂದರ್ಯದ ದೃಷ್ಟಿಯಿಂದ ಒಂದೊಂದಕ್ಕೆ ಒಂದೊಂದು ಸ್ಥಾನವಿದೆ. ಅಲ್ಲಿಂದ ಅದನ್ನು ಚ್ಯುತಮಾಡುವಂತಿಲ್ಲ. ಆದರೆ ಮನುಷ್ಯನ ನಿವಾಸಭೂಮಿಯ ಚಿತ್ರವು ನಮ್ಮ ಮನಸ್ಸಿಗೆ ಇನ್ನಿಷ್ಟು ಪೂರ್ಣತರ ಆನಂದವನ್ನು ಕೊಡುತ್ತದೆಯೆಂಬುದನ್ನು ಒಪ್ಪಬೇಕು. ಕತೆಯಲ್ಲಿ ಕಲ್ಪನೆಯ ಕೂಡ ವಾಸ್ತವದ ಸಾಮಂಜಸ್ಯವಿರುವದು ನಿಜವಾಗಿಯೂ ಬೇಕಾದುದೆ. ಕೊನೆಗೆ ಅದರಲ್ಲಿ ವಾಸ್ತವ ವರ್ತಮಾನವಾದರೂ ಇರುವದು ಆವಶ್ಯಕ. ಅದಿಲ್ಲದೆ ಹೋದರೆ ಬರೀ ಬುರುಗೇ ಉಳಿಯುವದು. ಅದು ನೋಡಲಿಕ್ಕೆ ಚಂದವಾದರೂ ಅದರಿಂದ ಹಸಿವೆ ಹಿಂಗುವದಿಲ್ಲ. ’

ಇನ್ನು ಶರಚ್ಚಂದ್ರರ ಜೀವನ ಮತ್ತು ಸಾಹಿತ್ಯದಲ್ಲಿ ಚಿರಂತನ ವಸ್ತುವು ಯಾವುದೆಂದು ಕೇಳಿದರೆ ಹೀಗೆ ಹೇಳಬಹುದು: ದುರ್ಬಲ ಮತ್ತು ದಲಿತ ಮಾನವರ ಬಗೆಗೆ—ಅದರಲ್ಲಿಯೂ ಅಸಹಾಯ ಸ್ತ್ರೀಯರ ಬಗೆಗೆ—ಅವರ ಅಪಾರ ಸಹಾನುಭೂತಿ, ಮನುಷ್ಯ—ಮನುಷ್ಯರಲ್ಲಿ ಯಾವ ಬಗೆಯ ಭೇದವನ್ನೂ ಎಣಿಸದ ಅವರ ಉಜ್ವಲ ಸಾಮ್ಯವಾದ; ಮಾನವ ಸ್ವಭಾವ ಚಿತ್ರಣದ ಅವರ ಅದ್ಭುತ ಸಾಮರ್ಥ್ಯ. ಈ ಮೂರು ಮುಖ್ಯ ವಿಷಯಗಳ ಜೊತೆಗೆ ಇನ್ನೂ ಒಂದು ವಿಷಯವನ್ನು ನಾವು ನೋಡ ಬಹುದು. ಅವರ ಸಾಹಿತ್ಯವು ಸಾವಕಾಶವಾಗಿ ಜನತೆಯನ್ನು ಮಾನವ ಪ್ರೇಮದ ಕಡೆಗೆ, ಸಹಿಷ್ಣುತೆಯ ಕಡೆಗೆ ಒಯ್ಯುತ್ತಿದೆ. ನಮ್ಮ ಸಮಾಜ ದಲ್ಲಿಯ ಘಾತುಕದೋಷಗಳ ಬಗ್ಗೆ ಎಚ್ಚರವನ್ನು ಹುಟ್ಟಿಸಿದೆ.

ಶರಚ್ಚಂದ್ರರಿಗೆ ಐವತ್ತು ವರ್ಷ ತುಂಬಿದಾಗ ಕಲಕತ್ತೆಯ ಸಾಹಿತ್ಯ ಪ್ರೇಮಿಗಳು ಅವರಿಗೊಂದು ಸತ್ಕಾರಕೂಟವನ್ನು ಏರ್ಪಡಿಸಿ ದ್ದರು. ಆಗ ರವೀಂದ್ರನಾಥರು ಕಳಿಸಿದ ಆಶೀರ್ವಚನದೊಳಗಿನ ಕೆಲವು ಮಾತುಗಳಿವು. 'ಜ್ಯೋತಿಷಿಯು ಅಸೀಮ ಆಕಾಶದಲ್ಲಿ ಮುಣುಗು ಹಾಕಿ ನಾನಾ ಜಗತ್ತುಗಳನ್ನು ಹುಡುಕಿ ತೆಗೆಯುತ್ತಾನೆ. ಅವು ಅನೇಕ ಕಿರಣಗಳ ಸಮ್ಮೇಲನದಿಂದ ಬೆಳಗುತ್ತಿರುತ್ತವೆ. ನಾನಾ ಕಕ್ಷಪಥಗಳಲ್ಲಿ ವಿಭಿನ್ನವೇಗದಿಂದ ತಿರುಗುತ್ತಿರುತ್ತವೆ. ಶರಚ್ಚಂದ್ರರ ದೃಷ್ಟಿಯು ಬಂಗಾಲಿ ಗಳ ಹೃದಯ ರಹಸ್ಯದಲ್ಲಿ ಮುಣುಗು ಹಾಕಿದೆ. ಸುಖದಲ್ಲಿಯೂ ದುಃಖ ದಲ್ಲಿಯೂ, ಮಿಲನದಲ್ಲಿಯೂ ವಿಯೋಗದಲ್ಲಿಯೂ ಸಂಘಟಿಸುವ ವಿಚಿತ್ರ ಸೃಷ್ಟಿಯ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಅದರಿಂದ ಬಂಗಾಲಿಗಳು ತಮ್ಮನ್ನು ಪ್ರತ್ಯಕ್ಷವಾಗಿ ಕಂಡುಕೊಂಡಿದ್ದಾರೆ. ಅಪಾರ ಆನಂದವನ್ನು ಪಡೆದಿದ್ದಾರೆ. ಮತ್ತೆ ಯಾರ ಲೇಖನಗಳಿಂದಲೂ ಅವರ ಮನಸ್ಸಿಗೆ ಇಷ್ಟು ಆನಂದವಾಗಿಲ್ಲ. ಇತರ ಲೇಖಕರು ಪ್ರಶಂಸೆಯನ್ನೇನೋ ಪಡೆದಿರುವರು. ಆದರೆ ಸಾರ್ವಜನಿಕರ ಇಂತಹ ಹೃತ್ಪೂರ್ವಕ ಆತಿಥ್ಯ ವನ್ನು ಪಡೆದಿಲ್ಲ. ಈ ಪ್ರೀತಿ ಸ್ವಾಭಾವಿಕವಾಗಿ ದೊರೆತದ್ದು. ಶರಚ್ಚಂದ್ರರ ಸಫಲತೆಯನ್ನು ಕಂಡು ನನಗೆ ಈರ್ಷೆ ಎನಿಸುತ್ತಿದೆ.'

ಶರಚ್ಚಂದ್ರರೂ ರವೀಂದ್ರರೂ ವಂಗಸಾಹಿತ್ಯಾಕಾಶದಲ್ಲಿಯ ಸೂರ್ಯ-ಚಂದ್ರರು. ಅವರ ಹೆಸರಿನಲ್ಲಿ ಮಾತ್ರ ವಿರೋಧಾಭಾಸವಿದೆ. ರವೀಂದ್ರ ಸಾಹಿತ್ಯವು ಚಂದ್ರನಂತೆ ಆಹ್ಲಾದಕರವೂ ಸುಮನೋಹರವೂ ಆಗಿದೆ. ಶರತ್ ಸಾಹಿತ್ಯವು ರವಿಯಂತೆ ಪ್ರಖರವೂ ಉಜ್ವಲವೂ ಆಗಿದೆ.

೧-೫-೧೯೩೯
ಕಲಘಟಗಿ

**ಗೋವಿಂದ ಹಳ್ಳಿಪ್ಪನವರ**

# ದೇವದಾಸ

# ದೇವದಾಸ

## ೧

ಆಗ ಬೇಸಿಗೆಯ ಕಾಲ; ವೈಶಾಖಮಾಸ ಆರಂಭವಾಗಿದೆ. ಹೊತ್ತು ಸುಮಾರು ಎರಡು ಪ್ರಹರ. ಬಿಸಿಲು ರಣಗುಡುತ್ತಿದೆ. ಅದು ಕಡಿಮೆಯಾಗುವ ಲಕ್ಷಣವಿಲ್ಲ. ಅದರಂತೆ ಬಿಸಿಲಿನ ತಾಪದಿಂದ ಆಗುವ ಆಯಾಸಕ್ಕೂ ಮೇರೆ ಇಲ್ಲ.

ಇಂತಹ ಮಧ್ಯಾಹ್ನ ಮುಖ್ಯೋಪಾಧ್ಯಾಯ ಮನೆತನದ ದೇವದಾಸ ಪಾಠಶಾಲೆಯ ಒಂದು ಮೂಲೆಯಲ್ಲಿ ಕೈಯಲ್ಲಿ ಸ್ಲೇಟು ಹಿಡಿದುಕೊಂಡು ಹರಕು ಜಮಖಾನೆಯ ತುಂಡಿನ ಮೇಲೆ ಕುಳಿತಿದ್ದ. ಅವನಿಗೆ ಬಹಳ ಬೇಸರವೆನಿಸಿತು. ಆಕಳಿಸಿದ, ಮೈಮುರಿದ; ಆದರೂ ಅವನಿಗೆ ಸಮಾಧಾನವೆನಿಸದಾಯಿತು.

ಒಮ್ಮೊಂದೊಮ್ಮೆ ಅವನು ಗಂಭೀರನಾಗಿ ನೆಟ್ಟಗೆ ಕುಳಿತುಕೊಂಡ. ಅವನ ತಲೆಯಲ್ಲೊಂದು ವಿಚಾರ ಬಂದಿತು— ಇಂತಹ ಸುಂದರ ಸಮಯದಲ್ಲಿ ಬಯಲಿನಲ್ಲಿ ಗಾಳೀಪಟ ಹಾರಿಸುವುದನ್ನು ಬಿಟ್ಟು ಪಾಠಶಾಲೆಯಲ್ಲಿ ಸೆರೆಯಾಳಿನಂತೆ ಕುಳಿತುಕೊಂಡಿರುವುದು ಎಂತಹ ಹುಚ್ಚುತನ! ಒಂದು ಉಪಾಯವೂ ಅವನಿಗೆ ಹೊಳೆಯಿತು. ಕೈಯಲ್ಲಿ ಸ್ಲೇಟು ಹಿಡಿದುಕೊಂಡು ಎದ್ದುನಿಂತ.

ಫಲಾಹಾರಕ್ಕೆಂದು ಅದೇ ಬಿಡುವಿನ ಗಂಟೆ ಬಾರಿಸಿತ್ತು. ಹುಡುಗರ ಗುಂಪೊಂದು ಅರಳಿಯ ಮರದ ಕೆಳಗೆ ಗಲಾಟೆ ಮಾಡುತ್ತ ಚಿಣ್ಣೀಕೋಲು ಆಡುತ್ತಿತ್ತು. ದೇವದಾಸ ಅತ್ತಕಡೆ ಒಂದು ಸಲ ನೋಡಿದ. ಅವನ ಮನಸ್ಸು ಅತ್ತ ಎಳೆಯುತಿದ್ದಿತು. ಆದರೆ ಫಲಾಹಾರಕ್ಕಾಗಿ

ಹೊರಗೆ ಹೋಗಲು ಅವನಿಗೆ ಅಪ್ಪಣೆ ಇರಲಿಲ್ಲ. ಏಕೆಂದರೆ ಒಂದುಬಾರಿ ಪಾಠಶಾಲೆಯಿಂದ ಹೊರಬಿದ್ದ ಮೇಲೆ ಪುನಃ ಒಳಕ್ಕೆ ಹೆಜ್ಜೆಯಿಕ್ಕುವುದು ಅವನಿಗೆ ಸೇರದು. ದೇವದಾಸನನ್ನು ಹೊರಗೆ ಬಿಡಬಾರದೆಂದು ಅವನ ತಂದೆಯುವರೂ ಗೋವಿಂದ ಮಾಸ್ತರರಿಗೆ ಹೇಳಿದ್ದರು. ಇವೆಲ್ಲ ಕಾರಣ ಗಳಿಂದ ಬಿಡುವಿನ ವೇಳೆಯಲ್ಲಿ ವರ್ಗದ ಮುಂದಾಳಾದ ಭೋಲಾನಾಥ ಹೇಳಿದಂತೆ ದೇವದಾಸ ಕೇಳಬೇಕೆಂದು ವಿಧಿಸಲಾಗಿದ್ದಿತು.

ಗುರುಗಳು ತಮ್ಮ ಮಧ್ಯಾಹ್ನದ ನಿದ್ದೆಯ ಮಬ್ಬಿನಲ್ಲಿ ಕಣ್ಣು ಮುಚ್ಚಿಕೊಂಡು ತಮ್ಮ ಕೋಣೆಯಲ್ಲಿ ಹಾಯಾಗಿ ಮಲಗಿಕೊಂಡಿದ್ದರು. ಭೋಲಾನಾಥ ಕೈಕಾಲು ಚಾಚಿಕೊಂಡು ಒಂದು ಮುರಕು ಬೆಂಚಿನ ಮೇಲೆ ಕುಳಿತುಕೊಂಡಿದ್ದ. ಒಮ್ಮೊಮ್ಮೆ ಅತ್ಯಂತ ತುಚ್ಛತೆಯಿಂದ ಹುಡು ಗರ ಆಟದ ಕಡೆ ನೋಡುತ್ತಿದ್ದ. ಒಮ್ಮೊಮ್ಮೆ ದೇವದಾಸನ ಕಡೆಗೂ ಪಾರ್ವತಿಯ ಕಡೆಗೂ ನೋಡಿದಂತೆ ಮಾಡುತ್ತಿದ್ದ. ಪಾರ್ವತಿ ಗೋವಿಂದ ಮಾಸ್ತರರಲ್ಲಿ ಕಲಿಯಲು ಬಂದು ಒಂದು ತಿಂಗಳಾಗಿತ್ತು.

ಗುರುಗಳು ಅವಳಿಗೇನೋ ವಿಚಿತ್ರ ಪ್ರಾಣಿಯಂತೆ ಕಂಡಿರಬೇಕು. ಮಲಗಿದ ಗುರುಗಳ ಚಿತ್ರವನ್ನು ಅವಳು ತನ್ನ ಅಂಕಲಿಪಿಯ ಕೊನೆಯ ಪುಟದಲ್ಲಿ ಏಕಾಗ್ರತೆಯಿಂದಲೂ ಧೈರ್ಯದಿಂದಲೂ ಬರೆಯುತ್ತಿದ್ದಳು. ಆದರ್ಶಕ್ಕೆ ತನ್ನ ಚಿತ್ರ ಸರಿಯಾಗಿರುವುದೋ ಇಲ್ಲವೋ ಎಂಬುದನ್ನು ಒಬ್ಬ ಶ್ರೇಷ್ಠ ಚಿತ್ರಶಿಲ್ಪಿಯು ಪರೀಕ್ಷಿಸಿ ನೋಡುವಂತೆ, ಅವಳು ತಾನು ಬರೆದ ಚಿತ್ರವನ್ನು ಅನೇಕ ವಿಧವಾಗಿ ಮೂಲಕ್ಕೆ ಸರಿಹೋಲಿಸಿ ನಿರೀಕ್ಷಿಸು ತಿದ್ದಳು. ಆದರೆ ಅದು ಮೂಲವನ್ನು ಎಷ್ಟೋ ಹೋಲದು! ಹೀಗಿದ್ದರೂ ಅದರಿಂದ ಆಕೆಗೆ ತುಂಬಾ ಸಂತೋಷವೂ ತೃಪ್ತಿಯೂ ಎನಿಸಿದ್ದಿತು.

ಇದೇ ಸಮಯಕ್ಕೆ ದೇವದಾಸ ಸ್ಲೇಟ ಹಿಡಿದುಕೊಂಡು ಎದ್ದು ನಿಂತು ಭೋಲಾನಾಥನ ಕಡೆಗೆ ನೋಡಿ 'ಲೆಕ್ಕ ಬರುವುದಿಲ್ಲ.' ಎಂದ.

ಶಾಂತರೀತಿಯಿಂದಲೂ ಗಾಂಭೀರ್ಯದಿಂದಲೂ ಭೋಲಾನಾಥ ಕೇಳಿದ, 'ಯಾವ ಲೆಕ್ಕ?'

'ತ್ರೈರಾಸಿಕ'

'ಎಲ್ಲಿದೆ ಸ್ಲೇಟ ನೋಡೋಣ?' ಎಂದ ಭೋಲಾನಾಥ ಕೈಯಲ್ಲಿ ಸ್ಲೇಟನ್ನು ತೆಗೆದುಕೊಂಡು ತಕ್ಷಣದಲ್ಲಿ ಲೆಕ್ಕಬಿಡಿಸುವೆನೆಂಬ ಆಢ್ಯತೆಯಿಂದ. ದೇವದಾಸ ಭೋಲಾನ ಕೈಯಲ್ಲಿ ಸ್ಲೇಟನ್ನು ಕೊಟ್ಟು ಬಳಿಯಲ್ಲಿ ನಿಂತುಕೊಂಡ.

'ಒಂದು ಮಣ ಎಣ್ಣೆಗೆ ನಾಲ್ಕು ರೂಪಾಯಿ ಒಂಬತ್ತು ಆಣೆ ಮೂರು ಕಾಸು. ಆದರೆ. . . .?' ಎನ್ನುತ್ತ ಭೋಲಾ ಬರೆಯತೊಡಗಿದ.

ಇಷ್ಟರಲ್ಲಿ ಒಂದು ದುರ್ಘಟನೆ ನಡೆಯಿತು—

ಆ ಮುರುಕು ಬೆಂಚೇ ತನ್ನ ಯೋಗ್ಯತೆಗೆ ತಕ್ಕ ಸ್ಥಾನವೆಂದು, ವಿದ್ಯಾರ್ಥಿಗಳ ಸರದಾರನಾದ ಭೋಲಾನಾಥ, ಮೂರು ವರ್ಷಗಳಿಂದ ಇಂದಿನವರೆಗೂ ತಪ್ಪದೆ ಅದರ ಮೇಲೆ ಕುಳಿತುಕೊಳ್ಳುತ್ತ ಬಂದಿದ್ದಾನೆ. ಅವನ ಬೆನ್ನಹಿಂದೆ ಸುಣ್ಣದ ರಾಶಿಯೊಂದು ಒಟ್ಟಿತ್ತು. ಅಗ್ಗವಾಗಿ ಸಿಕ್ಕಿತ್ತೆಂದು ಯಾವುದೋ ಒಂದು ಕಾಲದಲ್ಲಿ ಅಧ್ಯಾಪಕರು ಶಾಲೆಗೆಂದು ಕೊಂಡು ಅಲ್ಲಿ ಹಾಕಿಸಿದ್ದರು. ಅನುಕೂಲವಾದರೆ ಗಾರೆಯ ಒಂದು ಮನೆಯನ್ನು ಕಟ್ಟಬೇಕೆಂದೂ ಅವರು ಬಯಸಿದ್ದರು. ಆ ಕಾಲ ಎಂದು ಬರಬೇಕೊ! ಆದರೆ ಆ ಸುಣ್ಣದ ರಾಶಿಯನ್ನು ಅತ್ಯಂತ ಜತನದಿಂದ ಕಾಯುತ್ತ ಬಂದಿದ್ದಾರೆ. ಸುಣ್ಣದ ಒಂದು ಕಣವೂ ಹೋಗಬಾರದಂತೆ ಕಾಯಲು ವರ್ಗದಲ್ಲಿ ಎಲ್ಲಕ್ಕೂ ಹಿರಿಯನಾದ ತಮ್ಮ ಪ್ರೀತಿಯ ಭೋಲಾನನ್ನೇ ನಿಯಮಿಸಿದ್ದರು. ಅವನು ಆ ಬೆಂಚಿನ ಮೇಲೆ ಕುಳಿತುಕೊಂಡೇ ಅದನ್ನು ಕಾಯುತಿದ್ದ.

ಭೋಲಾ ಲೆಕ್ಕ ಬರೆಯುತಿದ್ದಾಗ ಯಾರೋ 'ಅಬ್ಬಬ್ಬ' ಎಂದು ಕೂಗಿ ಗಲಾಟೆ ಮಾಡಿದರು. ಚಪ್ಪಾಳೆ ಬಾರಿಸಿ ಗಟ್ಟಿಯಾಗಿ ಕೂಗಾಡಿ ಪಾರ್ವತಿ ನೆಲದ ಮೇಲೆ ಹೊರಳಾಡಿದಳು. ಗೋವಿಂದ ಮಾಸ್ತರರು ಗಾಬರಿಯಾಗಿ ಎಚ್ಚತ್ತು ಕಣ್ಣುಜ್ಜಿಕೊಳ್ಳುತ್ತ ನೋಡಿದರು. ಮೊದಲು ಅವರ ದೃಷ್ಟಿ ಹೊರಗೆ ಹೋಯ್ತು. ಅರಳೆಮರದ ಕೆಳಗಿನ ಹುಡುಗರು ಹಿಂಡುಹಿಂಡಾಗಿ ಒದರಾಡುತ್ತ ಓಡುತ್ತಿದ್ದರು. ಬೆಂಚಿನ ಮೇಲೆ ಒಂದು ಜೋಡಿ ಕುಣಿಯುವುದನ್ನೂ ಕಂಡರು. ಸುಣ್ಣದ ಜ್ವಾಲಾಮುಖಿ

ಸ್ಫೋಟವಾದಂತೆ ಕಂಡಿತು. ಅವರು ಕೋಪದಿಂದ ಕೂಗಿ ಕೇಳಿದರು. 'ಏನದು ? ಏನದು ?' ಎಂದು.

ಅವರ ಪ್ರಶ್ನೆಗೆ ಉತ್ತರ ಕೊಡಲು ಪಾರ್ವತಿಯ ಹೊರತು ಯಾರೂ ಅಲ್ಲಿರಲಿಲ್ಲ. ಅವಳು ಮಲಗಿಕೊಂಡು ನಗುತ್ತ ಚಪ್ಪಾಳೆ ಮಾತ್ರ ಬಾರಿಸುತಿದ್ದಳು. ಮಾಸ್ತರರು ಮತ್ತಿಷ್ಟು ಕೋಪದಿಂದ 'ಏನಾಯಿತು ಹೇಳು, ಏನಾಯಿತು ?' ಎಂದರು.

ಶ್ವೇತಮೂರ್ತಿ ಭೋಲಾನಾಥ ಸುಣ್ಣದ ರಾಶಿಯೊಳಗಿಂದ ಹೊರಗೆ ಬಂದು ಎದ್ದುನಿಂತ. ಮಾಸ್ತರರು ಮತ್ತಿಷ್ಟು ರೋಷದಿಂದ 'ತುಂಟ, ನೀನೆ—ನೀನೆ ಅದರಲ್ಲಿದ್ದಿಯಾ?' ಎಂದು ಕೈಯೆತ್ತಿದರು.

'ಆಂ—ಆಂ—ಆಂ'

'ಪೋಲಿ?. .ಏನಾಯಿತು ಹೇಳು.'

'ದೇವ್ಯಾ. . .ತಳ್ಳಿ. . .ಆಂ. . .ಆಂ. . .ತ್ರೈರಾಸಿಕ. . .'

'ಥೂ, ಪೋಲಿ?'

'ಗೋವಿಂದ ಮಾಸ್ತರರು ಎಲ್ಲವನ್ನೂ ತಿಳಿದುಕೊಂಡರು. ತಮ್ಮ ಚಾಪೆಯ ಮೇಲೆ ಬಂದು ಕುಳಿತುಕೊಂಡು ಕೇಳಿದರು: 'ದೇವದಾಸ ನಿನ್ನನ್ನು ಸುಣ್ಣದಲ್ಲಿ ತಳ್ಳಿ ಓಡಿಹೋದನೇನು?'

ಭೋಲಾನಾಥ ಮತ್ತಿಷ್ಟು ದೊಡ್ಡದನಿಯಿಂದ ಅಳತೊಡಗಿದ. ಬಳಿಕ ಸ್ವಲ್ಪ ಹೊತ್ತಿನ ಮೇಲೆ ಸುಮ್ಮನಾಗಿ ಸುಣ್ಣವನ್ನು ಒರೆಯಿಸಿಕೊಂಡ. ಕಪ್ಪು ಮೈಗೆ ಬಿಳಿ ಬಣ್ಣ ತಗುಲಿದ್ದರಿಂದ ವಿದ್ಯಾರ್ಥಿಗಳ ಸರದಾರ, ಆಗ ಭೂತದಂತೆ ಕಾಣುತ್ತಿದ್ದ. ಅಳುವು ಮಾತ್ರ ಆಗಾಗ ಉಕ್ಕುಕ್ಕಿ ಬರುತಿದ್ದಿತು.

ಆಗ ಪಂಡಿತರು 'ಅಡಮುಟ್ಟ ದೇವದಾಸ ನಿನ್ನನ್ನು ತಳ್ಳಿ ಓಡಿಹೋದನೆ? ಬರಲಿ ಅವನು ಇನ್ನೊಮ್ಮೆ, ಚೆನ್ನಾಗಿ ಕೆನ್ನೆಯ ಮೇಲೆ ಕೊಡುತ್ತೇನೆ' ಎಂದರು.

ಮತ್ತೆ ಭೋಲಾ 'ಆಂ—ಆಂ—ಆಂ. .' ಎಂದು ಅಳತೊಡಗಿದ.

'ಉಳಿದ ತುಡುಗರು ಎಲ್ಲಿದ್ದಾರೆ?'

ಅಷ್ಟರಲ್ಲಿ ಎಲ್ಲ ಹುಡುಗರು ಓಡುತ್ತ ಬಂದರು. ಅವರ ಮುಖ ಗಳು ಕೆಂಪಾಗಿದ್ದವು. ಅವರಿಗೆ ತೇಕು ಹತ್ತಿತ್ತು. ಅವರು 'ದೇವದಾಸ ನನ್ನು ಹಿಡಿಯ ಬೇಕೆಂದೆವು. ಹಿಡಿಯಲಿಕ್ಕಾಗಲಿಲ್ಲ. ಅಬ್ಬ! ಭರ್ ಭರ್ ಕಲ್ಲುಗಳನ್ನು ಬೀಸಿ ಎಸೆಯುತ್ತಾನೆ' ಎಂದರು.

'ಹಿಡಿಯಲಿಕ್ಕಾಗಲಿಲ್ಲವೆ? ಹೇಡಿಗಳು ನೀವು. ಹೋಗಿ ಕುಳಿತು ಕೊಳ್ಳಿರಿ.' ಎಂದು ಗೋವಿಂದ ಮಾಸ್ತರರು ತಮ್ಮ ದೊಡ್ಡ ದೊಡ್ಡ ಕಣ್ಣುಗಳನ್ನು ತೆರೆದು ನೋಡಿದರು.

ಆಗ ಒಬ್ಬ ದಿಟ್ಟ ಹುಡುಗ ಮತ್ತೆ ಎಂದ 'ನೋಡಿಯಾದರೂ ನೋಡಿರಿ, ಹೇಗೆ ಕಲ್ಲು ಎಸೆಯುತ್ತಾನೆ ದೇವದಾಸ!'

'ಸಾಕು, ಸುಮ್ಮನಾಗು.'

ಅವನು ಮರುಮಾತಾಡದೆ ಸುಮ್ಮನೆ ಕುಳಿತುಕೊಂಡ. ಗಲಾಟೆ ಮಾಡುತಿದ್ದ ಪಾರ್ವತಿಯನ್ನು ಬೆದರಿಸಿ ಸುಮ್ಮನೆ ಕುಳ್ಳಿರಿಸಿದರು ಪಂಡಿತರು. ಬಳಿಕ ಅವರು ಭೋಲಾನಾಥನ ಕೈಹಿಡಿದುಕೊಂಡು ಜಮೀನುದಾರ ಮುಖ್ಯೋಪಾಧ್ಯಾಯರ ಮನೆಗೆ ದೇವದಾಸನ ಬಗ್ಗೆ ದೂರು ಹೇಳಲು ಹೊರಟರು.

ಆಗ ಸುಮಾರು ಮೂರು ಗಂಟೆಯಾಗಿರಬಹುದು. ನಾರಾಯಣ ಮುಖ್ಯೋಪಾಧ್ಯಾಯರು ಹೊರಗೆ ಜಗುಲಿಯ ಮೇಲೆ ಕುಳಿತುಕೊಂಡು ಗುಡುಗುಡಿ ಸೇದುತಿದ್ದರು. ಒಬ್ಬ ಆಳುಮಗ ಅವರಿಗೆ ಗಾಳಿ ಹಾಕು ತಿದ್ದ. ಮಾಸ್ತರರು ವಿದ್ಯಾರ್ಥಿಗಳೊಂದಿಗೆ ಬಂದುದನ್ನು ನೋಡಿ ಅವರು 'ಏಕೆ ಗೋವಿಂದ ಮಾಸ್ತರರೆ, ಈಗ ಏಕೆ ಬಂದಿರಿ?' ಎಂದು ಕೇಳಿದರು.

ಗೋವಿಂದ ಮಾಸ್ತರರು ಜಾತಿಯಿಂದ ಕಾಯಸ್ಥರು. ಅವರು ತಲೆಬಾಗಿಸಿ ಭೋಲಾನಾಥನನ್ನು ಮುಖ್ಯೋಪಾಧ್ಯಾಯರಿಗೆ ತೋರಿಸಿ ನಡೆದ ಸಂಗತಿಯನ್ನು ಸವಿಸ್ತಾರವಾಗಿ ಬಣ್ಣಿಸಿದರು. ಆಗ ಮುಖ್ಯೋ ಪಾಧ್ಯಾಯರು ವಿರಕ್ತಿಯಿಂದ ನುಡಿದರು, 'ಹಾಗಾದರೆ ದೇವದಾಸ ಕೈಮೀರಿ ಹೋಗುತ್ತಿರುವನಲ್ಲವೆ?'

'ಅಹುದು. ತಾವು ಅಪ್ಪಣೆ ಕೊಡಿಸಿದಂತೆ ಮಾಡುವೆ.'

'ಅವನು ಯಾವ ಕಡೆಗೆ ಹೋದ?'

'ಗೊತ್ತಿಲ್ಲ. ಹಿಡಿಯಲು ಹೋದವರನ್ನು ಕಲ್ಲೆಸೆದು ಓಡಿಸಿದ. ಮಹಾ ದುಷ್ಟ.'

ಇಬ್ಬರೂ ಸ್ವಲ್ಪ ಹೊತ್ತು ಸುಮ್ಮನಾದರು. ಬಳಿಕ ನಾರಾಯಣ ಮುಖೋಪಾಧ್ಯಾಯರು 'ಮನೆಗೆ ಬಂದ ಮೇಲೆ ಅವನಿಗೆ ತಕ್ಕ ಶಾಸನ ಮಾಡುವೆ' ಎಂದರು.

ಗೋವಿಂದ ಮಾಸ್ತರರು ಭೋಲಾನಾಥನ ಕೈಹಿಡಿದುಕೊಂಡು ಪಾಠಶಾಲೆಗೆ ಮರಳಿ ಬಂದರು. 'ಮುಖೋಪಾಧ್ಯಾಯರು ಜಮೀನು ದಾರರಾದರೇನು? ಅವರ ಮಗನನ್ನು ಇನ್ನು ಎಂದೂ ಶಾಲೆಗೆ ಬರಗೊಡ ಲಿಕ್ಕಿಲ್ಲ' ಎಂದು ಕೋಪದಿಂದ ವಿದ್ಯಾರ್ಥಿಗಳೆದುರು ಗರ್ಜಿಸಿದರು. ಶಾಲೆ ಮುಗಿಯುವ ಹೊತ್ತಿಗಿಂತ ಮುಂಚಿತವಾಗಿಯೆ ಇಂದು ಹುಡುಗ ರನ್ನು ಮನೆಗೆ ಬಿಟ್ಟರು. ಹುಡುಗರು ಮನೆಗೆ ಹೋಗುವಾಗ ನಾನಾ ಬಗೆಯ ಮಾತುಗಳನ್ನಾಡುತ್ತ ಹೊರಟರು.

ಒಬ್ಬನೆಂದ 'ದೇವದಾಸ ಗಟ್ಟಿಗನಪ್ಪ!'

'ಭೋಲಾನಾಥನಿಗೆ ಚೆನ್ನಾಗಿ ಪಾಠ ಕಲಿಸಿದ' ಎಂದು ಇನ್ನೊಬ್ಬನೆಂದ.

'ಆಃ! ಏನು ಗುರಿಯಿಟ್ಟು ಕಲ್ಲೆಸೆಯುತ್ತಿದ್ದನೊ!'

'ಭೋಲಾ ಇದರ ಸೇಡು ತೀರಿಸಿಕೊಳ್ಳದೆ ಬಿಡಲಿಕ್ಕಿಲ್ಲ' ಎಂದು ಒಬ್ಬ ವಿದ್ಯಾರ್ಥಿ ಭೋಲಾನಾಥನ ಪಕ್ಷಗಟ್ಟಿ ನುಡಿದ.

'ದೇವದಾಸ ಶಾಲೆಗೇ ಬರುವುದಿಲ್ಲ. ಅವನೇನು ತೀರಿಸಿಕೊಳ್ಳು ತ್ತಾನೆ ಸೇಡು!'

ಎಲ್ಲ ಹುಡುಗರ ಜೊತೆಯಲ್ಲಿಯೆ ಪಾರ್ವತಿಯೂ ಕೈಯಲ್ಲಿ ಪುಸ್ತಕಗಳನ್ನು ಹಿಡಿದುಕೊಂಡು ಮನೆಗೆ ಹೊರಟಿದ್ದಳು. ಒಬ್ಬ ಬಾಲ ಕನ ಕೈಹಿಡಿದು ಕೇಳಿದಳು, 'ಮಣೀ, ಮಾಸ್ತರರು ದೇವದಾಸನನ್ನು ಖಂಡಿತವಾಗಿಯೂ ಶಾಲೆಗೆ ಬರಗೊಡುವುದಿಲ್ಲವೇ?

'ಇಲ್ಲ'

ಪಾರ್ವತಿ ಸ್ವಲ್ಪ ದೂರ ಸರಿದಳು. ಅವಳಿಗೆ ಈ ಮಾತು ಸರಿ ಬರಲಿಲ್ಲ.

ಪಾರ್ವತಿಯ ತಂದೆಯ ಹೆಸರು ನೀಲಕಂಠ ಚಕ್ರವರ್ತಿ ಎಂದು. ಚಕ್ರವರ್ತಿಗಳು ಮುಖ್ಯೋಪಾಧ್ಯಾಯರ ನೆರೆಹೊರೆಯಲ್ಲಿಯೆ ಇರುತಿದ್ದರು. ಮುಖ್ಯೋಪಾಧ್ಯಾಯರ ಮನೆ ಹೊಸಕಾಲದ ಮನೆ. ಚಕ್ರವರ್ತಿಯವರ ಮನೆ ಹಳೆಯ ಕಾಲದ್ದು. ಅದು ಚಿಕ್ಕದಾಗಿದ್ದಿತು. ಅವರಿಗೆ ಹತ್ತು ಹನ್ನೆರಡು ಎಕರೆ ಭೂಮಿಯೂ ಒಂದೆರಡು ಯಜಮಾನರ ಮನೆಗಳೂ ಇವೆ. ಜಮೀನುದಾರ ಮುಖ್ಯೋಪಾಧ್ಯಾಯರಿಂದಲೂ ಅವರಿಗೆ ಸ್ವಲ್ಪ ಸಹಾಯ ದೊರೆಯುತಿದ್ದಿತು. ಅಂತೂ ಸುಖದಿಂದ ಸಂಸಾರ ಸಾಗಿಸಿಕೊಂಡಿದ್ದರು ಅವರು.

ದಾರಿಯಲ್ಲಿ ಪಾರ್ವತಿ ಧರ್ಮದಾಸನನ್ನು ಕಂಡಳು. ಧರ್ಮದಾಸ ದೇವದಾಸನ ಮನೆಯ ಆಳುಮಗ. ದೇವದಾಸ ಒಂದು ವರ್ಷದ ಚಿಕ್ಕ ಮಗುವಿದ್ದಾಗಿನಿಂದ ಮೊದಲುಮಾಡಿ ಇವತ್ತಿಗೆ ಹನ್ನೆರಡು ವರ್ಷಗಳ ವರೆಗೂ ಅವನ ಪರಿಚಾರಕನಾಗಿದ್ದುಕೊಂಡು ಸಣ್ಣವನನ್ನು ದೊಡ್ಡವನನ್ನಾಗಿ ಮಾಡಿದ್ದ. ದಿನಾಲು ಆತನು ದೇವದಾಸನನ್ನು ಶಾಲೆಗೆ ಕರೆದುಕೊಂಡು ಹೋಗುತ್ತಿದ್ದ; ಶಾಲೆ ಬಿಟ್ಟ ಕೂಡಲೇ ತಿರಿಗಿ ಮನೆಗೆ ಕರೆದುಕೊಂಡು ಬರುತ್ತಿದ್ದ. ಈ ಕ್ರಮ ಎಷ್ಟೋ ವರ್ಷಗಳಿಂದ ನಡೆದಿತ್ತು. ಈ ದಿನವೂ ಅವನು ಅವಕ್ಕಾಗಿ ಶಾಲೆಯ ಕಡೆಗೆ ಹೊರಟಿದ್ದ. ಪಾರ್ವತಿ ಅವನಿಗೆ ದಾರಿಯಲ್ಲಿಯೆ ಸಿಕ್ಕಳು. ಅವಳನ್ನು ನೋಡಿ ಕೇಳಿದ, 'ಪಾರ್ವತಿ, ದೇವಣ್ಣ ಎಲ್ಲಿದ್ದಾರೆ.'

'ಓಡಿಹೋದ'

ಧರ್ಮದಾಸನಿಗೆ ಆಶ್ಚರ್ಯವಾಯಿತು. ಪುನಃ ಕೇಳಿದ, 'ಓಡಿ ಹೋದರೆ? ಏಕೆ?'

ಭೋಲಾನಾಥನ ದುರ್ದೆಶೆಯ ಕತೆಯನ್ನು ಜ್ಞಾಪಿಸಿಕೊಂಡು ಪಾರ್ವತಿ ನಗಲಾರಂಭಿಸಿದಳು. ಆ ಮೇಲೆ ನಡುನಡುವೆ ನಗುತ್ತ ಹೇಳಲಾರಂಭಿಸಿದಳು. 'ನೋಡು ಧರ್ಮ, ದೇವಣ್ಣ—ಹಿಃ—ಹಿಃ—ಹಿಃ—ಒಂದೇ

ಸಲಕ್ಕೆ ಸುಣ್ಣದ ರಾಶಿಯಲ್ಲಿ—ಹಿಃ—ಹಿಃ— ಒಂದೇ ಸಲಕ್ಕೆ ಹಿಃ—ಹಿಃ—ಹಿಃ— ತಳ್ಳಿಬಿಟ್ಟ.'

ಧರ್ಮದಾಸನಿಗೆ ಪಾರ್ವತಿಯ ಮಾತಿನ ಅರ್ಥ ತಿಳಿಯದಾಯಿತು. ಅವಳ ನಗುವಿನೊಡನೆ ತಾನೂ ಕೊಂಚ ನಗುವನ್ನು ಬೆರಿಸಿ ಕೇಳಿದ, 'ಏನು ಹೇಳು ಪಾರ್ವತಿ, ಬೇಗ ಹೇಳು.'

'ದೇವದಾಸ ಭೋಲಾನಾಥನನ್ನು ಸುಣ್ಣದ ರಾಶಿಯಲ್ಲಿ ನೂಕಿ ಬಿಟ್ಟ. ಹಿಃ—ಹಿಃ—ಹಿಃ—'

ಧರ್ಮದಾಸನಿಗೆ ದೇವದಾಸ ಮಾಡಿದ ಕೆಲಸ ಚೆನ್ನಾಗಿ ಗೊತ್ತಾಯಿತು. ಅವನಿಗೆ ಬಹಳ ಚಿಂತೆಯೂ ಆಯಿತು. 'ಪಾರ್ವತಿ, ಈಗ ದೇವಣ್ಣ ಎಲ್ಲಿದ್ದಾರೆ ಬಲ್ಲೆಯಾ?' ಎಂದು ಕೇಳಿದ.

'ನನಗೆ ಗೊತ್ತಿಲ್ಲ!'

'ನಿನಗೆ ಗೊತ್ತಿದೆ ಪಾರ್ವತಿ, ಎಲ್ಲಿದ್ದಾರೆ ಹೇಳು. ಈಗ ಅವರಿಗೆ ಬಹಳ ಹಸಿವೆಯಾಗಿರಬಹುದು.'

'ಹಸಿವೆಯಾಗಿರಬಹುದು. ಆದರೆ ನಾನು ಹೇಳುವುದಿಲ್ಲ.'

'ಅದೇಕೆ?'

'ಹೇಳಿದರೆ ಹೊಡೆಯುತ್ತೇನೆಂದು ಹೆದರಿಸಿದ್ದಾನೆ. ಊಟಕ್ಕೆ ನಾನೇ ಕೊಟ್ಟು ಬರುತ್ತೇನೆ, ತಾ.'

'ಆಗಲಮ್ಮ, ನೀನೇ ಊಟ ಮಾಡಿಸಿ, ಅವರನ್ನು ಸಮಾಧಾನ ಪಡಿಸಿ ಮನೆಗೆ ಕರೆದುಕೊಂಡು ಬಾ. ಹೊತ್ತು ಮುಳುಗುವುದರೊಳಗೆ ಬಂದುಬಿಡಬೇಕು.'

'ಕರೆದುಕೊಂಡು ಬರುತ್ತೇನೆ.'

ಪಾರ್ವತಿ ಮನೆಗೆ ಬಂದ ಮೇಲೆ ದೇವದಾಸನ ತಾಯಿಗೂ ಪಾರ್ವತಿಯ ತಾಯಿಗೂ ದೇವದಾಸನ ರಾಮಾಯಣ ಗೊತ್ತಾಯಿತು. ಪಾರ್ವತಿಯನ್ನು ಒಂದೊಂದಾಗಿ ಕೇಳಿ ತಾಯಂದಿರಿಬ್ಬರೂ ಅರಿತು ಕೊಂಡರು. ತನಗೆ ಗೊತ್ತಿದ್ದುದೆಲ್ಲವನ್ನೂ ಗಂಭೀರವಾಗಿ ಹೇಳಿ ಸೆರಗಿನಲ್ಲಿ ತಿಂಡಿಯನ್ನು ಕಟ್ಟಿಕೊಂಡು ಜಮೀನುದಾರರ ತೋಟಕ್ಕೆ

ಹೋದಳು ಪಾರ್ವತಿ. ಅವರ ಮನೆಯ ಹತ್ತಿರದಲ್ಲಿಯೇ ಆ ತೋಟ ವಿದ್ದಿತು. ಅದರಲ್ಲೊಂದು ಕಡೆ ಒಂದು ಗುಡಿಸಲು. ಅದೇ ಗುಡಿಸಲಿನಲ್ಲಿ ದೇವದಾಸ ತಂಬಾಕು ಸೇದುತ್ತಾನೆಂಬುದು ಪಾರ್ವತಿಗೆ ಗೊತ್ತಿದ್ದಿತು. ಗುಡಿಸಲಿನ ಪಕ್ಕದಲ್ಲಿಯೆ ಮರಗಳ ದಟ್ಟವಾದ ಗುಂಪೊಂದಿದೆ. ದೇವ ದಾಸ ಆಗಾಗ ಅವರ ಮಧ್ಯದಲ್ಲಿಯೆ ಅಡಗಿಕೊಂಡು ಕುಳಿತುಕೊಳ್ಳು ತ್ತಿದ್ದ. ಆ ಸ್ಥಳವೂ ಪಾರ್ವತಿಗೆ ಗೊತ್ತು. ಪಾರ್ವತಿ ಅಲ್ಲಿಗೆ ಹೋದಳು. ಅಲ್ಲಿ, ಹಿರಿಯರಂತೆ ಕೈಯಲ್ಲಿ ಹುಕ್ಕಾ ಹಿಡಿದುಕೊಂಡು ದೇವದಾಸ ತಂಬಾಕು ಸೇದುವುದನ್ನು ನೋಡಿದಳು. ಅವನ ಮುಖ ಗಾಂಭೀರ್ಯ ವನ್ನು ತಾಳಿದ್ದಿತು. ದುರ್ಭಾವನೆಯ ಚಿಹ್ನ ಅವನ ಮೋರೆಯ ಮೇಲೆ ಸ್ಪಷ್ಟವಾಗಿ ಮೂಡಿದ್ದುದು ಕಾಣುತಿದ್ದಿತು. ಪಾರ್ವತಿ ಬಂದುದರಿಂದ ಅವನಿಗೆ ಬಹಳ ಸಂತೋಷವಾಯಿತು. ಆದರೆ ಆ ಸಂತೋಷವನ್ನು ಹೊರಗೆ ತೋರಗೊಡಲಿಲ್ಲ. ತಂಬಾಕು ಸೇದುತ್ತ 'ಬಾ' ಎಂದ.

ಪಾರ್ವತಿ ದೇವದಾಸನ ಬಳಿ ಹೋಗಿ ಕುಳಿತಳು. ಅವಳ ಸೆರಗಿನಲ್ಲಿ ಏನೋ ಕಟ್ಟಿದ ಹಾಗೆ ಕಂಡಿತು. ಕೂಡಲೇ ಅದನ್ನು ಬಿಚ್ಚಿ ದೇವದಾಸ ತಿನ್ನಲಾರಂಭಿಸಿದ. 'ಪಾರ್ವತೀ, ಮಾಸ್ತರರು ಆ ಮೇಲೆ ಏನು ಮಾಡಿ ದರು?' ಎಂದು ಕೇಳಿದ.

'ದೊಡ್ಡಪ್ಪನ ಬಳಿಗೆ ಹೋಗಿ ನೀನು ಮಾಡಿದ ಎಲ್ಲ ಸಂಗತಿ ಯನ್ನೂ ಹೇಳಿದರು.'

'ಹಾಗಾದರೆ ಅಪ್ಪನಿಗೆ ಹೇಳಿದರೊ?' ಎಂದು ಅವನು ಕಣ್ಣು ಕೆರಳಿಸಿ ಕೇಳಿದ.

'ಹೌದು.'

'ಆ ಮೇಲೆ?'

'ನಿನ್ನನ್ನು ಶಾಲೆಗೆ ಬರಗೊಡಲಿಕ್ಕಿಲ್ಲ, ಎಂದರು.'

'ನಾನೂ ಅಲ್ಲಿಗೆ ಹೋಗುವುದೇ ಇಲ್ಲ. ನನಗೆ ಓದುವುದೇ ಬೇಡ.'

ಇಷ್ಟು ಹೊತ್ತಿಗೆ ತಿಂಡಿಯೆಲ್ಲ ಮುಗಿದು ಹೋಯಿತು.

ಪಾರ್ವತಿಯು ಕಡೆಗೆ ನೋಡಿ 'ಸಂದೇಶ ಕೊಡು'–ಸಂದೇಶ ಅವನ ಪ್ರೀತಿಯ ಮಿಠಾಯಿ–ಎಂದು ಕೇಳಿದ ದೇವದಾಸ.

'ಸಂದೇಶ ತಂದಿಲ್ಲ.'

'ಹಾಗಾದರೆ ನೀರು ಕೊಡು.'

'ನೀರು ಇಲ್ಲವಲ್ಲ ಇಲ್ಲಿ?'

'ಹಾಗಾದರೆ ಏತಕ್ಕೆ ಬಂದೆ ಇಲ್ಲಿಗೆ? ಹೋಗು, ನೀರು ತೆಗೆದು ಕೊಂಡು ಬಾ.'

ದೇವದಾಸನ ಈ ಸ್ನೇಹ ರಹಿತ ನುಡಿಗಳು ಅವಳಿಗೆ ಸರಿಬರಲಿಲ್ಲ. ನಾನು ಹೋಗುವುದಿಲ್ಲ. ನೀನೇ ಹೋಗಿ ತೆಗೆದುಕೊಂಡು ಬಾ.' ಎಂದಳು.

'ಈಗ ನಾನು ಹೇಗೆ ಹೋಗುವುದು?'

'ಹಾಗಾದರೆ ಇಲ್ಲಿಯೆ ಇರುವಿಯೇನು?

'ಸ್ವಲ್ಪ ಹೊತ್ತು ಇಲ್ಲಿದ್ದು ಆಮೇಲೆ ಎಲ್ಲಿಗಾದರೂ ಹೋಗುತ್ತೇನೆ.'

ಇದನ್ನು ಕೇಳಿ ಪಾರ್ವತಿಗೆ ಬಹಳ ದುಃಖವಾಯಿತು. ದೇವದಾಸನ ವೈರಾಗ್ಯವನ್ನು ಮತ್ತು ಅವನಿಗೆ ಬಂದಿರುವ ಸಂಕಟವನ್ನು ನೋಡಿ ಅವಳಿಗೆ ಬಹಳ ವ್ಯಥೆಯಾಯಿತು. ಕಣ್ಣುಗಳಲ್ಲಿ ನೀರು ತುಂಬಿದವು. 'ನಾನೂ ನಿನ್ನೊಂದಿಗೆ ಬರುತ್ತೇನೆ' ಎಂದಳು.

'ನನ್ನೊಡನೆ ಎಲ್ಲಿಗೆ ಬರುವೆ? ಛೀ!'

ಪಾರ್ವತಿ ತಲೆಯುಲ್ಲಾಡಿಸಿ 'ಬರುತ್ತೇನೆ.' ಎಂದಳು.

'ಬೇಡ, ಬರಬೇಡ. ಮೊದಲು ನೀರು ತೆಗೆದುಕೊಂಡು ಬಾ, ಹೋಗು.'

ಪಾರ್ವತಿ ಪುನಃ ತಲೆಯುಲ್ಲಾಡಿಸಿ 'ಬರುತ್ತೇನೆ.' ಎಂದಳು.

'ಮೊದಲು ನೀರು ತೆಗೆದುಕೊಂಡು ಬಾ.'

'ನಾನು ಹೋಗುವುದಿಲ್ಲ. ನೀನು ಓಡಿಹೋಗುವೆ.'

'ಇಲ್ಲ, ಓಡಿ ಹೋಗುವುದಿಲ್ಲ.'

ಪಾರ್ವತಿಗೆ ಈ ಮಾತಿನ ನಂಬುಗೆಯಾಗಲಿಲ್ಲ. ಆದುದರಿಂದ ಅಲ್ಲಿಯೇ ಕುಳಿತು ಬಿಟ್ಟಳು. ದೇವದಾಸ ಪುನಃ ಅಪ್ಪಣೆ ಮಾಡಿದ, 'ಹೋಗು ಹೇಳಿದಷ್ಟು ಕೇಳು.'

'ನಾನು ಹೋಗುವುದಿಲ್ಲ,'

ಕೋಪದಿಂದ ದೇವದಾಸ ಪಾರ್ವತಿಯ ಕೂದಲು ಹಿಡಿದೆಳೆದು, 'ಹೋಗು ಎಂದು ಹೇಳುತ್ತೇನೆ.' ಎಂದ.

ಪಾರ್ವತಿ ಮಾತನಾಡಲಿಲ್ಲ. ಅವಳ ಬೆನ್ನಮೇಲೆ ಒಂದು ಗುದ್ದು ಕೊಟ್ಟು, 'ಹೋಗುವುದಿಲ್ಲವೇನು?' ಎಂದ.

'ಏನು ಮಾಡಿದರೂ ಹೋಗುವುದಿಲ್ಲ.' ಎಂದು ಪಾರ್ವತಿ ಅಳುತ್ತ ಅಳುತ್ತ ಹೇಳಿದಳು.

ದೇವದಾಸ ಅದೆತ್ತಲೋ ಹೋಗಿಬಿಟ್ಟ. ಪಾರ್ವತಿ ಅಳುತ್ತ ಅಳುತ್ತ ದೇವದಾಸನ ತಂದೆಯವರ ಬಳಿಗೆ ಹೋದಳು. ದೇವದಾಸನ ತಂದೆಯವರು ಪಾರ್ವತಿಯನ್ನು ಬಹಳವಾಗಿ ಪ್ರೀತಿಸುತಿದ್ದರು. ಪಾರ್ವತಿ ಅಳುವುದನ್ನು ನೋಡಿ, 'ಏಕೆ ಪಾರ್ವತಿ, ಅಳುತ್ತಿಯೇಕಮ್ಮ?' ಎಂದು ಕೇಳಿದರು.

'ದೇವಣ್ಣ ಹೊಡೆದ.'

'ಎಲ್ಲಿದ್ದಾನೆ ಅವನು?'

'ತೋಟದಲ್ಲಿ ಮರದ ಗುಂಪಿನ ನಡುವೆ ಕುಳಿತು ತಂಬಾಕು ಸೇದುತಿದ್ದಾನೆ.'

ಪಂಡಿತರು ಬಂದು ಹೋದಾಗಿನಿಂದ ಮುಖ್ಯೋಪಾಧ್ಯಾಯರಿಗೆ ಕೋಪಬಂದಿತ್ತು. ಪಾರ್ವತಿಯ ಮಾತು ಕೇಳಿದಮೇಲಂತೂ ಅವರ ಸಿಟ್ಟು ಮೇರೆದಪ್ಪಿತು. 'ದೇವದಾಸ ತಂಬಾಕು ಸೇದುತ್ತಾನೆಯೆ?' ಎಂದು ಪಾರ್ವತಿಯನ್ನು ಕೇಳಿದರು.

'ಹೌದು. ಬಹಳ ದಿನಗಳಿಂದ ಸೇದುತಿದ್ದಾನೆ. ತೋಟದಲ್ಲಿ ಹುಕ್ಕಾ ಬಚ್ಚಿಟ್ಟಿದ್ದಾನೆ.'

'ಇದುವರೆಗೆ ನನಗೇಕೆ ಹೇಳಲಿಲ್ಲ?'

'ಹೇಳಿದರೆ ಹೊಡೆಯುವೆನೆಂದು ಹೆದರಿಸುತಿದ್ದ.'

ನಿಜವಾಗಿಯೂ ಪಾರ್ವತಿಯು ಈ ಮಾತು ಸತ್ಯವಾಗಿರಲಿಲ್ಲ. ದೇವದಾಸ ತಂಬಾಕು ಸೇದುವನೆಂದು ಅವರಲ್ಲಿ ಹೇಳಿದರೆ ದೇವದಾಸನಿಗೆ ಏಟು ಬೀಳುವುದೆಂದು ಅವಳು ಹೇಳಿರಲಿಲ್ಲ. ಆದರೆ ಇಂದು ಕೋಪದ ಕೈಯಲ್ಲಿ ಸಿಕ್ಕು ಹೇಳಿಬಿಟ್ಟಳು. ಅವಳು ಚಿಕ್ಕವಳಾದರೂ ಅವಳಲ್ಲಿ ಕೋಪಮಾತ್ರ ಹಿರಿದಾಗಿಯೆ ಇದ್ದಿತು. ಇಷ್ಟರಿಂದ ಅವಳಲ್ಲಿ ವಿವೇಕ ವಿರಲಿಲ್ಲವೆಂದು ಹೇಳಲಾಗದು. ಇಷ್ಟು ಹೇಳಿ ಅವಳು ತನ್ನ ಮನೆಗೆ ಹೋಗಿ ಹಾಸಿಗೆಯ ಮೇಲೆ ಮಲಗಿಬಿಟ್ಟಳು. ಅದೆಷ್ಟೊ ಹೊತ್ತಿನವರೆಗೆ ಅತ್ತು ಅತ್ತು ದಣಿದಳು. ನಿದ್ದೆ ಬಂದಿತು. ಆ ದಿನ ಊಟ ಮಾಡದೆ ಹಾಗೆಯೇ ಮಲಗಿಬಿಟ್ಟಳು.

## ೨

ಮರುದಿವಸ ದೇವದಾಸನಿಗೆ ಬಲವಾದ ಏಟುಗಳು ಬಿದ್ದುವು. ಅವನನ್ನು ಒಂದು ಕೋಣೆಯಲ್ಲಿ ಹಾಕಿ ಬೀಗಹಾಕಿದರು. ಅವನ ತಾಯಿ ಬಹಳ ಶೋಕಿಸತೊಡಗಿದುದರಿಂದ ಅವನನ್ನು ಹೊರಗೆ ಬಿಡಬೇಕಾಯಿತು. ನಸುಕಿನಲ್ಲಿ ಎದ್ದವನೆ ಪಾರ್ವತಿಯ ಮನೆಗೆ ಓಡಿಹೋಗಿ ಕಿಡಿಕಿಯ ಬಳಿಯಲ್ಲಿ ನಿಂತು ಅವಳನ್ನು ಕೂಗಿ ಕರೆದ.

ಪಾರ್ವತಿ ಕಿಟಿಕಿಯನ್ನು ತೆರೆದು 'ದೇವಣ್ಣಾ' ಎಂದಳು.

ದೇವದಾಸ ಸನ್ನೆಯಿಂದ 'ಬಾ' ಎಂದ.

ಪಾರ್ವತಿ ದೇವದಾಸನ ಹತ್ತಿರ ಹೋದಳು. ಆಗ ದೇವದಾಸ 'ನಾನು ತಂಬಾಕು ಸೇದುವುದನ್ನು ಮನೆಯಲ್ಲಿ ಏಕೆ ಹೇಳಿದೆ?' ಎಂದು ಕೇಳಿದ.

'ನೀನು ನನ್ನನ್ನು ಗುದ್ದಿದೆಯೇಕೆ?'

'ನೀನು ನೀರು ತರಲು ಹೋಗಲಿಲ್ಲವೆಂದು.'

'ಪಾರ್ವತಿ ಸುಮ್ಮನಿದ್ದಳು. ದೇವದಾಸನೇ 'ನೀನು ಕತ್ತೆಯಾಗಿದ್ದೀಯಾ. ಕತ್ತೆ, ಇನ್ನೆಂದೂ ನನ್ನ ಬಗೆಗೆ ಚಾಡಿ ಹೇಳಬೇಡ.' ಎಂದು ಹೇಳಿದ.

'ಇಲ್ಲ' ಎಂದಳು ಪಾರ್ವತಿ.

'ನಡೆ ಹೋಗೋಣ, ಬಿದಿರು ಕಡಿದುಕೊಂಡು ಬರೋಣ. ಆಣೆಕಟ್ಟಿನಲ್ಲಿ ಮೀನುಗಳು ಚೆನ್ನಾಗಿವೆ. ಹಿಡಿಯಬೇಕು.' ಎಂದ ದೇವದಾಸ.

ಬಿದಿರು ಮೆಳೆಯ ಬಳಿ ಒಂದು ದೊಡ್ಡ ಮರವಿತ್ತು. ಅದನ್ನು ಹತ್ತಿ, ಅತ್ಯಂತ ಕಷ್ಟದಿಂದ ಒಂದು ಬಿದಿರು ಬಾಗಿಸಿ ಪಾರ್ವತಿಯ ಕೈಯಲ್ಲಿ ಕೊಟ್ಟು ಎಂದ ದೇವದಾಸ 'ಪಾರ್ವತೀ, ಅದನ್ನು ಬಿಡಬೇಡ. ಬಿಟ್ಟರೆ ನಾನು ಬಿದ್ದುಬಿಟ್ಟೇನು.'

ಪಾರ್ವತಿ ಬಲು ಗಟ್ಟಿಯಾಗಿ ಒಳ್ಳೆಯ ಜತನದಿಂದ ಅದನ್ನು ಹಿಡಿದಳು. ಹೆಮ್ಮರದ ಕೊಂಬೆಯ ಮೇಲೊಂದು ಕಾಲನ್ನಿಟ್ಟು ದೇವದಾಸ ಅದನ್ನು ಕಡಿಯ ತೊಡಗಿದ.

ಪಾರ್ವತಿ ಕೆಳಗೆ ನಿಂತುಕೊಂಡು ಕೇಳಿದಳು 'ದೇವಣ್ಣಾ, ಇಂದು ಶಾಲೆಗೆ ಹೋಗುವುದಿಲ್ಲವೇ?'

'ಇಲ್ಲ'

'ದೊಡ್ಡಪ್ಪ ಕಳಿಸಿದರೆ?'

'ನಾನಲ್ಲಿ ಓದಕೂಡದೆಂದು ಅಪ್ಪನೇ ಹೇಳಿದ್ದಾನೆ. ಮಾಸ್ತರರೇ ಮನೆಗೆ ಬಂದು ಪಾಠ ಹೇಳಿಕೊಡುವರು.'

ಪಾರ್ವತಿಗೆ ಇದನ್ನು ಕೇಳಿ ಕೊಂಚ ಅಸಮಾಧಾನವಾಯಿತು. 'ಬೇಸಿಗೆ ಇದ್ದುದರಿಂದ ನಿನ್ನೆಯಿಂದ ಬೆಳಿಗ್ಗೆ ಪಾಠಶಾಲೆ. ಈಗ ನಾನು ಹೋಗುತ್ತೇನೆ.' ಎಂದಳು.

ದೇವದಾಸ ಮರದ ಮೇಲಿನಿಂದಲೇ ಕಣ್ಣುಕೆರಳಿಸಿ ಕೆಳಗೆ ನೋಡುತ್ತ 'ಬೇಡ, ಹೋಗಬೇಡ' ಎಂದ.

ಪಾರ್ವತಿಗೆ ಏನು ಮಾಡುವುದೆಂದು ತೋಚಲಿಲ್ಲ. ತಾನು ಹಿಡಿದ ಬಿದಿರಿನ ಕಡೆಗೆ ಅವಳ ಲಕ್ಷ್ಯ ಉಳಿಯಲಿಲ್ಲ. ಬಿದಿರು ಕೈಕೊಸರಿಕೊಂಡು ಮೇಲಕ್ಕೆ ಹೋಗಿಬಿಟ್ಟಿತು. ದೇವದಾಸ ಕೆಳಗೆ ಬಿದ್ದುಬಿಟ್ಟ. ಕೊಂಬೆ ಬಹಳ ಎತ್ತರದಲ್ಲಿರಲಿಲ್ಲವಾದುದರಿಂದ ಪೆಟ್ಟು ಅಷ್ಟು ಹೆಚ್ಚಾಗಿ ತಾಗಲಿಲ್ಲ. ಆದರೆ ಮೈ ಕೈ ತರೆದಿದ್ದಿತು. ದೇವದಾಸ ಕೋಪದಿಂದ ಒಂದು ಕಟ್ಟಿಗೆಯನ್ನು ಎತ್ತಿಕೊಂಡು ಪಾರ್ವತಿಯ ಬೆನ್ನಿಗೆ, ಕೆನ್ನೆಗೆ ಬಲವಾಗಿ ಹೊಡೆದು 'ಹೋಗು, ಹೊರಟುಹೋಗು.' ಎಂದ.

ಪಾರ್ವತಿಗೆ ಮೊದಲೇ ಸ್ವಲ್ಪ ನಾಚಿಕೆಯಾಗಿದ್ದಿತು; ಕೋಪವೂ ಬಂದಿದ್ದಿತು. ಪೆಟ್ಟಿನಮೇಲೆ ಪೆಟ್ಟು ಬೀಳಲಾರಂಭಿಸಿದ ಕೂಡಲೆ ಅವಳ ಕೋಪ ಮೇರೆದಪ್ಪಿತು. ಕಣ್ಣು ಕೆಂಪಗೆ ಮಾಡಿ ಅಳುತ್ತ 'ಈಗಲೇ ದೊಡ್ಡಪ್ಪನವರ ಬಳಿಗೆ ಹೋಗುತ್ತೇನೆ.' ಎಂದಳು.

ದೇವದಾಸನಿಗೂ ಕೋಪ ಹೆಚ್ಚಾಯಿತು. ಮತ್ತೆ ಹೊಡೆದು,

'ಹೋಗು, ಈಗಲೇ ಹೋಗಿ ಹೇಳು. ನನಗೇನು ಆಗುವುದೊ ಆಗಲಿ, ಚಿಂತೆ ಇಲ್ಲ.' ಎಂದ ದೇವದಾಸ.

ಪಾರ್ವತಿ ಹೊರಟು ಹೋದಳು. ದೇವದಾಸ ಕೂಗಿದ, 'ಪಾರ್ವತೀ, ಪಾರೂ!' ಪಾರ್ವತಿ ಕೇಳಿಯೂ ಕೇಳಿಸದವಳಂತೆ ಭರದಿಂದ ಮುಂದೆ ಹೋಗುತ್ತಿದ್ದಳು. ದೇವದಾಸ ಪುನಃ ಕೂಗಿದ, 'ಪಾರ್ವತೀ, ಕೇಳೆ ಸ್ವಲ್ಪ!'

'ಪಾರ್ವತಿ ಉತ್ತರ ಕೊಡಲಿಲ್ಲ. ದೇವದಾಸ ಕೊಂಚ ವ್ಯಗ್ರನಾಗಿ ತನ್ನಷ್ಟಕ್ಕೆ ತಾನೇ 'ಹೋಗಿ ಸಾಯಲಿ,' ಎಂದುಕೊಂಡ.

ಪಾರ್ವತಿ ಹೊರಟು ಹೋದಳು. ಹಾಗೂ ಹೀಗೂ ಮಾಡಿ ದೇವದಾಸ ಒಂದೆರಡು ಬಿದಿರುಗಳನ್ನು ಕಡಿದುಕೊಂಡ. ಅವನ ಮನಸ್ಸು ಕಲಕಿ ಹೋಗಿದ್ದಿತು. ಪಾರ್ವತಿ ಅಳುತ್ತ ಮನೆಗೆ ಬಂದಳು. ಅವಳ ಬೆನ್ನು ಗಲ್ಲಗಳ ಮೇಲೆ ಬೆತ್ತದ ಬಾಸಾಳಗಳು ಮೂಡಿದ್ದುವು. ಅಜ್ಜಿ ಅವನ್ನು ನೋಡಿ ದೊಡ್ಡದನಿಯಿಂದ 'ಅಯ್ಯೋ, ಯಾರು ಹೊಡೆದರಮ್ಮ ನಿನಗೆ ಹೀಗೆ?' ಎಂದು ಕೇಳಿದಳು.

ಕಣ್ಣೊರಿಸಿಕೊಳ್ಳುತ್ತ ಪಾರ್ವತಿಯೆಂದಳು 'ಮಾಸ್ತರರು.'

ಅಜ್ಜಿಗೆ ವಿಪರೀತ ಕೋಪಬಂದಿತು. 'ನಡೆ ಹೋಗೋಣ, ನಾರಾಯಣನ ಹತ್ತಿರ! ಅವನೆಂತಹ ಮಾಸ್ತರನೊ! ಮಗುವಿಗೆ ಹೇಗೆ ಹೊಡೆದಿದ್ದಾನೆ!' ಎಂದಳು.

ಪಾರ್ವತಿ ಅಜ್ಜಿಯನ್ನು ತಬ್ಬಿಕೊಂಡು 'ನಡೆ' ಎಂದಳು.

ಅಜ್ಜಿ ಪಾರ್ವತಿಯನ್ನು ಕರೆದುಕೊಂಡು ನಾರಾಯಣ ಮುಖ್ಯೋಪಾಧ್ಯಾಯರ ಮನೆಗೆ ಹೊರಟಳು. ಹೋಗುವಾಗ ಗೋವಿಂದ ಮಾಸ್ತರರ ಕುಲಕೋಟಿಯನ್ನು ಬೈಗುಳಿಂದ ಉದ್ಧಾರಮಾಡಿದಳು. ಕೊನೆಗೆ ನಾರಾಯಣ ಬಾಬುಗಳ ಬಳಿಗೆ ಹೋಗಿ 'ನೋಡು ನಾರಾಯಣಾ ನಿಮ್ಮ ಮಾಸ್ತರರ ಕೆಲಸ! ತಾನು ಶೂದ್ರ; ಬ್ರಾಹ್ಮಣರ ಹುಡುಗಿಯ ಮೇಲೆ ಕೈಯೆತ್ತಿದ್ದಾನೆ. ಹೇಗೆ ಹೊಡೆದಿದ್ದಾನೆ ನೋಡು!' ಎಂದು

ಹುಡುಗಿಯ ಗಲ್ಲಗಳ ಮೇಲೆ ಮೂಡಿರುವ ಹಸುರುಗಟ್ಟಿದ ಬಾಸಾಳಗಳನ್ನು ತೋರಿಸಿದಳು.

ನಾರಾಯಣ ಬಾಬುಗಳು ಪಾರ್ವತಿಯನ್ನು ಕೇಳಿದರು. 'ಯಾರು ಹೊಡೆದರು ಪಾರ್ವತಿ?'

ಪಾರ್ವತಿ ಮಾತನಾಡಲಿಲ್ಲ. ಆಗ ಪುನಃ ಅಜ್ಜಿ ಗಟ್ಟಿಯಾಗಿ 'ಆ ದುಷ್ಟ ಮಾಸ್ತರನ ಹೊರತು ಯಾರು ಹೊಡೆಯುತ್ತಾರೆ?' ಎಂದಳು.

'ಏಕೆ ಹೊಡೆದರು?'

ಪಾರ್ವತಿ ಮಾತನಾಡಲಿಲ್ಲ. ತಪ್ಪು ಮಾಡಿರಬಹುದು, ಮಾಸ್ತರರು ಹೊಡೆದಿರಬಹುದು ಎಂದು ತಿಳಿದುಕೊಂಡರು ನಾರಾಯಣ ಬಾಬುಗಳು. 'ಈ ರೀತಿ ಹೊಡೆಯುವುದು ಯೋಗ್ಯವಲ್ಲ.' ಎಂದು ಮನಸ್ಸಿನಲ್ಲಿ ಎಂದು ಕೊಂಡರು. ಆದನ್ನು ಆಡಿಯೂ ತೋರಿಸಿದರು. ಪಾರ್ವತಿ ಬೆನ್ನು ತೋರಿಸಿ 'ಇಲ್ಲಿಯೂ ಹೊಡೆದಿದ್ದಾರೆ.' ಎಂದಳು.

ಬೆನ್ನಮೇಲೆ ಪೆಟ್ಟುಗಳು ಬಲವಾಗಿ ಬಿದ್ದುದರಿಂದ ಅವುಗಳ ಗುರುತು ಚೆನ್ನಾಗಿ ಕಾಣುತಿದ್ದಿತು. ಅವನ್ನು ನೋಡಿ ಮುಖ್ಯೋಪಾಧ್ಯಾಯರೂ ರೇಗಿದರು. 'ಮಾಸ್ತರರನ್ನು ಕರೆಯಿಸಿ ವಿಚಾರಿಸುವೆ.' ಎಂದು ಹೇಳಿ 'ಇಂತಹ ಮಾಸ್ತರರ ಬಳಿಗೆ ಮಕ್ಕಳನ್ನು ಕಳಿಸುವುದು ಯೋಗ್ಯವಲ್ಲ,' ಎಂದು ನಿರ್ಧರಿಸಿದರು.

ಈ ಮಾತುಗಳನ್ನು ಕೇಳಿ ಪಾರ್ವತಿಗೆ ಹಿಡಿಸಲಾರದಷ್ಟು ಸಂತೋಷವಾಯಿತು. ಅಜ್ಜಿಯ ಬಗಲಿನಲ್ಲಿ ಕುಳಿತುಕೊಂಡು ಪಾರ್ವತಿ ಮನೆಗೆ ಬಂದಳು. ತಾಯಿಯೂ ಮಗಳ ಮೈಮೇಲೆ ಬಿದ್ದಿರುವ ಏಟಿನ ಕಲೆಗಳನ್ನು ನೋಡಿ ಕೇಳಿದಳು, 'ಏಕೆ ಹೊಡೆದರು?'

'ಸುಮ್ಮಸುಮ್ಮನೆ ಹೊಡೆದರು.'

'ಸುಮ್ಮನೆ ಯಾರಾದರೂ ಹೊಡೆಯುತ್ತಾರೆಯೆ?' ಎನ್ನುತ್ತ ತಾಯಿಯೂ ಮಗಳ ಕಿವಿ ಹಿಂಡಿದರು.

ಇಷ್ಟೊತ್ತಿಗೆ ಮುಖ್ಯೋಪಾಧ್ಯಾಯರ ಹೆಂಡತಿ ಅಲ್ಲಿಗೆ ಬಂದರು. ಅವರು ಪಾರ್ವತಿಯ ತಾಯಿಗೆ 'ನೀನು ತಾಯಿಯಾಗಿ ಮಕ್ಕಳನ್ನು

ಸುಮ್ಮನೆ ಹೊಡೆಯುವಿಯೆಂದ ಬಳಿಕ ಅವರೇಕೆ ಹೊಡೆಯಬಾರದು?' ಎಂದರು.

'ನಾನು ಸುಮ್ಮಸುಮ್ಮನೆ ಎಂದೂ ಹೊಡೆದಿಲ್ಲ. ಏನೂ ತಪ್ಪು ಮಾಡದೆ ಇದ್ದರೂ ಅವರು ಹೊಡೆದರೇ?'

'ಇರಲಿ, ಅದೇನೆ ಇರಲಿ. ಈವೊತ್ತಿನಿಂದ ಪಾರ್ವತಿಯನ್ನು ಶಾಲೆಗೆ ಕಳಿಸುವುದಿಲ್ಲ.' ಎಂದಳು ಅಜ್ಜಿ.

'ಮಗಳಿಗೆ ಓದುಬರಹ ಬರಬಾರದೇನು?' ಎಂದು ಪಾರ್ವತಿಯ ತಾಯಿ ಕೇಳಿದಳು.

'ಹೆಚ್ಚಿಗೆ ಓದು–ಬರಹ ಕಲಿಯುವುದರಿಂದೇನಾಗಬೇಕಾಗಿದೆ? ರಾಮಾಯಣ ಮಹಾಭಾರತ ಓದಲು ಬಂದರೆ ಸಾಕು. ಪತ್ರ ಬರೆಯುವಷ್ಟು ಕಲಿತರೆ ಸಾಲದೆ? ನಿನ್ನ ಮಗಳು ಏನು ಜಡ್ಜಿ ಕೆಲಸ ಮಾಡಬೇಕಾಗಿದೆಯೆ ಕಲಿತು? ಎಲ್ ಎಲ್. ಬಿ. ಓದಿ ವಕಾಲತ್ತು ಮಾಡಬೇಕಾಗಿದೆಯೆ?' ಎಂದರು ದೇವದಾಸನ ತಾಯಿ.

ಕೊನೆಗೆ ಪಾರ್ವತಿಯ ತಾಯಿ ಸುಮ್ಮನಾದರು. ಆ ದಿನ ದೇವದಾಸ ಅಂಜುತ್ತ ಅಂಜುತ್ತ ಮನೆಯೊಳಕ್ಕೆ ಬಂದ. ಪಾರ್ವತಿ ಎಲ್ಲ ಸಂಗತಿಯನ್ನೂ ಸವಿಸ್ತಾರವಾಗಿ ಹೇಳಿರಬಹುದು, ತನಗೆ ಏಟು ಬೀಳಬಹುದು ಎಂದು ತಿಳಿದುಕೊಂಡಿದ್ದ. ಆದರೆ ಮನೆಗೆ ಬಂದ ಮೇಲೆ ಹಾಗೇನೂ ಆಗಲಿಲ್ಲ. ದೇವದಾಸನಿಗೆ 'ಪಾರ್ವತಿಯೂ ನಾಳೆಯಿಂದ ಪಾಠಶಾಲೆಗೆ ಹೋಗುವುದಿಲ್ಲ. ಮಾಸ್ತರರು ಅವಳನ್ನು ಚೆನ್ನಾಗಿ ಹೊಡೆದಿದ್ದಾರೆ' ಎಂದು ಹೇಳಿದರು ಅವನ ತಾಯಿ. ಈ ಮಾತುಗಳನ್ನು ಕೇಳಿ ದೇವದಾಸನಿಗೆ ಮಿತಿಮೀರಿ ಆನಂದವಾಯಿತು. ಆನಂದಾತಿರೇಕದಿಂದ ಅವನಿಗೆ ಊಟವೂ ಚೆನ್ನಾಗಿ ಹೋಗಲಿಲ್ಲ. ಬೇಗ ಬೇಗ ಊಟವನ್ನು ಮುಗಿಸಿಕೊಂಡು ಪಾರ್ವತಿಯ ಮನೆಯ ಕಡೆಗೆ ನಡೆದ. ಹೋಗಿ 'ನೀನು ಶಾಲೆಗೆ ಹೋಗುವುದಿಲ್ಲವೆ?' ಎಂದು ಪಾರ್ವತಿಯನ್ನು ಕೇಳಿದ.

'ಇಲ್ಲ'

'ಏಕೆ?'

'ಪಂಡಿತರು ಹೊಡೆಯುತ್ತಾರೆಂದು ಹೇಳಿದೆ.'

ದೇವದಾಸನು ಗಟ್ಟಿಯಾಗಿ ನಕ್ಕು ಪಾರ್ವತಿಯ ಬೆನ್ನು ತಟ್ಟಿದ. 'ನಿನ್ನಂತಹ ಬುದ್ಧಿವಂತೆಯಾದ ಹುಡಿಗೆಯನ್ನು ನಾನು ಇದುವರೆಗೂ ಈ ಭೂಮಿಯ ಮೇಲೆ ಕಂಡಿಲ್ಲ, ನೋಡು.' ಎಂದು ಪಾರ್ವತಿಯ ಗಲ್ಲಗಳ ಮೇಲೆ ಮೂಡಿದ್ದ ಬಾಸಾಳಗಳನ್ನು ನೋಡಿ, ಅವುಗಳ ಮೇಲೆ ಮೆಲ್ಲಗೆ ಕೈಯಾಡಿಸಿ 'ಆಹಾ!' ಎಂದು ನಿಟ್ಟುಸುರು ಬಿಟ್ಟ.

ಪಾರ್ವತಿ ಸಸುನಕ್ಕು ದೇವದಾಸನ ಕಡೆಗೆ ನೋಡಿ 'ಏನು?' ಎಂದಳು.

'ಪೆಟ್ಟು ಬಹಳ ತಗುಲಿತಲ್ಲವೆ ಪಾರು?'

'ಹೂಂ!'

'ನೀನು ಹೀಗೇಕೆ ಮಾಡುವೆ? ಕೋಪ ಬರುತ್ತದೆ; ಹೊಡೆದು ಬಿಡುತ್ತೇನೆ.'

ಪಾರ್ವತಿಯ ಕಣ್ಣುಗಳು ನೀರುದುಂಬಿದವು. 'ನಾನಾದರೂ ಏನು ಮಾಡಲಿ?' ಎಂದು ಕೇಳಲು ಅವಳಿಗೆ ಇಚ್ಛೆಯಾಯಿತು. ಆದರೆ ಕೇಳಲಾಗಲಿಲ್ಲ.

ದೇವದಾಸ ಪ್ರೀತಿಯಿಂದ ಅವಳ ತಲೆಯ ಮೇಲೆ ಕೈಯಿಟ್ಟು 'ಇನ್ನು ಹೀಗೆ ಮಾಡಬೇಡ, ತಿಳಿಯಿತೆ?' ಎಂದ.

ಪಾರ್ವತಿ ತಲೆಯಲ್ಲಾಡಿಸಿ 'ಇಲ್ಲ' ಎಂದಳು.

ದೇವದಾಸ ಪುನಃ ಬೆನ್ನು ತಟ್ಟಿ 'ಸರಿ, ಇನ್ನೆಂದೂ ನಾನು ನಿನ್ನನ್ನು ಹೊಡೆಯುವುದಿಲ್ಲ.' ಎಂದ.

೩

ದಿನಗಳ ಮೇಲೆ ದಿನಗಳು ಕಳೆಯುತ್ತಿದ್ದುವು. ಈ ಬಾಲಕ–ಬಾಲಿಕೆಯರ ಆನಂದಕ್ಕೆ ಪಾರವೇ ಇರಲಿಲ್ಲ. ಇಬ್ಬರೂ ದಿನವೆಲ್ಲ ಮನಬಂದತ್ತ ಅಲೆಯುತಿದ್ದರು. ಸಾಯಂಕಾಲ ಮನೆಗೆ ಬಂದ ಬಳಿಕ ಏಟುಗಳನ್ನು ತಿನ್ನುತಿದ್ದರು; ಬಯಿಸಿಕೊಳ್ಳುತಿದ್ದರು. ಇಷ್ಟಾದರೂ, ರಾತ್ರಿಯೆಲ್ಲ ಸುಖವಾಗಿ ನಿದ್ರಿಸಿ, ಬೆಳಗಾಗುತ್ತಲೆ ಪುನಃ ತಿರುಗಾಡಲು ಹೋಗಿ ಬಿಡುತಿದ್ದರು. ತೋಟದಲ್ಲಿ ಅಡಗಿಕೊಂಡು ಆಡುತಿದ್ದರು. ಅವರಿಗೆ ಬೇರೆ ಗೆಳೆಯ–ಗೆಳತಿಯರಿರಲಿಲ್ಲ; ಬೇಕಾಗಿಯೂ ಇರಲಿಲ್ಲ. ಹಳ್ಳಿಯಲ್ಲಿ ಇವರು ಇಬ್ಬರೆ ಹೆಚ್ಚು ಉಪದ್ರವವನ್ನು ಕೊಡುತಿದ್ದರು. ಉಳಿದ ಯಾವ ಹುಡುಗರೂ ಹೀಗೆ ಮಾಡುತ್ತಿರಲಿಲ್ಲ. ಒಂದು ದಿವಸ ಮುಂಜಾನೆ ಕೆರೆಯಲ್ಲಿಳಿದು ಮಧ್ಯಾಹ್ನದವರೆಗೂ ನೀರಾಟವಾಡಿ, ಕಣ್ಣು ಕೆಂಪಗೆ ಮಾಡಿಕೊಂಡು, ಮೀನು ಹಿಡಿದುಕೊಂಡು ಮನೆಗೆ ಬಂದರು. ಪಾರ್ವತಿಯ ತಾಯಿ ಪಾರ್ವತಿಯನ್ನು ಚೆನ್ನಾಗಿ ಹೊಡೆದು ಕೋಣೆಯಲ್ಲಿ ಹಿಡಿದುಹಾಕಿದರು. ಆದಿನ ದೇವದಾಸನ ಅವಸ್ಥೆ ಏನಾಯಿತೊ ನಮಗೆ ಗೊತ್ತಿಲ್ಲ. ಏಕೆಂದರೆ ಅವನು ಬಹು ಚತುರ. ಇಂತಹ ಸಂಗತಿಗಳನ್ನು ಯಾರ ಮುಂದೂ ಹೇಳುವುದಿಲ್ಲ. ಆದರೂ ಪಾರ್ವತಿ ಕೋಣೆಯಲ್ಲಿ ಅಳುತ್ತ ಕುಳಿತಾಗ–ಸುಮಾರು ಮೂರು ಗಂಟೆಯಾಗಿರಬಹುದು–ದೇವದಾಸ ಕಿಡಿಕಿಯ ಬಳಿಗೆ ಬಂದು ಮೆಲ್ಲಗೆ ಸ್ನೇಹ ಬೆರೆತ ದನಿಯಲ್ಲಿ ‘ ಪಾರು, ಏ ಪಾರು ’ ಎಂದ.

ಪಾರ್ವತಿಗೆ ಆ ಕರೆ ಚೆನ್ನಾಗಿಯೇ ಕೇಳಿಸಿರಬೇಕು. ಆದರೆ ಸಿಟ್ಟಿನಿಂದ ಬೇಕೆಂತಲೇ ಉತ್ತರ ಕೊಡಲಿಲ್ಲ. ಬಳಿಕ ಅವನು ಅಲ್ಲಿಂದ ಹೊರಟು ಹೋದ. ಹತ್ತಿರದ ಒಂದು ಸಂಪಿಗೆಯ ಮರವನ್ನೇರಿ ಕೊಂಬೆಯ ಮೇಲೆ ಕುಳಿತು ಹೊತ್ತುಗಳೆದ. ಸಾಯಂಕಾಲದಲ್ಲಿ ಧರ್ಮದಾಸ ಅಲ್ಲಿಗೆ ಹೋಗಿ ಅವನನ್ನು ರಮಿಸಿ ಮನೆಗೆ ಕರೆದುಕೊಂಡು ಹೋದ.

ಹೀಗೆ ಆದುದು ಒಂದು ದಿನ ಮಾತ್ರ. ಮರುದಿನ ಬೆಳಿಗ್ಗೆ ಯಥಾ ಪ್ರಕಾರ ಪಾರ್ವತಿ ದೇವದಾಸನ ದಾರಿ ಕಾಯಲಾರಂಭಿಸಿದಳು. ಆದರೆ ದೇವದಾಸ ಬರಲಿಲ್ಲ. ಪಕ್ಕದ ಒಂದು ಹಳ್ಳಿಯಿಂದ ಆಮಂತ್ರಣ ಬಂದಿದ್ದ ರಿಂದ ತನ್ನ ತಂದೆಯೊಡನೆ ಹಳ್ಳಿಗೆ ಹೋಗಿದ್ದ. ದೇವದಾಸ ಬಾರದುದ ರಿಂದ ಪಾರ್ವತಿಯ ಮನಸ್ಸು ಉದಾಸೀನವಾಯಿತು. ಆಕೆ ಬೇಗ ಮನೆಗೆ ಹಿಂದಿರುಗಿ ಬಂದಳು. ನಿನ್ನೆಯ ದಿನ ದೇವದಾಸ ಅವಳ ಕೈಯಲ್ಲಿ ಮೂರು ರೂಪಾಯಿಗಳನ್ನು ಕೊಟ್ಟಿದ್ದ—ಸೆರಗಿನಲ್ಲಿ ಕಟ್ಟಿಕೊಳ್ಳಲಿಕ್ಕೆ; ಕೆರೆಯಲ್ಲಿ ಕಳೆದುಹೋದಾವೆಂದು ಅವಳು ಅವನ್ನು ಹಾಗೆಯೇ ಕಟ್ಟಿಕೊಂಡಿದ್ದಳು. ಸೆರಗಿನಲ್ಲಿಯ ಆ ರೂಪಾಯಿಗಳನ್ನು ಆಗಾಗ್ಗೆ ನೋಡುತ್ತ ಕೊಂಚಕಾಲ ಕಳೆದಳು. ಗೆಳತಿಯರಾರೂ ಸಿಕ್ಕಲಿಲ್ಲ. ಏಕೆಂದರೆ ಆ ದಿನ ಮುಂಜಾನೆ ಶಾಲೆ ಇದ್ದಿತು. ಆದುದರಿಂದ ಪಾರ್ವತಿ ಹತ್ತಿರ ಇದ್ದ ಒಂದು ಓಣಿಗೆ ಹೋದಳು. ಅವಳ ಗೆಳತಿ ಮನೋರಮೆ ಇರುವುದು ಅಲ್ಲಿಯೆ. ಮನೋ ರಮೆ ಪಾರ್ವತಿಗಿಂತಲೂ ಸ್ವಲ್ಪ ದೊಡ್ಡವಳು. ಅವಳ ಬೆಟ್ಟಿ ಬಹಳ ದಿನಗಳಿಂದಲೂ ಪಾರ್ವತಿಗೆ ಆಗಿರಲಿಲ್ಲ. ಇಂದು ಬಿಡುವು ದೊರೆತುದರಿಂದ ಅವಳ ಮನೆಗೆ ಹೋಗಿ 'ಮನೋ, ಮನೆಯಲ್ಲಿದ್ದೀಯಾ?' ಎಂದು ಕೂಗಿದಳು. ಒಳಗಿನಿಂದ ಮನೋರಮೆಯ ಸೋದರತ್ತೆ 'ಯಾರು ಪಾರ್ವತಿಯೇನು?' ಎಂದು ಕೇಳಿದಳು.

'ಹೌದು ಮನೋ ಮನೆಯಲ್ಲಿದ್ದಾಳೇನಮ್ಮ?'

'ಶಾಲೆಗೆ ಹೋಗಿದ್ದಾಳೆ. ನೀನು ಹೋಗುವುದಿಲ್ಲವೆ? ಬಾ.'

'ಇಲ್ಲ. ನಾನು ಶಾಲೆಗೆ ಹೋಗುವುದನ್ನು ಬಿಟ್ಟುಬಿಟ್ಟಿದ್ದೇನೆ. ದೇವಣ್ಣನೂ ಹೋಗುವುದಿಲ್ಲ.'

'ನೀನೂ ಹೋಗುವುದಿಲ್ಲ, ದೇವಣ್ಣನೂ ಹೋಗುವುದಿಲ್ಲ. ಚೆನ್ನಾ ಯಿತು.' ಎಂದು ಮನೋರಮೆಯ ಸೋದರತ್ತೆ ನಕ್ಕು ನುಡಿದರು.

'ಹೌದು, ನಾವು ಹೋಗುವುದಿಲ್ಲ.'

'ಮನೋರಮೆ ಶಾಲೆಗೆ ಹೋದರೇನಾಯಿತು. ಕುಳಿತುಕೊ ಪಾರ್ವತೀ.'

ಪಾರ್ವತಿ ಕುಳಿತುಕೊಳ್ಳಲಿಲ್ಲ. ಹಿಂದಿರುಗಿ ಮನೆಗೆ ಹೊರಟಳು. ದಾರಿಯಲ್ಲಿ ರಸಿಕಪಾಲನ ಅಂಗಡಿಯ ಹತ್ತಿರ ಮೂವರು ವೈಷ್ಣವಿಯರು ಸಿಕ್ಕಿದರು. ಅವರು ಹಾಡುತ್ತ ಬಾರಿಸುತ್ತ ಭಿಕ್ಷೆ ಬೇಡುತಿದ್ದರು. ಅವರನ್ನು ನೋಡಿ ಪಾರ್ವತಿ ಕೂಗಿ ಮತ್ತೆ ಹಾಡಲು ಹೇಳಿದಳು. ಅವರು 'ಹಾಗೆಯೆ ಹಾಡುವುದಿಲ್ಲ. ಭಿಕ್ಷೆ ನೀಡಿದರೆ ಹಾಡುತ್ತೇವೆ' ಎಂದು ಹೇಳಿದರು.

'ಹಾಡಿರಿ.' ಎಂದಳು ಮತ್ತೆ ಪಾರ್ವತಿ.

'ಕಾಸು ಕೊಡಬೇಕಾಗುತ್ತದೆ.'

ಪಾರ್ವತಿ ತನ್ನ ಸೆರಗನ್ನು ತೋರಿಸಿ 'ಇದರಲ್ಲಿ ಕಾಸಿಲ್ಲ; ರೂಪಾಯಿ ಗಳಿವೆ.' ಎಂದಳು.

ವೈಷ್ಣವಿಯರು ದೂರಹೋಗಿ ಕುಳಿತು ಹಾಡಿದರು. ಹಾಡಿನ ಅರ್ಥ ಮಾತ್ರ ಪಾರ್ವತಿಗೆ ತಿಳಿಯಲಿಲ್ಲ. ಆಕೆ ತಿಳಿದುಕೊಳ್ಳಲು ಬಯಸಿ ದರೂ ತಿಳಿಯುತ್ತಿರಲಿಲ್ಲ. ಅಷ್ಟರಲ್ಲಿ ಅವಳಿಗೆ ದೇವದಾಸನ ನೆನಪಾಯಿತು.

ಸಂಗೀತ ನಿಲ್ಲಿಸಿ ಒಬ್ಬ ವೈಷ್ಣವಿ 'ಭಿಕ್ಷೆ ಕೊಡುವಿಯೇನಮ್ಮ?' ಎಂದಳು. ಪಾರ್ವತಿ ಸೆರಗಿನೊಳಗಿನ ರೂಪಾಯಿಗಳನ್ನು ಬಿಚ್ಚಿ ಮೂವ ರಿಗೂ ಒಂದೊಂದನ್ನು ಕೊಟ್ಟುಬಿಟ್ಟಳು. ಮೂವರೂ ಆಶ್ಚರ್ಯದಿಂದ ಈ ಹುಡುಗಿಯ ಕಡೆಗೆ ನೋಡುತ್ತ ನಿಂತರು. ಬಳಿಕ ಕೇಳಿದರು 'ಯಾರ ರೂಪಾಯಿಗಳಿವು ಮಗೂ?'

'ದೇವಣ್ಣನವು.'

'ಅವರು ನಿನ್ನನ್ನು ಹೊಡೆಯಲಿಕ್ಕಿಲ್ಲವೆ?'

'ಇಲ್ಲ.'

'ಚಿರಂಜೀವಿಯಾಗು' ಎಂದು ವೈಷ್ಣವಿಯರು ಹರಸಿದರು. ಬಳಿಕ ಪಾರ್ವತಿ ನಕ್ಕು 'ಮೂವರಿಗೂ ಸರಿಯಾಗಿ ಸಿಕ್ಕಿತಲ್ಲವೆ ಪಾಲು?' ಎಂದು ಕೇಳಿದಳು.

ಮತ್ತೆ ವೈಷ್ಣವಿಯರು 'ರಾಧಾರಾಣಿ ನಿನಗೆ ಕಲ್ಯಾಣ ಮಾಡಲಿ.'

ಎಂದು ಹರಸಿ ಈ ಮಗುವಿಗೆ ಏಟು ಬೀಳದಿರಲೆಂದು ಪ್ರಾರ್ಥಿಸಿದರು. ಪಾರ್ವತಿ ಮನೆಗೆ ಬಂದಳು.

ಮರುದಿನ ದೇವದಾಸನ ಬೆಟ್ಟಿಯಾಯಿತು ಅವಳಿಗೆ. ಅವನ ಕೈಯಲ್ಲಿ ದಾರ ಸುತ್ತಿದ ಒಂದು ಕಟ್ಟಿಗೆ ಇದ್ದಿತು. ಗಾಳೀಪಟವಿರಲಿಲ್ಲ. ಅದನ್ನು ಕೊಳ್ಳಬೇಕಾಗಿದ್ದಿತು.

'ಪಾರೂ, ರೂಪಾಯಿ ಕೊಡು.' ಎಂದು ಕೇಳಿದ ದೇವದಾಸ.

'ಇಲ್ಲ' ಎಂದಳು ಪಾರ್ವತಿ.

'ಏನಾದುವು?'

'ವೈಷ್ಣವಿಯರು ಹಾಡಿದರು. ಅವರಿಗೆ ಕೊಟ್ಟುಬಿಟ್ಟೆ.'

'ಎಲ್ಲಾ ಕೊಟ್ಟುಬಿಟ್ಟೆಯಾ?'

'ಹೂಂ'

'ಛೀ, ಹುಚ್ಚೀ, ಎಲ್ಲಾ ಕೊಡಬೇಕೆ?'

'ಮೂವರಿದ್ದರು. ಮೂರು ರೂಪಾಯಿ ಕೊಡದಿದ್ದರೆ ಅವರು ಹೇಗೆ ಹಂಚಿಕೊಳ್ಳಬೇಕು?'

'ನಾನಾಗಿದ್ದರೆ ಎರಡೇ ಕೊಡುತಿದ್ದೆ.' ಎಂದು ಕಟ್ಟಿಗೆಯಿಂದ ಮಣ್ಣಿನಲ್ಲಿ ಬರೆಯುತೊಡಗಿದ ದೇವದಾಸ. 'ಎರಡು ರೂಪಾಯಿ ಕೊಟ್ಟಿದ್ದರೆ ಒಬ್ಬೊಬ್ಬರು ಹತ್ತಾಣೆ ಎಂಟು ಕಾಸು ಹಂಚಿಕೊಳ್ಳತಿದ್ದರು.'

'ಅವರಿಗೆ ನಿನ್ನ ಹಾಗೆ ಲೆಕ್ಕ ಬರುತ್ತದೆಯೆ?'

ದೇವದಾಸನಿಗೆ ಲೆಕ್ಕ ಚೆನ್ನಾಗಿ ಬರುತಿತ್ತು. ಆದ್ದರಿಂಧ ಪಾರ್ವತಿಯ ನುಡಿಗಳನ್ನು ಕೇಳಿ ಅವನಿಗೆ ಸಂತೋಷವಾಯಿತು. 'ಸರಿ' ಎಂದ.

ಪಾರ್ವತಿ ದೇವದಾಸನ ಕೈಹಿಡಿದು. 'ದೇವಣ್ಣಾ, ನೀನು ನನ್ನನ್ನು ಹೊಡೆಯುವೆಯೆಂದು ತಿಳಿದಿದ್ದೆ.' ಎಂದಳು.

'ಏಕೆ?'

'ಹಾಗೆ ವೈಷ್ಣವಿಯರು ಹೇಳಿದ್ದರು.'

ಈ ಮಾತುಗಳನ್ನು ಕೇಳಿ ದೇವದಾಸನಿಗೆ ಮತ್ತಿಷ್ಟು ಆನಂದ ವಾಯಿತು. ಪಾರ್ವತಿಯ ಹೆಗಲಿನ ಮೇಲೆ ಕೈಯಿಟ್ಟು 'ಛೀ, ತಪ್ಪು ಮಾಡಿದರೂ ನಾನು ಎಂದಾದರೂ ಹೊಡೆಯುತ್ತೇನೆಯೆ?' ಎಂದ.

ತನ್ನ ಪಿನಲ್‌ಕೋಡಿನಲ್ಲಿ ಪಾರ್ವತಿಯ ಈ ಕೆಲಸ ಮಹಾಪರಾಧ ವೆಂದು ಇರಲಿಕ್ಕಿಲ್ಲವೆಂದು ದೇವದಾಸ ತಿಳಿದಿರಬಹುದು. ಮೂರು ರೂಪಾಯಿಗಳನ್ನು ಮೂವರಲ್ಲಿ ಸರಿಯಾಗಿ ಹಂಚಲಾಗಿದ್ದಿತು. ತ್ರೈರಾಸಿಕ ವನ್ನು ಕಲಿಯದ ವೈಷ್ಣವಿಯರಿಗೆ ಮೂರು ರೂಪಾಯಿಗಳ ಬದಲು ಎರಡು ರೂಪಾಯಿ ಕೊಡುವುದೆಂದರೆ ಅಪರಾಧವೇ ಸರಿ. ಅವನು ಪುನಃ ಪಾರ್ವತಿಯ ಕೈಹಿಡಿದು ಗಾಳಿಪಟವನ್ನು ಕೊಳ್ಳಲಿಕ್ಕೆ ಪೇಟೆಗೆ ಬಾ ಎಂದು ಕರೆದ. ಆದರೆ ಪಾರ್ವತಿ ಸುಮ್ಮನಾಗಿದ್ದುದರಿಂದ ತಾನೊಬ್ಬನೆ ಹೊರಟ. ಹೋಗುವಾಗ ದಾರಿಯಲ್ಲಿ ದಾರಸುತ್ತಿದ ಕಟ್ಟಿಗೆಯನ್ನು ಒಂದು ಗುಪ್ತವಾದ ಸ್ಥಳದಲ್ಲಿ ಇಟ್ಟು ಹೋದ.

೪

ಹೀಗೆ ಒಂದು ವರ್ಷ ಕಳೆಯಿತು. ಈ ರೀತಿಯಿಂದ ದೇವದಾಸ ಇನ್ನು ವರ್ತಿಸಕೂಡದು. ದೇವದಾಸನ ತಾಯಿ ತನ್ನ ಪತಿಯನ್ನು ಕರೆದು 'ದೇವ ಮೂರ್ಖನಾಗಿದ್ದಾನೆ. ತೀರ ತುಂಟತನ ಮಾಡುತ್ತಾನೆ. ಏನಾದರೂ ಉಪಾಯ ಮಾಡಿ ಅವನನ್ನು ದಾರಿಗೆ ತನ್ನಿ.' ಎಂದು ಹೇಳಿದರು.

ನಾರಾಯಣ ಬಾಬುಗಳು 'ಅವನು ಕಲಕತ್ತೆಗೆ ಹೋಗಿ ನರೇಂದ್ರನ ಮನೆಯಲ್ಲಿದ್ದುಕೊಂಡು ಓದಲಿ.' ಎಂದರು.

ನರೇಂದ್ರಬಾಬುಗಳು ದೇವದಾಸನಿಗೆ ಮಾವಂದಿರಾಗಬೇಕು. ನಾರಾಯಣಬಾಬುಗಳ ಸ್ಲಾತಿನಿಂದ ಎಲ್ಲರಿಗೂ ಸಂತೋಷವಾಯಿತು. ಆದರೆ ಪಾರ್ವತಿಗೆ ಸಮಾಧಾನವಾಗಲಿಲ್ಲ. ಆಕೆಗೆ ಚಿಂತೆಯಾಯಿತು.

ದೇವದಾಸ ಒಬ್ಬನೆ ಸಿಕ್ಕಾಗ ಅವನ ಕೈಹಿಡಿದು 'ದೇವಣ್ಣಾ, ನೀನು ಕಲಕತ್ತೆಗೆ ಹೋಗುವಿಯೇನು?' ಎಂದು ಪಾರ್ವತಿ ಕೇಳಿದಳು.

'ಹೀಗೆ ಯಾರು ಹೇಳಿದರು?'

'ದೊಡ್ಡಪ್ಪ'

'ಇಲ್ಲ, ನಾನು ಹೋಗುವುದಿಲ್ಲ.'

'ಬಲವಂತದಿಂದ ಕಳಿಸಿದರೆ?'

'ಬಲವಂತದಿಂದ!'

ಆಗ ದೇವದಾಸನ ಮುಖನೋಡಿ, 'ದೇವದಾಸನನ್ನು ಈ ಭೂಲೋಕದಲ್ಲಿ ಯಾರೂ ಬಲವಂತದಿಂದ ಕಳಿಸಲಾರರು' ಎಂದು ಪಾರ್ವತಿ ತಿಳಿದುಕೊಂಡಳು. ಅವಳು ಬಯಸುತಿದ್ದುದೂ ಇದನ್ನೇ. ಹರ್ಷದಿಂದ ದೇವದಾಸನ ಕೈಕುಲುಕಿ ಪುನಃ 'ದೇವಣ್ಣಾ, ಹೋಗಬೇಡ.' ಎಂದಳು.

'ಎಂದಿಗೂ ಇಲ್ಲ.'

ಆದರೆ ದೇವದಾಸನ ಈ ಪ್ರತಿಜ್ಞೆ ಈಡೇರಲಿಲ್ಲ. ಅವನ ತಂದೆ ತಾಯಂದಿರು ಅವನನ್ನು ಬಲವಂತದಿಂದ ಧರ್ಮದಾಸನೊಡನೆ ಕಲಕತ್ತೆಗೆ ಕಳಿಸಿಬಿಟ್ಟರು. ಹೋಗುವ ದಿನ ದೇವದಾಸನಿಗೆ ಅತ್ಯಂತ ದುಃಖ ವಾಯಿತು. ಹೊಸ ಊರಿಗೆ ಹೋಗುವಾಗ ಮಕ್ಕಳಿಗೆ ಆಗ ಬೇಕಾಗಿದ್ದ ಆನಂದ ಅವನಿಗಾಗಲಿಲ್ಲ. ಅಂದು ಪಾರ್ವತಿಯೊಬ್ಬಳು ಮಾತ್ರ ಅವನನ್ನು ಅಗಲಲು ಒಪ್ಪಲಿಲ್ಲ. ಅವಳು ಅತ್ತಳು. ಆದರೆ ಅವಳನ್ನು ಕೇಳುವವ ರಾರು ? ಮೊದಮೊದಲು ಅಭಿಮಾನದಿಂದ ಅವಳು ದೇವದಾಸನೊಡನೆ ಮಾತನಾಡಲಿಲ್ಲ. ಬಳಿಕ ದೇವದಾಸ ಅವಳ ಬಳಿಗೆ ಬಂದು ಕೈಹಿಡಿದು 'ಪಾರೂ, ಬೇಗನೆ ತಿರಿಗಿ ಬರುವೆ. ಅವರು ಬಿಡದಿದ್ದರೆ ಓಡಿ ಬರುವೆ.' ಎಂದ. ಆಗ ಪಾರ್ವತಿ ತನ್ನ ಅಂತಃಕರಣದಲ್ಲಿದ್ದ ಎಲ್ಲ ಮಾತುಗಳನ್ನೂ ಹೇಳಿದಳು ದೇವದಾಸನಿಗೆ. ಅವನು ಅವನ್ನೆಲ್ಲವನ್ನೂ ಸಮಾಧಾನದಿಂದ ಕೇಳಿಕೊಂಡು ತಾಯಿಯ ಆಶೀರ್ವಾದವನ್ನು ಪಡೆದು ಕುದುರೆ ಗಾಡಿ ಯಲ್ಲಿ ಕುಳಿತ. ಅವನ ಕಣ್ಣುಗಳು ಅಶ್ರುಮಯವಾಗಿದ್ದುವು. ಆಗ ಪಾರ್ವ ತಿಗೆ ಬಹಳ ದುಃಖವಾಯಿತು. ಅವಳ ಕಣ್ಣೊಳಗಿಂದಲೂ ನೀರಿನ ಧಾರೆ ಒಂದೇ ಸವನೆ ಸುರಿಯಿತು. ಅವಳ ಹೃದಯ ಅಭಿಮಾನದಿಂದ ಗಟ್ಟಿ ಯಾದುದು ಕರಗಿ ನೀರಾಗಿ ಹರಿಯತೊಡಗಿತು. ಮರುದಿನ ಬೆಳಿಗ್ಗೆ ಎದ್ದಳು. ಮಾಡಲಿಕ್ಕೆ ಕೆಲಸವೇನೂ ಇರಲಿಲ್ಲ. ಮೊದಲು ಅವಳ ಸಮಯ ವೆಲ್ಲ ದೇವದಾಸನ ಜೊತೆಯಲ್ಲಿ ಕಳೆದು ಹೋಗುತಿದ್ದುದರಿಂದ ಕೆಲಸಕ್ಕೆ ಬಿಡುವೇ ಸಿಕ್ಕುತಿರಲಿಲ್ಲ. ಈಗ ಎಷ್ಟು ಕೆಲಸ ಮಾಡಿದರೂ ಬಿಡುವೇ ಬಿಡುವು. ಹುಡುಕಿದರೂ ಹೊಸಹೊಸ ಕೆಲಸ ಕಾಣುತ್ತಿರಲಿಲ್ಲ. ಮರು ದಿನ ಮತ್ತೆ ಬೆಳಿಗ್ಗೆ ಎದ್ದು ಕೆಲಸವೇನೂ ಇಲ್ಲದುದರಿಂದ ಕಾಗದ ಬರೆಯ ತೊಡಗಿದಳು. ಹತ್ತು ಗಂಟೆಯಾಯಿತು. ಅದನ್ನು ನೋಡಿ ತಾಯಿಗೆ ಕೋಪ ಬಂದಿತು. ಆದರೆ ಅಜ್ಜಿ ಮಾತ್ರ 'ಬರೆಯಲಿ ಬಿಡು; ಅತ್ತಿತ್ತ ಅಲೆಯುವುದಕ್ಕಿಂತ ಕಾಗದ ಬರೆಯುವುದು ಓದುವುದು ಒಳ್ಳೆಯದು.' ಎಂದರು.

ದೇವದಾಸನ ಪತ್ರ ಬಂದ ದಿನ ಪಾರ್ವತಿಗೆ ಬಹಳ ಸಂತೋಷ. ಇಡೀ ದಿನ ಆ ಪತ್ರವನ್ನು ಓದುವುದರಲ್ಲಿಯೇ ಕಳೆಯುತ್ತಿದ್ದಳು. ಆಗಾಗ ಕಾಗದ ಬರೆಯುವುದು, ಅವನಿಂದ ಉತ್ತರ ಪಡೆಯುವುದು, ಇದರಲ್ಲಿಯೆ ಒಂದು ತಿಂಗಳು ಕಳೆಯಿತು. ಆದರೆ ಈಗ ಅವಳಿಗೆ ಪತ್ರ ಬರೆಯುವ ಉತ್ಸಾಹವೂ ಕಡಿಮೆಯಾಗಿ ಹೋಯಿತು. ಒಂದು ದಿನ ಪಾರ್ವತಿ ತನ್ನ ತಾಯಿಗೆ 'ಇನ್ನು ನಾನು ಶಾಲೆಗೆ ಹೋಗುತ್ತೇನೆ ಅಮ್ಮ' ಎಂದು ಹೇಳಿದಳು.

'ಏಕೆ?'

'ಹೋಗುತ್ತೇನೆ' ಎಂದಳೇ ವಿನಾ ಪಾರ್ವತಿ ಕಾರಣವನ್ನು ಹೇಳಲಿಲ್ಲ.

'ಪಾಠಶಾಲೆಗೆ ಹೋಗಲು ನಾನೆಂದಾದರೂ ಬೇಡವೆಂದಿದ್ದೇನೆಯೆ? ಹೋಗಮ್ಮ' ಎಂದರು ಪಾರ್ವತಿಯ ತಾಯಿ.

ಬಹುದಿನಗಳಿಂದ ಒಗೆದು ಬಿಟ್ಟಿದ್ದ ಪಾಟಿಪುಸ್ತಕಗಳನ್ನು ಹುಡುಕಿ ತೆಗೆದಳು ಪಾರ್ವತಿ. ಆ ದಿನ ಮಧ್ಯಾಹ್ನವೇ ಶಾಲೆಗೆ ಹೋಗಲಾರಂಭಿಸಿದಳು. ಅಂದು ತಾನು ಹೋಗುವಾಗ ಜೊತೆಯಲ್ಲಿ ದಾಸಿಯನ್ನು ಕರೆದುಕೊಂಡು ಹೋದಳು. ಶಾಲೆಯಲ್ಲಿ ಮೊದಲು ತಾನು ಕುಳಿತುಕೊಳ್ಳುತಿದ್ದ ಸ್ಥಳದಲ್ಲಿಯೇ ಗಂಭೀರವಾಗಿ ಹೋಗಿ ಕುಳಿತಳು.

'ಮಾಸ್ತರರೇ, ಪಾರ್ವತಿಗೆ ಇನ್ನು ಹೊಡೆಯಬೇಡಿರಿ. ತಾನಾಗಿಯೆ ಶಾಲೆಗೆ ಬಂದಿರುವಳು. ತನಗೆ ಮನಸ್ಸು ಬಂದಷ್ಟು ಕಾಲ ಅವಳು ಓದಿಕೊಂಡಿರುವಳು. ಆ ಮೇಲೆ ಮನೆಗೆ ಬರುವಳು.' ಎಂದಳು ದಾಸಿ.

ಮಾಸ್ತರರು ಮನಸ್ಸಿನಲ್ಲಿಯೇ 'ತಥಾಸ್ತು' ಎಂದುಕೊಂಡು 'ಹಾಗೆಯೇ ಆಗಲಮ್ಮ.' ಎಂದು ನುಡಿದರು.

ಪಂಡಿತರಿಗೆ ಇಚ್ಛೆಯಾಯಿತು, 'ಪಾರ್ವತಿಯನ್ನೂ ಕಲಕತ್ತೆಗೆ ಏಕೆ ಕಳುಹಿಸಲಿಲ್ಲವೆಂದು ಕೇಳಬೇಕೆ'ಂದು. ಆದರೆ ಅವರು ಕೇಳಲಿಲ್ಲ. ಸರದಾರ ಭೋಲಾನಾಥ ತನ್ನ ಸ್ಥಾನದಲ್ಲಿ ಮೊದಲಿನಂತೆ ಕುಳಿತುದನ್ನು

ಪಾರ್ವತಿ ನೋಡಿದಳು. ಮೊದಲು ಸಲ ಅವನನ್ನು ಕಂಡಾಗ ಅವಳಿಗೆ ನಗು ಬಂದಿತು. ಆ ಮೇಲೆ ಕಣ್ಣುಗಳಲ್ಲಿ ನೀರು ಬಂದವು. ಕೊನೆಗೆ ಕೋಪವೂ ಬಂದಿತು. ದೇವದಾಸನನ್ನು ಮನೆಯಿಂದ ಕಲಕತ್ತೆಗೆ ಹೊರಡಿಸಲು ಅವನೇ ಕಾರಣನೆಂದು ಅವಳು ಬಗೆದಿದ್ದಳು.

ಈ ರೀತಿಯಾಗಿ ಅನೇಕ ದಿನಗಳು ಕಳೆದುವು. ದಿನಾಲು ಅವಳು ಪಾಠಶಾಲೆಗೆ ಹೋಗಿ ಬರುತಿದ್ದಳು.

ಬಹಳ ದಿನಗಳ ನಂತರ ಒಂದು ದಿನ ದೇವದಾಸ ಊರಿಗೆ ಬಂದ. ಬಂದ ದಿನವೇ ಪಾರ್ವತಿಯ ಮನೆಗೆ ಹೋದ. ಅನೇಕ ಮಾತುಕತೆಗಳಾದುವು. ಅವಳು ಹೆಚ್ಚಿಗೇನೂ ಮಾತನಾಡಲಿಲ್ಲ; ಆಡಬೇಕಾದುದೇನೂ ಇರಲಿಲ್ಲ. ದೇವದಾಸನೇ ಕಲಕತ್ತೆಯ ಸಮಾಚಾರವನ್ನೆಲ್ಲ ಹೇಳಿದ. ಬೇಸಿಗೆಯ ರಜದ ದಿನಗಳು ಕ್ರಮೇಣ ಕಳೆದು ಹೋದುವು. ದೇವದಾಸ ಮತ್ತೆ ಕಲಕತ್ತೆಗೆ ಹೋದ. ಆಗಲೂ ಅಳುವುದು ನಡೆಯಿತು. ಅಗಲುವಾಗ ಇಬ್ಬರೂ ಬಾಲಪ್ರೇಮಿಗಳು ಕಂಬನಿ ಸುರಿಸಿದರು. ಆದರೆ ಮೊದಲಿನಷ್ಟು ಗಾಂಭೀರ್ಯ ಈ ಸಲದ ಅಗಲಿಕೆಯಲ್ಲಿರಲಿಲ್ಲ. ಹೀಗೆಯೆ ವರ್ಷದ ಮೇಲೆ ವರ್ಷಗಳು ಕಳೆದುವು. ನಾಲ್ಕು ವರ್ಷಗಳಾದುವು. ದೇವದಾಸನ ಸ್ವಭಾವದಲ್ಲಿ ಬಹಳ ಬದಲಾವಣೆಯಾಯಿತು. ಅದನ್ನು ನೋಡಿ ಪಾರ್ವತಿ ಏಕಾಂತದಲ್ಲಿ ಕಣ್ಣೀರು ಸುರಿಸಿದಳು. ಹಳ್ಳಿಯಲ್ಲಿರುತಿದ್ದಾಗಿನ ದೇವದಾಸನ ಗುಣದೋಷಗಳು ಪಟ್ಟಣಕ್ಕೆ ಹೋದ ಮೇಲೆ ಇಲ್ಲದಂತಾದುವು. ಅವನ ಉಡುಪಿನಲ್ಲಿ ಅತ್ಯಂತ ಅಂತರವಾಯಿತು. ಈಗ ಅವನಿಗೆ ಡಾಸನ್ ಶೂ, ಓಪನ್ ಕಾಲರ್ ಕೋಟ್, ಪ್ಯಾಂಟ್, ಟೈ, ಚಿನ್ನದ ರಿಸ್ಟ್‌ವಾಚ್, ಗೋಲ್ಡನ್ ಫ್ರೇಮಿನ ಕನ್ನಡಕಗಳಿಲ್ಲದಿದ್ದರೆ ಸರಿಹೋಗುವುದಿಲ್ಲ. ಹಳ್ಳಿಯ ಹೊಳೆಯ ದಂಡೆಯ ಮೇಲೆ ಅಲೆದಾಡುವುದು ಈಗ ಅವನಿಗೆ ಸರಿಯೆನಿಸುವುದಿಲ್ಲ. ಕೈಯಲ್ಲಿ ಬಂದೂಕನ್ನು ತೆಗೆದುಕೊಂಡು ಹೋಗಿ ಬೇಟೆಯಾಡುವುದನ್ನು ಈಗ ಅವನು ಮೆಚ್ಚುತ್ತಾನೆ. ಚಿಕ್ಕ ಮೀನುಗಳನ್ನು ಹಿಡಿಯುವುದಕ್ಕಿಂತ ದೊಡ್ಡ ಮೀನುಗಳನ್ನು ಹಿಡಿಯಲು ಅವನಿಗೆ ಆಸೆ ಹೆಚ್ಚು. ಆಟ ನೋಟ, ರಾಜಕೀಯ,

ಸಾಮಾಜಿಕ, ಶೈಕ್ಷಣಿಕ ಮುಂತಾದ ಅನೇಕ ವಿಷಯಗಳನ್ನು ಕುರಿತು ಚರ್ಚಿಸಲು ಅವನು ಇಷ್ಟಪಡುತ್ತಾನೆ. ಈಗ ಅವನಿಗೆ ಎಲ್ಲಿಯ ಪಾರ್ವತಿ! ಎಲ್ಲಿಯ ಹಳ್ಳಿ! ಎಲ್ಲಿಯ ಸೋನಾಪುರ! ಬಾಲ್ಯ ಜೀವನದ ಮಾತುಗಳ ನೆನಪು ಈಗ ಅಷ್ಟೊಂದು ಆಗುವುದಿಲ್ಲ. ಕೆಲಸ ಬಹಳವಾಗಿದ್ದುದರಿಂದ ಎನ್ನಿರಿ, ಅವುಗಳ ನೆನಪು ಬಂದರೂ ಬಹಳ ಹೊತ್ತು ಅವು ಅವನ ಹೃದಯ ದಲ್ಲಿ ನೆಲಿಸುತ್ತಿರಲಿಲ್ಲ.

ಪುನಃ ಬೇಸಿಗೆಯ ರಜೆ ಬಂದಿತು. ಕಳೆದ ವರ್ಷ ಅವನು ಊರಿಗೆ ಬಂದಿರಲಿಲ್ಲ. ಈಗ ಅವನ ತಂದೆ ತಾಯಂದಿರು ಬಹಳ ಆಗ್ರಹ ತೊಟ್ಟುದ ರಿಂದ, ಇಚ್ಛೆ ಇರದಿದ್ದರೂ ಊರಿಗೆ ಹೋಗಬೇಕೆಂದು ಹೌರಾ ನಿಲ್ದಾ ಣಕ್ಕೆ ಬಂದ. ಊರಿಗೆ ಬಂದದಿನ ಮೈಯಲ್ಲಿ ಆಯಾಸವಾಗಿದ್ದುದರಿಂದ ಹೊರಗೆಲ್ಲಿಯೂ ಹೋಗಲಿಲ್ಲ. ಮರುದಿನ ಪಾರ್ವತಿಯ ಮನೆಗೆ ಬಂದು 'ಚಿಕ್ಕಮ್ಮ!' ಎಂದ.

ಪಾರ್ವತಿಯ ತಾಯಿ ಆದರಾಂತಃಕರಣದಿಂದ 'ಬಾ ಮಗು, ಕುಳಿತುಕೋ' ಎಂದರು.

ಆ ಮಾತು, ಈ ಮಾತು ಆಡಿ ಬಳಿಕ ದೇವದಾಸ ಕೇಳಿದ 'ಪಾರೂ ಎಲ್ಲಿ ಚಿಕ್ಕಮ್ಮ?

'ಮೇಲೆ ಕೋಣೆಯಲ್ಲಿದ್ದಾಳೆ.'

ದೇವದಾಸ ಉಪ್ಪರಿಗೆಯ ಮೇಲಿನ ಕೋಣೆಗೆ ಹೋಗಿ ಕೂಗಿದ 'ಪಾರೂ!'

ಪಾರ್ವತಿಗೆ ಆಶ್ಚರ್ಯವಾಯಿತು. ದೀಪಹಚ್ಚಿ ಹಿಂದಿರುಗಿ ನೋಡಿ, ವಂದಿಸಿ ಪಕ್ಕಕ್ಕೆ ಸರಿದು ನಿಂತಳು.

'ಏನು ನಡೆದಿದೆ ಪಾರೂ?'

ಉತ್ತರ ಕೊಡಬೇಕಾದ ಪ್ರಯೋಜನವಿಲ್ಲವಾದುದರಿಂದ ಪಾರ್ವತಿ ಸುಮ್ಮನೇ ಇದ್ದಳು. ದೇವದಾಸನಿಗೆ ನಾಚಿಕೆಯೆನಿಸಿತು. 'ಒಳ್ಳೇದು, ಹೋಗುತ್ತೇನೆ, ಸಾಯಂಕಾಲವಾಯಿತು. ಮೈಯಲ್ಲಿ ಚೆನ್ನಾಗಿಲ್ಲ.' ಎಂದು ಹೊರಟ.

## ೫

ಪಾರ್ವತಿಗೆ ಹನ್ನೆರಡು ವರ್ಷ ತುಂಬಿ ಇದೇ ಹದಿಮೂರರ ಆರಂಭ. ಅವಳ ಅಜ್ಜಿಯ ಬಾಯಲ್ಲಿ ಸದಾ ಇದೇ ಮಾತು. ಈ ವಯಸ್ಸಿನಲ್ಲಿ ಚೆಲುವು ಎಲ್ಲಿಂದಲೊ ಬಂದು ಕಿಶೋರಿ ಪಾರ್ವತಿಯ ಸರ್ವಾಂಗವನ್ನೂ ಸುತ್ತಿದೆ. ಪಾರ್ವತಿ ದೊಡ್ಡವಳಾಗುತ್ತಿರುವುದನ್ನು ಕಂಡು ಬಂಧು ಬಳಗದವರಿಗೆ ಸಂತೋಷ. ಪಾರ್ವತಿಯ ಮನೆಯಲ್ಲಿ ಈಗ ಆಕೆಯ ಮದುವೆಯ ಮಾತುಗಳು ಪ್ರಾರಂಭವಾಗಿವೆ. ಚಕ್ರವರ್ತಿಯವರಿಗೆ ಅವಳ ವಿವಾಹದ ಚಿಂತೆ ಆರಂಭವಾಗಿದೆ. ಪಾರ್ವತಿಯ ತಾಯಿಗಂತೂ ಈ ಚಿಂತೆ ವಿಪರೀತ ವಾಗಿ ಬಾಧಿಸುತ್ತಿದೆ. ತನ್ನ ಯಜಮಾನರಿಗೆ 'ಪಾರ್ವತಿಯ ಮದುವೆ ಯನ್ನು ಬೇಗ ಮಾಡಿಬಿಡಿ. ಮುಂದಕ್ಕೆ ತಳ್ಳಬೇಡಿ.' ಎಂದು ಪದೇ ಪದೇ ಹೇಳುತಿದ್ದಾರೆ. ಅವರು ಆಗರ್ಭಶ್ರೀಮಂತರಲ್ಲ. ಆದರೆ ಅವರಿಗೆ ಹುಡುಗಿಯ ಸೌಂದರ್ಯದ ಮೇಲೆ ಅಪಾರವಿಶ್ವಾಸವಿದೆ! ಪ್ರಪಂಚದಲ್ಲಿ ಅನುಪಮ ಸೌಂದರ್ಯಕ್ಕೆ ಗೌರವವಿದ್ದಲ್ಲಿ ಪಾರ್ವತಿಯ ವಿವಾಹಕ್ಕಾಗಿ ಚಿಂತೆಪಡಬೇಕಾದುದಿಲ್ಲ.

ಇನ್ನೂ ಒಂದು ಮಾತು—ಅದನ್ನಿಲ್ಲಿ ಹೇಳಿಬಿಡುವುದು ಲೇಸು. ಈ ಮೊದಲು ಚಕ್ರವರ್ತಿಯವರ ಮನೆತನದಲ್ಲಿ ಹೆಣ್ಮಕ್ಕಳ ಮದುವೆಗಾಗಿ ಎಂದೂ ಎಳ್ಳಷ್ಟೂ ಚಿಂತೆಮಾಡಬೇಕಾಗುತ್ತಿರಲಿಲ್ಲ. ಗಂಡುಮಕ್ಕಳ ಮದುವೆಗೆ ಮಾತ್ರ ಚಿಂತಿಸಬೇಕಾಗುತ್ತಿತ್ತು. ಅವರು ಮಗಳ ಮದುವೆ ಯಲ್ಲಿ ಕನ್ಯಾಶುಲ್ಕವನ್ನು ತೆಗೆದುಕೊಳ್ಳುತಿದ್ದರು; ಮಗನ ಮದುವೆಗೂ, ಶುಲ್ಕವನ್ನು ಕೊಟ್ಟು ಸೊಸೆಯನ್ನು ತರುತಿದ್ದರು. ನೀಲಕಂಠನ ತಂದೆ ಕೂಡ ಶುಲ್ಕವನ್ನು ತೆಗೆದುಕೊಂಡಿದ್ದರು ತಮ್ಮ ಮಗಳಿಗೆ. ನೀಲಕಂಠನಿಗೆ ಮಾತ್ರ ತೀರ ಅಸಹ್ಯವಾಗಿತ್ತು ಈ ರೂಢಿ. ಪಾರ್ವತಿಯನ್ನು ಮಾರಿ ಹಣ ತರಬೇಕೆಂಬುದು ಆತನಿಗೆ ಒಲ್ಲದ ವಿಷಯ.

ಪಾರ್ವತಿಯ ತಾಯಿಗೆ ಗಂಡನ ಇಚ್ಛೆ ಗೊತ್ತಿದ್ದಿತು. ಆದುದರಿಂದಲೇ ಅವರು ತಮ್ಮ ಪತಿದೇವರಿಗೆ ಬೆನ್ನುಹತ್ತಿದ್ದರು 'ಪಾರ್ವತಿಯ ಮದುವೆಯನ್ನಷ್ಟು ಬೇಗ ಮಾಡಿಬಿಡಿ.' ಎಂದು. ಪಾರ್ವತಿ ದೇವದಾಸನ ಕೈಹಿಡಿಯಬೇಕೆಂಬ ಆಸೆ ಅವರ ಮನದಲ್ಲಿ ಮನೆಮಾಡಿತ್ತು. ಇದು ಅಸಾಧ್ಯವೆಂದು ಅವರಿಗೆ ಎನಿಸಿರಲಿಲ್ಲ. ಏಕೆಂದರೆ ದೇವದಾಸನಿಗೆ ಆಗ್ರಹ ಮಾಡಿದರೆ ಅವನು ಒಪ್ಪದೆ ಇರಲಿಕ್ಕಿಲ್ಲವೆಂದು ಅವರು ತಿಳಿದಿದ್ದರು. ಇದಕ್ಕೆ ಒಂದು ದಾರಿಯನ್ನೂ ಅವರು ಹುಡುಕುತಿದ್ದರು. ಅದನ್ನು ಕಂಡು ಹಿಡಿದೊ ಏನೊ, ನೀಲಕಂಠಬಾಬುಗಳ ತಾಯಿ ಒಂದು ದಿನ ದೇವದಾಸನ ತಾಯಿಯ ಮುಂದೆ 'ದೇವದಾಸನಿಗೆ ನಮ್ಮ ಪಾರ್ವತಿಯಲ್ಲಿದ್ದಷ್ಟು ಸ್ನೇಹ ಇನ್ನಾರಲ್ಲಿಯೂ ಇಲ್ಲ ಈ ಪ್ರಪಂಚದಲ್ಲಿ !' ಎಂದಳು.

ದೇವದಾಸನ ತಾಯಿಯೂ ಇದಕ್ಕೆ ಒಪ್ಪಿಗೆಯನ್ನಿತ್ತಂತೆ 'ಹೌದಮ್ಮಾ, ಚಿಕ್ಕಂದಿನಿಂದಲೂ ಇಬ್ಬರೂ ಸೋದರ, ಸೋದರಿಯರಂತಿದ್ದಾರೆ.' ಎಂದರು.

'ಹೌದು, ದೇವದಾಸ ಕಲಕತ್ತೆಗೆ ಹೋದಾಗ ಪಾರ್ವತಿಗೆ ಎಂಟು ವರ್ಷ. ಅಂದಿನಿಂದಲೂ ಅವಳಿಗೆ ದೇವದಾಸನ ಚಿಂತೆಯೆ ಚಿಂತೆ. ಅದರಿಂದ ಕೊರಗಿ ಸೋತು ಹೋಗಿದ್ದಾಳೆ. ದೇವದಾಸನಿಂದ ಪತ್ರ ಬಂದರೆ ಸರಿ, ದಿನವೆಲ್ಲ ಅದನ್ನು ಓದುವುದರಲ್ಲಿಯೆ ಕಾಲ ಕಳೆಯುತ್ತಾಳೆ. ಅದು ನಿಮಗೂ ಗೊತ್ತಿದ್ದ ವಿಷಯ.'

ಈ ಮಾತಿನ ಅರ್ಥವನ್ನು ದೇವದಾಸನ ತಾಯಿ ಚೆನ್ನಾಗಿ ತಿಳಿದು ಕೊಂಡು ನಸುನಕ್ಕರು. ಅವರ ಆ ನಗೆಯಲ್ಲಿ ಎಷ್ಟೊಂದು ಪ್ರಚ್ಛನ್ನ ಉಪಹಾಸವಿತ್ತೆಂದು ನನಗೆ ತೋಚದು. ಆದರೆ ಅದರಲ್ಲಿ ವೇದನೆ ತುಂಬಿತ್ತು. ಅವರಿಗೆ ಆ ವಿಷಯವೆಲ್ಲವೂ ಗೊತ್ತಿತ್ತು. ಅಲ್ಲದೆ ಪಾರ್ವತಿಯ ಮೇಲೆ ಅವರ ಪ್ರೀತಿಯಿಲ್ಲವೆಂದೇನೂ ಅಲ್ಲ. ಆದರೆ ಪಾರ್ವತಿಯ ಮನೆತನ ಕನ್ಯೆಯರನ್ನು ಮಾರುವ ಮತ್ತು ಕೊಳ್ಳುವವರದಾಗಿದ್ದಿತು. ಅಲ್ಲದೆ ಪಾರ್ವತಿಯ ಮನೆಯೂ ತಮ್ಮ ಮನೆಯ ಪಕ್ಕದಲ್ಲಿಯೆ ಇದೆ. ಮನೆಗೆ ಹೊಂದಿಯೆ ನೆಂಟರ ಮನೆಯೆ ಛೀ.

'ಚಿಕ್ಕಮ್ಮ, ದ್ವಿಜದಾಸನ ಮದುವೆಯನ್ನು ಚಿಕ್ಕ ವಯಸ್ಸಿನಲ್ಲಿಯೆ ಮಾಡಿ, ಅವನ ಓದುಬರಹ ಹಾಳು ಮಾಡಿದಿರಿ ಎಂದು ಅವರು ನನಗೆ ಎಂದರು. ಇನ್ನೂ ಅಸರಂತ ಎನ್ನುತ್ತಾರೆ.'

ಈ ಮಾತುಗಳನ್ನು ಕೇಳಿ ಪಾರ್ವತಿಯ ಅಜ್ಜಿಯ ಮುಖ ಕಳೆ ಗುಂದಿತು. ಆದರೂ ಅವಳೆಂದಳು, 'ಪಾರ್ವತಿ ದೊಡ್ಡವಳಾಗಿರುವುದು ನಿಮಗೆ ಗೊತ್ತಿದ್ದ ವಿಷಯ. ಅವಳು ಚೆಲುವೆಯೂ ಅಹುದು. ನೀನು ಇದನ್ನು ನಾರಾಯಣನಿಗೆ ಹೇಳಿದರೆ. . . .'

'ನಾನು ಹೇಳಲಾರೆನಮ್ಮಾ. ಈ ಸಂಗತಿಯನ್ನು ನಾನು ಅವರ ಮುಂದೆ ತೆಗೆದರೆ ತೀರಿತು ನನ್ನ ಅವಸ್ಥೆ!'

ಮಾತುಗಳು ಇಲ್ಲಿಗೇ ಮುಗಿದುವು. ಆದರೆ ಅವು ಇಲ್ಲಿಗೇ ಗುಪ್ತ ವಾಗಿ ಉಳಿಯಲಿಲ್ಲ. ಅವರು ಹೆಂಗುಸರಲ್ಲವೇ? ಹೆಂಗುಸರಲ್ಲಿ ಮಾತು ಗಳು ಗುಪ್ತವಾಗಿ ಹೇಗೆ ಉಳಿದಾವು? ಒಂದು ದಿನ ಗಂಡ ಊಟಕ್ಕೆ ಕುಳಿತಾಗ ದೇವದಾಸನ ತಾಯಿ 'ಪಾರ್ವತಿಯ ಅಜ್ಜಿ ಈ ದಿನ ಅವಳ ವಿವಾಹದ ಪ್ರಸ್ತಾಪ ತೆಗೆದಿದ್ದರು.' ಎಂದರು.

'ಹೌದು, ಪಾರ್ವತಿ ವಿವಾಹ ಯೋಗ್ಯಳಾಗಿದ್ದಾಳೆ. ಈಗಲೇ ಆಕೆಯ ಲಗ್ನ ಮಾಡಿಬಿಡುವುದು ಒಳಿತು.' ಎಂದರು ನಾರಾಯಣ ಬಾಬುಗಳು.

'ಇದನ್ನೆ ಅವರೂ ಹೇಳುತಿದ್ದರು. ದೇವದಾಸನೊಡನೆ ಪಾರ್ವ ತಿಯ. . . .'

ನಾರಾಯಣಬಾಬುಗಳು ಹುಬ್ಬುಗಂಟಿಕ್ಕಿ 'ಏನು ಹೇಳಿದೆ?' ಎಂದು ಕೇಳಿದರು.

'ನಾನು ಏನು ಹೇಳಲಿ? ಹೌದು ಇಬ್ಬರಲ್ಲಿಯೂ ಅತ್ಯಂತ ಸ್ನೇಹ ವಿದೆ. ಇದ್ದರೇನಾಯಿತು? ಕನ್ಯೆಯನ್ನು ಮಾರುವ, ಕೊಳ್ಳುವ ಮನೆ ತನದ ಕನ್ಯೆಯನ್ನು ಮಾಡಿಕೊಳ್ಳುವುದೆ? ಇದಲ್ಲದೆ ಮನೆಯು ಪಕ್ಕ ದಲ್ಲಿಯೆ ಇರುತ್ತೀರಿ. ನನಗಂತೂ ಸರಿಯೆನಿಸುವುದಿಲ್ಲ.' ಎಂದೆ.

'ಚೆನ್ನಾಗಿಯೆ ಹೇಳಿದೆ. ಅವರಿಂದ ಕನ್ಯೆ ತಂದು ಸಮಾಜದ ನಗೆಗೆ ಈಡಾಗಲೆ? ಈ ಮಾತುಗಳಿಗೆ ನೀನು ಕಿವಿಗೊಡಬೇಡ. ಇದರಂತೆಯೆ ಹೇಳಿಬಿಡು ಮತ್ತೆ ಕೇಳಿದರೆ'

ಗೃಹಿಣಿ ನೀರಸವಾದ ನಗುವನ್ನು ಬೀರಿ 'ನಾನು ಹಾಗೆಯೇ ಹೇಳುತ್ತೇನೆ. ನೀವೂ ಮರೆಯಬೇಡಿ.' ಎಂದರು.

ನಾರಾಯಣಬಾಬುಗಳು ದೊಡ್ಡದೊಂದು ತುತ್ತು ಬಾಯಿಗೆ ಒಯ್ಯುತ್ತ 'ಹೀಗೆ ಆಗುವಹಾಗಿದ್ದರೆ ನಮ್ಮ ದೊಡ್ಡ ಜಮೀನುದಾರಿ ಗಳಿಗೆಯಲ್ಲಿ ಹಾಳಾಗುತಿದ್ದಿತು.' ಎಂದರು ಗಂಭೀರವಾಗಿ.

ನಾರಾಯಣಬಾಬುಗಳ ಜಮೀನುದಾರಿ ಚಿರಕಾಲವಿರಲಿ! ಅದಕ್ಕೆ ಯಾರದೂ ಅಡ್ಡಿಯಿಲ್ಲ. ಆದರೆ ಪಾರ್ವತಿಯ ಕಳವಳದ ಕತೆಯನ್ನು ಹೇಳಬೇಕಾಗಿದೆ.

ವಿವಾಹದ ಈ ನುಡಿಗಳು ನೀಲಕಂಠಬಾಬುಗಳ ಕಿವಿಗೆ ಬಿದ್ದುವು. ಅವರು ತಾಯಿಯನ್ನು ಕರೆದು 'ಅಮ್ಮಾ, ನೀನೇಕೆ ಈ ಮಾತು ಆಡಲು ಹೋಗಿದ್ದೆ?' ಎಂದು ಸಿಟ್ಟು ಮಾಡಿದರು.

ತಾಯಿ ಸುಮ್ಮನಿದ್ದರು. ಪುನಃ ಅವರು 'ಮಗಳ ಮದುವೆಗಾಗಿ ನಾವು ಯಾರ ಕಾಲನ್ನೂ ಹಿಡಿಯಲು ಅಲೆಯಬೇಕಾದುದಿಲ್ಲ. ನಮ್ಮ ಪಾದಕ್ಕೇ ನಮಸ್ಕಾರ ಮಾಡುತ್ತ ಬರುತ್ತಾರೆ. ನಮ್ಮ ಪಾರೂ ಕುರೂಪಿ ಯೇನೂ ಅಲ್ಲ. ಒಂದು ವಾರದೊಳಗಾಗಿ ನಿಶ್ಚಯಮಾಡಿ ಮದುವೆ ಮಾಡಿಬಿಡುತ್ತೇನೆ.' ಎಂದರು.

ಆದರೆ ಯಾವಳ ಸಲುವಾಗಿ ಅವರು ಇಂತಹ ಪ್ರತಿಜ್ಞೆ ಮಾಡಿದರೊ ಅವಳ ತಲೆಯ ಮೇಲೆ ಮಾತ್ರ ಸಿಡಿಲೆರಗಿದಂತಾಯಿತು. ದೇವದಾಸನ ಮೇಲೆ ತನ್ನದೊಂದು ಬಗೆಯ ಅಧಿಕಾರವಿದೆಯೆಂದು ಪಾರ್ವತಿ ಬಾಲ್ಯ ದಿಂದಲೂ ತಿಳಿದುಕೊಂಡಿದ್ದಳು. ಈ ಅಧಿಕಾರವನ್ನು ಅವಳಿಗೆ ಯಾರಾ ದರೂ ಕೊಟ್ಟಿದ್ದರೆಂದಲ್ಲ. ಮೊದಲು ಅವಳಿಗೇ ಚೆನ್ನಾಗಿ ತಿಳಿದಿರಲಿಲ್ಲ. ಅವಳ ಅಶಾಂತ ಮನವು ಅವಳಿಗೆ ತಿಳಿಯದಂತೆಯೆ, ಮೌನವಾಗಿಯೆ, ಅತ್ಯಂತ ದೃಢತೆಯಿಂದ ಈ ಅಧಿಕಾರವನ್ನು ಸ್ಥಾಪಿಸಿಕೊಂಡಿತ್ತು.

ಅದರದೊಂದು ಬಾಹ್ಯ ಆಕೃತಿ ಇಷ್ಟು ದಿನ ಕಣ್ಣಿಗೆ ಬಿದ್ದಿರದಿದ್ದರೂ ಇಂದು ಆ ಅಧಿಕಾರ ನಷ್ಟವಾಯಿತೆಂದು ಕೇಳಿ, ಅವಳ ಹೃದಯದಲ್ಲೆಲ್ಲ ಕೋಲಾಹಲವನ್ನೆಬ್ಬಿಸುವ ಭಯಂಕರ ಬಿರುಗಾಳಿ ಬೀಸತೊಡಗಿತು.

ದೇವದಾಸನ ವಿಷಯವಾಗಿ ಮಾತ್ರ ಹೀಗೆ ಹೇಳಲು ಬರುವಂತಿಲ್ಲ. ಬಾಲ್ಯದಲ್ಲಿ ಪಾರ್ವತಿಯ ಮೇಲೆ ತನಗೆ ದೊರೆತ 'ಅಧಿಕಾರ'ವನ್ನು ಚೆನ್ನಾಗಿಯೆ ಉಪಯೋಗಿಸಿದ. ಆದರೆ ಕಲಕತ್ತೆಗೆ ಹೋದನಂತರ ಕೆಲಸ ಬೊಗಸೆಗಳಲ್ಲಿ, ಆಟನೋಟಗಳಲ್ಲಿ, ಅವನು ಪಾರ್ವತಿಯನ್ನು ಮರೆತು ಬಿಟ್ಟಿದ್ದನೆಂದೇ ಹೇಳಬಹುದು. ಒಂದೇ ಒಂದು ತೆರನಾಗಿ ಸಾಗಿದ ಹಳ್ಳಿಯ ಜೀವನಕ್ರಮದಲ್ಲಿ ಪಾರ್ವತಿ ತನ್ನದೇ ಧ್ಯಾನಮಾಡುತ್ತ ಕುಳಿತಿರುವ ಳೆಂಬುದು ಅವನ ಮನಸ್ಸಿಗೆ ತಿಳಿಯಲಿಲ್ಲ. ಇಷ್ಟೇ ಅಲ್ಲ, ಬಾಲ್ಯದಿಂದಲೂ ಯಾರನ್ನು ತನ್ನವಳೆಂದು ತಿಳಿದಿದ್ದನೊ, ಯಾವಳಿಂದ ತನ್ನ ನ್ಯಾಯವಾದ ಮತ್ತು ಅನ್ಯಾಯವಾದ ಹಟಗಳನ್ನು ಪೂರೈಸಿಕೊಂಡಿದ್ದನೊ ಅವಳಿಂದ ಯೌವನದ ಮೊದಲ ಮೆಟ್ಟಲಿನ ಮೇಲೆ ಕಾಲಿಡುತ್ತಲೆ ದೂರ ಸರಿಯ ಬೇಕಾಗುವುದೆಂದು ಅವನಿಗೆ ಕನಸಿನಲ್ಲಿಯೂ ಗೊತ್ತಾಗಲಿಲ್ಲ.

ಆದರೆ ಆಗ ವಿವಾಹದ ಕಲ್ಪನೆ ಯಾರಿಗಿದ್ದಿತು ? ಈ ಕೈಶೋರದ ಬಂಧನವು ವಿವಾಹವಲ್ಲದೆ ಮತ್ತೆ ಯಾವರೀತಿಯಿಂದಲೂ ಚಿರಸ್ಥಾಯಿ ಯಾಗದೆಂಬುದು ಯಾರಿಗೆ ತಿಳಿದಿತ್ತು ? ಆದುದರಿಂದಲೇ ದೇವದಾಸನನ್ನು ಮದುವೆಯಾಗುವುದು ಸಾಧ್ಯವಿಲ್ಲವೆಂಬುದನ್ನು ಕೇಳಿದ ಕೂಡಲೇ ತನ್ನ ಹೃದಯದಲ್ಲಿಯ ಆಶೆ—ಆಕಾಂಕ್ಷೆಗಳ ಗೋಪುರ ಕುಸಿದು ನೆಲಸಮವಾಗು ತ್ತಿರುವಂತೆ ಪಾರ್ವತಿಗೆನಿಸಿತು.

ಈಗ ದೇವದಾಸನ ಸಮಯ ಮುಂಜಾನೆ ಓದುಬರಹದಲ್ಲಿ, ಮಧ್ಯಾಹ್ನ ಬಿಸಿಲು ಹೆಚ್ಚಾಗಿರುವುದರಿಂದ ಮನೆಯೊಳಗೆ ವಿಶ್ರಾಂತಿಯಲ್ಲಿ. ಕಳೆದುಹೋಗುತ್ತಿದೆ. ಸಂಜೆಯಲ್ಲಿ ವಾಯುವಿಹಾರಕ್ಕಾಗಿ ಹೊರಗೆ ಹೋಗುತ್ತಾನೆ. ಆಗ ಅವನು ಒಂದು ನಯವಾದ ಪಂಜೆಯನ್ನುಟ್ಟು, ಉದ್ದವಾದ ಶರ್ಟು ಧರಿಸಿ, ನಯವಾದ ಚಪ್ಪಲು ಮೆಟ್ಟಿ, ಕೈಯಲ್ಲೊಂದು ಬೆತ್ತಹಿಡಿದಿರುತ್ತಾನೆ. ಚಕ್ರವರ್ತಿಯವರ ಮನೆಯ ಮುಂದಿನಿಂದಲೇ

ತಿರುಗ್ಹಾಡಲು ಹೋಗುವುದು. ಪಾರ್ವತಿ ತನ್ನ ಮನೆಯ ಉಪ್ಪರಿಗೆಯ ಮೇಲೆ ನಿಂತು ಅವನು ಹೋಗುವುದನ್ನು ಕಂಬನಿದುಂಬಿದ ಕಣ್ಣುಗಳಿಂದ ನೋಡುತ್ತಾಳೆ. ಅವಳ ಮನಸ್ಸಿನಲ್ಲಿ ಎಷ್ಟೋ ವಿಚಾರಗಳು ಏಳುತ್ತಿವೆ. 'ಇಬ್ಬರೂ ದೊಡ್ಡವರಾಗಿದ್ದೇವೆ. ಬಹಳ ದಿನಗಳಿಂದ ಇಬ್ಬರೂ ಬೇರೆ ಬೇರೆಯಾಗಿರುವುದರಿಂದ ಇಬ್ಬರಿಗೂ ಒಬ್ಬರನ್ನೊಬ್ಬರು ಬೆಟ್ಟಿಯಾಗಲು ನಾಚಿಕೆಯಾಗುತ್ತಿದೆ. ಅವರು ಬಹಳ ದಿನ ಪರಊರಿನಲ್ಲಿದ್ದುದರಿಂದ ಬೆಟ್ಟಿಯಾಗಲು ನಾಚುತ್ತಿರಬಹುದು. ಅಂತೆಯೆ ಆ ದಿನ ಮನೆಗೆ ಬಂದರೂ ಬೆಟ್ಟಿಯಾಗದೆ ಹಾಗೆಯೆ ಹೋಗಿಬಿಟ್ಟರು. ಮಾತನ್ನೂ ಆಡಲಿಲ್ಲ.'

ಇದೇ ಪ್ರಕಾರವಾಗಿ ದೇವದಾಸನ ಮನದಲ್ಲೂ ವಿಚಾರತರಂಗ ಗಳೇಳುವುವು. ಪಾರ್ವತಿಯನ್ನು ಆಗಾಗ ಕಂಡು ಅವಳೊಂದಿಗೆ ಮಾತ ನಾಡಬೇಕೆಂದೂ ಅವನು ಬಯಸುತಿದ್ದ. ಆದರೆ ಬಯಕೆಯೊಡನೆಯೆ 'ಹೀಗೆ ಮಾಡುವುದು ನನಗೆ ಶೋಭಿಸುವುದೆ?' ಎಂಬ ಪ್ರಶ್ನೆಯೂ ಅವನ ಮನದಲ್ಲೇಳುತಿತ್ತು.

ಈ ಹಳ್ಳಿಯಲ್ಲಿ ಕಲಕತ್ತೆಯಂತೆ ಆ ಮೋದ–ಪ್ರಮೋದಗಳಿಲ್ಲ; ನಾಟಕ–ಸಿನೇಮಾಗಳಿಲ್ಲ; ಕ್ಲಬ್ಬು–ಪಾರ್ಕುಗಳಿಲ್ಲ. ಗಾಯನ–ವಾದನ ಗಳಿಲ್ಲ. ಆದುದರಿಂದ ದೇವದಾಸನಿಗೆ ಈಗ ಅವನ ಬಾಲ್ಯಜೀವನದ ದೃಶ್ಯ ಗಳು ನೆನಪಿಗೆ ಬರುತ್ತಿವೆ. 'ಈ ಪಾರ್ವತಿ ಅದೇ ಪಾರ್ವತಿಯೆ?' ಎಂಬ ಪ್ರಶ್ನೆಯೂ ಅವನ ಮನದಲ್ಲೇಳುತಿದ್ದಿತು. ಚಕ್ರವರ್ತಿಯವರ ಮನೆಯ ಕಡೆಗೆ ಈಗ ದೇವದಾಸ ಹೆಚ್ಚಾಗಿ ಹೋಗುತ್ತಿದ್ದಿಲ್ಲ. ಒಂದೊಂದು ದಿನ ತನ್ನ ಮನೆಯ ಅಂಗಳದಲ್ಲಿಯೆ ನಿಂತು 'ಚಿಕ್ಕಮ್ಮಾ' ಎಂದು ಕೂಗಿ 'ಏನು ಮಾಡುತಿದ್ದಿಯಾ?' ಎಂದು ಕೇಳುತಿದ್ದ.

'ಬಾ, ಇಲ್ಲಿ ಕುಳಿತುಕೊ.' ಎಂದವರು ಹೇಳುತಿದ್ದರು.

'ಇರಲಿಬಿಡು ಚಿಕ್ಕಮ್ಮ, ಈಗ ಸ್ವಲ್ಪ ತಿರುಗಾಡಿಬರಲು ಹೊರಟಿ ದ್ದೇನೆ.' ಎಂದು ದೇವದಾಸ ಹೇಳಿಬಿಡುತ್ತಿದ್ದ.

ಒಂದೊಂದು ದಿನ ಪಾರ್ವತಿ ಮನೆಯ ಅಟ್ಟದಮೇಲಿರುತಿದ್ದಳು. ಒಮ್ಮೊಮ್ಮೆ ಅವನಿಗೆ ದಾರಿಯಲ್ಲಿ ಎದುರಾಗುತಿದ್ದಳು. ದೇವದಾಸ

ಚಿಕ್ಕಮ್ಮನ ಜೊತೆಗೆ ಮಾತನಾಡುವಾಗ ಪಾರ್ವತಿ ಸ್ವಲ್ಪ ದೂರ ಸರಿದು ಹೋಗುತ್ತಿದ್ದಳು. ಸಾಯಂಕಾಲವಾಗುತ್ತಲೆ ದೀಪಹಚ್ಚುವ ರೂಢಿ ದೇವದಾಸನ ಮನೆಯಲ್ಲಿ. ಆಗ ಕಿಡಿಕಿಯೊಳಗಿಂದ ಪಾರ್ವತಿ ಅವನ ಮನೆಯ ಕಡೆಗೇ ನೋಡುತಿದ್ದಳು. ದೀಪದ ಪ್ರಕಾಶದ ಹೊರತು ಅವಳಿಗೆ ಮತ್ತೇನೂ ಕಾಣಿಸುತ್ತಿರಲಿಲ್ಲ. ಪಾರ್ವತಿ ಸ್ವಾಭಿಮಾನಿ. ಆದುದರಿಂದ ತಾನು ಪಡುತ್ತಿರುವ ವ್ಯಥೆ ಬೇರೆಯವರಿಗೆ ತಿಳಿಯಗೊಡುತ್ತಿರಲಿಲ್ಲ. ಅನ್ಯರಲ್ಲಿ ದುಃಖವನ್ನು ಹೇಳಿಕೊಳ್ಳುವುದರಿಂದ ಪ್ರಯೋಜನವಾದರೂ ಏನು? ಸಹಾನುಭೂತಿಯನ್ನು ಪಡೆದರೆ ಸಮಾಧಾನವಾಗುವುದೆ? ಇನ್ನು ತಿರಸ್ಕಾರಪಡೆದರೆ. . . . ? ತಿರಸ್ಕೃತರಾಗಿರುವುದಕ್ಕಿಂತ ಸಾಯುವುದೆ ಮೇಲು.

ಕಳೆದ ವರ್ಷವೇ ಮನೋರಮೆಯ ಮದುವೆಯಾಯಿತು. ಅವಳು ಇನ್ನೂ ಅತ್ತೆಯ ಮನೆಗೆ ಹೋಗಿಲ್ಲ. ಆಗಾಗ್ಗೆ ಅವಳು ಪಾರ್ವತಿಯ ಮನೆಗೆ ಬಂದು ಹೋಗುತಿದ್ದಳು. ಮೊದಲು ಇಬ್ಬರೂ ಗೆಳತಿಯರಲ್ಲಿ ಮುಚ್ಚುಮರೆ ಇರುತ್ತಿರಲಿಲ್ಲ. ಅದೆಷ್ಟೊ ಗುಟ್ಟಿನ ಮಾತುಗಳನ್ನಾಡಿಕೊಳ್ಳುತಿದ್ದರು. ಅವು ಒಂದೂ ಗುಪ್ತವಾಗಿ ಉಳಿಯುತ್ತಿರಲಿಲ್ಲ. ಆದರೆ ಈಗ ಅವರು ಆಗಿನಂತಿಲ್ಲ. ಪಾರ್ವತಿ ಈಗ ಗುಟ್ಟಿನ ಮಾತುಗಳನ್ನಾಡಲು ಅವಕಾಶವನ್ನೆ ಕೊಡುವುದಿಲ್ಲ. ಮದುವೆಯ ಗುಟ್ಟಿನ ಮಾತುಗಳು ಹೊರಟಾಗ ಸುಮ್ಮನಿರುವಳು; ಇಲ್ಲವೆ ಅವನ್ನು ಚನ್ನಾಗಿ ಖಂಡಿಸಿ ಮಾತಿನ ಓಘವನ್ನು ತಿರುಗಿಸಿ ಬಿಡುವಳು.

ವರ ಹುಡುಕಲು ಹೋಗಿದ್ದರು ಪಾರ್ವತಿಯ ತಂದೆಯವರು. ವರನನ್ನು ನಿಶ್ಚಯಿಸಿಕೊಂಡೆ ಅವರು ನಿನ್ನೆ ಬಂದರು. ಇಪ್ಪತ್ತೈದು ಹರದಾರಿ ದೂರದಲ್ಲಿರುವ ಹಾಥಿಪೋತಾ ಗ್ರಾಮದ ಜಮೀನುದಾರರಾದ ಭುವನ ಚೌಧುರಿಯವರೊಂದಿಗೆ ಪಾರ್ವತಿಯ ವಿವಾಹ ನಿಶ್ಚಯವಾಯಿತು. ಜಮೀನುದಾರರ ಆರ್ಥಿಕಸ್ಥಿತಿ ಚೆನ್ನಾಗಿದೆ. ಆದರೆ ಅವರ ವಯಸ್ಸು ಮಾತ್ರ ನಾಲ್ವತ್ತಕ್ಕಿಂತ ಕಡಿಮೆ ಇರಲಿಲ್ಲ. ಕಳೆದ ವರ್ಷ ಅವರ ಮೊದಲಿನ ಹೆಂಡತಿ ಕಾಲವಾದರು. ಅದರಿಂದ ಅವರು ಈಗ ಎರಡನೆ

ಮದುವೆ ಮಾಡಿಕೊಳ್ಳುತ್ತಿದ್ದಾರೆ. ಈ ಸುದ್ದಿಯಿಂದ ಪಾರ್ವತಿಯು ಬಳಗಕ್ಕೇನೂ ಸಂತೋಷವಾಗಲಿಲ್ಲ; ದುಃಖವೇ ಆಯಿತು. ಆದರೂ ಜಮೀನುದಾರರಾದ ಭುವನ ಚೌಧುರಿಯವರಿಂದ ಮೂರು ನಾಲ್ಕು ಸಾವಿರ ರೂಪಾಯಿಗಳು ಕನ್ಯಾಶುಲ್ಕವಾಗಿ ಸಿಕ್ಕುವಂತಿದ್ದುವು. ಅದರಿಂದಲೇ ಹೆಂಗುಸರೂ ಸುಮ್ಮನಾಗಿ ಮದುವೆಗೆ ಅರ್ಧ ಸಮ್ಮತಿ ಕೊಟ್ಟುಬಿಟ್ಟರು.

ಒಂದು ದಿನ ದೇವದಾಸ ತನ್ನ ಮನೆಯಲ್ಲಿ ಊಟಕ್ಕೆ ಕುಳಿತಿದ್ದಾನೆ. ಅವನ ತಾಯಿಯವರೇ ಅವನಿಗೆ ಬಡಿಸುತಿದ್ದಾರೆ. ಅವರು 'ಪಾರ್ವತಿಗೆ ಮದುವೆ.' ಎಂದರು.

ದೇವದಾಸ ಕೇಳಿದ, 'ಎಂದು?'

'ಬಹುಶಃ ಇದೇ ತಿಂಗಳಲ್ಲಾಗಬಹುದು, ನಿನ್ನೆ ವರನೇ ಬಂದು ನೋಡಿ ಹೋಗಿದ್ದಾನೆ.'

'ನನಗೆ ಇದಾವುದೂ ಗೊತ್ತೇ ಇಲ್ಲವಲ್ಲ!' ಎಂದು ವಿಸ್ಮಯದಿಂದ ದೇವದಾಸನೆಂದ.

'ನಿನಗೆ ಗೊತ್ತಾಗುವುದು ಹೇಗೆ? ವರ ಕನ್ಯಾಶುಲ್ಕ ಕೊಡುತ್ತಾನೆ. ಅವನಿಗೆ ವಯಸ್ಸೂ ಆಗಿದೆ. ಆದರೆ ಶ್ರೀಮಂತ. ಇನ್ನು ಪಾರೂ, ಉಂಡು—ತಿಂದು, ಉಟ್ಟು—ತೊಟ್ಟು, ಸುಖವಾಗಿರುವಳು.'

ದೇವದಾಸ ಮುಖ ಕೆಳಗೆ ಮಾಡಿಕೊಂಡು ಊಟ ಮಾಡತೊಡಗಿದ. ಅವನ ತಾಯಿ ಪುನಃ ಹೇಳತೊಡಗಿದರು. 'ನಿನಗೇ ಪಾರ್ವತಿಯನ್ನು ಕೊಡಬೇಕೆಂದು ಅವರೆಲ್ಲರ ಇಚ್ಛೆಯಿತ್ತು.'

ದೇವದಾಸ ಮುಖವೆತ್ತಿ ಕೇಳಿದ, 'ಹಾಗಾದರೆ?'

'ಛಿ! ಕನ್ಯೆಯನ್ನು ಮಾರುವವರು ಅವರು. ಆ ಕೀಳುಮನೆಯಿಂದ ನಿನಗೆ ಹೆಣ್ಣು ತರುವುದೆ? ಅಲ್ಲದೆ ಅವರ ಮನೆಯೂ ನಮ್ಮ ಮನೆಯ ಪಕ್ಕದಲ್ಲಿಯೆ ಇದೆ. ಛೆ ಛೆ!' ಎಂದು ದೇವದಾಸನ ತಾಯಿಯವರು ಮೂಗು ಮುರಿದರು. ಅದನ್ನು ದೇವದಾಸ ನೋಡಿದ. ಸ್ವಲ್ಪಹೊತ್ತು ಸುಮ್ಮನಿದ್ದು ಮತ್ತೆ ಅವನ ತಾಯಿ ಹೇಳಲಾರಂಭಿಸಿದರು. 'ಈ ವಿಷಯವಾಗಿ ನಿನ್ನ ತಂದೆಯವರನ್ನೂ ವಿಚಾರಿಸಿದೆ.'

'ಏನೆಂದರು ?' ಇಷ್ಟರ ಹೊರತು ದೇವದಾಸ ಮತ್ತೇನೂ ಕೇಳಲಿಲ್ಲ.

ಅದಕ್ಕೆ ಅವರ ತಾಯಿ 'ಅವರೇನು ಎನ್ನುವುದು ? 'ನಮ್ಮ ಮನೆತನವನ್ನು ನಗೆಗೆ ಈಡುಮಾಡುವುದಿಲ್ಲ, ಆ ಮನೆಯ ಕನ್ಯೆ ತೆಗೆದುಕೊಂಡು,' ಎಂದುಬಿಟ್ಟರು.' ಎಂದು ಹೇಳಿದರು.

ದೇವದಾಸ ಮಾತನಾಡಲಿಲ್ಲ.

ಅದೇ ದಿನ ಮಧ್ಯಾಹ್ನದಲ್ಲಿ ಪಾರ್ವತಿಯೂ ಮನೋರಮೆಯೂ ಮಾತನಾಡಿದರು. ಪಾರ್ವತಿಯ ಕಣ್ಣಿನಲ್ಲಿ ನೀರು ಬಂದುದನ್ನು ನೋಡಿ ಮನೋರಮೆಯ ಕಣ್ಣುಗಳೂ ಹನಿಗೂಡಿದುವು. ಅವನ್ನು ಒರೆಯಿಸಿ 'ಇದಕ್ಕೆ ಉಪಾಯವೇನು ?' ಎಂದು ಕೇಳಿದಳು ಮನೋರಮಾ.

ಪಾರ್ವತಿ ಕಣ್ಣೀರು ಒರೆಸಿಕೊಂಡು 'ನೀನು ವರನನ್ನು ಒಪ್ಪಿ ಮದುವೆಯಾದೆಯಾ ?' ಎಂದು ಮನೋರಮೆಯನ್ನು ಕೇಳಿದಳು.

'ನನ್ನ ಮಾತೆ ಬೇರೆ. ನನಗೆ ಒಪ್ಪಿಗೆಯೂ ಇರಲಿಲ್ಲ. ಬೇಡವಾಗಿಯೂ ಇರಲಿಲ್ಲ. ಆದುದರಿಂದ ನನಗೆ ಯಾವ ಕಷ್ಟವೂ ಇಲ್ಲ. ಆದರೆ ನೀನು ಮಾತ್ರ ನಿನ್ನ ಕಾಲಮೇಲೆ ಕಲ್ಲು ಚೆಲ್ಲಿಕೊಳ್ಳುತ್ತಿರುವೆ.'

ಪಾರ್ವತಿ ಈ ಮಾತಿಗೆ ಉತ್ತರ ಕೊಡಲಿಲ್ಲ. ಮನದಲ್ಲಿಯೆ ಯೋಚಿಸತೊಡಗಿದಳು.

ಮನೋರಮೆ ನಸುನಕ್ಕು 'ವರನ ವಯಸ್ಸೇನು ?' ಎಂದಳು.

'ಯಾರ ವರನ ವಯಸ್ಸು ?'

'ನಿನ್ನ ವರನದು.'

'ಹತ್ತೊಂಬತ್ತು ಇರಬಹುದು.' ಎಂದು ಪಾರ್ವತಿ ನಕ್ಕು ಹೇಳಿದಳು.

ಮನೋರಮೆ ವಿಸ್ಮಯದಿಂದ 'ಇದೇನು ನಾನು ನಾಲ್ವತ್ತೆಂದು ಕೇಳಿದ್ದೆನಲ್ಲ ?' ಎಂದಳು.

ಮತ್ತೆ ಪಾರ್ವತಿ ನಕ್ಕು ಹೇಳಿದಳು, 'ಎಷ್ಟೋ ವರಗಳ ವಯಸ್ಸು ನಾಲ್ವತ್ತೂ ಇರುತ್ತದೆ. ಆದರೆ ಎಲ್ಲರ ವಯಸ್ಸಿನ ದಸ್ತೈವಜು ನನ್ನಲ್ಲಿಲ್ಲ.

ನನ್ನ ವರನ ವಯಸ್ಸು ಮಾತ್ರ ಹದಿನೆಂಟು ಹತ್ತೊಂಬತ್ತು. ಹೆಚ್ಚೆಂದರೆ ಇಪ್ಪತ್ತೊಂದು ನನಗೆ ಗೊತ್ತಿದೆ.'

'ಅವರ ಹೆಸರೇನು?' ಎಂದು ಪಾರ್ವತಿಯ ಮುಖದ ಕಡೆಗೆ ನೋಡಿ ಮನೋರಮಾ ಕೇಳಿದಳು.

'ನಿನಗೆ ಗೊತ್ತಿದೆ.'

'ಇಲ್ಲ, ನನಗೆ ಗೊತ್ತಿಲ್ಲ.'

'ಹಾಗಾದರೆ ಕೇಳು, ಹೇಳಿಯೆ ಬಿಡುತ್ತೇನೆ.' ಎಂದು ಗಂಭೀರ ವಾಗಿ, ನಸುನಗುತ್ತ ಮನೋರಮೆಯ ಕಿವಿಯಲ್ಲಿ ಮೆಲ್ಲಗೆ ಹೇಳಿದಳು, 'ದೇವದಾಸ.'

ಮನೋರಮಾ ಬೆಚ್ಚಿದಳು. ಬಳಿಕ ಪಾರ್ವತಿಯನ್ನು ತಟ್ಟಿ 'ತಮಾಷೆ ಮಾಡುತ್ತೀಯೇನೇ? ನಿಜವಾದ ಹೆಸರು ಹೇಳು' ಎಂದಳು.

'ಅದೇ ನಿಜವಾದ ಹೆಸರು.'

'ದೇವದಾಸನೆಂದು ಅವರ ಹೆಸರಿದ್ದರೆ ಇಷ್ಟು ಅಳುವುದೇಕೆ?'

ಪಾರ್ವತಿಯ ಮುಖ ಸ್ವಲ್ಪ ಮ್ಲಾನವಾಯಿತು. ಸ್ವಲ್ಪ ಹೊತ್ತಿನ ಮೇಲೆ 'ಸರಿ. ಇನ್ನು ನಾನು ಅಳುವುದಿಲ್ಲ.' ಎಂದಳು.

'ಪಾರೂ!'

'ಏನು?'

'ಎಲ್ಲವನ್ನೂ ಬಿಚ್ಚಿ ಹೇಳುವುದಿಲ್ಲವೇಕೆ? ನನಗೆ ಸ್ಪಷ್ಟವಾಗಿ ತಿಳಿಯದಾಗಿದೆ.'

'ಹೇಳಬೇಕಾದುದನ್ನೆಲ್ಲ ಹೇಳಿಯೆಬಿಟ್ಟಿದ್ದೇನೆ.'

'ಆದರೆ ಯಾವುದೂ ತಿಳಿಯುತ್ತಿಲ್ಲ.'

'ತಿಳಿಯುತ್ತಿರಲಿಕ್ಕಿಲ್ಲ.' ಎಂದು ಪಾರ್ವತಿ ತನ್ನ ಮುಖ ಬೇರೆ ಕಡೆಗೆ ತಿರುಗಿಸಿದಳು.

ಪಾರ್ವತಿ ಬಿಚ್ಚಿ ಹೇಳುತ್ತಿಲ್ಲ. ಬಚ್ಚಿಡಲು ಪ್ರಯತ್ನಿಸುತ್ತಾಳೆಂದು ಮನೋರಮೆಗೆ ಗೊತ್ತಾಯಿತು. ಅದರಿಂದ ಅವಳಿಗೆ ದುಃಖವೂ

ಆಯಿತು. ಅವಳೆಂದಳು 'ಪಾರೂ, ನಿನಗೆ ದುಃಖವಾದರೆ ನನಗೆ ದುಃಖ. ನಿನಗೆ ಸುಖವಾದರೆ ನನಗೆ ಸುಖ. ನೀನು ಸದಾ ಸುಖಿಯಾಗಬೇಕೆಂದೆ ನನ್ನ ಆಂತರಿಕ ಅಭಿಲಾಷೆ. ಯಾರಿಗೂ ಹೇಳಬಾರದೆಂದು ಇಷ್ಟವಿದ್ದರೆ ಹೇಳಬೇಡ. ಆದರೆ ಈ ರೀತಿಯಾಗಿ ತಮಾಷೆ ಮಾಡುವದು ಒಳ್ಳೆಯ ದಲ್ಲ ನೋಡು.'

ಪಾರ್ವತಿ 'ತಮಾಷೆ ಮಾಡುವುದಿಲ್ಲ' ಎಂದು 'ಹೇಳುವುದನ್ನೆಲ್ಲ ಹೇಳಿಬಿಟ್ಟಿದ್ದೇನೆ. ನನ್ನ ಪತಿದೇವರ ಹೆಸರು **ದೇವದಾಸ** ಎಂದು. ಅವರ ವಯಸ್ಸು ೧೯–೨೦. ಇಷ್ಟು ನನಗೆ ಗೊತ್ತು. ಅದನ್ನೇ ನಿನಗೆ ಹೇಳಿದೆನು. ಅಕ್ಕಾ! ಇದರಲ್ಲಿ ಸುಳ್ಳು, ತಮಾಷೆ ಇಲ್ಲ.' ಎಂದು ಅಂತಃಕರಣ ಪೂರ್ವಕವಾಗಿ ಹೇಳಿದಳು.

'ಮತ್ತಾರೊಡನೆಯೊ ನಿನ್ನ ವಿವಾಹ ನಿಶ್ಚಯವಾಗಿದೆಯೆಂದು ಕೇಳಿದೆನಲ್ಲ?'

'ನಾನು ಕೇಳಿಲ್ಲ. ಆಗುವುದಿದ್ದರೆ ದೇವದಾಸನೊಡನೆಯೆ ನನ್ನ ವಿವಾಹವಾಗಬೇಕು. ಮತ್ತಾರೊಡನೆಯೂ ಆಗದು.'

ಮನೋರಮೆ ತಾನು ಕೇಳಿದ ಸುದ್ದಿಯನ್ನು ಹೇಳಿದಳು. ಅದಕ್ಕೆ ಪಾರ್ವತಿ 'ನಾನೂ ಅದನ್ನು ಕೇಳಿದ್ದೇನೆ' ಎಂದಳು.

'ಹಾಗಾದರೆ ದೇವದಾಸಬಾಬು ನಿನ್ನನ್ನು....'

'ಏನು ನನ್ನನ್ನು?'

'ಸ್ವಯಂವರವಾದಂತೆ ತೋರುತ್ತಿದೆ, ಅಲ್ಲವೇ? ರಹಸ್ಯವಾಗಿಯೆ ಎಲ್ಲವೂ ನಡೆದುಹೋಗಿದೆ, ನಿಶ್ಚಯವಾಗಿದೆ.'

'ನಿಶ್ಚಯವೇನೂ ಆಗಿಲ್ಲ.'

ಮನೋರಮೆ ವ್ಯಥೆಯಿಂದ 'ನೀನು ಏನು ಹೇಳುತ್ತೀಯೆಂಬುದೆ ತಿಳಿಯುವುದಿಲ್ಲ' ಎಂದಳು.

'ದೇವದಾಸರನ್ನು ಕೇಳಿ ಎಲ್ಲವನ್ನೂ ನಿನಗೆ ಹೇಳುವೆನು.'

'ಏನು ಹೇಳುವೆ? ಮದುವೆಯಾಗುವರೊ ಇಲ್ಲವೊ ಎಂಬುದನ್ನೆ?'

'ಹೌದು, ಅದನ್ನೆ.'

'ಏನು ಪಾರೂ! ನೀನೆಯೆ ಕೇಳುವೆಯಾ?'

'ಅದರಲ್ಲೇನು? ನಾನೇ ಕೇಳುವೆ.'

'ಏನು' ಎಂದು ಸ್ತಂಭಿತಳಾಗಿ ಕೇಳಿದಳು ಮನೋರಮೆ.

'ನಾನು ಕೇಳದಿದ್ದರೆ, ನನ್ನ ಪರವಾಗಿ ಯಾರು ಕೇಳುವರು?'

'ನಿನಗೆ ನಾಚಿಕೆಯಾಗುವುದಿಲ್ಲವೆ?'

'ನಾಚಿಕೆಯೇನು ಅದರಲ್ಲಿ? ನಿನ್ನೊಡನೆ ಹೇಳುವಾಗ ನಾಚಿದೆನೇನು?'

'ನಾನು ಹೆಂಗುಸು, ನಿನ್ನ ಗೆಳತಿ. ಆದರೆ ಅವರು ಗಂಡಸರು ಪಾರೂ!'

ಇದನ್ನು ಕೇಳಿ ಪಾರ್ವತಿ ನಕ್ಕುಬಿಟ್ಟಳು. 'ನೀನು ಗೆಳತಿ ಆದುದರಿಂದ ನೀನು ನನ್ನವಳು! ಆದರೆ ಅವರು ನನಗೆ ಪರಕೀಯರೇ? ನಿನ್ನ ಮುಂದೆ ಆಡಿದ ಮಾತನ್ನು ಅವರೆದುರು ಏಕೆ ಆಡಬಾರದು?' ಎಂದಳು.

ಮನೋರಮೆಗೆ ದಿಗ್ಭ್ರಮೆಯಾಯಿತು. ಪಾರ್ವತಿ ಮತ್ತೆ ಹೇಳಿದಳು, 'ಮನೋ, ನಿಮ್ಮಂತವರು ಮದುವೆ ಮಾಡಿಕೊಂಡು ಇಷ್ಟೆಲ್ಲ ಸೌಭಾಗ್ಯ ಚಿಹ್ನಗಳನ್ನು ಧರಿಸಿದುದು ವ್ಯರ್ಥ ನೋಡು. ಪತಿಯೆಂದರೆ ಏನೆಂಬುದು ನಿನಗೆ ಗೊತ್ತೇ ಇಲ್ಲ. ದೇವದಾಸ ನನ್ನ ಪತಿಯಾಗಿರದಿದ್ದರೆ, ನನ್ನ ಮಾನವನ್ನು ರಕ್ಷಿಸುವವರಾಗಿರದಿದ್ದರೆ, ನಾನು ಹೀಗೆ ಕೊರಗಿ ಸಾಯುತ್ತಿದ್ದಿಲ್ಲ. ಮನೋ, ಮನುಷ್ಯನು ಸಾಯಲಿಕ್ಕೇ ಸಿದ್ಧನಾದ ಮೇಲೆ ವಿಷವು ಸಿಹಿಯೊ ಕಹಿಯೊ ಎಂದು ನೋಡುವನೆಲ್ಲಿ? ಅವರೆದುರಿನಲ್ಲಿ ನನಗೇತರ ನಾಚಿಕೆ?'

ಮನೋರಮೆ ಪಾರ್ವತಿಯ ಮುಖವನ್ನು ನೋಡುತ್ತ ನಿಂತಳು. ಆ ಮೇಲೆ 'ಅವರನ್ನು ಏನೆಂದು ಕೇಳುವೆ? 'ನಿಮ್ಮ ಚರಣಗಳ ಬಳಿಯಲ್ಲಿ ಸ್ಥಳ ಕೊಡಿರಿ.' ಎಂದು ಕೇಳುವೆಯಲ್ಲವೆ?' ಎಂದು ಕೇಳಿದಳು.

'ಅಹುದು, ಅಹುದು. ಅದನ್ನೆ ಕೇಳುವೆ.'

'ಅವರು ಸ್ಥಳ ಕೊಡದಿದ್ದರೆ?'

'ಆಗ ಏನಾಗುವುದೊ?' ಎಂದು ಪಾರ್ವತಿ ಸ್ವಲ್ಪ ನಿದಾನಿಸಿ ನುಡಿದಳು.

ಮನೋರಮೆ ತಿರುಗಿ ಮನೆಗೆ ಬರುವಾಗ ಮನದಲ್ಲಿಯೆ 'ಧನ್ಯ ಈ ಸಾಹಸ! ಇವಳ ಮನೋಧೈರ್ಯ ಹೆಚ್ಚಿನದು! ಸತ್ತರೂ ನನ್ನ ಬಾಯಿಂದ ಇಂತಹ ಮಾತು ಬರವು!' ಎಂದುಕೊಂಡಳು.

ಮಾತು ನಿಜವಾಗಿದ್ದುವು. ಅಂತೆಯೆ ಪಾರ್ವತಿ ಎಂದಿದ್ದಳು, 'ಈ ಹುಡುಗೆಯರು ಮದುವೆಮಾಡಿಕೊಳ್ಳುವುದು ವ್ಯರ್ಥ'ವೆಂದು.

೬

ರಾತ್ರಿ ಒಂದು ಗಂಟೆಯಾಗಿರಬಹುದು. ಸ್ವಲ್ಪ ಮಸುಕಾದ ಬೆಳು ದಿಂಗಳು ಭೂಮಿಯನ್ನಪ್ಪಿಕೊಂಡಿದೆ. ಪಾರ್ವತಿ ತನ್ನನ್ನು ಚೆನ್ನಾಗಿ ಬಟ್ಟೆಯಿಂದ ಮುಚ್ಚಿಕೊಂಡು ಮೆಟ್ಟಿಲುಗಳನ್ನು ಇಳಿದು ಕೆಳಗೆ ಬಂದಳು. ಯಾರಾದರೂ ಎಚ್ಚರದಿಂದಿರುವರೊ ಹೇಗೆಂಬುದನ್ನು ತಿಳಿಯಲು ಚೆನ್ನಾಗಿ ಕಣ್ದೆರೆದು ನಾಲ್ಕೂ ಸಿಟ್ಟಿಗೆ ನೋಡಿದಳು. ಬಾಗಿಲು ತೆರೆದು ನಿರ್ಜನವಾದ ಬೀದಿಗೆ ಬಂದಳು. ಹಳ್ಳಿಯ ಬೀದಿ, ಶಾಂತವಾಗಿದ್ದಿತು. ಬೀದಿಯಲ್ಲಿ ಎಲ್ಲಿಯೂ, ಯಾರೂ ಸಿಕ್ಕುವಂತಿರಲಿಲ್ಲ. ನಿರಾತಂಕವಾಗಿ ಅವಳು ಜಮೀನುದಾರರ ಮನೆಯ ಮುಂದೆ ಬಂದು ನಿಂತಳು. ಜಮೀನುದಾರರ ಆಳುಮಗನಾದ ಮುದಕ ಕೃಷ್ಣಸಿಂಹ ತಲೆಬಾಗಿಲಿನ ಹೊಸ್ತಿಲ ಬಳಿ ಕುಳಿತು ತುಳಸೀದಾಸ ರಾಮಾಯಣವನ್ನು ಓದುತ್ತಿದ್ದ. ಪಾರ್ವತಿ ಒಳಗೆ ಹೋಗುವುದನ್ನು ನೋಡಿ ‘ಯಾರು?’ ಎಂದ. ‘ನಾನು’ ಎಂದಳು ಪಾರ್ವತಿ.

ಯಾವಳಾದರೂ ದಾಸಿ ಇರಬಹುದೆಂದು ಅವನು ಪಾರ್ವತಿಯನ್ನು ತಡೆಯದೆ—ಪ್ರಶ್ನಿಸದೆ—ಒಳಕ್ಕೆ ಹೋಗಲು ಬಿಟ್ಟು ಪುನಃ ಓದುವುದರಲ್ಲಿ ಮಗ್ನನಾದ. ಬೇಸಿಗೆಯ ದಿನಗಳಾಗಿದ್ದುದರಿಂದ ಒಳಅಂಗಳದಲ್ಲೂ ಆಳು ಮಕ್ಕಳು ಮಲಗಿಕೊಂಡಿದ್ದರು. ಅವರಲ್ಲಿ ಕೆಲವರು ಗಾಢನಿದ್ರೆಯಲ್ಲಿ ದ್ದರು; ಕೆಲವರು ಅರ್ಧ ನಿದ್ರೆಯಲ್ಲಿದ್ದರು. ಪಾರ್ವತಿ ಒಳಗೆ ಹೋಗು ತ್ತಿರುವುದನ್ನು ಕೆಲವರು ನಿದ್ದೆಗಣ್ಣಿನಿಂದ ನೋಡಿದರು. ದಾಸಿಯೆಂದು ಯಾರೂ ಅವಳನ್ನು ತಡೆಯಲಿಲ್ಲ. ನಿರ್ವಿಘ್ನವಾಗಿ ಒಳಕ್ಕೆ ಹೋಗಿ ಮೆಟ್ಟಿಲುಗಳನ್ನೇರಿ ಉಪ್ಪರಿಗೆಯ ಮೇಲೆ ಹೋದಳು. ಮನೆಯ ಪ್ರತಿ ಯೊಂದು ಭಾಗವೂ ಆಕೆಗೆ ಚೆನ್ನಾಗಿ ಗೊತ್ತಿದ್ದಿತು. ಆದುದರಿಂದ ನೇರವಾಗಿ ದೇವದಾಸನ ಕೋಣೆಗೇ ಹೋದಳು. ಕೋಣೆಯ ಬಾಗಿಲು

ತೆರೆದಿದ್ದಿತು. ಒಳಗೊಂದು ದೀಪ ಉರಿಯುತಿದ್ದಿತು. ಪಾರ್ವತಿ ಒಳಗೆ ಬಂದು ನೋಡಿದಳು. ದೇವದಾಸ ಒಂದು ಮಂಚದ ಮೇಲೆ ಮಲಗಿದ್ದ. ಅವನ ದಿಂಬಿನ ಬಳಿಯಲ್ಲಿ ಪುಸ್ತಕವೊಂದು ತೆರೆದುಬಿದ್ದಿತ್ತು. ಅದರಿಂದ ದೇವದಾಸ ಇನ್ನೂ ಈಗ ಮಾತ್ರ ಮಲಗಿರುವನೆಂದು ತಿಳಿಯುತಿತ್ತು. ದೀಪವನ್ನು ಸ್ವಲ್ಪ ದೊಡ್ಡದು ಮಾಡಿ ದೇವದಾಸನ ಚರಣಗಳ ಬಳಿಯಲ್ಲಿ ಹೋಗಿ ಕುಳಿತಳು. ಗೋಡೆಗೆ ತಗಲು ಹಾಕಿದ ಗಡಿಯಾಳ ಮಾತ್ರ ಶಬ್ದ ಮಾಡುತಿದ್ದಿತು. ಮಿಕ್ಕ ಎಲ್ಲ ಕಡೆಯೂ ಶಾಂತಿ ಪಸರಿಸಿತ್ತು. ಎಲ್ಲರೂ ನಿದ್ರಾವಶರು. ಪಾರ್ವತಿ ದೇವದಾಸನ ಪಾದಗಳ ಮೇಲೆ ಕೋಮಲವಾದ ಕೈಗಳನ್ನಿಟ್ಟು 'ದೇವದಾಸ!' ಎಂದಳು.

ನಿದ್ದೆಯ ಆಳದಲ್ಲಿಳಿಯುವಾಗ ತನ್ನನ್ನು ಯಾರೊ ಕೂಗುತ್ತಿರುವ ಹಾಗೆ ದೇವದಾಸನಿಗೆ ಎನಿಸಿತು. ಅವನು ಹಾಗೆಯೆ ಮಲಗಿಕೊಂಡು 'ಹೂಂ!' ಎಂದ.

'ದೇವದಾಸ!'

ದೇವದಾಸ ಕಣ್ಣುಜ್ಜಿಕೊಳ್ಳುತ್ತ ಎದ್ದು ಕುಳಿತ. ಪಾರ್ವತಿಯ ಮುಖದ ಮೇಲೆ ಪರದೆ ಇರಲಿಲ್ಲ. ಕೋಣೆಯಲ್ಲಿ ಬೆಳಕೂ ಹೆಚ್ಚಿದ್ದಿತು. ಅದರಿಂದ ದೇವದಾಸನಿಗೆ ಪಾರ್ವತಿಯ ಗುರುತು ಬೇಗನೆ ಸಿಕ್ಕಿ ಹೋಯಿತು. ಆದರೂ ಮೊದಲು ಅವನಿಗೆ ತನ್ನ ಕಣ್ಣ ಮೇಲೆ ತನಗೇ ನಂಬಿಗೆಯಾಗಲಿಲ್ಲ. ಆ ಮೇಲೆ ಕೇಳಿದ, 'ಇದೇನು ಪಾರೂ!'

ದೇವದಾಸ ಗಡಿಯಾರದ ಕಡೆಗೆ ನೋಡಿದ. ಒಂದುಗಂಟೆಯ ಮೇಲಾಗಿದ್ದಿತು. ಅವನಿಗೆ ವಿಸ್ಮಯ ಇಮ್ಮಡಿಸಿತು. 'ಇಷ್ಟುರಾತ್ರಿ ಯಲ್ಲಿ!' ಎಂದ.

ಪಾರ್ವತಿ ಸುಮ್ಮನಿದ್ದಳು. ಮುಖ ಕೆಳಗೆ ಮಾಡಿಕೊಂಡು ಕುಳಿತಿದ್ದಳು. ಪುನಃ ದೇವದಾಸ ಕೇಳಿದ, 'ಇಷ್ಟು ರಾತ್ರಿಯಲ್ಲಿ ಮನೆಯಿಂದ ಒಬ್ಬಳೇ ಬಂದೆಯಾ?'

'ಹೂಂ'

ದೇವದಾಸನಿಗೆ ಮುಂಗಾಣದಾಯಿತು; ಸಂಶಯ ಬಂದಿತು. 'ದಾರಿಯಲ್ಲಿ ನಿನಗೆ ಭಯವಾಗಲಿಲ್ಲವೆ?' ಎಂದು ಕೇಳಿದ.

ಪಾರ್ವತಿ ರಸತುಂಬಿದ ನಗುನಕ್ಕು 'ನನಗೆ ಭೂತಗಳ ಭಯವಿಲ್ಲ.' ಎಂದಳು.

'ಇರಬಹುದು; ಮನುಷ್ಯರ ಭಯವಿಲ್ಲವೆ? ಏತಕ್ಕೆ ಬಂದೆ?'

ಪಾರ್ವತಿ ಉತ್ತರಕೊಡಲಿಲ್ಲ. ಮನಸ್ಸಿನಲ್ಲಿಯೆ 'ಮನುಷ್ಯರ ಭಯವೂ ನನಗಿಲ್ಲ.' ಎಂದುಕೊಂಡಳು.

'ಮನೆಯೊಳಗೆ ಹೀಗೇಕೆ ಬಂದೆ? ಯಾರೂ ನೋಡಲಿಲ್ಲವೆ?'

'ಆಳುಮಗ ನೋಡಿದ.'

'ಬರೀ ಆಳುಮಗನೊ ಮತ್ಯಾರಾದರೂ....!'

'ಅಂಗಳದಲ್ಲಿ ಆಳುಮಕ್ಕಳು ಮಲಗಿದ್ದರು. ಅವರಲ್ಲಿ ಯಾರಾದರೂ ನೋಡಿದ್ದರೂ ನೋಡಿರಬಹುದು.'

ದೇವದಾಸ ಮಂಚದಿಂದ ಕೆಳಗಿಳಿದವನೆ ಕೋಣೆಯ ಬಾಗಿಲನ್ನು ಮುಚ್ಚಿ ಕೇಳಿದ, 'ಯಾರಾದರೂ ಗುರುತಿಸಿದರೆ?'

ಪಾರ್ವತಿ ಸ್ವಾಭಾವಿಕವಾದ ದನಿಯಿಂದ 'ಅವರಿಗೆ ನಾನು ಯಾರೆಂದು ಗೊತ್ತಿದೆ. ಬಹುಶಃ ಯಾರಾದರೂ ಗುರುತಿಸಿರಬಹುದು.' ಹೇಳಿದಳು.

'ಏನು! ಇಂತಹ ಕೆಲಸವನ್ನೇಕೆ ಮಾಡಿದೆ?'

'ಅದನ್ನು ನೀವು ಹೇಗೆ ತಿಳಿಯಬಲ್ಲಿರಿ?' ಎಂದು ಮನದಲ್ಲಿಯೆ ಎಂದುಕೊಂಡಳು. ಆದರೆ ಏನೂ ಮಾತಾಡದೆ ತಲೆತಗ್ಗಿಸಿಕೊಂಡು ಕುಳಿತಿದ್ದಳು.

'ಇಷ್ಟು ರಾತ್ರಿಯಲ್ಲಿ!....ಛೀ! ಛೀ! ನಾಳೆ ಹೇಗೆ ಮುಖ ತೋರಿಸುವೆ?'

'ಆ ಸಾಹಸ ನನ್ನಲ್ಲಿದೆ ಎಂದು ತಲೆತಗ್ಗಿಸಿಕೊಂಡೇ ಉತ್ತರ ವಿತ್ತಳು ಪಾರ್ವತಿ.

ದೇವದಾಸನಿಗೆ ಸಿಟ್ಟು ಬರಲಿಲ್ಲ. ಆದರೆ ಅತ್ಯಂತ ಉತ್ಕಂಠನಾಗಿ 'ಛೀ! ಛೀ! ನೀನಿನ್ನೂ ಚಿಕ್ಕ ಹುಡುಗಿಯೇನು? ಇಲ್ಲಿಗೆ ಹೀಗೆ ಬರುವಾಗ ನಿನಗೆ ನಾಚಿಕೆಯಾಗಲಿಲ್ಲವೆ?' ಎಂದ.

'ಎಳ್ಳಷ್ಟೂ ಇಲ್ಲ.' ಎಂದು ತಲೆ ಎತ್ತದೆ ನುಡಿದಳು.

'ನಾಳೆ ನಾಚಿಕೆಯಿಂದ ನಿನ್ನ ತಲೆ ಬಾಗಲಾರದೆ?'

ಇದರಿಂದ ಪಾರ್ವತಿಯ ಹೃದಯ ಕರಗಿತು. ಅವಳು ಕರುಣಾ ಪೂರಿತ ದೃಷ್ಟಿಯಿಂದ ದೇವದಾಸನ ಮುಖವನ್ನು ನೋಡಿ 'ನೀವು ನನ್ನ ನಾಚಿಕೆಯನ್ನು ಮುಚ್ಚುವಿರೆಂದು ಗೊತ್ತಿಲ್ಲದೆ ಹೋಗಿದ್ದರೆ ತಲೆ ಬಾಗಿಸ ಬೇಕಾಗುತ್ತಿತ್ತು.' ಎಂದಳು.

ದೇವದಾಸನಿಗೆ ವಿಸ್ಮಯವಾಯಿತು. ಅವನಿಗೆ ಏನೂ ತೋಚ ದಾಯಿತು. ನಾನು ಹೇಗೆ ಮುಖ ತೋರಿಸಬಲ್ಲೆ?' ಎಂದ.

ಅದೇ ಪ್ರಕಾರ ದುಗುಡವಿಲ್ಲದೆ ಪಾರ್ವತಿ 'ನಿಮಗೇನು ಆಗಬಲ್ಲುದು ದೇವದಾಸ!' ಎಂದು 'ನೀವು ಪುರುಷರು. ಇಂದಿಲ್ಲದಿದ್ದರೆ ನಾಳೆ ಯಾದರೂ ನಿಮಗೆ ತಟ್ಟಿದ ಕಲಂಕವನ್ನು ಜನರು ಮರೆತುಬಿಡುವರು. ಎಲ್ಲವೂ ತುಚ್ಛವೆಂದು ತಿಳಿದು ನಿಮ್ಮ ಪಾದಧೂಳಿಯಲ್ಲಿ ಬೆರೆತು ಹೋಗು ವುದಕ್ಕೆ ನಿರ್ಭಾಗ್ಯ ಪಾರ್ವತಿ ಬಂದಿದ್ದಳೆಂಬುದೂ ಎರಡು ದಿನಗಳಿಗಿಂತ ಹೆಚ್ಚಿಗೆ ಯಾರ ಸ್ಮರಣೆಯಲ್ಲಿಯೂ ಉಳಿಯಲಿಕ್ಕಿಲ್ಲ.' ಎಂದು ನುಡಿದಳು.

'ಇದೇನು ಪಾರೂ!'

'ನಾನು–ನಾನು—'

ಮಂತ್ರಮುಗ್ಧನಂತೆ ದೇವದಾಸನೆಂದ 'ನೀನು!'

'ನಾನು ಕಲಂಕಿತಳಾಗುವೆನೆ? ಇಲ್ಲ–ನನಗೆ ಕಲಂಕ ತಟ್ಟುವದಿಲ್ಲ. ನಿಮ್ಮಲ್ಲಿ ನಾನು ಗುಟ್ಟಾಗಿ ಬಂದೆನೆಂದು ಯಾರಾದರೂ ನನ್ನನ್ನು ನಿಂದಿಸಿ ದರೆ, ಆ ನಿಂದೆಯೂ ನನ್ನನ್ನು ಮುಟ್ಟಲಾರದು.' ಎಂದಳು ಪಾರ್ವತಿ. ಆಕೆಯ ಕಣ್ಣುಗಳು ನೀರು ತುಂಬಿದವು.

'ಇದೇನು ಪಾರೂ! ಅಳುತ್ತೀಯೆ!'

'ದೇವದಾಸ, ನದಿಯಲ್ಲಿ ನೀರು ಅಪಾರವಾಗಿದೆ. ಅದರಿಂದಲೂ ನನ್ನ ಕಲಂಕ ತೊಳೆದುಹೋಗಲಾರದೆ ?'

ಕೂಡಲೇ ದೇವದಾಸ ಪಾರ್ವತಿಯ ಕೈಗಳೆರಡನ್ನೂ ಹಿಡಿದು ಕೊಂಡು 'ಪಾರ್ವತೀ' ಎಂದ.

ದೇವದಾಸನ ಪಾದಗಳ ಮೇಲೆ ತನ್ನ ತಲೆಯಿಟ್ಟು ಬಿಗಿದ ಕಂಠ ದಿಂದ 'ದೇವದಾಸರೇ, ಈ ಪಾದಗಳ ಬಳಿಯಲ್ಲಿ ಸ್ವಲ್ಪ ಸ್ಥಾನ ಕೊಡಿರಿ!' ಎಂದಳು.

ಇಬ್ಬರೂ ಸುಮ್ಮನಿದ್ದರು. ಪಾರ್ವತಿಯ ಕಣ್ಣೀರು ದೇವದಾಸನ ಚರಣಯುಗ್ಮದ ಮೇಲೆ ಹರಿದು ಹಾಸಿಗೆಯನ್ನು ತೋಯಿಸಿತು.

ಸ್ವಲ್ಪ ಹೊತ್ತಾದ ಮೇಲೆ ಪಾರ್ವತಿಯ ತಲೆಯನ್ನೆತ್ತಿ 'ಪಾರೂ! ನನ್ನನ್ನು ಬಿಟ್ಟರೆ ನಿನಗಾರೂ ಗತಿ ಇಲ್ಲವೆ?' ಎಂದು ಕೇಳಿದ.

ಪಾರ್ವತಿ ಮಾತನಾಡಲಿಲ್ಲ. ತಲೆಯನ್ನು ಅವನ ಪಾದಪದ್ಮಗಳ ಮೇಲಿಟ್ಟು ಒರಗಿದ್ದಳು. ಆ ಸ್ತಬ್ಧವಾದ ರಾತ್ರಿಯಲ್ಲಿ ಅವಳ ಉಸಿರು ಮಾತ್ರ ಶಬ್ದಮಾಡುತಿದ್ದಿತು. ಆಗ ಗಡಿಯಾರದಲ್ಲಿ ಎರಡು ಬಾರಿಸಿತು. ದೇವದಾಸನೆಂದ 'ಪಾರೂ!'

'ಏನು?'

'ತಂದೆ ತಾಯಿಗಳಿಗೆ ನಮ್ಮ ವಿವಾಹ ಮನಸ್ಸಿಗೆ ಏಷ್ಟೂ ಬಂದಿಲ್ಲ. ನಿನಗೆ ಗೊತ್ತೆ?'

'ಗೊತ್ತು.'

ಇಬ್ಬರೂ ಸುಮ್ಮನಿದ್ದರು. ಸ್ವಲ್ಪ ಹೊತ್ತಾದ ಮೇಲೆ ದೇವದಾಸ ನೀಳವಾದ ಉಸಿರುಬಿಟ್ಟು 'ಹಾಗಾದರೆ ಇದಕ್ಕೆ ಉಪಾಯವೇನು?' ಎಂದು ಕೇಳಿದ.

ನೀರಿನಲ್ಲಿ ಮುಳುಗುವ ಮನುಷ್ಯ ದಂಡೆಯನ್ನು ಗಟ್ಟಿಯಾಗಿ ಹಿಡಿದುಕೊಂಡಿರುವಂತೆ ಪಾರ್ವತಿ ದೇವದಾಸನ ಚರಣಗಳನ್ನು ಗಟ್ಟಿ ಯಾಗಿ ಹಿಡಿದುಕೊಂಡಿದ್ದಳು. ಅವನ ಕಡೆಗೆ ನೋಡಿ 'ನನಗೆ ಯಾವು ದನ್ನೂ ತಿಳಿದುಕೊಳ್ಳುವ ಆಸೆಯಿಲ್ಲ ದೇವದಾಸ!' ಎಂದಳು ಪಾರ್ವತಿ.

'ಪಾರೂ, ತಂದೆ ತಾಯಿಗಳನ್ನು ಅನಾದರಿಸಬೇಕೆ?'

'ದೋಷವೇನಿದೆ ಅದರಲ್ಲಿ?'

'ನೀನೆಲ್ಲಿರುವೆ ಪಾರೂ?'

'ನಿಮ್ಮ ಚರಣಕಮಲಗಳ ಬಳಿಯಲ್ಲಿ' ಎಂದು ಅಳುತ್ತ ನುಡಿದಳು ಪಾರ್ವತಿ.

ಇಬ್ಬರೂ ಸುಮ್ಮನೆ ಕುಳಿತಿದ್ದರು. ನಾಲ್ಕು ಬಾರಿಸಿತು. ಗ್ರೀಷ್ಮ ಕಾಲದ ರಾತ್ರಿ. ಬೇಗ ಬೆಳಗಾಗುವುದೆಂದು ತಿಳಿದುಬಂದುದರಿಂದ ದೇವದಾಸ ಪಾರ್ವತಿಯ ಕೈಹಿಡಿದು ಎದ್ದುನಿಂತು 'ನಡೆ, ನಿನ್ನನ್ನು ಮನೆಗೆ ಕಳಿಸಿ ಬರುತ್ತೇನೆ.' ಎಂದ.

'ನನ್ನೊಂದಿಗೆ ಬರುವಿರಾ?'

'ಹಾನಿ ಏನಿದೆ ಅದರಲ್ಲಿ? ಬಹಳವಾದರೆ ಕೆಟ್ಟ ಹೆಸರು ಬಂದೀತು. ಬಂದರೆ ಅದನ್ನು ನಿವಾರಿಸುವ ದಾರಿಯಾದರೂ ಹೊಳೆದೀತು, ನಡೆ.'

'ನಡೆಯಿರಿ.'

ಇಬ್ಬರೂ ಸಾವಕಾಶವಾಗಿ ಹೊರಟು ಹೋದರು.

## ೭

ಮರುದಿನ ಸ್ವಲ್ಪಹೊತ್ತು ದೇವದಾಸ ತನ್ನ ತಂದೆಯವರೊಡನೆ ಮಾತನಾಡಿದ. ತಂದೆಯವರು 'ನೀನು ನನ್ನನ್ನು ಯಾವಾಗಲೂ ಪೀಡಿಸುತ್ತಿರುವೆ. ಈ ಜಗತ್ತಿನಲ್ಲಿ ಬಾಳಿದಷ್ಟು ದಿನವೂ ತೊಂದರೆ ಕೊಡುತ್ತಿರುವೆ. ನಿನ್ನ ಬಾಯಿಂದ ಇಂತಹ ಮಾತು ಹೊರಡುವದು ಆಶ್ಚರ್ಯಕರವಲ್ಲ.' ಎಂದರು.

ದೇವದಾಸ ಮುಖ ಕೆಳಗೆ ಮಾಡಿಕೊಂಡು ಸುಮ್ಮನೆ ಕುಳಿತಿದ್ದ. 'ಇದು ನನಗೆ ಸಂಬಂಧಪಟ್ಟ ಮಾತಲ್ಲ. ನಿನ್ನ ತಾಯಿಯನ್ನೆ ಕೇಳಿಕೊಳ್ಳು, ಹೋಗು.' ಎಂದು ಬಿಟ್ಟರು ದೇವದಾಸನ ತಂದೆಯವರು.

'ಇದನ್ನೂ ಕಾಣುವ ದುರ್ಭಾಗ್ಯ ನನ್ನ ಹಣೆಯಲ್ಲಿ ಬರೆದಿದೆಯೇ?' ಎಂದರು ದೇವದಾಸನ ತಾಯಿ.

ಅದೇ ದಿನ ದೇವದಾಸ ತನ್ನ ಸಾಮಾನುಗಳನ್ನೆಲ್ಲ ಕಟ್ಟಿಕೊಂಡು ಕಲಕತ್ತೆಗೆ ಹೋಗಿಬಿಟ್ಟ. ಪಾರ್ವತಿಯೂ ನೀರಸವಾದ ನಗು ನಕ್ಕು ಸುಮ್ಮನಿದ್ದಳು. ಕಳೆದ ರಾತ್ರಿಯಲ್ಲಿ ನಡೆದ ಸಮಾಚಾರವನ್ನು ಪಾರ್ವತಿ ಯಾರಿಗೂ ಹೇಳಿರಲಿಲ್ಲ. ಸ್ವಲ್ಪ ಹೊತ್ತಾದ ಮೇಲೆ ಮನೋರಮೆ ಬಂದು 'ದೇವದಾಸಬಾಬುಗಳು ಕಲಕತ್ತೆಗೆ ಹೋದರು.' ಎಂದಳು.

'ಹೌದು.'

'ಹಾಗಾದರೆ ಇದಕ್ಕೇನು ಉಪಾಯ ಯೋಚಿಸಿರುವೆ?'

ಆದರೆ ಉಪಾಯವೇನೆಂಬುದೇ ಪಾರ್ವತಿಗೆ ಗೊತ್ತಿರಲಿಲ್ಲ. ಎಷ್ಟೋ ದಿನಗಳಿಂದ ಅವಳು ಉಪಾಯವನ್ನು ಹುಡುಕುತಿದ್ದಾಳೆ. ಅದನ್ನೆ ಯೋಚಿಸುತಿದ್ದಾಳೆ. ಆಶೆಯುಷ್ಟು? ನಿರಾಶೆಯುಷ್ಟು? ಏನೆಂಬುದನ್ನೂ ಸ್ಥಿರಪಡಿಸಲಾರದವಳಾಗಿದ್ದಾಳೆ. ಅತ್ಯಂತ ಸುಖದುಃಖದ ಸಮಯದಲ್ಲಿ, ಆಶೆನಿರಾಶೆಗಳ ತೀರವು ಕಾಣದಿದ್ದಾಗ ಮನುಷ್ಯನ ದುರ್ಬಲವಾದ

ಹೃದಯ ಭಯದಿಂದ ಆಸೆಯನ್ನು ಬೆಂಬತ್ತುವುದು. ತನ್ನ ಮಂಗಲವು ಯಾವುದರಲ್ಲಿರುವುದೊ ಅದನ್ನೆ ಮನುಷ್ಯನು ಬಯಸುತ್ತಾನೆ. ಇಚ್ಛೆಯಿಂದಲೊ ನಿರಿಚ್ಛೆಯಿಂದಲೊ ಉತ್ಸುಕ ನಯನಗಳಿಂದ ಅತ್ತಕಡೆಯೆ ನೋಡುತ್ತ ಕೂಡುತ್ತಾನೆ. ನಿನ್ನೆ ರಾತ್ರಿ ನಡೆದ ಸಂಗತಿಯಿಂದ ತನ್ನ ಮನೋರಥ ಈಡೇರದೆ ಇರಲಿಕ್ಕಿಲ್ಲವೆಂದು ಆಕೆಗೆ ಆಸೆ–ಭರವಸೆ ಇದ್ದಿತು. ಒಂದು ವೇಳೆ ತನ್ನ ಇಷ್ಟವು ನಿಷ್ಫಲವಾದರೆ ತನ್ನ ಗತಿಯೇನಾದೀತೆಂಬ ಕಲ್ಪನೆ ಅವಳಿಗೆ ಬರಲಿಲ್ಲ. ಆದುದರಿಂದಲೇ ದೇವದಾಸ ಪುನಃ ಬರುವನೆಂದು ತಿಳಿದಿದ್ದಳು. ಬಂದ ಬಳಿಕ ತನ್ನನ್ನು ಕರೆದು 'ಪಾರೂ ನನ್ನಲ್ಲಿ ಜೀವವಿರುವವರೆಗೂ, ಶಕ್ತಿ ಇರುವವರೆಗೂ ನಿನ್ನ ಪಾಣಿಗ್ರಹಣ ಅನ್ಯರೊಡನೆ ಆಗದಂತೆ ಮಾಡುವೆನು.' ಎಂದು ಹೇಳುವನೆಂದು ತಿಳಿದಿದ್ದಳು. ಆದರೆ ಎರಡು ದಿನಗಳಾದ ಬಳಿಕ ಅವಳಿಗೆ ಈ ಪತ್ರ ಬಂದಿತು.

'ಪಾರ್ವತೀ, ಈಗೆರಡು ದಿನಗಳಿಂದ ನಾನು ನಿನ್ನ ವಿಷಯವನ್ನು ಕುರಿತೇ ಯೋಚಿಸುತಿದ್ದೇನೆ. ನಾನು ನಿನ್ನ ಕೈಹಿಡಿಯಬೇಕೆಂದು ನನ್ನ ಇಚ್ಛೆ ಇದ್ದರೂ ನನ್ನ ತಂದೆ ತಾಯಿಗಳಿಗೆ ಇದು ಸರಿದೋರುವುದಿಲ್ಲ. ನಿನ್ನನ್ನು ನಾನು ಸುಖಿಯನ್ನಾಗಿ ಮಾಡಬೇಕಾದರೆ ಅವರಿಗೆ ನಾನು ಬಹಳ ದುಃಖವನ್ನು ಕೊಡಬೇಕಾಗುವುದು. ಇದು ಮಾತ್ರ ನನ್ನಿಂದ ಆಗದ ಕೆಲಸ. ಅದರಿಂದ ನಾನು ತಂದೆ ತಾಯಿಗಳ ವಿರುದ್ಧ ವರ್ತಿಸುವ ಹಾಗಿಲ್ಲ. ಹೇಗೆ ವರ್ತಿಸಬಲ್ಲೆ? ಇನ್ನುಮುಂದೆ ನಾನು ನಿನಗೆ ಪತ್ರ ಬರೆಯಲಿಕ್ಕಿಲ್ಲ. ಅದಕ್ಕಾಗಿ ಈ ಪತ್ರದಲ್ಲಿಯೆ ಎಲ್ಲವನ್ನೂ ಬಿಚ್ಚಿ ಹೇಳುವೆನು. ನಿಮ್ಮ ಮನೆತನ ಕೀಳು ತರಗತಿಯದು. ಕನ್ಯೆಯರನ್ನು ಮಾರುವ, ಕೊಳ್ಳುವ ಮನೆಯಿಂದ ಕನ್ಯೆಯನ್ನು ನಮ್ಮ ಮನೆಗೆ ತರುವುದು ಆಗದ ಮಾತು. ತಾಯಿಯು ಇಂತಹ ಕನ್ಯೆಯನ್ನು ಮನೆಗೆ ಬರಗೊಡುವುದೇ ಇಲ್ಲ. ಅಲ್ಲದೆ ನಿನ್ನ ಮನೆಯೂ ನಮ್ಮ ಮನೆಯ ಪಕ್ಕದಲ್ಲಿಯೇ ಇದೆ. ಇದೆಲ್ಲವೂ ನಿನಗೆ ತಿಳಿಯದ ವಿಷಯ. ಆ ದಿನದ ರಾತ್ರಿ ನೆನಪಾದೊಡನೆಯೆ ಅತೀವ ವೇದನೆಯಾಗುತ್ತದೆ. ನಿನ್ನಂತಹ ಸ್ವಾಭಿಮಾನಿಯಾದ ಹುಡುಗಿ ಆ ರಾತ್ರಿ ನನ್ನಲ್ಲಿಗೆ ಬರುವಾಗ ಅವಳಿಗೆ ಎಷ್ಟು ವೇದನೆಯಾಗುವುದೆಂಬುದನ್ನು ನಾನು ಅರಿಯಬಲ್ಲೆ.

'ಇನ್ನೊಂದು ವಿಷಯ. ನಾನು ನಿನ್ನನ್ನು ಪ್ರೀತಿಸುತ್ತಿದ್ದೆನೆಂದು ನನಗೆ ನಿಜವಾಗಿಯೂ ಎಂದೂ ಎನಿಸಿಲ್ಲ. ಈಗಲೂ ನಿನ್ನ ವಿಷಯವಾಗಿ ನನಗೆ ವಿಶೇಷ ದುಃಖವಾಗುವುದೆಂದೂ ಹೇಳಲಾರೆ. ಆದರೆ ನನ್ನ ಸಲುವಾಗಿ ನಿನಗೆ ಬಹಳ ವ್ಯಥೆಯಾಗುವುದೆಂಬುದರಿಂದ ಮಾತ್ರ ನನಗೆ ವ್ಯಸನವಾಗುತ್ತದೆ. ಆದುದರಿಂದ ನನ್ನನ್ನು ಮರೆತುಬಿಡಲು ಯತ್ನಿಸು. ಆ ಯತ್ನದಲ್ಲಿ ನಿನಗೆ ಯಶಸ್ಸು ಸಿಕ್ಕಲೆಂದು ಹಾರೈಸಿ ಆಶೀರ್ವದಿಸುತ್ತೇನೆ.

—ದೇವದಾಸ'

ಈ ಪತ್ರವನ್ನು ಟಪಾಲು ಪೆಟ್ಟಿಗೆಯಲ್ಲಿ ಹಾಕುವ ಮೊದಲು ದೇವದಾಸನ ತಲೆಯಲ್ಲಿ ಅದೊಂದೇ ವಿಚಾರ ತುಂಬಿತ್ತು. ಪತ್ರ ಹಾಕಿದ ಮೇಲೆ ಮತ್ತೊಂದು ವಿಚಾರ ಸುಳಿಯತೊಡಗಿತು. ಕೈಯಲ್ಲಿಯ ಕಲ್ಲನ್ನು ಬೀಸಿ ಆಮೇಲೆ ಅದು ಎಲ್ಲಿ ತಾಕುವುದೊ ಎಂದು ಅತ್ತಕಡೆಯೆ ನೋಡುವಂತಾಯಿತು ಅವನ ಸ್ಥಿತಿ. ಯಾವುದೊ ಒಂದು ಅನಿಷ್ಟ ಸಂಭವಿಸಬಹುದೆಂಬ ವಿಚಾರ ಈಗ ಅವನ ಮನದಲ್ಲಿ ಬರತೊಡಗಿತು. ಅವನು ಯೋಚಿಸುತ್ತಿದ್ದ—ಆ ಕಲ್ಲು ಪಾರ್ವತಿಗೆ ಹೇಗೆ ಬಡಿಯುವುದು? ಜೋರಾಗಿ ಬಡಿಯುವುದೆ? ಆ ಪೆಟ್ಟನ್ನು ತಾಳಿಕೊಂಡು ಬದುಕಿ ಉಳಿದಾಳೆ? ಆ ದಿನ ರಾತ್ರಿ ನನ್ನ ಪಾದಗಳ ಮೇಲೆ ತಲೆಯಿಟ್ಟು ಎಷ್ಟು ಅಳುತ್ತಿದ್ದಳು! ಪೋಸ್ಟ್ ಆಫೀಸಿನಿಂದ ತಿರುಗಿ ಬರುವಾಗ ಹೆಜ್ಜೆ ಹೆಜ್ಜೆಗೆ ಈ ಮಾತು ಅವನ ಮನದಲ್ಲಿ ಏಳುತ್ತಿದ್ದಿತು; 'ನಾನು ಮಾಡಿದುದು ಸರಿಯಾಯಿತೇ?'

ಇನ್ನೊಂದು ಮಾತನ್ನು ದೇವದಾಸ ಯೋಚಿಸುತ್ತಿದ್ದ—ಪಾರ್ವತಿಯಲ್ಲಿ ಯಾವ ದೋಷವೂ ಇಲ್ಲವಾದರೆ ತಂದೆ ತಾಯಂದಿರು ಅವಳೊಡನೆ ನನ್ನ ಮದುವೆಯನ್ನು ಏಕೆ ನಿಷೇಧಿಸುತ್ತಾರೆ? ಬರಿಯ ತೋರಿಕೆಗಾಗಿ ಕುಲದ ಮರ್ಯಾದೆಗೆ ಕಟ್ಟುಬಿದ್ದು ಒಂದು ಪ್ರಾಣವನ್ನು ನಾಶಮಾಡುವುದು ಯೋಗ್ಯವಲ್ಲ. ಪಾರ್ವತಿ ತನ್ನ ಅಂತರಂಗದ ಜ್ವಾಲೆಯನ್ನು ಆರಿಸಿಕೊಳ್ಳುವುದಕ್ಕಾಗಿ ನೀರಲ್ಲಿ ಮುಳುಗಿ ಸತ್ತರೆ ಆಕೆಯನ್ನು ಕೊಂದ ಪಾತಕ ತಂದೆತಾಯಿಗಳಿಗೆ ತಗುಲಲಿಕ್ಕಿಲ್ಲವೆ? ಹೀಗೆ ವಿಚಾರ ಮಾಡುವ

ಶಕ್ತಿ ದೇವದಾಸನಲ್ಲಿ ಬೆಳೆದಿದ್ದಿತು. ವಯಸ್ಸೂ ಹೆಚ್ಚಾಗಿದ್ದಿತು; ಕಲಕತ್ತೆಯಲ್ಲಿ ಬುದ್ಧಿವಂತರ ಸಹವಾಸವೂ ಅವನಿಗೆ ದೊರಕಿತ್ತು.

ದೇವದಾಸ ಹೋಟೆಲಿಗೆ ಬಂದು ಒಂದು ಮಂಚದ ಮೇಲೆ ಮಲಗಿದ. ಅವನು ಈಗ ಇರುವುದು ಹೋಟೆಲಿನಲ್ಲಿ. ಮಾವನ ಮನೆಬಿಟ್ಟು ಬಹಳ ದಿನಗಳಾಗಿದ್ದುವು. ಏಕೆಂದರೆ ಅಲ್ಲಿ ಹೆಚ್ಚು ಅನುಕೂಲತೆಗಳಿರಲಿಲ್ಲ. ದೇವದಾಸನಿರುವ ಕೋಣೆಯ ಪಕ್ಕದ ಕೋಣೆಯಲ್ಲಿ ಚುನ್ನೀಲಾಲನೆಂಬ ಒಬ್ಬ ಯುವಕ ಒಂಬತ್ತು ವರ್ಷಗಳಿಂದ ವಾಸಮಾಡುತ್ತಿದ್ದ. ಇಷ್ಟು ದೀರ್ಘಕಾಲ ಅವನು ಕಲಕತ್ತೆಯಲ್ಲಿದ್ದುದು ಬಿ. ಎ. ತೇರ್ಗಡೆಯಾಗುವುದಕ್ಕಾಗಿ. ಇದುವರೆಗೆ ಅವನು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಲಿಲ್ಲ. ಅದಕ್ಕಾಗಿಯೆ ಅವನು ಕಲಕತ್ತೆಯಲ್ಲಿ—ಅದೇ ರೂಮಿನಲ್ಲಿದ್ದಾನೆ. ಚುನ್ನೀಲಾಲ ದಿನಾಲು ಸಾಯಂಕಾಲ ತಿರುಗಾಡಲು ಹೋಗುತ್ತಾನೆ. ಬೆಳಿಗ್ಗೆ ಒಬ್ಬಳು ಅವನ ಕೋಣೆಯನ್ನು ಗುಡಿಸಲು ಬರುತ್ತಾಳೆ. ಈ ಹೊರತಾಗಿ ಅವನ ಕೋಣೆಯಲ್ಲಿ ಇರುವವರಾಗಲಿ, ಬರುವವರಾಗಲಿ ಯಾರೂ ಇರಲಿಲ್ಲ. ಆಳುಮಗ ಕೋಣೆಯಲ್ಲಿ ದೀಪಹಚ್ಚಿ ಹೋದಮೇಲೆ ದೇವದಾಸ ಕೋಣೆಯ ಬಾಗಿಲು ಹಾಕಿಕೊಂಡು ಮಲಗಿದ.

ಹೋಟೆಲಿನಲ್ಲಿರುವವರು ಒಬ್ಬೊಬ್ಬರಾಗಿ ಬಂದರು. ದೇವದಾಸನನ್ನು ಊಟಕ್ಕೆ ಎಬ್ಬಿಸಿದರು. ಆದರೆ ಅವನು ಏಳಲಿಲ್ಲ. ಚುನ್ನೀಲಾಲ ರಾತ್ರಿಯಲ್ಲಿ ಹೋಟೆಲಿಗೆ ಬರುತ್ತಿರಲಿಲ್ಲ. ಈ ದಿನವೂ ಬರಲಿಲ್ಲ.

ರಾತ್ರಿ ಒಂದು ಗಂಟೆಯಾಗಿರಬಹುದು. ದೇವದಾಸನ ಹೊರತು ಯಾರೂ ಎಚ್ಚರಿರಲಿಲ್ಲ. ಚುನ್ನೀಲಾಲ ಬಂದು ದೇವದಾಸನ ಕೋಣೆಯ ಎದುರಿಗೆ ನಿಂತು ನೋಡಿದ; ಬಾಗಿಲು ಮುಚ್ಚಿತ್ತು; ದೀಪ ಉರಿಯುತಿತ್ತು. ಅವನು ಕೂಗಿದ, 'ದೇವದಾಸಬಾಬೂ, ಎಚ್ಚರದಿಂದಿದ್ದೀರೇನು ಇನ್ನೂ?'

'ಹೌದು, ನೀವು ಇಂದು ಈ ಹೊತ್ತಿನಲ್ಲಿ ಏಕೆ ತಿರಿಗಿ ಬಂದಿರಿ?'

ಚುನ್ನೀಲಾಲ ನಕ್ಕು, 'ಹೌದು, ಇಂದು ಮೈಯಲ್ಲಿ ಅಷ್ಟು ಚೆನ್ನಾಗಿಲ್ಲ.' ಎಂದು ತನ್ನ ಕೋಣೆಗೆ ಹೊರಟು ಹೋದ. ಸ್ವಲ್ಪ

ಹೊತ್ತಿನ ಮೇಲೆ ಪುನಃ ಬಂದು 'ಬಾಗಿಲು ತೆರೆಯುತ್ತೀರೇನು ?' ಎಂದ.

'ಓಹೋ; ತೆರೆಯುದೆ ಏನು ?' ಎಂದು ಬಾಗಿಲು ತೆರೆದ ದೇವದಾಸ.

'ನಿಮ್ಮಲ್ಲಿ ಬೀಡಿ, ಸಿಗಾರೇಟು ಏನಾದರೂ ಇದೆಯೇ ?'

'ಇದೆ' ಎಂದು ದೇವದಾಸ ಒಂದು ಸಿಗಾರೇಟನ್ನು ಕೊಟ್ಟ. ಅದನ್ನು ಸೇದುತ್ತ ಚುನ್ನೀಲಾಲ ಕೇಳಿದ, 'ದೇವದಾಸಬಾಬೂ, ನೀವಿನ್ನೂ ಏಕೆ ಎಚ್ಚತ್ತಿದ್ದೀರಿ ?'

'ಪ್ರತಿದಿವಸ ಬೇಗ ನಿದ್ರೆ ಬರುತ್ತದೆಯೇ ?'

'ಬರುವುದಿಲ್ಲವೆ ?' ಎಂದು 'ನಿಮ್ಮಂತಹ ಹುಡುಗರು ಮಧ್ಯ ರಾತ್ರಿಯ ಮುಖವನ್ನು ನೋಡಿರಲಿಕ್ಕಿಲ್ಲವೆಂದು ತಿಳಿದಿದ್ದೆ. ಆದರೆ ಈ ಹೊತ್ತು ನಾನೊಂದು ಹೊಸ ಪಾಠ ಕಲಿತಂತಾಯಿತು.' ಎಂದ ಚುನ್ನೀಲಾಲ.

ದೇವದಾಸ ಏನೂ ಹೇಳಲಿಲ್ಲ. ಸಿಗರೇಟು ಸೇದುತ್ತ ಚುನ್ನೀಲಾಲ 'ಈ ಸಲ ನೀವು ಊರಿಂದ ಬಂದ ಮೇಲೆ ನಿಮ್ಮ ಮೈಯಲ್ಲಿ ಚೆನ್ನಾಗಿಲ್ಲ. ಏನದು ಬೇನೆ ?' ಎಂದು ಕೇಳಿದ.

ದೇವದಾಸ ಉತ್ತರ ಕೊಡಲಿಲ್ಲ. ಅವನು ಅನ್ಯ ಮನಸ್ಕನಾಗಿದ್ದ.

'ಆರೋಗ್ಯ ಚೆನ್ನಾಗಿಲ್ಲವೇ ?'

ದೇವದಾಸ ಹಾಸಿಗೆಯ ಮೇಲೆ ಎದ್ದು ಕುಳಿತು ಅತ್ಯಂತ ವ್ಯಗ್ರ ಭಾವದಿಂದ ಚುನ್ನೀಲಾಲನ ಕಡೆಗೆ ನೋಡುತ್ತ 'ಒಳ್ಳೆಯದು ಚುನ್ನೀ ಬಾಬೂ, ನಿಮ್ಮ ಹೃದಯದಲ್ಲಿ ಯಾವ ಬಗೆಯ ಕ್ಲೇಶವೂ ಇಲ್ಲವೆ ?' ಎಂದ.

ಚುನ್ನೀಲಾಲ ನಕ್ಕು 'ಇಲ್ಲ' ಎಂದ.

'ಇಂದಿನವರೆಗೂ ನಿಮಗೆ ಕ್ಲೇಶವಾಗಿಲ್ಲವೆ ? ಜೀವನದ ಕೊನೆಯ ವರೆಗೂ ಆಗಲಿಕ್ಕಿಲ್ಲವೆ ?'

'ಹೀಗೇಕೆ ಕೇಳುತ್ತೀರಿ ?'

'ಕೇಳಬೇಕೆಂದು ಆಶೆಯಾಗಿದೆ.'

'ಇನ್ನೊಂದು ದಿನ ಹೇಳುತ್ತೇನೆ.'

'ಸರಿ. ಚುನ್ನೀಬಾಬೂ, ನೀವು ರಾತ್ರಿಯೆಲ್ಲಾ ಎಲ್ಲಿ ಇರುತ್ತೀರಿ?'

'ಇದು ನಿಮಗೆ ಗೊತ್ತಿಲ್ಲವೇ?' ಎಂದು ಸಾರಗರ್ಭಿತವಾಗಿ ಚುನ್ನೀಲಾಲ ನಕ್ಕ.

'ಗೊತ್ತು. ಆದರೆ ಚೆನ್ನಾಗಿ ಗೊತ್ತಿಲ್ಲ.'

ಚುನ್ನೀಲಾಲನ ಮುಖ ಉತ್ಸಾಹದಿಂದ ಉಜ್ವಲವಾಯಿತು. ಈ ತೆರನ ಮಾತಾಡುವಾಗ–ಅದರಲ್ಲಿ ತಥ್ಯಾಂಶವಿರಲಿ, ಇಲ್ಲದಿರಲಿ–ಚುನ್ನೀಲಾಲನಿಗೆ ಸ್ವಲ್ಪ ನಾಚಿಕೆಯೆನಿಸಬೇಕಿತ್ತು. ಆದರೆ ಬಹಳ ದಿನಗಳ ಅಭ್ಯಾಸದ ಮೂಲಕ ಅದೆಲ್ಲ ಅವನಿಗೆ ಮೈಯುಂಡಿತ್ತು. ಕೌತುಕದಿಂದ ಚುನ್ನೀಲಾಲ ಕಣ್ಣುಗಳನ್ನು ಮುಚ್ಚಿ ತೆರೆದು, 'ದೇವದಾಸಬಾಬೂ, ಕೇಳಬೇಕೆಂದೂ, ಕೇಳಿ ತಿಳಿದುಕೊಳ್ಳಬೇಕೆಂದೂ ನಿಮ್ಮ ಇಚ್ಛೆ ಇದ್ದರೆ ನನ್ನಂತೆ ಸರಿಯಾಗಿ ನೀವೂ ಆಗ ಬೇಕಾಗುವುದು. ನಾಳೆ ರಾತ್ರಿ ನನ್ನೊಂದಿಗೆ ಬರುವಿರಾ?' ಎಂದ.

'ಅಲ್ಲಿ ಹೋಗುವುದರಿಂದ ಮನೋರಂಜನೆಯಾಗುವುದೆಂದು ಕೇಳಿದ್ದೇನೆ. ನಿಜವೆ?'

'ನಿಜ, ನಿಜ!'

'ಹಾಗಿದ್ದರೆ ನನ್ನನ್ನೂ ಒಮ್ಮೆ ಕರೆದುಕೊಂಡು ಹೋಗಿರಿ, ಬರುತ್ತೇನೆ.'

ಮರುದಿನ ಸಂಜೆಯಲ್ಲಿ ಚುನ್ನೀಲಾಲ ದೇವದಾಸನ ಕೋಣೆಗೆ ಬಂದ. ದೇವದಾಸ ವ್ಯಸ್ತಭಾವದಿಂದ ಸಾಮಾನುಗಳನ್ನು ಕಟ್ಟುತಿದ್ದ. ಅದನ್ನು ನೋಡಿ ವಿಸ್ಮಯದಿಂದ ಚುನ್ನೀಲಾಲ ಕೇಳಿದ, 'ದೇವದಾಸ ಬಾಬೂ, ಹೊರಡುವುದಿಲ್ಲವೆ?'

'ಹೂಂ. ಹೊರಡುತ್ತೇನೆ.'

'ಸರಿ, ಇದೆಲ್ಲ ಏನುಮಾಡುತಿದ್ದೀರಿ?'

'ಹೊರಡುವ ಸಿದ್ಧತೆ ಮಾಡುತಿದ್ದೇನೆ.'

ಚುನ್ನೀಲಾಲ ನಕ್ಕು 'ಒಳ್ಳೇ ಸಿದ್ಧತೆ. ಅಲ್ಲಿಗೆ ಮನೆಯನ್ನೆ ಕಿತ್ತು ಕೊಂಡು ಹೋಗುವಿರೇನು?' ಎಂದ.

'ಈ ಸಾಮಾನುಗಳನ್ನು ಇಲ್ಲೆಲ್ಲಾ ಹೇಗೆ ಬಿಟ್ಟುಹೋಗುವುದು ?'

ಚುನ್ನೀಲಾಲನಿಗೆ ಈ ಮಾತಿನ ಅರ್ಥವಾಗಲಿಲ್ಲ. 'ನನ್ನ ಸಾಮಾನುಗಳನ್ನು ನಾನು ಎಲ್ಲಿ ಬಿಟ್ಟುಹೋಗುತ್ತೇನೆ? ಎಲ್ಲವೂ ಇಲ್ಲಿಯೆ ಬಿದ್ದಿರುತ್ತದೆ.' ಎಂದ ಅವನು.

ದೇವದಾಸನಿಗೆ ಸ್ವಲ್ಪ ಅರಿವು ಬಂದಂತಾಯಿತು. ಅವನೆಂದ 'ಚುನ್ನೀಬಾಬೂ, ನಾನು ಊರಿಗೆ ಹೋಗುತಿದ್ದೇನೆ.'

'ಈ ಹೊತ್ತೇಕೆ? ಯಾವಾಗ ಹಿಂದಿರುಗಿ ಬರುವಿರಿ?'

'ಇನ್ನು ತಿರಿಗಿ ಬರಲಿಕ್ಕಿಲ್ಲ.'

ಚುನ್ನೀಲಾಲ ದೇವದಾಸನ ಮುಖದ ಕಡೆಗೆ ವಿಸ್ಮಯದಿಂದ ನೋಡಲಾರಂಭಿಸಿದ. ದೇವದಾಸ ಚುನ್ನೀಲಾಲನಿಗೆ ಕೆಲವು ರೂಪಾಯಿಗಳನ್ನು ಕೊಟ್ಟು 'ಯಾರಿಗಾದರೂ ಏನಾದರೂ ನಾನು ಕೊಡಬೇಕಾಗಿದ್ದಲ್ಲಿ ಕೊಟ್ಟುಬಿಡಿರಿ. ಉಳಿದ ರೂಪಾಯಿಗಳನ್ನು ಊಳಿಗದವರಲ್ಲಿ ಹಂಚಿಬಿಡಿರಿ. ಬಹುಶಃ ನಾನು ಕಲಕತ್ತೆಗೆ ಪುನಃ ಬರಲಿಕ್ಕಿಲ್ಲ.' ಎಂದು 'ಕಲಕತ್ತೆಗೆ ಬಂದುದರಿಂದಲೇ ಹೆಚ್ಚು ಖರ್ಚಾಯಿತು.' ಎಂದು ಮನಸ್ಸಿನಲ್ಲಿಯೇ ಎಂದುಕೊಂಡ.

ಯೌವನದ ಮಬ್ಬುಗತ್ತಲೆ ಹರಿದು ಇಂದು ಅವನಿಗೆ ಸ್ಪಷ್ಟವಾಗಿ ಕಾಣತೊಡಗಿತು—ಬಾಲ್ಯದಲ್ಲಿಯ ಹಾರಾಟ, ತುಂಟಾಟ, ಪುಂಡಾಟಗಳ ಆ ದಿನಗಳಲ್ಲಿ ಬೇಡದೆಯೆ ತಾನಾಗಿಯೆ ದೊರೆತ, ತಾನು ಕಾಲಕೆಳಗೆ ತುಳಿದ ರತ್ನವು ಈ ಕಲಕತ್ತೆಯ ತುಲನೆಯಲ್ಲಿ ಬಹು ದೊಡ್ಡದು; ಅತ್ಯಮೌಲ್ಯವಾದುದು !

ಅವನು ಚುನ್ನೀಲಾಲನ ಕಡೆಗೆ ನೋಡಿ 'ಚುನ್ನೀಬಾಬೂ, ಶಿಕ್ಷಣ, ವಿದ್ಯೆ, ಬುದ್ಧಿ, ಜ್ಞಾನ, ಉನ್ನತಿ, ಮೊದಲಾದುದೆಲ್ಲವೂ ಸುಖಕ್ಕಾಗಿಯೆ ಇವೆ. ಯಾವ ದೃಷ್ಟಿಯಿಂದಲಾದರೂ ನೋಡಿರಿ, ಅವೆಲ್ಲವೂ ನಮ್ಮ ಸುಖ ಬೆಳೆಸಲಿಕ್ಕೆಯೇ ಹೊರತು ಅವುಗಳಿಂದ ಮತ್ತೇನೂ ಪ್ರಯೋಜನವಿಲ್ಲ.' ಎಂದ.

'ಹಾಗಾದರೆ ನೀವು ಓದುಬರೆಹ ಕಲಿಯುವದನ್ನು ಬಿಟ್ಟು ಬಿಡುತ್ತೀರಾ?'

'ಹೌದು, ಓದುಬರೆಹದಿಂದ ನನಗೇನೂ ಪ್ರಯೋಜನವಾಗಲಿಲ್ಲ. ಹಾನಿಯೇ ಹೆಚ್ಚಾಯಿತು. ಇಷ್ಟು ದಿನಗಳಲ್ಲಿ ಇಷ್ಟು ರೂಪಾಯಿಗಳನ್ನು ಖರ್ಚು ಮಾಡಿ ಇಷ್ಟೇ ಕಲಿಯುವೆನೆಂದು ನನಗೆ ಮೊದಲೇ ಗೊತ್ತಾಗಿದ್ದರೆ ನಾನೆಂದಿಗೂ ಕಲಕತ್ತೆಯ ಮುಖವನ್ನು ನೋಡುತ್ತಿರಲಿಲ್ಲ.'

'ದೇವದಾಸಬಾಬೂ, ನಿಮಗೇನಾಗಿದೆ?'

ದೇವದಾಸ ಕುಳಿತು ಯೋಚಿಸತೊಡಗಿದ. ಬಳಿಕ ಸ್ವಲ್ಪ ಹೊತ್ತಾದ ಮೇಲೆ ಹೀಗೆಂದ 'ಮತ್ತೊಂದಾದರೂ ಬೆಟ್ಟಿಯಾದರೆ ಹೇಳುತ್ತೇನೆ.'

ಆಗ ಸುಮಾರು ರಾತ್ರಿ ಒಂಬತ್ತುಗಂಟೆಯಾಗಿರಬಹುದು. ದೇವದಾಸ ತನ್ನ ಸಾಮಾನುಗಳನ್ನೆಲ್ಲ ಗಾಡಿಯ ಮೇಲೆ ಹೇರಿಕೊಂಡು ಹೋಗುವುದನ್ನು ಚುನ್ನೀಲಾಲನೂ ಹೋಟಲಿನ ಜನರೂ ನೋಡಿದರು. ಆಗ ಅವರಿಗೆ ದೇವದಾಸಬಾಬುಗಳು ಕೊನೆಯವರೆಗೆ ಅಗಲಿಹೋಗುವರೊ ಏನೊ ಎಂದು ಎನಿಸಿತು. ದೇವದಾಸ ಹೊರಟುಹೋದ ಮೇಲೆ ಚುನ್ನೀಲಾಲ ಹೋಟೆಲಿನ ಜನರೆದುರಿಗೆ 'ಈ ನರಿಯಂತಹ ಜನರ ಸ್ವಭಾವ ಏನಾದರೂ ತಿಳಿಯುವಂತಿಲ್ಲ.' ಎಂದ.

ಬುದ್ಧಿವಂತರೂ ದೂರದರ್ಶಿಗಳೂ ಯಾವುದೊಂದು ವಿಷಯದ ಬಗೆಗೆ ಕೂಡಲೇ ತಮ್ಮ ಸಮ್ಮತಿಯನ್ನಾಗಲಿ ಅಸಮ್ಮತಿಯನ್ನಾಗಲಿ ತಿಳಿಸುವುದಿಲ್ಲ. ಎಲ್ಲ ದೃಷ್ಟಿಯಿಂದಲೂ ವಿಚಾರಿಸಿ ತಮ್ಮ ಅಭಿಪ್ರಾಯವನ್ನು ಹೇಳುವರು. ಇದಕ್ಕೆ ವಿರುದ್ಧವಾಗಿ, ತಮ್ಮ ಅಭಿಪ್ರಾಯವನ್ನು ಹೇಳುವವರೂ ಈ ಜಗತ್ತಿನಲ್ಲಿ ಇದ್ದಾರೆ. ಒಳ್ಳೆಯದೇ ಇರಲಿ, ಕೆಟ್ಟದೇ ಇರಲಿ, ಸಾರಸಾರ ವಿಚಾರ ಮಾಡದೆ ತಮ್ಮ ಅಭಿಪ್ರಾಯವನ್ನು ಹೇಳಿ ಬಿಡುತ್ತಾರೆ. ಅವರು ಆ ವಿಷಯವನ್ನು ಸಂಪೂರ್ಣವಾಗಿ ಯೋಚಿಸಲು ಶ್ರಮಪಡುವುದಿಲ್ಲ; ಶ್ರಮಪಡಲು ಒಪ್ಪುವುದೂ ಇಲ್ಲ. ಅಂಥವರು ಕೇವಲ ವಿಶ್ವಾಸದ ಬಲದಿಂದ ಮುಂದುವರಿಯುತ್ತಾರೆ. ಈ ತರದ ಜನರು ಜಗತ್ತಿನಲ್ಲಿ ಯಾವ ದೊಡ್ಡ ಕೆಲಸವನ್ನೂ ಮಾಡಲಾರರೆಂದು ಹೇಳಲಾಗದು. ಸಮಯ ಬಂದರೆ ಅವರೇ ಹೆಚ್ಚು ಕೆಲಸವನ್ನು ಮಾಡಿ ತೋರಿಸುತ್ತಾರೆ. ಅವರ ಮೇಲೆ ಪರಮಾತ್ಮನ ಕೃಪಾದೃಷ್ಟಿ ಬಿದ್ದರೆ ಅವರನ್ನು ಉನ್ನತಿಯ ಸರ್ವಸ್ಥಾನಗಳಲ್ಲಿಯೂ ನೋಡಬಹುದು; ಇಲ್ಲವಾದರೆ ಪತನದ ಅತ್ಯಂತ ಆಳವಾದ ತಗ್ಗಿನಲ್ಲಿ ಅವರು ಮೃತರಂತೆ ಬಿದ್ದುಕೊಂಡಿರುವುದನ್ನೂ ನೋಡಬಹುದು. ದೇವದಾಸ ಇದೇ ತರಗತಿಗೆ ಸೇರಿದ ಮನುಷ್ಯ. ಅವನು ಕಲಕತ್ತೆಯಿಂದ ಹೊರಟುದಿನ ಮರುದಿನ ಬೆಳಿಗ್ಗೆ ತನ್ನ ಊರನ್ನು ಹೋಗಿ ಸೇರಿದ. ತಾಯಿ ಆಶ್ಚರ್ಯದಿಂದ ಕೇಳಿದರು 'ದೇವಾ, ಕಾಲೇಜಿಗೆ ಪುನಃ ರಜೆಯಾಯಿತೇನೊ ?'

'ಹೌದು' ಎಂದು ಅನ್ಯಮನಸ್ಕನಾಗಿ ಉತ್ತರಕೊಟ್ಟು ಹೋಗಿಬಿಟ್ಟ ದೇವದಾಸ. ತಂದೆಯವರೂ ವಿಚಾರಿಸಿದರು. ಅವರಿಗೂ 'ಹೌದು' ಎಂದು ಹೇಳಿದ. ತಂದೆಯವರಿಗೆ ದೇವದಾಸನ ಬಗ್ಗೆ ಯಾವ ಸಮಾಚಾರವೂ ಚೆನ್ನಾಗಿ ಗೊತ್ತಾಗಲಿಲ್ಲ. ಅವರು ತಮ್ಮ ಹೆಂಡತಿಯನ್ನು

ವಿಚಾರಿಸಿದರು. ದೇವದಾಸನ ತಾಯಿ ಕೊಂಚ ಬುದ್ಧಿಯನ್ನು ಉಪಯೋಗಿಸಿ 'ಹೌದು, ಬಿಸಿಲು ಇನ್ನೂ ಕಡಿಮೆಯಾಗಿಲ್ಲ, ಆದುದರಿಂದ ಪುನಃ ರಜೆ ಕೊಟ್ಟಿದ್ದಾರಂತೆ.' ಎಂದು ಉತ್ತರ ಕೊಟ್ಟರು.

ಕೆಲಸ ಬೊಗಸೆಗಳಲ್ಲಿ ದೇವದಾಸ ಎರಡು ದಿನಗಳನ್ನು ಕಳೆದ. ಪಾರ್ವತಿಯನ್ನು ಎಲ್ಲಿಯಾದರೂ ಕಾಣಬೇಕೆಂದು ಅವನು ಬಯಸುತ್ತಿದ್ದ. ಅವನ ಅಭಿಲಾಷೆ ಪೂರ್ಣವಾಗಿರಲಿಲ್ಲ. ಎರಡು ದಿನಗಳಾದ ಮೇಲೆ ಪಾರ್ವತಿಯ ತಾಯಿ ದೇವದಾಸನನ್ನು ನೋಡಿ 'ಬಂದೆಯಾ! ಪಾರ್ವತಿಯ ಮದುವೆ ಮುಗಿಸಿಕೊಂಡೇ ಕಲಕತ್ತೆಗೆ ಹೋಗಪ್ಪಾ.' ಎಂದರು.

'ಸರಿ.' ಎಂದ ದೇವದಾಸ.

ಪ್ರತಿದಿನ ಮಧ್ಯಾಹ್ನ ಪಾರ್ವತಿ ಕೆರೆಗೆ ನೀರು ತರಲು ಹೋಗುತ್ತಿದ್ದಳು. ಸೊಂಟದ ಮೇಲೆ ಒಂದು ಬಿಂದಿಗೆಯನ್ನು ಇಟ್ಟುಕೊಂಡು ಈ ದಿವಸವೂ ಕೆರೆಗೆ ಹೋದಳು. ಹತ್ತಿರದಲ್ಲಿ ದೇವದಾಸ ಮೀನು ಹಿಡಿಯುತ್ತ ಒಂದು ಮರದ ಕೆಳಗೆ ಕುಳಿತಿರುವುದನ್ನು ನೋಡಿದಳು. ನೀರು ತುಂಬಿಕೊಳ್ಳದೆ ಹಾಗೆಯೆ ಹೋಗಬೇಕೆಂದು ಒಂದು ಸಲ ಯೋಚಿಸಿದಳು. ಮೆಲ್ಲಗೆ ಶಬ್ದವಾಗದಂತೆ ನೀರು ತುಂಬಿಕೊಂಡು ಹೋಗಬೇಕೆಂದು ಇನ್ನೊಂದು ಸಲ ಯೋಚಿಸಿದಳು. ಆದರೆ ಯಾವುದನ್ನೂ ನಿಶ್ಚಯಿಸಲಾಗಲಿಲ್ಲ ಅವಳಿಂದ. ಬಿಂದಿಗೆಯನ್ನು ಮೆಟ್ಟಿಲಿನ ಮೇಲಿಡುವಾಗ ಸ್ವಲ್ಪ ಸಪ್ಪಳವಾಯಿತೇನೊ, ದೇವದಾಸ ಹೊರಳಿ ನೋಡಿದ. ಆತನು ಪಾರ್ವತಿಯನ್ನು ನೋಡಿ 'ಪಾರೂ, ಸ್ವಲ್ಪ ಇಲ್ಲಿಯವರೆಗೆ ಬಂದು ಹೋಗು.' ಎಂದು ಸನ್ನೆಮಾಡಿದ.

ಪಾರ್ವತಿ ಸಾವಕಾಶವಾಗಿ ಹತ್ತಿರ ಬಂದಳು. ದೇವದಾಸ ಒಂದು ಸಲ ಅವಳ ಕಡೆ ಮುಖವೆತ್ತಿ ನೋಡಿದ. ಆದರೆ ಕೂಡಲೆ ನೀರಿನ ಕಡೆ ಶೂನ್ಯ ದೃಷ್ಟಿಯಿಂದ ನೋಡತೊಡಗಿದ. 'ದೇವದಾಸ, ಏನಾದರೂ ಹೇಳುವುದಿದೆಯೆ?' ಎಂದು ಕೇಳಿದಳು ಪಾರ್ವತಿ.

ದೇವದಾಸ ಅವಳ ಕಡೆಗೆ ನೋಡದೆಯೆ 'ಹೌದು, ಕುಳಿತುಕೊ.' ಎಂದ.

ಪಾರ್ವತಿ ಕುಳಿತುಕೊಳ್ಳಲಿಲ್ಲ. ಹಾಗೆಯೆ ತಲೆಬಾಗಿಸಿಕೊಂಡು ನಿಂತಿದ್ದಳು. ದೇವದಾಸ ಏನನ್ನೂ ಹೇಳದೆ ಸುಮ್ಮನಿದ್ದುದರಿಂದ ಅವಳು ಮೆಲ್ಲನೆ ಕೆರೆಯ ಮೆಟ್ಟಿಲುಗಳ ಕಡೆಗೆ ಹೊರಟಳು. ದೇವದಾಸ ಅವಳ ಕಡೆ ನೋಡಿ 'ಕೇಳು!' ಎಂದ.

ಪಾರ್ವತಿ ಹಿಂದಿರುಗಿ ಬಂದಳು. ಪುನಃ ದೇವದಾಸ ಮಾತನಾಡ ಲಿಲ್ಲ. ಪಾರ್ವತಿ ಹೊರಟು ಹೋದಳು. ದೇವದಾಸ ಸ್ವಲ್ಪ ಹೊತ್ತು ಸ್ತಬ್ಧನಾಗಿ ಕುಳಿತುಕೊಂಡಿದ್ದ. ಪಾರ್ವತಿ ನೀರು ತುಂಬಿಕೊಂಡು ಹೊರಡಲನುವಾಗಿದ್ದಳು. ಅವನು ಅಲ್ಲಿಗೇ ಹೋಗಿ 'ನಾನು ಬಂದಿರುವೆ.' ಎಂದ.

ಪಾರ್ವತಿ ಬಿಂದಿಗೆಯನ್ನು ಕೆಳಗಿಟ್ಟು ಮುಖ ತಗ್ಗಿಸಿಕೊಂಡು ನಿಂತಳು. ಮಾತನಾಡಲಿಲ್ಲ.

ಸ್ವಲ್ಪ ಹೊತ್ತಿನಮೇಲೆ ಅವಳೇ ಮಧುರ ಸ್ವರದಿಂದ 'ಏಕೆ?' ಎಂದಳು.

'ನೀನು ಬರೆದಿದ್ದೆಯಲ್ಲವೇ?'

'ಇಲ್ಲ!'

'ಪಾರೂ! ಆ ದಿನದ–ರಾತ್ರಿಯ ಮಾತು ಮರೆತೆಯಾ?'

'ಇಲ್ಲ. ಆದರೆ ಆ ಎಲ್ಲ ಮಾತುಗಳಿಂದ ಈಗ ಏನು ಪ್ರಯೋಜನ?'

ಅವಳ ದನಿಯಲ್ಲಿ ನಡುಕವಿರಲಿಲ್ಲ. ಆದರೆ ಕಂಠವು ಒಣಗಿದ್ದಿತು. ದೇವದಾಸನಿಗೆ ಇದರ ಮರ್ಮ ತಿಳಿಯಲಿಲ್ಲ. 'ಕ್ಷಮಿಸು. ಆಗ ನನಗೆ ಅಷ್ಟು ತಿಳಿವು ಇರಲಿಲ್ಲ.' ಎಂದ.

'ಸಾಕು ಸುಮ್ಮಗಿರಿ. ನನಗೆ ಈ ಮಾತುಗಳು ಸರಿಹೋಗುವುದಿಲ್ಲ.'

'ನಾನು ಈಗ ಹೇಗಾದರೂ ಮಾಡಿ ತಂದೆ-ತಾಯಿಗಳ ಮನವನ್ನು ಒಲಿಸುತ್ತೇನೆ. ಆದರೆ ಕೇವಲ ನೀನು....'

ಪಾರ್ವತಿ ದೇವದಾಸನ ಕಡೆ ತೀಕ್ಷ್ಣ ದೃಷ್ಟಿಯಿಂದ ನೋಡಿ 'ನಿಮಗೆ ತಂದೆ–ತಾಯಿಗಳಿದ್ದಾರೆ! ನನಗೆ ಇಲ್ಲವೇನು?' ಎಂದಳು.

ದೇವದಾಸನಿಗೆ ನಾಚಿಕೆಯಾಯಿತು. ಅವನೆಂದ ‘ ಏಕಿಲ್ಲ ಪಾರೂ ! ಇದ್ದಾರೆ. ಅವರ ಒಪ್ಪಿಗೆ ಇದೆ ಇದಕ್ಕೆ. ಆದರೆ ನೀನು ಮಾತ್ರ....’

‘ ನಿಮಗೆ ಹೇಗೆ ಗೊತ್ತು ? ಅವರು ಒಪ್ಪುವುದಿಲ್ಲ.’

‘ ಇಲ್ಲ. ಅವರು ಒಪ್ಪುತ್ತಾರೆ; ಇದು ನನಗೆ ಗೊತ್ತು. ಕೇವಲ ನೀನು..’

ಪಾರ್ವತಿ ದೇವದಾಸನಿಗೆ ಮುಂದೆ ಮಾತನಾಡಗೊಡಲಿಲ್ಲ. ಅವಳು ಅತ್ಯಂತ ತೀಕ್ಷ್ಣವಾದ ದನಿಯಿಂದ ‘ ಕೇವಲ ನಾನು ನಿಮ್ಮ ಕೂಡ...! ಛೀ..! ’ ಎಂದಳು.

ನಿಮಿಷದಲ್ಲಿ ದೇವದಾಸನ ಕಣ್ಣುಗಳು ಕೆಂಡವನ್ನು ಸುರಿಸಿದುವು. ಅವನು ಕಠೋರ ಸ್ವರದಿಂದ ‘ ಏಕೆ ಪಾರ್ವತೀ, ನೀನು ನನ್ನನ್ನು ಮರೆತೆಯಾ ? ’ ಎಂದು ಕೇಳಿದ.

ಪಾರ್ವತಿ ಸ್ವಲ್ಪ ನಡುಗಿದಳು. ಸ್ವಲ್ಪ ಹೊತ್ತಿನಲ್ಲಿ ತನ್ನಲ್ಲಿ ದೃಢತೆಯನ್ನು ತಂದುಕೊಂಡು ಶಾಂತಳಾಗಿ ಗಾಂಭೀರ್ಯದಿಂದ ಉತ್ತರ ಕೊಟ್ಟಳು ‘ ಇಲ್ಲ, ಮರೆತಿಲ್ಲ. ಮರೆಯುವೆನೇಕೆ ? ಚಿಕ್ಕಂದಿನಿಂದ ನಿಮ್ಮನ್ನು ನೋಡುತ್ತಲಿದ್ದೇನೆ. ದೊಡ್ಡವಳಾದ ಬಳಿಕ, ತಿಳಿವು ಬಂದ ಬಳಿಕ, ನಿಮಗೆ ಹೆದರುತ್ತ ಬಂದಿದ್ದೇನೆ. ಅದಕ್ಕಾಗಿ ಈಗ ಹೆದರಿಸಲು ಬಂದಿರುವಿರೇನು ? ನೀವು ನನ್ನನ್ನು ಮರೆತಿರಾ ? ನನ್ನ ಗುರುತೂ ನಿಮಗೆ ಇಲ್ಲವಾಯಿತೇನು ? ’

ಸ್ವಲ್ಪ ಹೊತ್ತಿನ ವರೆಗೆ ದೇವದಾಸನ ಬಾಯಿಂದ ಮಾತುಗಳು ಹೊರಬೀಳಲಿಲ್ಲ. ಆ ಮೇಲೆ, ‘ ಯಾವಾಗಲೂ ನನಗೆ ಹೆದರುತ್ತ ಬಂದಿರುವೆ, ಇಷ್ಟೇ ಏನು ? ’

‘ ಇಲ್ಲ, ಮತ್ತೇನೂ ಇಲ್ಲ. ’

‘ ನಿಜವಾಗಿಯೂ ? ’

‘ ಹೂಂ. ನಿಜವಾಗಿಯೂ ನಿಮ್ಮ ಮೇಲೆ ನನ್ನ ಶ್ರದ್ಧೆ ಎಷ್ಟೂ ಇಲ್ಲ. ನನ್ನ ವಿವಾಹ ಯಾರೊಡನೆ ಆಗುವುದಿದೆಯೊ ಅವರು ಶ್ರೀಮಂತರು, ಬುದ್ಧಿವಂತರು, ಒಳ್ಳೇ ಸ್ವಭಾವದವರು. ಧಾರ್ಮಿಕ

ವೃತ್ತಿಯವರೂ ಅಹುದು. ನನ್ನ ತಂದೆಯವರು ನನ್ನ ಹಿತವನ್ನು ಬಯಸು ತ್ತಾರೆ. ಆದುದರಿಂದಲೇ ನಿಮ್ಮಂತಹ ಅಜ್ಞಾನಿಗಳಿಗೆ, ಚಂಚಲ ಚಿತ್ತ ರಿಗೆ, ದುರ್ದಮನೀಯ ಮನುಷ್ಯರಿಗೆ ನನ್ನನ್ನು ಒಪ್ಪಿಸಲು ಅವರು ಬಯಸುವುದಿಲ್ಲ. ಸರಿಯಿರಿ, ದಾರಿ ಬಿಡಿರಿ.'

ದೇವದಾಸ ದಾರಿ ಬಿಡಬೇಕೆಂದು ಬಗೆದ. ಆದರೆ ಸ್ವಲ್ಪ ಹೊತ್ತು ತಡೆದು ಮುಖವನ್ನು ಮೇಲಕ್ಕೆತ್ತಿ 'ಇಷ್ಟು ಅಹಂಕಾರವೆ?' ಎಂದ.

'ಏಕೆ ಇರಕೂಡದು? ನಿಮಗೆ ಅಹಂಕಾರವಿರಬೇಕು, ನನಗೆ ಮಾತ್ರ ಇರಬಾರದೋ? ನಿಮ್ಮಲ್ಲಿ ರೂಪವಿದೆ, ಗುಣವಿಲ್ಲ. ನನ್ನಲ್ಲಿ ರೂಪವೂ ಇದೆ; ಗುಣವೂ ಇದೆ. ನೀವು ಶ್ರೀಮಂತರಿರಬಹುದು. ಆದರೆ ನನ್ನ ತಂದೆಯವರು ಭಿಕ್ಷುಕರಲ್ಲ. ಅಲ್ಲದೆ ನಾನು ನಿಮಗಿಂತ ಏತರಲ್ಲೂ ಕಡಿಮೆಯಿಲ್ಲ.'

ದೇವದಾಸ ದಿಙ್ಮೂಢನಾದ. ಪಾರ್ವತಿ ಪುನಃ ಹೇಳತೊಡಗಿದಳು. 'ನನಗೆ ಏನನ್ನಾದರೂ ಹಾನಿ ಮಾಡುವಂತಿದ್ದರೆ ಮಾಡಬಹುದು. ಅದೇನೂ ನಿಮಗೆ ದೊಡ್ಡ ಕೆಲಸವಲ್ಲ. ಒಳ್ಳೇದು, ಅದನ್ನು ಮಾಡಿ ಬಿಡಿರಿ. ಸರಿಯಿರಿ, ದಾರಿ ಬಿಡಿರಿ.'

ದೇವದಾಸ ಕೇಳಿದ 'ನಿನಗೇನು ಹಾನಿ ಮಾಡಬಲ್ಲೆ?'

'ಅಪರಾಧವನ್ನು ಹೊರಿಸಿ!'

ಇದನ್ನು ಕೇಳಿದ ಕೂಡಲೇ ದೇವದಾಸನ ಮೇಲೆ ವಜ್ರಾಘಾತ ವಾದಂತಾಯಿತು. ಅವನಿಷ್ಟೇ ಎಂದ. 'ನಾನು ಅಪರಾಧ ಹೊರಿಸುವೆನೆ? ನಾ..ನು ಹೊರಿಸುವೆನೆ?'

ಪಾರ್ವತಿ ವ್ಯಂಗ್ಯವಾಗಿ ನಕ್ಕು 'ಹೋಗಿರಿ, ಉಳಿದ ಸಮಯದಲ್ಲಿ ನನ್ನ ಹೆಸರಿಗೆ ಕಲಂಕ ಹಚ್ಚಿರಿ. ಆ ದಿನ ರಾತ್ರಿ ನಾನೊಬ್ಬಳೇ ನಿಮ್ಮ ಬಳಿ ಬಂದಿದ್ದೆನೆಂದು ಊರೆಲ್ಲ ಸಾರಿರಿ. ಇದರಿಂದ ನಿಮ್ಮ ಮನಸ್ಸಿಗೆ ಸಮಾಧಾನವಾದರೂ ಆದೀತು!' ಎಂದಳು. ಈ ಮಾತುಗಳನ್ನಾಡು ವಾಗ ಅವಳ ಕೆಂದುಟಿಗಳು ಬಹಳವಾಗಿ ಕಂಪಿಸುತ್ತಿದ್ದುವು.

ದೇವದಾಸನ ಹೃದಯದಲ್ಲಿ ಕೋಪದ, ಅಪಮಾನದ ಜ್ವಾಲಾಮುಖಿಯು ಜೋರಾಗಿ ಕುದಿಯಲಾರಂಭಿಸಿತು. ಅವನು 'ನಾನು ಸುಳ್ಳು ಅಪವಾದ ಹೊರಿಸಿ ಸಮಾಧಾನ ಹೊಂದುವಂತಹನೆ?' ಎಂದು ಕೈಯಲ್ಲಿದ್ದ ಬಿದಿರಿನ ಕೋಲನ್ನು ಗಟ್ಟಿಯಾಗಿ ಹಿಡಿದೆತ್ತಿ 'ಕೇಳು ಪಾರ್ವತೀ, ಇಷ್ಟು ಸುಂದರ ರೂಪವಿರುವುದು ಒಳಿತಲ್ಲ. ಅದರಿಂದ ಅಹಂಕಾರ ಮಿತಿಮೀರಿ ಬೆಳೆಯುತ್ತದೆ.' ಎಂದು ನುಡಿದು, ಮೆಲ್ಲಗೆ 'ಚಂದ್ರನು ಅತ್ಯಂತ ಸುರೂಪಿ. ಕಾಣುವುದಿಲ್ಲವೆ, ಅವನಿಗೂ ಕಲಂಕ ತಗುಲಿದೆ! ಅವನ ಮೇಲೆ ಕಪ್ಪುಕಪ್ಪಾದ ಕಲೆಗಳಿವೆ. ಕಮಲಗಳು ಬೆಳ್ಳಗಿವೆ. ಅದರಿಂದಲೇ ಅವುಗಳ ಬಳಿ ಭ್ರಮರಗಳು ಬರುತ್ತವೆ. ಬಾ, ನಿನ್ನ ಮುಖದ ಮೇಲೂ ಸ್ವಲ್ಪ ಕಲಂಕದ ಕಲೆಯನ್ನು ಹಚ್ಚುತ್ತೇನೆ.' ಎಂದ.

ಅವನಲ್ಲಿ ತಾಳ್ಮೆ ಉಳಿಯಲಿಲ್ಲ. ಜೋರಿನಿಂದ ಬಿದಿರನ್ನೆತ್ತಿ ಪಾರ್ವತಿಯ ತಲೆಯ ಮೇಲೆ ಜೋರಾಗಿ ಹೊಡೆದ. ಎಡಗಡೆಯ ಹಣೆ–ಹುಬ್ಬಿನ ಮೇಲೆ ಏಟು ಬಲವಾಗಿ ಬಿದ್ದಿತು. ನಿಮಿಷದಲ್ಲಿ ಮುಖವೆಲ್ಲ ರಕ್ತಮಯವಾಯಿತು. ಪಾರ್ವತಿ ಬಿದ್ದುಬಿಟ್ಟಳು. 'ದೇವದಾಸ, ಇದನ್ನೇನು ಮಾಡಿದಿರಿ?' ಎಂದಳು.

ಬಿದಿರನ್ನು ಚೂರುಚೂರಾಗಿ ಮುರಿದು ನೀರಿನಲ್ಲಿ ಎಸೆದು ದೇವದಾಸ 'ಇಲ್ಲ, ಏನೂ ಇಲ್ಲ, ಸ್ವಲ್ಪ ತಲೆ ಸೀಳಿದೆ.' ಎಂದ.

ಅವಳು ವ್ಯಾಕುಲತೆಯಿಂದ ಅಳುತ್ತ 'ದೇವದಾಸ!' ಎಂದಳು. ದೇವದಾಸ ತನ್ನ ದೋತರವನ್ನು ಹರಿದು ನೀರಿನಲ್ಲಿ ಅದ್ದಿ ಅದರಿಂದ ಗಾಯವನ್ನು ತೊಳೆದು ಕಟ್ಟಿ 'ಪಾರೂ, ಗಾಯ ದೊಡ್ಡದಿಲ್ಲ. ಗಾಬರಿಗೊಳ್ಳಬೇಡ. ಬೇಗ ವಾಸಿಯಾಗುವುದು. ಅದರ ಕಲೆಯೊಂದು ಮಾತ್ರ ಉಳಿಯುವುದು. ಯಾರಾದರೂ ನಿನಗೆ ಈ ಕಲೆಯ ವಿಷಯವಾಗಿ ಕೇಳಿದರೆ ಸುಳ್ಳು ಹೇಳು. ಇಲ್ಲದಿದ್ದರೆ ನಿನ್ನ ಈ ಕಲಂಕದ ಮಾತನ್ನು ಹೇಳು' ಎಂದ.

'ಅಯ್ಯಯ್ಯೊ!'

'ಹೀಗೆನ್ನಬೇಡ ಪಾರೂ! ಅಗಲಿಕೆಯ ಕೊನೆಯ ದಿನಗಳಲ್ಲಿ ಈ

ಗುರುತು ಮಾಡಿರುವೆ, ಚಿನ್ನದಂತಹ ಈ ಮುಖವನ್ನು ಆಗಾಗ್ಗೆ ಕನ್ನಡಿಯಲ್ಲಿ ನೋಡಿಕೊಳ್ಳುವಾಗ ನೆನಪಾಗಲೆಂದು.' ಎಂದು ತನ್ನ ಈ ಮಾತಿಗೆ ಉತ್ತರ ಪಡೆಯದೆ ದೇವದಾಸ ಹೊರಡಲು ಸಿದ್ಧನಾದ.

ಪಾರ್ವತಿ ಅಳುತ್ತ 'ದೇವದಾಸ' ಎಂದು ಉಸಿರುಗರೆದಳು.

ದೇವದಾಸ ಹೊರಟವನು ಹಿಂದಿರುಗಿ ಬಂದ. ಅವನ ಕಣ್ಣಿನ ಕುಡಿಯಲ್ಲಿ ಕಣ್ಣೀರಿನ ಒಂದು ಹನಿಯಿದ್ದಿತು. ಅವನು, ಅತ್ಯಂತ ಸ್ನೇಹದಿಂದ ಬಿಗಿದು ಬಂದ ದನಿಯಿಂದ 'ಏಕೆ ಪಾರೂ!' ಎಂದ.

'ಯಾರಿಗೂ ಹೇಳಬೇಡಿರಿ.' ಎಂದಳು ಪಾರ್ವತಿ.

ದೇವದಾಸ ಕ್ಷಣಕಾಲ ತಡೆದು, ಬಾಗಿ, ಪಾರ್ವತಿಯ ಕೇಶರಾಶಿಯನ್ನು ಹಿಡಿದು ಮೆಲ್ಲಗೆ ಅವಳ ಮುಖವನ್ನು ಮೇಲಕ್ಕೆತ್ತಿ ತುಟಿಗಳನ್ನು ಸ್ಪರ್ಶಿಸಿ 'ಛಿ, ನೀನು ಪರಕೀಯಳೇ? ನಿನಗೆ ನೆನಪಿರಲಿಕ್ಕಿಲ್ಲ, ಚಿಕ್ಕಂದಿನಲ್ಲಿ ನಿನ್ನನ್ನು ಪೀಡಿಸಲಿಕ್ಕೆ ನಿನ್ನ ಕಿವಿಗಳನ್ನೂ ಹಿಂಡಿದ್ದೇನೆ.' ಎಂದ.

'ದೇವದಾಸರೇ, ನನ್ನನ್ನು ಕ್ಷಮಿಸಿ!'

'ಹೀಗೇಕೆ ಆಡುತ್ತಿ ಪಾರೂ? ನಿಜವಾಗಿಯೂ ಮರೆತೆಯಾ? ನಾನು ನಿನ್ನನ್ನು ಎಂದು ಕ್ಷಮಿಸಿಲ್ಲ?'

'ದೇವದಾಸ....!'

'ಪಾರ್ವತೀ, ನಾನು ಹೆಚ್ಚು ಮಾತನಾಡುವುದಿಲ್ಲವೆಂಬುದು ನಿನಗೆ ಗೊತ್ತಿದೆ. ಬಹಳ ಹೊತ್ತಿನ ವರೆಗೆ ಯೋಚಿಸಿ ಕೆಲಸ ಮಾಡುವ ಸ್ವಭಾವ ನನ್ನದಲ್ಲ. ಮನಸ್ಸಿಗೆ ಬಂದುದನ್ನು ಕೂಡಲೇ ಮಾಡಿಬಿಡುತ್ತೇನೆ.' ಎಂದು ಪಾರ್ವತಿಯ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸುತ್ತ 'ನೀನು ಒಳಿತಾದುದನ್ನೇ ಮಾಡಿದೆ. ನನ್ನೊಂದಿಗಿದ್ದರೆ ನಿನಗೆ ಸುಖ ಸಿಕ್ಕುತ್ತಿರಲಿಲ್ಲ. ಆದರೆ ನಿನ್ನ ಈ ದೇವದಾಸನಿಗೆ ಮಾತ್ರ ಅಕ್ಷಯ ಸುಖ ಸಿಗುತಿದ್ದಿತು.' ಎಂದ.

ಈ ಸಮಯಕ್ಕೆ ಸರಿಯಾಗಿ ಕೆರೆಯ ಕಡೆಗೆ ಕೆಲ ಜನರು ಬರುತ್ತಿದ್ದರು. ಪಾರ್ವತಿ ಕೆರೆಯಲ್ಲಿ ನೀರು ತುಂಬಲು ಇಳಿದಿದ್ದಳು. ದೇವದಾಸ ಹೊರಟು ಹೋಗಿದ್ದ. ಪಾರ್ವತಿ ಮನೆಗೆ ಹೋಗುವ ಹೊತ್ತಿಗೆ

ಸೂರ್ಯಾಸ್ತ ಹತ್ತಿರಿಸಿತ್ತು. ಅವಳನ್ನು ನೋಡಿ, 'ಕೆರೆಯಿಂದ ನೀರು ತರುತ್ತೀಯೇನಮ್ಮಾ ಪಾರೂ!' ಎಂದಳು ಅಜ್ಜಿ. ಅಜ್ಜಿಯ ಕಣ್ಣು ಪಾರ್ವತಿಯ ಮುಖದ ಕಡೆಗೆ ಹೋಯಿತು.'ಅಯ್ಯೋ, ಇದೇನಾಯಿತು?' ಎಂದು ಕೂಗಿದಳು ಅಜ್ಜಿ. ಬಟ್ಟೆ ರಕ್ತದಿಂದ ತೊಯ್ದು ಹೋಗಿದ್ದಿತು.

ಪಾರ್ವತಿ ಬಿಂದಿಗೆಯನ್ನು ಕೆಳಗಿಳಿಸಿದಳು. ಅವಳ ತಾಯಿಯೂ ಅಲ್ಲಿಗೆ ಬಂದು ಕೇಳಿದರು. 'ಇದು ಹೇಗಾಯಿತು ಮಗೂ?'

'ಮೆಟ್ಟಿಲುಗಳ ಮೇಲೆ ಕಾಲು ಜಾರಿತು, ಬಿದ್ದೆ. ಸ್ವಲ್ಪ ಗಾಯ ವಾಯಿತು.' ಎಂದಳು ಪಾರ್ವತಿ.

ಎಲ್ಲರೂ ಒಟ್ಟಾಗಿ ಸೇರಿ ಆರೈಕೆ ಮಾಡಿದರು. ಗಾಯ ದೊಡ್ಡ ದಾಗಿರಲಿಲ್ಲ. ನಾಲ್ಕೈದು ದಿನಗಳಲ್ಲಿ ಮಾಯ್ದು ಹೋಯಿತು. ಬಳಿಕ ಎಂಟು ಹತ್ತು ದಿನಗಳು ಕಳೆದು ಹೋದುವು. ಹಾಥೀಪೋಥಾ ಗ್ರಾಮ ದಿಂದ ಭುವನಮೋಹನ ಚೌಧುರಿಯವರು ವಿವಾಹಕ್ಕಾಗಿ ಬಂದರು. ಮದುವೆ ಅಷ್ಟು ವೈಭವದಿಂದೇನೂ ಜರುಗಲಿಲ್ಲ. ಇಷ್ಟು ವಯಸ್ಸಿನಲ್ಲಿ ನವ ಯುವಕನಂತೆ ವೈಭವದಿಂದ ವಿವಾಹವಾಗುವುದು ಚೌಧುರಿಯವ ರಿಗೆ ಒಳಿತೆನಿಸಲಿಲ್ಲ. ಅವರು ಅಜ್ಞಾನಿಗಳಿರಲಿಲ್ಲ.

ವರನ ವಯಸ್ಸು ಸುಮಾರು ನಾಲ್ವತ್ತನ್ನು ಮಿಕ್ಕಿದೆ. ವರನ ವರ್ಣ ಗೌರವರ್ಣ. ಸ್ವಲ್ಪ ದಪ್ಪವಾಗಿದ್ದಾರೆ. ಮೀಸೆಯ ಕೂದಲು ಕಪ್ಪೂ ಇವೆ; ಬಿಳಿಪೂ ಆಗಿವೆ. ತಲೆಯ ಮುಂಭಾಗ ಖಲ್ವಾಟವಾಗಿದೆ; ಕೂದಲುಗಳೇ ಇಲ್ಲ. ವರನನ್ನು ನೋಡಿ ಕೆಲವರು ನಕ್ಕರು; ಕೆಲವರು ಸುಮ್ಮನಿದ್ದರು. ಭುವನಬಾಬುಗಳು ಅಪರಾಧಿಯಂತೆ ಗಂಭೀರವಾಗಿ ವಿವಾಹ ಮಂಟಪಕ್ಕೆ ಬಂದರು. ಯಾವ ಹೆಂಗುಸೂ ಅವರೊಡನೆ ತಮಾಷೆ ಮಾಡಲಿಲ್ಲ. ಮಂಗಳಕಾಲದಲ್ಲಿ ಪಾರ್ವತಿ ಸ್ವಲ್ಪ ನಾಚಿಕೆ ಯಿಂದ ನೋಡುತಿದ್ದಳು. ತುಟಿಯ ತುದಿಯಲ್ಲಿ ನಸುನಗೆಯೂ ಸ್ವಲ್ಪ ಮೂಡಿದ್ದಿತು. ಭುವನಬಾಬುಗಳು ಚಿಕ್ಕವರಂತೆ ಕೆಳಗೇ ದೃಷ್ಟಿಯನ್ನಿಟ್ಟು ಕುಳಿತುಕೊಂಡಿದ್ದರು. ಹಳ್ಳಿಯ ಹೆಂಗುಸರು ನಗುತಿದ್ದರು. ಚಕ್ರವರ್ತಿ ಮಹಾಶಯರು ಅತ್ತಿತ್ತ ಓಡಾಡುತಿದ್ದರು. ವಯಸ್ಸಾದ ಅಳಿಯನನ್ನು

ಪಡೆದುದರಿಂದ ಅವರ ಮನಸ್ಸು ಸ್ವಲ್ಪ ಕಲಕಿದ್ದಿತು. ಆ ದಿನ ಕನ್ಯಾ ಪಕ್ಷದ ವ್ಯವಸ್ಥೆಯ ಭಾರವೆಲ್ಲ ನಾರಾಯಣ ಮುಖ್ಯೋಪಾಧ್ಯಾಯರ ಮೇಲಿದ್ದಿತು. ಅವರು ನುರಿತ ವ್ಯವಸ್ಥಾಪಕರು. ಯಾವುದರಲ್ಲೂ ಕೊರತೆ ಯಾಗಗೊಡಲಿಲ್ಲ. ಮಂಗಲಕಾರ್ಯ ನಿರ್ವಿಘ್ನವಾಗಿ ಕೊನೆಗಂಡಿತು.

ಮರುದಿನ ಬೆಳಿಗ್ಗೆ ಭುವನಬಾಬುಗಳು ಆಭರಣದ ಪೆಟ್ಟಿಗೆಯೊಂದನ್ನು ಪಾರ್ವತಿಯ ಕಡೆಗೆ ಕಳಿಸಿದರು. ಆಭರಣಗಳು ಪಾರ್ವತಿಯ ಮೈಮೇಲೆ ನಲಿಯತೊಡಗಿದವು. ಅದನ್ನು ನೋಡಿ ಪಾರ್ವತಿಯ ತಾಯಿ ತಮ್ಮ ಕಣ್ಣೊರಸಿಕೊಂಡರು. ಬಳಿಯಲ್ಲಿದ್ದ ದೇವದಾಸನ ತಾಯಿಯವರು 'ಕಣ್ಣೀರು ಸುರಿಸಿ ಅಶುಭ ಮಾಡಬೇಡ.' ಎಂದು ಸಸ್ನೇಹ ತಿರಸ್ಕಾರದಿಂದ ನುಡಿದರು.

ಸಂಜೆಯಾಗುವ ಮೊದಲು ಪಾರ್ವತಿಯನ್ನು ಒಂದು ಕೋಣೆಗೆ ಕರೆದುಕೊಂಡು ಹೋಗಿ ಮನೋರಮೆ ಆಶೀರ್ವದಿಸಿದಳು. ಬಳಿಕ 'ಆದದ್ದೆಲ್ಲ ಒಳಿತಾಯಿತು. ನೀನು ಮೊದಲಿಗಿಂತಲೂ ಸುಖವಾಗಿರುವಿ. ಇದು ನಿನಗೇ ಗೊತ್ತಾಗುವುದು.' ಎಂದಳು ಮನೋರಮಾ.

'ಹೌದು, ಸುಖಿಯಾಗಿರುವೆ. ಆದರೆ ಈಗ ಸ್ವಲ್ಪ ದಿನಗಳ ಹಿಂದೆ ಯಮನ ಪರಿಚಯವಾಗುವುದರಲ್ಲಿದ್ದಿತು.'

'ಇದೆಂತಹ ಮಾತೆ?'

'ಸಮಯ ಬಂದರೆ ಎಲ್ಲವೂ ತಿಳಿಯುವುದು.'

ಮನೋರಮೆ ಮಾತನ್ನು ತಿರುಗಿಸಿ ಎಂದಳು 'ದೇವದಾಸನನ್ನು ಒಮ್ಮೆ ಕರೆತಂದು ನಿನ್ನ ಈ ಮೂರ್ತಿಯನ್ನು ತೋರಿಸಬೇಕೆಂದು..'

ಪಾರ್ವತಿ ಚಮಕಿತಳಾಗಿ 'ಕರೆತರುವಿಯಾ? ಒಂದು ಸಲವಾದರೂ ಕರೆದುಕೊಂಡು ಬರಲಾರೆಯಾ?' ಎಂದು ಕೇಳಿದಳು.

ಮನೋರಮೆಯ ಕಂಠವೂ ಗದ್ಗದಿತವಾಯಿತು. ಅವಳು 'ಏಕೆ ಪಾರೂ!' ಎಂದಳು.

ಪಾರ್ವತಿ ಕೈಯೊಳಗಿನ ಬಂಗಾರದ ಬಳೆಗಳನ್ನು ತಿರುಗಿಸುತ್ತ

'ಒಮ್ಮೆ ಅವರ ಪಾದಧೂಳಿಯನ್ನು ಮಸ್ತಕದ ಮೇಲಿಟ್ಟುಕೊಂಡು ಹರ್ಷಿತಳಾಗಬೇಕೆಂದಿದ್ದೇನೆ. ಈ ದಿನ ನಾನು ಹೋಗಬೇಕಾಗಿಲ್ಲವೆ?' ಎಂದಳು.

ಮನೋರಮೆ ಪಾರ್ವತಿಯನ್ನು ತಬ್ಬಿಕೊಂಡಳು. ಇಬ್ಬರೂ ಬಹಳ ಹೊತ್ತಿನ ವರೆಗೆ ಕಣ್ಣೀರು ಸುರಿಸುತಿದ್ದರು. ಸಾಯಂಕಾಲ ವಾಯಿತು. ಕತ್ತಲು ಕವಿಯಿತು. ಅಜ್ಜಿ ಬಾಗಿಲನ್ನು ತಟ್ಟಿ 'ಪಾರೂ, ಮನೊ, ಸ್ವಲ್ಪ ಹೊರಗೆ ಬನ್ನಿರಮ್ಮ!' ಎಂದಳು. ಅವರು ಹೊರಗೆ ಬಂದರು.

ಅದೇ ದಿನ ರಾತ್ರಿ ಪಾರ್ವತಿ ತನ್ನ ಗಂಡನ ಮನೆಗೆ ಹೊರಟು ಹೋದಳು.

## ೯

ಮತ್ತೆ ದೇವದಾಸ?

ಆ ದಿನ ರಾತ್ರಿ ದೇವದಾಸ ಈಡನ್ ಗಾರ್ಡನಿನಲ್ಲಿ ಬೆಂಚಿನ ಮೇಲೆ ಒಬ್ಬನೇ ಕುಳಿತುಕೊಂಡು ಹೊತ್ತುಗಳೆದ.

ದೇವದಾಸನಿಗೆ ಅತ್ಯಂತ ಕ್ಲೇಶವಾಗುತಿದ್ದಿತು, ಅಥವಾ ಅಸಹ್ಯ ಯಾತನೆಯಿಂದ ಅವನು ಬಳಲುತಿದ್ದನು ಎಂದೇನೂ ಅಲ್ಲ. ಆದರೆ ಅವನ ಹೃದಯದಲ್ಲಿ ಅನಿರ್ವಚನೀಯವಾದ ಒಂದು ಬಗೆಯ ಉದಾಸೀನತೆ ಒಟ್ಟುಗೂಡುತಿತ್ತು. ನಿದ್ದೆಯಲ್ಲಿ ಯಾವುದೊಂದು ಅವಯವಕ್ಕೆ ಪಕ್ಷಾಘಾತವಾದಾಗ ನಿದ್ದೆಯಿಂದ ಎದ್ದನಂತರ, ಎಷ್ಟು ಪ್ರಯತ್ನಪಟ್ಟರೂ ಆ ಅವಯುವದ ಮೇಲೆ ತನ್ನ ಅಧಿಕಾರ ನಡೆಯದಂತಾಗಲು, ಆಶ್ಚರ್ಯಾನ್ವಿತ ಮನಸ್ಸಿನೆದುರಿಗೆ ಒಂದು ಪ್ರಶ್ನೆ ಬಂದು ನಿಲ್ಲುವುದು; ಮತ್ತು ಆ ಪ್ರಶ್ನೆಯನ್ನು ಬಿಡಿಸಲೂ ಆಗುವುದಿಲ್ಲ. ಹುಟ್ಟಿದಾಗಿನಿಂದಲೂ ತನಗೆ ಜೊತೆಯಾಗಿದ್ದ ತನ್ನ ಈ ನಂಬುಗೆಯ ಅವಯವವು ತಾನು ಅಪ್ಪಣೆ ಕೊಟ್ಟರೂ ಅದೇಕೆ ಉತ್ತರಕೊಡುವುದಿಲ್ಲ? ಅನಂತರ ಸಾವಕಾಶವಾಗಿ ಅವನಿಗೆ ತಿಳಿಯತೊಡಗುವುದು, ಈ ಅವಯವ ತನ್ನದಾಗಿಲ್ಲವೆಂದು. ದೇವದಾಸನ ಸ್ಥಿತಿಯೂ ಅಂತೆಯೆ ಆಗಿತ್ತು. ಆ ಇಡೀ ರಾತ್ರಿಯೆಲ್ಲ ಅವನಿಗೆ ಈ ಅನುಭವ ಬರತೊಡಗಿತು—ತನ್ನ ಪ್ರಪಂಚಕ್ಕೆ ಇದೇ ಈಗ ಯಾವಾಗಲೊ ಪಕ್ಷಾಘಾತವಾಗಿದೆ. ಇನ್ನು ತನ್ನ ಮತ್ತು ಅದರ ನಿರಂತರ ವಿಯೋಗವಾಗಿಬಿಡುತ್ತದೆ. ಇನ್ನು ಮೇಲೆ ಆ ಬಗ್ಗೆ ವ್ಯರ್ಥ ಅಭಿಮಾನ ಹಿಡಿದುಕೊಂಡಿರುವುದು ತರವಲ್ಲ. ಹಿಂದಿನ ಆ ತನ್ನ 'ಅಧಿಕಾರ' ವನ್ನು ನೆನಸುತ್ತ ಇರುವುದು ಕೇವಲ ಮೂರ್ಖತನ!

ಹೀಗೆ ಅವನು ಯೋಚನಾತರಂಗದಲ್ಲಿ ಮುಳುಗಿರುವಾಗ ಸೂರ್ಯೋದಯವಾಗಲಾರಂಭಿಸಿದ್ದಿತು. ಆಗ ಅವನು 'ಎಲ್ಲಿಗೆ ಹೋಗಲಿ?' ಎಂದು ಚಿಂತಿಸತೊಡಗಿದ. ಕೂಡಲೇ ಅವನಿಗೆ ಚುನ್ನಿಲಾಲನ ಹೊಟಲಿನ

ನೆನಪಾಯಿತು. ಅತ್ತ ಕಡೆಗೇ ಹೊರಟ. ದಾರಿಯಲ್ಲಿ ಎರಡು ಸಲ ಎಡವಿದ. ಬೆರಳಿಗೆ ಪೆಟ್ಟು ತಗುಲಿ ರಕ್ತವೂ ಬಂದಿತು. ಸೆರೆಗುಡಕನಂತೆ ಹೊಯ್ದಾಡುತ್ತ ಅವನು ಸಾಗಿದ್ದಾಗ ಅಸ್ವರ ಮೇಲೆ ಬೀಳುತ್ತಿರುವಂತೆ ಕಾಣುತ್ತಿದ್ದಿತು. ಸೆರೆಗುಡುಕನೆಂದು ಒಬ್ಬಿಬ್ಬರು ತಳ್ಳಿಯೂ ಬಿಟ್ಟರು. ಇದೇ ರೀತಿಯಾಗಿ ಅಲೆಯುತ್ತ ಸಂಜೆಗೆ ಹೋಟಲಿಗೆ ಬಂದು ತಲ್ಪಿದ.

ಆಗ ಚುನ್ನೀಲಾಲ ಸಿಂಗರಿಸಿಕೊಂಡು ಹೊರಗೆ ಹೋಗಲು ಸಿದ್ಧನಾಗಿ ನಿಂತಿದ್ದ. ದೇವದಾಸನನ್ನು ನೋಡಿ ಕೇಳಿದ 'ಇದೇನು ದೇವದಾಸಬಾಬೂ ?'

ದೇವದಾಸ ಸುಮ್ಮನೆ ನಿಂತಿದ್ದ.

'ಯಾವಾಗ ಬಂದಿರಿ ? ಮುಖ ಬಾಡಿ ಹೋಗಿದೆ. ಸ್ನಾನ ಊಟ ಆಗಿಲ್ಲವೆ ?' ದೇವದಾಸ ನಿಂತಲ್ಲಿಯೆ ಕುಳಿತುಬಿಟ್ಟ. ಚುನ್ನೀಲಾಲ ಕೈಹಿಡಿದೆಬ್ಬಿಸಿ, ಒಳಗೆ ಕರೆದುಕೊಂಡು ಹೋಗಿ ಹಾಸಿಗೆಯ ಮೇಲೆ ಕುಳ್ಳಿರಿಸಿ, ಅವನಿಗೆ ಸ್ವಲ್ಪ ಸಮಾಧಾನವಾಗುವಂತೆ ಮಾಡಿ 'ಏನು ಆಗಿದೆ ದೇವದಾಸಬಾಬು ?' ಎಂದು ಕೇಳಿದ.

'ನಿನ್ನೆ ಮನೆಯಿಂದ ಹೊರಟು ಬಂದೆ'

'ಇಡೀ ರಾತ್ರಿ ಎಲ್ಲಿದ್ದಿರಿ ?'

'ಈಡನ್ ಗಾರ್ಡನಿನಲ್ಲಿ'

'ಹುಚ್ಚೇನು ನಿಮಗೆ ? ಏನಾಗಿದೆ ?'

'ಕೇಳಿ ಏನು ಮಾಡುವಿರಿ ?'

'ಇರಲಿ, ಸದ್ಯಕ್ಕೆ ಊಟ ಮಾಡಿರಿ. ನಿಮ್ಮ ಸಾಮಾನುಗಳೆಲ್ಲಿ ?'

'ಸಾಮಾನು ತರಲಿಲ್ಲ'

'ಸರಿ. ಹೋಗಿರಿ, ಸ್ನಾನ ಮಾಡಿ ಊಟ ಮಾಡಿರಿ'

ದೇವದಾಸ ಊಟಕ್ಕೆದ್ದ ಮೇಲೆ ಚುನ್ನೀಲಾಲ ಗಟ್ಟಿಯಾಗಿ ನಕ್ಕ. ದೇವದಾಸ ಬಂದ ಮೇಲೆ ತನ್ನ ಹಾಸಿಗೆಯ ಮೇಲೆಯೆ ಮಲಗ ಹೇಳಿ

'ಸ್ವಲ್ಪ ನಿದ್ದೆ ಮಾಡಲು ಪ್ರಯತ್ನಿಸಿರಿ. ನಾನು ರಾತ್ರಿ ಬಂದು ಎಬ್ಬಿಸುತ್ತೇನೆ' ಎಂದು ಕೋಣೆಯ ಬಾಗಿಲು ಹಾಕಿಕೊಂಡು ಚುನ್ನೀಲಾಲ ಹೊರಟುಹೋದ.

ಚುನ್ನೀಲಾಲ ರಾತ್ರಿ ೧೦ ಗಂಟೆಗೆ ತಿರುಗಿ ಬಂದಾಗ ದೇವದಾಸನಿಗೆ ಗಾಢನಿದ್ರೆ. ಚುನ್ನೀಲಾಲ ಅವನನ್ನು ಎಬ್ಬಿಸಲಿಲ್ಲ. ಅವನೂ ಹಾಗೆಯೆ ಚಾಪೆಯ ಮೇಲೆ ಬ್ಲಾಂಕೆಟ್ಟನ್ನು ಹೊದ್ದುಕೊಂಡು ಮಲಗಿದ. ದೇವದಾಸನಿಗೆ ರಾತ್ರಿಯಲ್ಲಿ ನಿದ್ರಾಭಂಗವಾಗಲೇ ಇಲ್ಲ. ಹಗಲು ಹತ್ತು ಗಂಟೆಯ ವರೆಗೂ ಮಲಗಿದ್ದು ಆ ಮೇಲೆ ಹಾಸಿಗೆಯ ಮೇಲೆ ಎದ್ದು ಕುಳಿತು 'ಚುನ್ನೀಬಾಬೂ, ಯಾವಾಗ ಬಂದಿರಿ?' ಎಂದು ಕೇಳಿದ.

'ಈಗ'

'ನಿಮಗೆ ಏನೂ ತೊಂದರೆಯಾಗಲಿಲ್ಲವೆ?'

'ಇಲ್ಲ'

ಸ್ವಲ್ಪ ಹೊತ್ತು ಚುನ್ನೀಲಾಲನ ಕಡೆಗೆ ನೋಡಿ ದೇವದಾಸ ಕೇಳಿದ 'ಚುನ್ನೀಬಾಬೂ, ನನ್ನಲ್ಲಿ ಏನೂ ಇಲ್ಲ. ನನಗೆ ಸ್ವಲ್ಪ ಆಶ್ರಯ ಕೊಡುವಿರಾ?'

ಚುನ್ನೀಲಾಲ ನಸು ನಕ್ಕ. ದೇವದಾಸನ ತಂದೆಯವರು ಆಗರ್ಭ ಶ್ರೀಮಂತರೆಂದು ಚುನ್ನೀಲಾಲನಿಗೆ ಗೊತ್ತಿದ್ದಿತು. ಆದುದರಿಂದಲೇ ನಕ್ಕು ನಿರ್ಭಯನಾಗಿ 'ನಾನು ಆಶ್ರಯ ಕೊಡಬೇಕೆ? ಎಷ್ಟು ದಿನ ಬೇಕೊ ಅಷ್ಟು ದಿನ ಇರಿ. ಯಾವುದಕ್ಕೂ ಸಂಕೋಚ ಬೇಡ, ವ್ಯಥೆಪಟ್ಟುಕೊಳ್ಳಬೇಡಿರಿ' ಎಂದ.

'ಚುನ್ನೀಬಾಬೂ, ನಿಮಗೆ ಆದಾಯವೆಷ್ಟು? ಆಸ್ತಿಯೆಷ್ಟು?'

'ಸಾಧಾರಣವಾಗಿದೆ ಆದಾಯ, ಕೆಲವು ಜಮೀನುಗಳಿವೆ. ಅವನ್ನು ಅಣ್ಣನಿಗೆ ಒಪ್ಪಿಸಿ ಇಲ್ಲಿಗೆ ಬಂದಿದ್ದೇನೆ. ಅವರು ಪ್ರತಿ ತಿಂಗಳೂ ಸುಮಾರು ೭೦ ರೂಪಾಯಿಗಳನ್ನು ಕಳಿಸುತ್ತಾರೆ. ಅಷ್ಟರಲ್ಲಿಯೆ ನನ್ನ ನಿರ್ವಾಹ ಚೆನ್ನಾಗಿ ಸಾಗುತ್ತದೆ'

'ನೀವು ಮನೆಗೆ ಏಕೆ ಹೋಗುವುದಿಲ್ಲ?'

'ಅನೇಕ ಕಾರಣಗಳಿವೆ'

ದೇವದಾಸ ಮತ್ತೆ ವಿಚಾರಿಸಲಿಲ್ಲ. ಊಟಕ್ಕೆ ಕರೆ ಬಂದಿತು. ಇಬ್ಬರೂ ಸ್ನಾನ, ಊಟ ಮುಗಿಸಿಕೊಂಡು ಪುನಃ ಕೋಣೆಯಲ್ಲಿ ಬಂದು ಕುಳಿತರು. ಮಾತುಕತೆಗೆ ಆರಂಭವಾಯಿತು.

'ದೇವದಾಸಬಾಬೂ, ತಂದೆಯವರೊಡನೆ ಜಗಳವಾಡಿ ಬಂದಿರಾ?' ಎಂದು ಕೇಳಿದ ಚುನ್ನೀಲಾಲ.

'ಇಲ್ಲ'

'ಮತ್ತಾರೊಡನಾದರೂ ಜಗಳವಾಯಿತೆ?'

'ಇಲ್ಲವಲ್ಲ?'

ಚುನ್ನೀಲಾಲನಿಗೆ ಮತ್ತೊಂದು ಮಾತು ನೆನಪಾಯಿತು. 'ನಿಮ್ಮ ಮದುವೆಯಾಗಿಲ್ಲವೆ?' ಎಂದು ಕೇಳಿದ.

ದೇವದಾಸ ಈ ಪ್ರಶ್ನೆಗೆ ಉತ್ತರ ಕೊಡದೆ ಬೇರೆಡೆಗೆ ಮುಖ ತಿರುಗಿಸಿ ಮಲಗಿಬಿಟ್ಟ. ಅವನಿಗೆ ನಿದ್ರೆಬಂದಿತು. ಅದರಿಂದ ಚುನ್ನೀಲಾಲ ಅವನನ್ನು ಮುಂದೆ ಮಾತನಾಡಿಸಲಿಲ್ಲ. ಎರಡು ದಿನಗಳು ಹೀಗೆಯೆ ನಿದ್ರೆಯಲ್ಲಿ ಕಳೆದುವು. ಮೂರನೆ ದಿನ ಎದ್ದಾಗ ದೇವದಾಸನ ಮೈಯಲ್ಲಿ ಸಾಕಷ್ಟು ಉತ್ಸಾಹ ಬಂದಂತೆ ಕಂಡಿತು. ಮುಖದ ಮೇಲಿನ ವಿಷಾದದ ಛಾಯೆ ಎಷ್ಟೋ ಕಡಿಮೆಯಾಗಿತ್ತು. ಚುನ್ನೀಲಾಲ ಕೇಳಿದ 'ಏನು ದೇವದಾಸಬಾಬೂ, ಇಂದು ನಿಮ್ಮ ದೇಹಸ್ಥಿತಿ ಹೇಗಿದೆ?'

'ಮೊದಲಿಗಿಂತಲೂ ಸ್ವಲ್ಪ ಗುಣ. ಒಳ್ಳೇದು ಚುನ್ನೀಬಾಬೂ, ರಾತ್ರಿಯಲ್ಲಿ ನೀವು ಎಲ್ಲಿಗೆ ಹೋಗುತ್ತೀರಿ?'

ಚುನ್ನೀಲಾಲನಿಗೆ ನಾಚಿಕೆಯಾಯಿತು. 'ಅದನ್ನು ಕೇಳಿ ನಿಮಗೇನಾಗಬೇಕಾಗಿದೆ? ನಾನು ರಾತ್ರಿ ಎಲ್ಲಿಗಾದರೂ ಹೋಗಿಬರುತ್ತೇನೆ. ಅದಿರಲಿ. ನೀವು ಕಾಲೇಜಿಗೆ ಹೋಗುವಿರಲ್ಲವೇ?' ಎಂದ.

'ಓದುವುದನ್ನು ಬಿಟ್ಟುಬಿಟ್ಟೆ'

'ಛೀ, ಹೀಗೆ ಮಾಡುವುದುಂಟೆ? ಇನ್ನೊಂದು ತಿಂಗಳಿಗೆ ನಿಮ್ಮ

ಪರೀಕ್ಷೆ. ನೀವು ಅಭ್ಯಾಸವನ್ನು ಚೆನ್ನಾಗಿ ಮಾಡುತ್ತೀರಿ. ಪರೀಕ್ಷೆ ಕೊಟ್ಟುಬಿಡಿರಿ'

'ಇಲ್ಲ. ಕಲಿಯುವುದನ್ನು ಬಿಟ್ಟಿದ್ದೇನೆ'

ಚುನ್ನೀಲಾಲ ಸುಮ್ಮನಾದ. ದೇವದಾಸ ಮತ್ತೆ ಕೇಳಿದ. 'ಚುನ್ನೀಬಾಬೂ, ಎಲ್ಲಿಗೆ ಹೋಗುತ್ತೀರಿ ಹೇಳಬಾರದೆ? ನಾನೂ ನಿಮ್ಮೊಂದಿಗೆ ಬರುತ್ತೇನೆ'

'ಅದನ್ನು ಕೇಳಿ ನೀವು ಏನು ಮಾಡುವಿರಿ? ನಾನು ಒಳ್ಳೆಯ ಸ್ಥಳಕ್ಕೆ ಹೋಗುವುದಿಲ್ಲ'

'ಸ್ಥಳ ಒಳ್ಳೆಯದೇ ಇರಲಿ, ಕೆಟ್ಟದೇ ಇರಲಿ. ಅದರಿಂದ ನನಗೇನಾಗಬೇಕಾಗಿದೆ? ನನ್ನನ್ನು ಕರೆದುಕೊಂಡು ಹೋಗುವಿರೊ ಇಲ್ಲವೊ?'

'ಕರೆದುಕೊಂಡು ಹೋಗಬಲ್ಲೆ. ಆದರೆ ನೀವು ಅಲ್ಲಿಗೆ ಬರಬೇಡಿರಿ'

'ಇಲ್ಲ, ನಾನು ಬರುತ್ತೇನೆ. ಆದರೆ ನೀವು ಅಲ್ಲಿ ಯಾವ ಸುಖ ಸಿಗುವುದೆಂದು ಹೋಗುತ್ತೀರಿ?....ನಾನೂ ಬರುತ್ತೇನೆ'

ಚುನ್ನೀಲಾಲ ಮುಖ ತಿರುಗಿಸಿ 'ದೇವರೇ ಗತಿ' ಎಂದು ಮನಸ್ಸಿನಲ್ಲೆಂದುಕೊಂಡ. ಆ ಮೇಲೆ ದೇವದಾಸನಿಗೆ 'ಹಾಗಾದರೆ ನಡೆಯಿರಿ' ಎಂದ.

ಮಧ್ಯಾನ್ಹ ಮೂರು-ನಾಲ್ಕು ಗಂಟೆಯಾಗಿರಬಹುದು. ಎಲ್ಲ ಸಾಮಾನುಗಳನ್ನೂ ತೆಗೆದುಕೊಂಡು ಅಳುತ್ತ ಧರ್ಮದಾಸ ಬಂದು 'ದೇವ ಬಾಬು, ಮೂರುನಾಲ್ಕು ದಿನಗಳಿಂದ ತಾಯಿಯವರು ಅಳುತ್ತಿದ್ದಾರೆ' ಎಂದ.

'ಏಕೆ ಅಳುತ್ತಾಳೆ?'

'ಯಾರಿಗೂ ಹೇಳದೆ ಹೊರಟು ಬಂದುಬಿಟ್ಟಿರಿ' ಎಂದು ನುಡಿದು ಒಂದು ಪತ್ರವನ್ನು ಬೊಕ್ಕಣದಿಂದ ತೆಗೆದು ದೇವದಾಸನ ಕೈಗೆ ಕೊಟ್ಟ ಧರ್ಮದಾಸ.

ಚುನ್ನೀಬಾಬು ಪತ್ರದಲ್ಲಿಯ ವಿಷಯವನ್ನು ತಿಳಿದುಕೊಳ್ಳಬೇಕೆಂದು ಉತ್ಕಂಠೆಯಿಂದ ದೇವದಾಸನ ಕಡೆ ನೋಡುತ್ತ ನಿಂತ.

ದೇವದಾಸ ಪತ್ರವನ್ನು ಓದಿ ಒಂದು ಕಡೆ ಇಟ್ಟ. ಊರಿಗೆ ಬರಬೇಕೆಂದು ತಾಯಿ ಒತ್ತಾಯಪಡಿಸಿದ್ದರು. ದೇವದಾಸನ ದುಃಖದ ಆಳವನ್ನರಿಯು ವವರು ಅವನ ಮನೆಯಲ್ಲಿ ಅವರೊಬ್ಬರೆ. ಉಳಿದವರಾರಿಗೂ ದೇವದಾಸನ ದುಃಖವನ್ನು ಅಳೆಯಲಾಗುತ್ತಿರಲಿಲ್ಲ. ಅವನ ತಾಯಿ ಕದ್ದು ಮುಚ್ಚಿ ಅವನಿಗೆ ರೂಪಾಯಿಗಳನ್ನು ಕಳಿಸಿದ್ದರು. ಎಲ್ಲವನ್ನೂ ದೇವದಾಸನಿಗೆ ಕೊಟ್ಟು 'ಮನೆಗೆ ನಡೆಯಿರಿ' ಎಂದ ಧರ್ಮದಾಸ.

'ನಾನು ಬರುವುದಿಲ್ಲ. ನೀನು ಹಿಂದಿರುಗಿ ಹೋಗು'

ರಾತ್ರಿ, ಇಬ್ಬರೂ ಗೆಳೆಯರು ಸಿಂಗಾರಾಗಿ ಮನೆಯಿಂದ ಹೊರ ಬಿದ್ದರು. ದೇವದಾಸನ ಪ್ರವೃತ್ತಿ ಶೃಂಗಾರದ ಕಡೆಗಿರಲಿಲ್ಲ. ಆದರೆ ಚುನ್ನೀಬಾಬು ಸಿಂಗಾರಾಗಿ ಹೊರಡಬೇಕೆಂದು ಆಗ್ರಹ ಪಡಿಸಿದ. ರಾತ್ರಿ ಒಂಬತ್ತು ಗಂಟೆಯಾಗಿರಬಹುದು. ಒಂದು ಕುದುರೆಯ ಗಾಡಿ ಚಿತ್–ಪುರದ ಎರಡಂತಸ್ತಿನ ಮನೆಯ ಎದುರಿಗೆ ಬಂದು ನಿಂತಿತು. ಚುನ್ನೀ ಬಾಬು ಮತ್ತು ದೇವದಾಸ ಇಬ್ಬರೂ ಕೆಳಗಿಳಿದರು. ಚುನ್ನೀಬಾಬು ದೇವನಾಸನ ಕೈಹಿಡಿದು ಆ ಮನೆಯೊಳಗೆ ಕರೆದುಕೊಂಡು ಹೋದ. ಆ ಎರಡು ಅಂತಸ್ತಿನ ಮನೆಯ ಯಜಮಾನಿಯ ಹೆಸರು ಚಂದ್ರಮುಖಿ. ಅವಳು ಬಂದು ಎದುರುಗೊಂಡಳು. ಅವಳನ್ನು ನೋಡಿದ ಕೂಡಲೆ ದೇವ ದಾಸನ ಸರ್ವಾಂಗವೂ ದಹಿಸತೊಡಗಿತು. ಈಚೆಗೆ ಕೆಲವು ದಿನಗಳಿಂದ ಸ್ತ್ರೀಯರ ನೆರಳಿನ ವಿಷಯವಾಗಿ ಸಹ ಆತನಿಗೆ ಅತ್ಯಂತ ತಿರಸ್ಕಾರವೆನಿಸು ತಿತ್ತು. ಆದರೆ ಅದು ಅವನಿಗೇ ತಿಳಿದಿರಲಿಲ್ಲ.

ಚಂದ್ರಮುಖಿಯನ್ನು ನೋಡಿದೊಡನೆಯೆ ದೇವದಾಸನ ಹೃದಯ ದಲ್ಲಿ ಸಂಚಿತವಾಗಿದ್ದ ತಿರಸ್ಕಾರ ದಾವಾನಲನಂತೆ ಪ್ರಜ್ವಲಿತವಾಯಿತು. ಚುನ್ನೀಲಾಲನ ಕಡೆಗೆ ಹುಬ್ಬುಗಂಟಿಕ್ಕಿ ನೋಡುತ್ತ 'ಚುನ್ನೀಬಾಬೂ, ಇದೆಂತಹ ಹೇಸಿ ಸ್ಥಳಕ್ಕೆ ನನ್ನನ್ನು ಕರೆದುಕೊಂಡು ಬಂದಿರಿ?' ಎಂದ ದೇವದಾಸ. ಅವನ ಮುಖಮುದ್ರೆಯನ್ನೂ ಬಿರುಸು ಮಾತುಗಳನ್ನೂ ನೋಡಿ ಚುನ್ನೀಲಾಲನಿಗೂ ಚಂದ್ರಮುಖಿಗೂ ಸಖೇದಾಶ್ಚರ್ಯ ವಾಯಿತು. ಅವರು ಹತಬುದ್ಧರಾದರು. ಸ್ವಲ್ಪ ಹೊತ್ತಿನ ಮೇಲೆ

ಚುನ್ನೀಲಾಲನೇ ಧೈರ್ಯತಾಳಿ ದೇವದಾಸನ ಕೈಹಿಡಿದು 'ಒಳಗೆ ನಡೆ ಯಿರಿ, ಸ್ವಲ್ಪ ವಿಶ್ರಮಿಸಿಕೊಳ್ಳಿರಿ' ಎಂದ.

ದೇವದಾಸ ಮಾತನಾಡಲಿಲ್ಲ. ಒಳಗೆ ಹೋಗಿ, ಹಾಸಿಗೆಯ ಮೇಲೆ ಕೆಳಗೆ ಮುಖಮಾಡಿಕೊಂಡು ಕುಳಿತ. ಅವನ ಪಕ್ಕದಲ್ಲಿಯೆ ಚಂದ್ರ ಮುಖಿಯೂ ಬಂದು ಕುಳಿತಳು. ದಾಸಿ, ಬೆಳ್ಳಿಯ ಹುಕ್ಕಾವನ್ನು ತಂದು ದೇವದಾಸನ ಮುಂದಿಟ್ಟಳು. ಅದನ್ನು ದೇವದಾಸ ಮುಟ್ಟಲಿಲ್ಲ. ಚುನ್ನೀ ಲಾಲ ಗಂಭೀರನಾಗಿ ಕುಳಿತಿದ್ದ. ದಾಸಿಗೆ, ಏನು ಮಾಡುವುದೆಂದು ತಿಳಿಯದಾಯಿತು. ಕೊನೆಗೆ ಅದನ್ನು ಎತ್ತಿ ಚಂದ್ರಮುಖಿಯ ಕೈಯಲ್ಲಿ ಕೊಟ್ಟು ದಾಸಿ ಹೊರಟುಹೋದಳು. ಅವಳು ಅದನ್ನು ಸೇದಿ ಒಂದೆರಡು ಸಲ ಹೊಗೆಯನ್ನು 'ಉಫ್' ಎಂದು ಬಿಟ್ಟಾಗ, ದೇವದಾಸ ಅವಳ ಕಡೆಗೆ ನೋಡಿ ಅತ್ಯಂತ ತಿರಸ್ಕಾರದಿಂದ 'ಎಷ್ಟು ಅಸಭ್ಯಳು ಈಕೆ? ಎಷ್ಟು ಅಸಹ್ಯವಾಗಿ ಕಾಣುತ್ತಾಳೆ!' ಎಂದ.

ಚಂದ್ರಮುಖಿಯನ್ನು ಮಾತಿನಿಂದ ಸೋಲಿಸಿದವರು ಯಾರೂ ಈ ಮೊದಲು ಬಂದಿರಲಿಲ್ಲ. ಅವಳನ್ನು ಗೆಲ್ಲುವುದು ದುಸ್ತರವಾಗಿದ್ದಿತು. ದೇವದಾಸನ ಹೃದಯದಿಂದ ಬಂದ ತಿರಸ್ಕಾರದ ಸರಲವಾದ ನುಡಿ ಚಂದ್ರ ಮುಖಿಯ ಹೃದಯವನ್ನು ಭೇದಿಸಿತು. ಅಲ್ಪಾವಧಿಯಲ್ಲಿ ಅವಳು ಚೇತ ರಿಸಿಕೊಂಡಳು. ಒಂದೆರಡು ಸಲ ಹುಕ್ಕಾ ಶಬ್ದಮಾಡಿತು. ಆದರೆ ಚಂದ್ರ ಮುಖಿಯ ಬಾಯಿಂದ ಹೊಗೆ ಹೊರಗೆ ಹೊರಡಲಿಲ್ಲ. ಅವಳು ಹುಕ್ಕಾ ವನ್ನು ಚುನ್ನೀಲಾಲನ ಕೈಗೆ ಕೊಟ್ಟು ಮತ್ತೊಮ್ಮೆ ದೇವದಾಸನ ಮುಖದ ಕಡೆಗೆ ನೋಡಿದಳು. ಮೂವರೂ ಸ್ತಬ್ಧರಾಗಿ ಕುಳಿತಿದ್ದರು. ಆದರೆ ಮಧ್ಯ ದಲ್ಲಿ ಹುಕ್ಕಾದ ಗುಡುಗುಡು ಶಬ್ದ ಮಾತ್ರ ಆಗುತಿದ್ದಿತು. ಗೆಳೆಯರ ಗುಂಪಿನಲ್ಲಿ ತರ್ಕವೆದ್ದು ಒಮ್ಮೆಯೇ ಹೊರಡುವ ಮಾತಿನಂತೆ ಮೂವರೂ ತಮ್ಮ ತಮ್ಮ ಮನದಲ್ಲಿ 'ಇದು ಹೀಗೇಕಾಯಿತು?' ಎನ್ನುತಿದ್ದರು.

ಈ ಘಟನೆಯಿಂದ ಯಾರಿಗೂ ಸುಖವಾಗಲಿಲ್ಲ. ಚುನ್ನೀಬಾಬು ಹುಕ್ಕಾ ಕೆಳಗಿಟ್ಟು ಸುಮ್ಮನೆ ಮಹಡಿಯಿಂದ ಕೆಳಗಿಳಿದು ಬಂದ. ಅಲ್ಲಿ ಅವನಿಗೆ ಎರಡನೆಯ ಯಾವ ಕೆಲಸವೂ ಇದ್ದಿಲ್ಲವೇನೊ! ಈಗ ಕೋಣೆಯಲ್ಲಿ

ಇಬ್ಬರೇ ಇಬ್ಬರು—ದೇವದಾಸ ಮತ್ತು ಚಂದ್ರಮುಖಿ. ದೇವದಾಸ ಕೇಳಿದ 'ನಿನ್ನ ದರ್ಶನಕ್ಕೆ ಬಂದವರಿಂದ ನೀನು ಎಷ್ಟು ಹಣ ತೆಗೆದು ಕೊಳ್ಳುತ್ತಿ ?'

ಚಂದ್ರಮುಖಿ ಕೂಡಲೇ ಇದಕ್ಕೆ ಉತ್ತರಕೊಡಲಿಲ್ಲ. ಈಗ ಅವಳಿಗೆ ಸುಮಾರು ಇಪ್ಪತ್ತನಾಲ್ಕು ವರ್ಷಗಳಾಗಿರಬಹುದು. ಈಚೆಯ ಎಂಟು ಹತ್ತು ವರ್ಷಗಳಲ್ಲಿ ಅವಳಿಗೆ ನಾನಾ ಸ್ವಭಾವದ ಪುರುಷರ ಅನುಭವ ವುಂಟಾಗಿದೆ. ಆದರೆ ಇಂತಹ ಮನುಷ್ಯನೊಡನೆ ಅವಳ ಪರಿಚಯವಾಗಿರ ಲಿಲ್ಲ. ಸ್ವಲ್ಪ ಅತ್ತಿತ್ತ ನೋಡಿ 'ತಮ್ಮ ಪಾದಧೂಳಿ ನಮ್ಮ ಮನೆಯಲ್ಲಿ ಬಿದ್ದಿರಲು. . . .' ಎಂದು ಹೇಳುವುದನ್ನು ಮಧ್ಯದಲ್ಲಿಯೇ ತಡೆದು ದೇವದಾಸ ಎಂದ 'ಪಾದಧೂಳಿಯ ಮಾತಿರಲಿ, ರೂಪಾಯಿಗಳನ್ನು ತೆಗೆದುಕೊಳ್ಳುವಿಯಲ್ಲವೆ ?'

'ತೆಗೆದುಕೊಳ್ಳದಿದ್ದರೆ ನಮ್ಮ ಕೆಲಸ ಸಾಗುವುದು ಹೇಗೆ ?'

'ಸರಿ, ಇದನ್ನೆ ನಾನು ಕೇಳಬಯಸುತಿದ್ದೆ' ಎಂದು ಒಂದು ನೋಟನ್ನು ಚಂದ್ರಮುಖಿಯ ಕೈಯಲ್ಲಿಟ್ಟು ಹೊರಡಲನುವಾದ ದೇವ ದಾಸ. ತಾನು ಕೊಟ್ಟದ್ದು ಎಷ್ಟು ರೂಪಾಯಿಗಳ ನೋಟೆಂಬುದನ್ನೂ ಅವನು ನೋಡಲಿಲ್ಲ.

ಚಂದ್ರಮುಖಿ ವಿನೀತ ಭಾವದಿಂದ 'ಇಷ್ಟು ಬೇಗ ಹೋಗು ವಿರಾ ?' ಎಂದಳು.

ದೇವದಾಸ ಏನೂ ಮಾತನಾಡದೆ ಹೊರಗೆ ಬಂದುಬಿಟ್ಟ.

ನೋಟನ್ನು ತಿರಿಗಿ ಕೊಡಬೇಕೆಂದು ಚಂದ್ರಮುಖಿಗೆ ಇಚ್ಛೆ ಯಾಯಿತು. ಆದರೆ ಅತಿ ಸಂಕೋಚದ ಮೂಲಕ ಅವಳ ಕೈ ಮೇಲಕ್ಕೇಳ ಲಿಲ್ಲ. ಅವಳಿಗೆ ಸ್ವಲ್ಪ ಹೆದರಿಕೆಯಾಗಿರಬಹುದೆಂದು ತೋರುತ್ತದೆ. ಬಿರುನುಡಿಗಳನ್ನು ಸಹಿಸುವ, ಅಪಮಾನವನ್ನು ನುಂಗುವ ಅಭ್ಯಾಸ ಅವಳಿಗಿದೆ. ಆದುದರಿಂದಲೇ ಮರುಮಾತಾಡದೆ ನಿಷ್ಕಪಟ ಭಾವದಿಂದ ಅವಳು ಬಾಗಿಲ ಬಳಿಗೆ ಬಂದು ನಿಂತಳು. ದೇವದಾಸ ನಿಲ್ಲಲೇ ಇಲ್ಲ; ಕೆಳಗಿಳಿದು ಬಂದುಬಿಟ್ಟ.

ಕೆಳಗೆ ಚುನ್ನೀಲಾಲನ ಭೆಟ್ಟಿಯಾಯಿತು. ಅವನು ಆಶ್ಚರ್ಯದಿಂದ 'ಎಲ್ಲಿಗೆ ಹೋಗುತ್ತೀರಿ?' ಎಂದ.

'ಹೋಟೆಲಿಗೆ' ಎಂದ ದೇವದಾಸ.

'ಅದೇಕೆ? ನಾನೂ ಬರುತ್ತೇನೆ, ಸ್ವಲ್ಪ ತಾಳಿರಿ. ಕೊಂಚ ಮೇಲೆ ಹೋಗಿ ಬರುತ್ತೇನೆ' ಎಂದ ಚುನ್ನೀಬಾಬು.

'ಇಲ್ಲ, ನಾನು ಹೋಗುತ್ತೇನೆ. ನೀವು ಆ ಮೇಲೆ ಬನ್ನಿ' ಎಂದು ದೇವದಾಸ ಹೊರಟೇಬಿಟ್ಟ.

ಚಂದ್ರಮುಖಿ ಬೊಂಬೆಯಂತೆ ಬಾಗಿಲ ಬಳಿ ನಿಂತಿರುವುದನ್ನು ಚುನ್ನೀಲಾಲ ನೋಡಿದ. ಅವಳು ಚುನ್ನೀಲಾಲನನ್ನು ಕೇಳಿದಳು, 'ಅವರು ಹೊರಟುಹೋದರೇನು?'

'ಹೌದು'

ಚಂದ್ರಮುಖಿ ಕೈಯೊಳಗಿನ ನೋಟನ್ನು ತೋರಿಸಿ 'ತೆಗೆದು ಕೊಳ್ಳಿ ಈ ನೋಟನ್ನು. ಇದನ್ನು ನಿಮ್ಮ ಗೆಳೆಯರಿಗೆ ಕೊಟ್ಟುಬಿಡಿರಿ' ಎಂದಳು.

'ಅವರು ತಾವಾಗಿಯೆ ಕೊಟ್ಟಿದ್ದಾರೆ. ನಾನೇಕೆ ತಿರಿಗಿ ಕೊಡಲಿ?'

ಸ್ವಲ್ಪ ಹೊತ್ತಿನ ಬಳಿಕ ಚಂದ್ರಮುಖಿ ನಕ್ಕಳು. ಆದರೆ ಆ ನಗುವಿನಲ್ಲಿ ತಿಲಮಾತ್ರವಾದರೂ ಆನಂದವಿರಲಿಲ್ಲ. 'ತಮ್ಮ ಇಚ್ಛೆಯಿಂದ ಕೊಡಲಿಲ್ಲ. ನಾನು ರೂಪಾಯಿಗಳನ್ನು ತೆಗೆದುಕೊಳ್ಳುತ್ತೇನೆಂದು ಅವರು ಕೊಟ್ಟು ಹೋಗಿದ್ದಾರೆ. ಚುನ್ನೀಬಾಬೂ, ಅವರಿಗೆ ಹುಚ್ಚು ಹಿಡಿದಿಲ್ಲವಷ್ಟೆ?' ಎಂದಳು.

'ಇಲ್ಲ. ಆದರೆ ಇತ್ತ ಕೆಲವು ದಿನಗಳಿಂದ ಅವರ ಮನಸ್ಸಿನಲ್ಲಿ ಸಮಾಧಾನವಿದ್ದಂತಿಲ್ಲ'

'ಏಕೆ, ಗೊತ್ತೆ?'

'ನನಗೇನೂ ಗೊತ್ತಿಲ್ಲ. ಆದರೆ ಮನೆಯಲ್ಲಿ ಜಗಳವೇನಾದರೂ ಆಗಿರಬೇಕು'

'ಹಾಗಾದರೆ ಅವರನ್ನು ಇಲ್ಲಿಗೇಕೆ ಕರೆದುಕೊಂಡು ಬಂದಿರಿ?'

'ನಾನು ಕರೆದುಕೊಂಡು ಬರುತ್ತಿರಲಿಲ್ಲ. ಅವರೇ ಆಗ್ರಹ ಮಾಡಿ ಬಂದರು'

ಈಗ ಚಂದ್ರಮುಖಿಗೆ ನಿಜವಾಗಿಯೂ ಆಶ್ಚರ್ಯವಾಯಿತು.

'ಸ್ವತಃ ಆಗ್ರಹ ಮಾಡಿ ಬಂದರು! ಎಲ್ಲವನ್ನೂ ತಿಳಿದುಕೊಂಡೇ ಬಂದರೊ?' ಎಂದು ಕೇಳಿದಳು.

'ಹೌದು. ಅವರಿಗೆ ಎಲ್ಲವೂ ಗೊತ್ತಿದೆ. ಮೋಸದಿಂದ ಅವರನ್ನು ಇಲ್ಲಿಗೆ ಕರೆದುಕೊಂಡು ಬರಲಿಲ್ಲ'

ಸ್ವಲ್ಪ ಹೊತ್ತು ಸುಮ್ಮನಿದ್ದು, ಅದೇನೋ ಯೋಚಿಸಿ ಬಳಿಕ ಕೇಳಿದಳು ಚಂದ್ರಮುಖಿ 'ಚುನ್ನೀಬಾಬೂ, ನನಗೊಂದು ಉಪಕಾರ ಮಾಡುವಿರಾ?'

'ಏನು?'

'ನಿಮ್ಮ ಗೆಳೆಯರು ಇರುವುದೆಲ್ಲಿ?'

'ನನ್ನ ಕೋಣೆಯಲ್ಲಿಯೇ'

'ಅವರನ್ನು ಇನ್ನೊಮ್ಮೆ ಇಲ್ಲಿಗೆ ಕರೆದುಕೊಂಡು ಬರುವಿರಾ?'

'ಆಗದು. ನನ್ನಿಂದಾಗದ ಕೆಲಸ ಅದು. ಅವರು ಇಂತಹ ಸ್ಥಳಕ್ಕೆ ಹಿಂದೆ ಎಂದೂ ಹೋಗಿಲ್ಲ. ಮುಂದೆ ಹೋಗುವ ಆಸೆಯೂ ಅವರಿಗಿಲ್ಲ. ಅದಿರಲಿ, ಇಷ್ಟೇಕೆ ನಿಮ್ಮ ಆಗ್ರಹ?'

ಒಣ ನಗೆಯನ್ನು ನಕ್ಕು 'ಏತಕ್ಕಾದರೂ ಇರಲಿ, ಚುನ್ನೀಬಾಬೂ, ಅವರನ್ನು ಇನ್ನೊಮ್ಮೆ ಇಲ್ಲಿಗೆ ಕರೆದುಕೊಂಡು ಬನ್ನಿ' ಎಂದಳು ಚಂದ್ರಮುಖಿ.

ಚುನ್ನೀಲಾಲ ಅವಳ ಕಡೆಗೆ ಕುಡಿನೋಟದಿಂದ ನೋಡಿ ನಕ್ಕು 'ಏನು, ಅವರ ಮೇಲೆ ಪ್ರೇಮವುಂಟಾಯಿತೇನು?' ಎಂದ.

'ಇಲ್ಲ, ನೋಡುವುದಿಲ್ಲವೇ? ನೋಟು ಕೊಟ್ಟು ಹೋಗಿದ್ದಾರೆ. ಇಷ್ಟೂ ನಿಮಗೆ ತಿಳಿಯದೆ?' ಎಂದು ನಕ್ಕು ನುಡಿದಳು.

ಚುನ್ನೀಲಾಲನಿಗೆ ಚಂದ್ರಮುಖಿಯ ಸ್ವಭಾವ ಹೇಗಿದೆಯೆಂಬುದು ಗೊತ್ತು. ಅದಕ್ಕಾಗಿಯೇ ಅವನು 'ಇಲ್ಲ, ಇಲ್ಲ. ನೋಟಿಗೆ ಆಸೆಪಡುವ

ಹೆಂಗಸರೇ ಬೇರೆ. ನೀನು ಹಾಗಿಲ್ಲ. ಇದು ನನಗೆ ಚೆನ್ನಾಗಿ ಗೊತ್ತಿದೆ. ಆದರೆ ನಿಜವಾದ ಸಂಗತಿಯಾದರೂ ಏನು? ಹೇಳಬಾರದೆ?' ಎಂದ.

'ನಿಜವಾಗಿಯೂ ನನ್ನ ಮನಸ್ಸು ಅವರ ಕಡೆಗೆ ಎಳೆಯುತ್ತಿದೆ. ಅವರ ಮೇಲೆ ಮೋಹವುಂಟಾಗಿದೆ'

ಚುನ್ನೀಲಾಲನಿಗೆ ಈ ಮಾತುಗಳ ಬಗೆಗೆ ವಿಶ್ವಾಸವುಂಟಾಗಲಿಲ್ಲ. ಅವನು ಸ್ವಲ್ಪ ನಕ್ಕು 'ಇಷ್ಟು ಅಲ್ಪಾವಧಿಯಲ್ಲಿಯೆ!' ಎಂದ.

ಚಂದ್ರಮುಖಿಯೂ ನಗಲಾರಂಭಿಸಿದಳು. ಕೊನೆಗೆ 'ಇರಲಿ. ಅವರ ಮನಸ್ಸಿಗೆ ನೆಮ್ಮದಿಯಾದ ಬಳಿಕ ಇನ್ನೊಮ್ಮೆ ಇಲ್ಲಿಗೆ ಕರೆದುಕೊಂಡು ಬನ್ನಿ. ಅವರನ್ನು ಇನ್ನೊಂದು ಸಲ ನೋಡುತ್ತೇನೆ. ಕರೆದುಕೊಂಡು ಬರುವಿರಲ್ಲವೆ?' ಎಂದು ಕೇಳಿದಳು.

'ಭರವಸೆ ಕೊಡಲಾರೆ'

'ನನ್ನಾಣೆಯಾಗಿದೆ, ಕರೆದುಕೊಂಡು ಬರಬೇಕು'

'ಒಳ್ಳೇದು, ಪ್ರಯತ್ನಿಸುತ್ತೇನೆ'

# ೧೦

ಪಾರ್ವತಿ ಪತಿಯ ಮನೆಗೆ ಬಂದಳು. ಪತಿಯ ಮನೆ ದೊಡ್ಡದಾಗಿದ್ದಿತು. ಹೊಸ ಕಾಲದ ಮನೆಯಲ್ಲ. ಹಳೆಯ ಕಾಲದ ಮನೆ. ಹಳೆಯ ಪದ್ಧತಿಯಂತೆ ಕಟ್ಟಿದುದು. ನಡುಮನೆ, ಪಡಸಾಲೆ, ಭೋಜನ ಸಾಲೆ, ದೇವರ ಮನೆ, ನಾಟ್ಯ ಮಂದಿರ, ಅತಿಥಿ ಶಾಲೆ, ಅಂತಃಪುರ, ಮೊದಲಾದ ಭಾಗಗಳಿದ್ದುವು ಅದರಲ್ಲಿ. ಮನೆಯಲ್ಲಿ ದಾಸದಾಸಿಯರೂ ಹೆಚ್ಚಾಗಿದ್ದರು. ಎಲ್ಲವನ್ನೂ ನೋಡಿ ಪಾರ್ವತಿ ಆಶ್ಚರ್ಯಪಟ್ಟಳು. ತನ್ನ ಪತಿ ದೊಡ್ಡ ಜಮೀನುದಾರರೆಂದೂ, ದೊಡ್ಡ ಮನುಷ್ಯರೆಂದೂ ಕೇಳಿದ್ದಳು. ಆದರೆ ಇಷ್ಟು ದೊಡ್ಡ ಜಮೀನುದಾರರಾಗಿರುವರೆಂದು ತಿಳಿದಿರಲಿಲ್ಲ. ಇಷ್ಟು ದೊಡ್ಡ ಜಮೀನುದಾರರಾದರೂ ಅವರಿಗೆ ಬಂಧು–ಬಳಗದವರೂ ಕುಟುಂಬದವರೂ ಯಾರೂ ಇರಲಿಲ್ಲ. ಅಂತಃಪುರ ಶೂನ್ಯವಾಗಿದ್ದಿತು. ಇದೇ ಮದುವೆಯಾಗಿ ನವವಧುವಾಗಿದ್ದವಳು, ಈ ಮನೆಗೆ ಬಂದೊಡನೆಯೆ ಗೃಹಿಣಿಯಾಗಿ ಬಿಟ್ಟಳು. ಅವಳನ್ನು ಮನೆಗೆ ಬರಮಾಡಿಕೊಳ್ಳಲು ಮುದುಕಿಯಾದ ಸೋದರತ್ತೆಯೊಬ್ಬಳೇ ಇದ್ದಳು. ಸೋದರತ್ತೆಯ ಹೊರತಾಗಿ ಮನೆಯಲ್ಲಿದ್ದವರೆಲ್ಲರೂ ದಾಸ–ದಾಸಿಯರೇ.

ಸಂಜೆಯ ಹೊತ್ತಿಗೆ ಸುಂದರನೂ ಕಾಂತಿಯುಕ್ತನೂ ಆದ ಇಪ್ಪತ್ತು ವರ್ಷದ ಒಬ್ಬ ಯುವಕನು ಬಂದು ಪಾರ್ವತಿಗೆ ನಮಸ್ಕರಿಸಿ 'ಅಮ್ಮಾ, ನಾನು ನಿಮ್ಮ ಹಿರಿಯ ಮಗ' ಎಂದನು.

ಪಾರ್ವತಿ ಸೆರಗಿನೊಳಗಿಂದಲೇ ನೋಡಿದಳು. ಆದರೆ ಏನೂ ಮಾತಾಡಲಿಲ್ಲ. ಅವನು ಪುನಃ ನಮಸ್ಕಾರ ಮಾಡುತ್ತ 'ಅಮ್ಮಾ, ನಾನು ನಿಮ್ಮ ಹಿರಿಯ ಮಗ, ವಂದಿಸುತ್ತೇನೆ' ಎಂದ.

ಪಾರ್ವತಿ ತಲೆಯ ಮೇಲಿನ ಸೆರಗನ್ನು ಹಿಂದಕ್ಕೆ ಸರಿಸಿ, 'ಬಾ ಮಗೂ, ಇತ್ತ ಬಾ' ಎಂದಳು.

ಹುಡುಗನ ಹೆಸರು ಮಹೇಂದ್ರನೆಂದು. ಅವನು ಸ್ವಲ್ಪ ಹೊತ್ತು ಪಾರ್ವತಿಯ ಮುಖವನ್ನು ಅತ್ಯಂತ ಆಶ್ಚರ್ಯದಿಂದ ನೋಡುತ್ತ ನಿಂತ. ಆ ಮೇಲೆ ಬಳಿಯಲ್ಲಿ ಕುಳಿತು ವಿನೀತ ಸ್ವರದಲ್ಲಿ ಎಂದ 'ಇಂದಿಗೆ ನನ್ನ ತಾಯಿ ತೀರಿಕೊಂಡು ಎರಡು ವರ್ಷಗಳಾದುವು. ಈ ಎರಡು ವರ್ಷಗಳನ್ನು ನಾವು ಬಹಳ ದುಃಖದಿಂದ, ಕಷ್ಟದಿಂದ ಕಳೆಯಬೇಕಾಯಿತು. ಇಂದು ನೀವು ಬಂದಿರುವಿರಿ. ನಮ್ಮನ್ನು ಸುಖವಾಗಿರಲು ಹರಸಿರಿ'

ಪಾರ್ವತಿ ಈಗ ನಿಃಸಂಕೋಚವಾಗಿ ಮಾತಾಡತೊಡಗಿದಳು. ಗೃಹಿಣಿಯಾಗಿರುವುದರಿಂದ ಎಷ್ಟೋ ಸಂಗತಿಗಳನ್ನು ಅರಿತುಕೊಳ್ಳಬೇಕಾಗುತ್ತದೆ. ಎಷ್ಟೋ ಸಲ ಜನರೊಡನೆ ಮಾತನಾಡಬೇಕಾಗುತ್ತದೆ. ಇದು ಎಷ್ಟೋ ಜನರಿಗೆ ಅಸ್ವಾಭಾವಿಕವೆನಿಸಬಹುದು. ಆದರೆ ಪಾರ್ವತಿಯ ಸ್ವಭಾವ ಚೆನ್ನಾಗಿ ಗೊತ್ತಿದ್ದವರಿಗೆ ಅವಳ ಜೀವನದಲ್ಲಾದ ಅನೇಕ ಪರಿವರ್ತನೆಗಳು ಅವಳನ್ನು ವಯಸ್ಸಿಗಿಂತಲೂ ಹೆಚ್ಚು ಪರಿಪಕ್ವ ಮಾಡಿವೆಯೆಂದು ತಿಳಿಯಬಹುದು. ಅಲ್ಲದೆ ಅವಳಲ್ಲಿ ನಿರರ್ಥಕ ಲೋಕಲಜ್ಜೆ, ಅಕಾರಣ ಆಲಸ್ಯ, ಸಂಕೋಚ, ಎಂದೂ ಇರಲಿಲ್ಲ. ಅವಳು ಕೇಳಿದಳು 'ನನ್ನ ಉಳಿದ ಮಕ್ಕಳೆಲ್ಲಿ?'

ಮಹೇಂದ್ರ ನಸು ನಕ್ಕು 'ನಿಮ್ಮ ಹಿರಿಯ ಮಗಳು–ನನ್ನ ತಂಗಿ–ತನ್ನ ಅತ್ತೆಯ ಮನೆಯಲ್ಲಿದ್ದಾಳೆ. ನಾನವಳಿಗೆ ಕಾಗದ ಹಾಕಿದ್ದೇನೆ. ಯಾವ ಕಾರಣದಿಂದಲೊ ಯಶೋದೆಗೆ ಬರಲಾಗಲಿಲ್ಲ' ಎಂದ.

ಪಾರ್ವತಿ ಸ್ವಲ್ಪ ದುಃಖಿತಳಾಗಿ 'ಬರಲಾಗಲಿಲ್ಲವೊ, ಅಥವಾ ತಾನಾಗಿಯೇ ಬರಲಿಲ್ಲವೊ?' ಎಂದು ಕೇಳಿದಳು.

ಮಹೇಂದ್ರ ನಾಚಿಕೆಯಿಂದ 'ಯಾವುದೂ ಚೆನ್ನಾಗಿ ತಿಳಿಯದಮ್ಮಾ!' ಎಂದ.

ಆದರೆ ಅವನ ಮಾತಿನಿಂದಲೂ ಭಾವದಿಂದಲೂ ಯಶೋದಾ ಸಿಟ್ಟಿನಿಂದ ಬಂದಿಲ್ಲವೆಂದು ಪಾರ್ವತಿಗೆ ತಿಳಿಯಿತು. ಅವಳು ಕೇಳಿದಳು 'ನನ್ನ ಚಿಕ್ಕ ಮಗು?'

'ಅವನು ಕಲಕತ್ತೆಯಲ್ಲಿದ್ದಾನೆ. ಪರೀಕ್ಷೆ ಕೊಟ್ಟು ಬೇಗನೆ ಬರುತ್ತಾನೆ'

ಚೌಧುರೀ ಮಹಾಶಯರು ತಾವೇ ಸ್ವತಃ ಜಮೀನುದಾರಿಯ ಕೆಲಸ ನೋಡುತ್ತಿದ್ದರು. ದಿನವೂ ಶಾಲಿಗ್ರಾಮದ ಪೂಜೆ ಮಾಡುತ್ತಿದ್ದರು. ವ್ರತ, ನಿಯಮ, ಉಪವಾಸಾದಿಗಳ ಪಾಲನೆಯನ್ನೂ ಮಾಡುತ್ತಿದ್ದರು. ಅತಿಥಿಶಾಲೆಗೆ ಹೋಗಿ ಸಾಧು–ಸನ್ಯಾಸಿಗಳ ಸೇವೆ ಮಾಡುತ್ತಿದ್ದರು. ಈ ಎಲ್ಲ ಕೆಲಸಗಳನ್ನು ಮುಗಿಸಲಿಕ್ಕೆ ಅವರಿಗೆ ರಾತ್ರಿ ೧೦–೧೧ ಗಂಟೆ ಆಗುತಿದ್ದಿತು. ಹೊಸ ಮದುವೆ ಮಾಡಿಕೊಂಡಿದ್ದುದರಿಂದ ಆಸಂದೋತ್ಸವಗಳನ್ನು ಜರುಗಿಸಬೇಕೆಂಬ ಇಚ್ಛೆ ಅವರಿಗಿರಲಿಲ್ಲ. ರಾತ್ರಿ ಒಂದು ದಿನ ಬಿಡುವು ದೊರೆತರೆ ಒಳಗೆ ಬರುತಿದ್ದರು. ಇಲ್ಲವಾದರೆ ಹೊರಗೇ ಇರುತಿದ್ದರು. ಒಳಗೆ ಬಂದರೂ ಸಾಧಾರಣ ಮಾತುಕತೆಗಳೇ ನಡೆಯುವವು. ಮಂಚದ ಮೇಲೆ ಮಲಗಿ ಕಣ್ಣು ಮುಚ್ಚಿಕೊಂಡು ಕೇವಲ ಇಷ್ಟೇ ಹೇಳುತಿದ್ದರು. 'ನೋಡು, ನೀನೆ ಈ ಮನೆಗೆ ಯಜಮಾನಿ. ಎಲ್ಲವನ್ನೂ ಸರಿಯಾಗಿ ವಿಚಾರಿಸಿ, ಕೇಳಿಕೊಂಡು ಹುಷಾರಿಯಿಂದ ಕೆಲಸ ಮಾಡಬೇಕು!'

ಪಾರ್ವತಿ ತಲೆಯಲ್ಲಾಡಿಸಿ 'ಒಳ್ಳೇದು' ಎನ್ನುತಿದ್ದಳು.

ಭುವನಬಾಬುಗಳು ಹೇಳುತಿದ್ದರು 'ನೋಡು, ಈ ಎಲ್ಲ ಹುಡುಗ ಹುಡುಗೆಯರು ನಿನ್ನವರೇ' ಎಂದು.

ಪತಿಯ ನಾಚಿಕೆಯನ್ನು ನೋಡಿ ಪಾರ್ವತಿಯ ಕಣ್ಣುಗಳ ಕುಡಿಯಿಂದ ನಗೆ ಹೊರಸೂಸುತಿದ್ದಿತು. ಅವರೂ ಸ್ವಲ್ಪ ನಕ್ಕು ಎನ್ನುತಿದ್ದರು 'ಮಹೇಂದ್ರ ನಿನ್ನ ಹಿರಿಯ ಮಗ. ಮೊನ್ನೆ ಮೊನ್ನೆ ಬಿ. ಎ. ಪಾಸು ಮಾಡಿದ್ದಾನೆ. ಅವನು ಎಷ್ಟು ಒಳ್ಳೆಯ ಹುಡುಗ! ಎಂತಹ ಅಂತಃಕರಣ ಅವನದು! ಅಂತಹ ಹುಡುಗ..'

ಪಾರ್ವತಿ ನಗುವನ್ನು ತಡೆದುಕೊಂಡು 'ಆತ ನನ್ನ ಹಿರಿಯ ಮಗನೆಂದು ನನಗೆ ಗೊತ್ತುಂಟು' ಎನ್ನುತಿದ್ದಳು.

'ಗೊತ್ತಾಗದೆ ಹೇಗೆ ಇದ್ದೀತು? ಇಂತಹ ಹುಡುಗ ಎಲ್ಲಿಯೂ ಸಿಕ್ಕುವುದಿಲ್ಲ. ನನ್ನ ಮಗಳು ಯಶೋದಾ ಹುಡುಗಿಯಲ್ಲ, ಸಾಕ್ಷಾತ್ ಲಕ್ಷ್ಮಿಯೇ ಆಗಿದ್ದಾಳೆ! ಅವಳು ಅವಶ್ಯವಾಗಿ ಬರುವಳು—ಮುದುಕ ತಂದೆಯನ್ನು ನೋಡಲು ಬರಲಾರಳೆ? ಅವಳು ನಾಳೆ ಬಂದರೆ....!'

ಪಾರ್ವತಿ ಸಮೀಪಕ್ಕೆ ಬಂದು ಅವರ ಕೇಶಹೀನ ಮಸ್ತಕದ ಮೇಲೆ ಕಮಲದಂತಹ ತನ್ನ ಕೋಮಲವಾದ ಕೈಯನ್ನಿರಿಸಿ ಮೆಲುನುಡಿಯಿಂದ 'ನೀವು ಇದರ ಚಿಂತೆ ಮಾಡಕೂಡದು. ಅವಳನ್ನು ಕರೆಯಲು ನಾನು ನಾಳೆ ಆಳನ್ನು ಕಳಿಸುವೆನು. ಇಲ್ಲವೆ ಸ್ವತಃ ಮಹೇಂದ್ರನೇ ಹೋಗುವನು!' ಎನ್ನುತಿದ್ದಳು.

'ಹೀಗೊ, ಬಹಳ ಚೆನ್ನಾಯಿತು. ನಾನು ಅವಳನ್ನು ನೋಡದೆ ಬಹಳ ದಿನಗಳಾದುವು. ಮನುಷ್ಯನನ್ನು ಕಳಿಸುವೆಯಾ?'

'ಅವಶ್ಯವಾಗಿ ಕಳಿಸುವೆ. ನನ್ನ ಮಗಳು; ಅವಳನ್ನು ಕರೆಯಿಸ ಬೇಡವೆ?'

ಮುದುಕ ಭುವನಬಾಬುಗಳು ಆಗ ಉತ್ಸಾಹಿತರಾಗಿ ಕುಳಿತು ಕೊಳ್ಳುತಿದ್ದರು. ಪರಸ್ಪರರ ಸಂಬಂಧವನ್ನು ಮರೆತು, ಪಾರ್ವತಿಯ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸುತಿದ್ದರು: ನಿನ್ನ ಕಲ್ಯಾಣವಾಗಲಿ. ನೀನು ಸುಖಿಯಾಗಿ ಬಾಳು. ಭಗವಂತನು ನಿನಗೆ ದೀರ್ಘಾಯುಷ್ಯವನ್ನು ಕೊಡಲಿ, ಎಂದು ಆಶೀರ್ವದಿಸುತ್ತೇನೆ.

ಬಳಿಕ ಅವರ ಮನದಲ್ಲಿ ಯಾವ ಯಾವ ಮಾತುಗಳು ಏಳುತಿದ್ದುವೊ! ಮಂಚದ ಮೇಲೆ ಪುನಃ ಮಲಗಿ ಕಣ್ಣುಮುಚ್ಚುತ್ತ ಅವರು ಎನ್ನುತಿದ್ದರು, 'ಹಾ! ಅವಳು ನನ್ನನ್ನು ಎಷ್ಟು ಪ್ರೀತಿಸುತಿದ್ದಳು!'

ಇದೇ ಸಮಯದಲ್ಲಿ ಅವರ ಬಿಳಿ–ಕರಿ ಮೀಸೆಯ ಬಳಿಯಿಂದ ಕಂಬನಿಯೊಂದು ಹರಿದು ಹಾಸಿಗೆಯ ಮೇಲೆ ಬೀಳುತಿದ್ದಿತು. ಪಾರ್ವತಿ ಅದನ್ನು ಒರೆಸಿಬಿಡುತಿದ್ದಳು. ಒಮ್ಮೊಮ್ಮೆ ಅವರು ಮನದಲ್ಲಿಯೆ ಎಂದು ಕೊಳ್ಳುತಿದ್ದರು—ಹಾಯ್! ಅವರೆಲ್ಲರೂ ಒಂದು ಸಲ ಬಂದುಬಿಟ್ಟರೆ, ಮನೆ ಮತ್ತೆ ಬೆಳಗುವುದು. ಅಯ್ಯೊ, ಮೊದಲು ಮನೆ ಎಷ್ಟು ತುಂಬಿತ್ತು!

ಹುಡುಗ–ಹುಡುಗಿ–ಆಕೆ–ಎಲ್ಲರೂ ಇದ್ದರು. ನಿತ್ಯವೂ ನವ ರಾತ್ರಿಯ ಆನಂದವಿರುತಿದ್ದಿತು. ಕೊನೆಗೆ ಎಲ್ಲರೂ ಹೊರಟು ಹೋದರು. ಹುಡುಗರು ಕಲಕತ್ತೆಗೆ ಹೋದರು. ಯಶೋದೆಯನ್ನು ಅವಳ ಮಾವ ಕರೆದುಕೊಂಡು ಹೋದರು–ಪುನಃ ಅಂಧಃಕಾರ, ಸ್ಮಶಾನ..!

ಪುನಃ, ಮೊಸೆಯ ಎರಡೂ ಬದಿಗಳಿಂದ ಕಂಬನಿಗಳು ಕೋಡಿಯಾಗಿ ಹರಿದು ದಿಂಬಿನ ಮೇಲೆ ಬೀಳುತಿದ್ದುವು. ಪಾರ್ವತಿ ಕಾತರಳಾಗಿ ಕಣ್ಣೀರು ಒರೆಸುತ್ತ ಎನ್ನುತಿದ್ದಳು 'ಮಹೇಂದ್ರನ ವಿವಾಹವನ್ನು ಏಕೆ ಮಾಡಲಿಲ್ಲ ?'

'ಅಹುದು, ಆ ಸುದಿನಗಳನ್ನು ಎಂದು ಕಂಡೇನೋ ಎಂದೇ ಯೋಚಿಸುತಿದ್ದೆ. ಆದರೆ ಅವನ ಮನಸ್ಸಿನೊಳಗಿನ ಮಾತನ್ನು ಯಾರು ಬಲ್ಲರು? ಅವನ ಹಟವನ್ನು ಯಾರು ಬಿಡಿಸುವರು? ಎಷ್ಟು ಹೇಳಿದರೂ ಮದುವೆಯಾಗಲಿಲ್ಲ. ಅದರಿಂದಲೇ ಮುಪ್ಪಿನಲ್ಲಿ–ಇಡೀ ಮನೆ ಎದ್ದು ಓಡಾಡುತಿದ್ದಿತು. ಇಡೀ ಮನೆ ದುಃಖಮಯವಾಗಿದ್ದಿತು. ಮನೆಯಲ್ಲಿ ದೀಪ ಹಚ್ಚುವವರಾರೂ ಇರಲಿಲ್ಲ. ಇದೆಲ್ಲವನ್ನೂ ನೋಡುವುದಕ್ಕಾಗುತಿರಲಿಲ್ಲ–ಅದರಿಂದಲೇ ನಿನ್ನನ್ನು....'

ಇದನ್ನು ಕೇಳಿ ಪಾರ್ವತಿ ಅತ್ಯಂತ ದುಃಖಿತಳಾಗುತಿದ್ದಳು. ತಲೆಯನ್ನಲ್ಲಾಡಿಸಿ ಕರುಣಾ ಸ್ವರದಿಂದ ಎನ್ನುತಿದ್ದಳು 'ನೀವು ಮುದುಕರಾಗಿರುವಿರಿ–ನಾನೂ ಬೇಗನೆ ಮುದುಕಿಯಾಗುವೆನು. ಸ್ತ್ರೀಯರು ಮುಪ್ಪಾಗುವುದಕ್ಕೆ ಹೆಚ್ಚು ಸಮಯ ಬೇಕಾಗುವುದಿಲ್ಲ'

ಭುವನ ಚೌಧುರಿಯವರು ಎದ್ದು ಕುಳಿತುಕೊಳ್ಳುತಿದ್ದರು. ಒಂದು ಕೈಯನ್ನು ಅವಳ ಗದ್ದದ ಮೇಲಿಟ್ಟು ಅವಳ ಮುಖದ ಕಡೆಗೆ ನಿಃಶಬ್ದವಾಗಿ ಬಹಳ ಹೊತ್ತಿನ ವರೆಗೆ ನೋಡುತಿದ್ದರು, ನಿಪುಣ ಶಿಲ್ಪಿ ತನ್ನ ಪ್ರತಿಮೆಯನ್ನು ಸಿಂಗರಿಸಿ ತಲೆಯ ಮೇಲೆ ಕಿರೀಟವನ್ನಿಟ್ಟು ಎಡಕ್ಕೂ ಬಲಕ್ಕೂ ಹೊರಳಿಸಿ ಬಹಳ ಸಮಯದ ವರೆಗೆ ನೋಡುವಂತೆ. ಆಗ ಅವನ ಹೃದಯದಲ್ಲಿಯ ಸ್ನೇಹವೆಲ್ಲವೂ ಆ ಮೂರ್ತಿಯ ಕಡೆಗೆ ಹರಿಯುವಂತೆ ಆಗುತಿತ್ತು, ಭುವನಬಾಬುಗಳಿಗೆ. ಒಂದೊಂದು ದಿನ ಅಸ್ಫುಟ

ಸ್ವರದಿಂದಲೇ ಎನ್ನುತ್ತಿದ್ದರು ಅವರು 'ನಾನೇನೂ ಒಳಿತು ಮಾಡಲಿಲ್ಲ' ಎಂದು.

ಒಮ್ಮೊಮ್ಮೆ ಬಾಬುಗಳು 'ಇದು ನೀನು ಶೋಭಿಸುವಂತಹ ಮನೆಯಲ್ಲ ನೋಡು!' ಎನ್ನುತ್ತಿದ್ದರು.

ಅದಕ್ಕೆ ಪಾರ್ವತಿ ನಕ್ಕು 'ಶೋಭೆ ಅಶೋಭೆ ನಮ್ಮಂತಹರಿಗೆಲ್ಲಿ ಯದು?' ಎಂದು ನುಡಿಯುತ್ತಿದ್ದಳು.

ಭುವನಬಾಬುಗಳು ಪುನಃ ಮಲಗಿ, ತಮ್ಮ ಮನದಲ್ಲಿ ತಾವೇ ಎಂದುಕೊಳ್ಳುತ್ತಿದ್ದರು 'ನಾನು ಬಲ್ಲೆ—ಅದನ್ನು ನಾನು ಬಲ್ಲೆ. ಹಾಗಿದ್ದರೆ ನಿನ್ನ ಕಲ್ಯಾಣವಾಗಲಿ. ಪರಮಾತ್ಮನು ಎಲ್ಲವನ್ನೂ ನೋಡುವನು'

ಈ ರೀತಿಯಾಗಿ ಒಂದು ತಿಂಗಳು ಕಳೆಯಿತು. ಮಧ್ಯದಲ್ಲಿ ಒಂದು ದಿನ ಚಕ್ರವರ್ತಿ ಮಹಾಶಯರು ಮಗಳನ್ನು ಕರೆಯಲು ಬಂದರು. ಪಾರ್ವತಿ ತಾನೇ ಹೋಗಲಿಲ್ಲ. ತಂದೆಯವರಿಗೆ 'ಅಪ್ಪಾ, ಮನೆಯಲ್ಲಿ ಅವ್ಯವಸ್ಥೆ ಬಹಳ ಇದೆ. ಸ್ವಲ್ಪ ದಿನಗಳಾದ ಬಳಿಕ ಬರುವೆ' ಎಂದು ಹೇಳಿದಳು.

ಅವರು ಒಳಗಿಂದೊಳಗೇ ನಕ್ಕು ಮನದಲ್ಲಿಯೇ ಎಂದುಕೊಂಡರು 'ಸ್ತ್ರೀಯರ ಜಾತಿಯೇ ಹೀಗೆ' ಎಂದು.

ಅವರು ಹೊರಟು ಹೋದರು. ಪಾರ್ವತಿ ಮಹೇಂದ್ರನನ್ನು ಕರೆದು 'ನನ್ನ ಹಿರಿ ಮಗಳನ್ನು ಕರೆದುಕೊಂಡು ಬಾ ಮಗೂ' ಎಂದಳು.

ಮಹೇಂದ್ರ ಅತ್ತಿತ್ತ ನೋಡತೊಡಗಿದ. ಯಶೋದೆ ಏನು ಮಾಡಿದರೂ ಬರುವುದಿಲ್ಲೆಂದು ಅವನಿಗೆ ಗೊತ್ತಿತ್ತು. ಅದಕ್ಕಾಗಿಯೇ ಅವನು 'ಒಂದು ಸಲ ತಂದೆಯವರೇ ಹೋದರೆ ಒಳಿತು' ಎಂದ.

'ಛೀ, ಇದು ಸರಿಯಾದೀತೆ? ಮಗನೂ ತಾಯಿಯೂ ಹೋಗಿ ಕರೆದುಕೊಂಡು ಬರುವುದು ಇದಕ್ಕಿಂತ ಒಳ್ಳೆಯದು'

ಮಹೇಂದ್ರ ಆಶ್ಚರ್ಯದಿಂದ 'ನೀವೂ ಕರೆಯಲು ಹೋಗುವಿರಾ?' ಎಂದ.

'ಇದರಲ್ಲೇನು ದೋಷ? ನನಗೆ ಇದರಲ್ಲಿ ನಾಚಿಕೆಯಿಲ್ಲ. ನಾನು

ಹೋಗುವುದರಿಂದ ಯಶೋದೆ ಬಂದರೆ, ಅವಳ ಕೋಪ ಇಲ್ಲದಂತಾದರೆ ನಾನು ಹೋಗಲು ಹಿಂಜರಿಯಬೇಕಾಗಿಲ್ಲ'

ಇರಲಿ. ಮಹೇಂದ್ರನೇ ಮರುದಿನ ಯಶೋದೆಯನ್ನು ಕರೆತರಲು ಹೋದ. ಅವನು ಅಲ್ಲಿಗೆ ಹೋಗಿ ಯಾವ ಚಾತುರ್ಯವನ್ನು ತೋರಿಸಿದನೊ? ಯಶೋದೆ ನಾಲ್ಕೇ ದಿನಗಳಲ್ಲಿ ಬಂದುಬಿಟ್ಟಳು. ಆ ದಿನ ಪಾರ್ವತಿ ಮೈತುಂಬ ಚಿತ್ರವಿಚಿತ್ರವಾದ, ಹೊಸ ಒಡವೆಗಳನ್ನು ಇಟ್ಟುಕೊಂಡಿದ್ದಳು. ಕೆಲವು ದಿನಗಳ ಮೊದಲು ಭುವನಬಾಬುಗಳು ಇವನ್ನು ಕಲಕತ್ತೆಯಿಂದ ತರಿಸಿಕೊಟ್ಟಿದ್ದರು. ಪಾರ್ವತಿ ಇಂದು ಅವನ್ನೆ ಇಟ್ಟುಕೊಂಡಿದ್ದಳು. ಬರುವಾಗ ದಾರಿಯಲ್ಲಿ ಯಶೋದೆ ಎಷ್ಟೋ ಕೋಪದ ಮತ್ತು ಅಭಿಮಾನದ ಮಾತುಗಳನ್ನು ಬಾಯಿಪಾಠ ಮಾಡಿಕೊಂಡು ಬಂದಿದ್ದಳು. ಹೊಸ ತಾಯಿಯನ್ನು ಕಂಡ ಕೂಡಲೇ ದಿಙ್ಮೂಢಳಾದಳು. ಯಾವ ದ್ವೇಷದ ಮಾತೂ ಅವಳ ಮನದಲ್ಲಿ ಉಳಿಯಲಿಲ್ಲ. ಕೇವಲ ಅಸ್ಫುಟ ಸ್ವರದಿಂದ ಎಂದಳು 'ಇವಳೇ!'

ಪಾರ್ವತಿ ಯಶೋದೆಯ ಕೈಹಿಡಿದು ಒಳಗೆ ಕರೆದುಕೊಂಡು ಹೋದಳು. ಬಳಿಯಲ್ಲಿ ಕುಳ್ಳಿರಿಸಿಕೊಂಡು ಒಂದು ಕೈಯಿಂದ ಬೀಸಣಿಕೆಯನ್ನು ಹಿಡಿದುಕೊಂಡು ಎಂದಳು 'ಯಶೋದಾ, ತಾಯಿಯ ಮೇಲೆ ಇಷ್ಟು ಕೋಪಗೊಳ್ಳಬೇಕೆ?'

ಯಶೋದೆಯ ಮುಖ ನಾಚಿಕೆಯಿಂದ ಕೆಂಪೇರಿತು. ಬಳಿಕ ಪಾರ್ವತಿ ತನ್ನ ಎಲ್ಲ ಆಭರಣಗಳನ್ನು ಒಂದೊಂದಾಗಿ ತೆಗೆದು ಯಶೋದೆಗೆ ಇಡಿಸಲಾರಂಭಿಸಿದಳು.

ಯಶೋದೆ ವಿಸ್ಮಯದಿಂದ 'ಇದೇನು?' ಎಂದು ಕೇಳಿದಳು.

'ಏನಿಲ್ಲ, ಏನಿಲ್ಲ. ಕೇವಲ ತಾಯಿಯ ಪ್ರೀತಿ! ಬಯಕೆ!'

ಆಭರಣಗಳನ್ನು ಧರಿಸಿದ್ದರಿಂದ ಯಶೋದೆಯ ಶರೀರ ಅರಳಿತು. ತುಟಿಗಳ ಮೇಲೆ ನಗೆ ಮೂಡಿತು. ಎಲ್ಲ ಆಭರಣಗಳನ್ನೂ ಮಗಳ ಮೈಮೇಲಿಟ್ಟು ನಿರಾಭರಣಳಾಗಿ ಪಾರ್ವತಿ 'ಯಶೋದಾ, ತಾಯಿಯ ಮೇಲೆ ಕೋಪಗೊಳ್ಳಬೇಕೆ?' ಎಂದಳು.

'ಇಲ್ಲ, ಇಲ್ಲ. ಕೋಪವೇನು? ಕೋಪ ಯಾರ ಮೇಲೆ?'

'ಕೇಳು ಯಶೋದಾ, ಇದು ನಿಮ್ಮ ತಂದೆಯ ಮನೆ. ಈ ಮನೆಗೆ ಎಷ್ಟೋ ದಾಸದಾಸಿಯರು ಬೇಕು. ನಾನೂ ಒಬ್ಬ ದಾಸಿಯೇ. ಇಂತಹಳ ಮೇಲೆ ಇಷ್ಟು ಕೋಪವೆ?'

ಯಶೋದೆ ವಯಸ್ಸಿನಿಂದ ದೊಡ್ಡವಳಾದರೂ ಮಾತಿನಲ್ಲಿ ಚಿಕ್ಕವಳೇ. ಅವಳು ವಿಹ್ವಲೆಯಾದಳು. ಬೀಸಣಿಕೆಯಿಂದ ಗಾಳಿಹಾಕುತ್ತ ಪಾರ್ವತಿಯೆಂದಳು 'ದುಃಖಿತ ಕನ್ಯೆಗೆ ನಿಮ್ಮೆಲ್ಲರ ದಯೆಯಿಂದ ಇಲ್ಲಿ ಇಷ್ಟು ಸ್ಥಳ ದೊರೆತಿದೆ. ಎಷ್ಟೋ ದಾಸ–ದಾಸಿಯರ, ಅನಾಥ ದುಃಖಿಗಳ ಪ್ರತಿಪಾಲನೆ ನಿಮ್ಮ ದಯೆಯಿಂದಲೇ ಆಗುತ್ತಿದೆ, ನಾನೂ ಅವರಲ್ಲಿಯೇ ಒಬ್ಬಳು. ಯಾವ ಆಶ್ರಿತ....'

ಯಶೋದೆ ಎಲ್ಲವನ್ನೂ ತಲ್ಲೀನಳಾಗಿ ಕೇಳುತಿದ್ದಳು. ಅವಳು, ಮೈಮರೆತು ತಾಯ ಪಾದದ ಬಳಿ ಕೂಡಲೇ ಬಿದ್ದು ನಮಸ್ಕರಿಸಿ 'ನಿನ್ನ ಚರಣಗಳಿಗೆ ವಂದಿಸುತ್ತೇನಮ್ಮಾ!' ಎಂದಳು.

ಮರುದಿನ ಮಹೇಂದ್ರ ಯಶೋದೆಯನ್ನು ಒಂದೆಡೆ ಕರೆದು ಕೇಳಿದ 'ಕ್ರೋಧ ಶಾಂತವಾಯಿತೆ?'

ಯಶೋದೆ ಅಣ್ಣನ ಕಾಲು ಹಿಡಿದು ಎಂದಳು 'ಅಣ್ಣಾ, ಸಿಟ್ಟಿನಿಂದ ಎಷ್ಟೋ ಮಾತುಗಳನ್ನಾಡಿದೆ. ಅವುಗಳನ್ನು ಹೊರಗೆ ಹಾಕಬೇಡ ಕಂಡಿಯಾ?'

ಮಹೇಂದ್ರ ನಗಲಾರಂಭಿಸಿದ. ಯಶೋದೆ ಹೇಳಲಾರಂಭಿಸಿದಳು, 'ಒಳ್ಳೇದು ಅಣ್ಣಾ, ಯಾವ ಮಲತಾಯಿಯಾದರೂ ಇಷ್ಟು ಆದರ ಭಾವನೆಯುವಳಾಗಿರಬಹುದೆ?'

ಎರಡು ದಿನಗಳ ಬಳಿಕ ಯಶೋದೆ ತಾನೇ ತಂದೆಯ ಬಳಿಗೆ ಹೋಗಿ ಎಂದಳು 'ಅಪ್ಪಾ, ಅಲ್ಲಿಗೆ ಕಾಗದ ಹಾಕಿಬಿಡು, ನಾನು ಇನ್ನೂ ಎರಡು ತಿಂಗಳು ಇಲ್ಲಿಯೆ ಇರುತ್ತೇನೆ ಎಂದು'

'ಏಕೆ ಮಗೂ?' ಆಶ್ಚರ್ಯದಿಂದ ಭುವನ ಬಾಬುಗಳು ಕೇಳಿದರು.

'ನನ್ನ ಮೈಯಲ್ಲಿ ಅಷ್ಟು ಚೆನ್ನಾಗಿಲ್ಲ. ಆದ್ದರಿಂದ ನಾನು ಕೆಲವು ದಿನ ಚಿಕ್ಕಮ್ಮನ ಬಳಿಯಲ್ಲಿ ಇರುತ್ತೇನೆ'

ಆನಂದದಿಂದ ಭುವನಬಾಬುಗಳ ಕಣ್ಣುಗಳಲ್ಲಿ ನೀರು ತುಂಬಿ ಬಂದುವು. ಸಾಯಂಕಾಲ ಪಾರ್ವತಿಯನ್ನು ಕರೆದು 'ನೀನು ನನ್ನ ಮರ್ಯಾದೆಯನ್ನುಳಿಸಿದೆ. ಚಿರಂಜೀವಿಯಾಗಿರು, ಸುಖಿಯಾಗಿರು!' ಎಂದು ಹರಸಿದರು.

'ಅದೇನು?'

'ಅದೇನು? ನಿನಗದನ್ನು ತಿಳಿಹೇಳಲು ನಾನು ಅಸಮರ್ಥ. ಭಗವಂತ ನಾರಾಯಣ ನನ್ನನ್ನು ಅಮರ್ಯಾದೆಯಿಂದ ಪಾರು ಮಾಡಿದ' ಎಂದರು, ಪಾರ್ವತಿಯ ಪತಿದೇವರು.

ಸಾಯಂಕಾಲದ ಕತ್ತಲೆಯಲ್ಲಿ, ತನ್ನ ಪತಿಯ ಕಣ್ಣುಗಳು ಹನಿಗೂಡಿದುದನ್ನು ಪಾರ್ವತಿ ನೋಡಲಿಲ್ಲ.

ವಿನೋದಲಾಲ ಭುವನಬಾಬುಗಳ ಚಿಕ್ಕ ಮಗ. ಪರೀಕ್ಷೆ ಮುಗಿಸಿ ಮನೆಗೆ ಬಂದ. ಬಳಿಕ ಪುನಃ ಓದಲು ಹೋಗಲೇ ಇಲ್ಲ.

# ೧೧

ದೇವದಾಸ ಹುಚ್ಚನಂತೆ ಅಲೆದಾಡಿ ಎರಡು–ಮೂರು ದಿನಗಳನ್ನು ಕಳೆದ. ಧರ್ಮದಾಸ ಅವನಿಗೆ ತಿಳಿಹೇಳ ಹೋದರೆ ಕಣ್ಣು ಕೆಂಪಗೆ ಮಾಡಿ ಅವನನ್ನು ಹೆದರಿಸುತಿದ್ದ. ದೇವದಾಸನ ಮುಖವನ್ನು ನೋಡಿದರೆ, ಅವನನ್ನು ಮಾತನಾಡಿಸುವ ಧೈರ್ಯ ಚುನ್ನೀಲಾಲನಿಗೂ ಆಗುತ್ತಿರಲಿಲ್ಲ. ಧರ್ಮದಾಸ ಅಳುತ್ತ ಕೇಳಿದ 'ಚುನ್ನೀಬಾಬೂ, ದೇವದಾಸ ಬಾಬೂ ಹೀಗೇಕೆ ಆಗಿದ್ದಾರೆ?'

'ಅವರಿಗೇನಾಗಿದೆ ಧರ್ಮದಾಸ?'

ಒಬ್ಬ ಕುರುಡ ಇನ್ನೊಬ್ಬ ಕುರುಡನನ್ನು ದಾರಿ ಕೇಳಿದಂತಾಯಿತು ಈ ಮಾತು. ಇಬ್ಬರಲ್ಲಿ ಒಬ್ಬನೂ ದೇವದಾಸನ ಮನೋವ್ಯಥೆಯ ಕಾರಣವನ್ನರಿಯ. ಧರ್ಮದಾಸ ಕಣ್ಣು ಒರೆಸಿಕೊಳ್ಳುತ್ತ 'ಚುನ್ನೀಬಾಬೂ, ಏನಾದರೂ ಮಾಡಿ ದೇವದಾಸಬಾಬುಗಳನ್ನು ಅವರ ಮನೆಗೆ ಕಳಿಸಿಬಿಡಿ. ಅವರ ತಾಯಿ ಬಹಳ ಅಳುತಿದ್ದಾರೆ. ಓದುವುದನ್ನು ಬಿಟ್ಟಿದ್ದರೆ ಇಲ್ಲಿರುವುದರಿಂದ ಏನು ಪ್ರಯೋಜನ?' ಎಂದು ಕೇಳಿದ.

ಈ ಮಾತುಗಳು ನಿಜವಾಗಿದ್ದುವು. ಚುನ್ನೀಲಾಲ ಯೋಚಿಸತೊಡಗಿದ. ನಾಲ್ಕೈದು ದಿನಗಳಾದ ಮೇಲೆ ಸಾಯಂಕಾಲ ಅದೇ ಹೊತ್ತಿಗೆ ಸರಿಯಾಗಿ ಚುನ್ನೀಲಾಲ ಹೊರಗೆ ಹೊರಡುತಿದ್ದ. ದೇವದಾಸ ಎಲ್ಲಿಂದಲೊ ಬಂದು ಚುನ್ನೀಬಾಬುವಿನ ಕೈ ಹಿಡಿದು 'ಚುನ್ನೀಬಾಬೂ ಅಲ್ಲಿಗೇ ಹೋಗುತ್ತೀರೇನು?' ಎಂದು ಕೇಳಿದ.

ಚುನ್ನೀಲಾಲ ದನಿಯನ್ನು ಸ್ವಲ್ಪ ಸರಿಪಡಿಸಿಕೊಂಡು 'ಹೌದು, ಬೇಡವೆಂದರೆ ಬಿಡುತ್ತೇನೆ' ಎಂದ.

'ಇಲ್ಲ. ಅಲ್ಲಿಗೆ ಹೋಗಲು ನಾನು ಬೇಡವೆನ್ನುವುದಿಲ್ಲ. ಆದರೆ ಯಾವ ಆಸೆಯಿಂದ ನೀವು ಅಲ್ಲಿಗೆ ಹೋಗುವುದು?'

'ಆಸೆಯೇನು ಬಂತು ? ಮನಸ್ಸನ್ನು ಸಂತೋಷಪಡಿಸಿಕೊಳ್ಳಲಿಕ್ಕೆ ಹೋಗುತ್ತೇನೆ'

'ಮನಸ್ಸನ್ನು ಸಂತೋಷಪಡಿಸಲಿಕ್ಕೆ ಹೋಗುತ್ತೀರಾ ? ನನ್ನ ಮನಸ್ಸಿಗೆ ಸಂತೋಷವಿಲ್ಲ. ನಾನು ಅದನ್ನು ಸಂತೋಷಪಡಿಸಬೇಕೆಂದಿದ್ದೇನೆ'

ಚುನ್ನೀಲಾಲ ದೇವದಾಸನ ಮುಖದ ಕಡೆಗೆ ಅವನ ಮನೋಗತವನ್ನು ತಿಳಿಯುವುದಕ್ಕಾಗಿ ನೋಡುತ್ತ ನಿಂತ. ಕೊನೆಗೆ 'ದೇವದಾಸ ಬಾಬೂ, ನಿಮಗೇನಾಗಿದೆ, ಹೇಳುವಿರಾ ?' ಎಂದ.

'ಏನೂ ಆಗಿಲ್ಲ'

'ಹೇಳಲಾರಿರಾ ?'

ಚುನ್ನೀಲಾಲ ಬಹಳ ಹೊತ್ತಿನ ವರೆಗೆ ಮುಖ ತಗ್ಗಿಸಿಕೊಂಡು ನಿಂತು, ಬಳಿಕ 'ದೇವದಾಸಬಾಬೂ, ನನ್ನದೊಂದು ಮಾತಿದೆ. ಕೇಳುತ್ತೀರಾ ?' ಎಂದ.

'ಏನು ?'

'ಅಲ್ಲಿಗೆ ಇನ್ನೊಮ್ಮೆ ನೀವು ಬರಬೇಕು; ಕರೆದುಕೊಂಡು ಬರುತ್ತೇನೆಂದು ವಚನವಿತ್ತಿದ್ದೇನೆ'

'ಆ ದಿನ ಹೋದಲ್ಲಿಗೆ ?'

'ಹೌದು'

'ಛೀ, ಅಲ್ಲಿಗೆ ಹೋಗುವುದು ನನಗೆ ಸರಿಯೆನಿಸುವುದಿಲ್ಲ'

'ನಿಮಗೆ ಸರಿಯೆನಿಸುವುದನ್ನೇ ಮಾಡುತ್ತೇನೆ'

ದೇವದಾಸ ಅನ್ಯಮನಸ್ಕನಂತೆ ಸ್ವಲ್ಪ ಸಮಯ ಸುಮ್ಮನೆ ನಿಂತು ಬಳಿಕ 'ಒಳ್ಳೇದು ನಡೆಯಿರಿ, ಬರುತ್ತೇನೆ' ಎಂದ.

*    *    *    *

ದೇವದಾಸನನ್ನು ಅವನತಿಯ ಇನ್ನೊಂದು ಮೆಟ್ಟಿಲಿಗೆ ಇಳಿಸಿ, ಚುನ್ನೀಲಾಲ ಎತ್ತಹೋದನೋ ಏನೊ ? ದೇವದಾಸನೊಬ್ಬನೆ

ಚಂದ್ರಮುಖಿಯ ಮನೆಯ ಕೆಳಗಿನ ಭಾಗದಲ್ಲಿ ಕುಳಿತು ಸರಾಯಿ ಕುಡಿಯುತಿದ್ದ. ಬಳಿಯಲ್ಲಿ ಚಂದ್ರಮುಖಿ ವಿಷಣ್ಣವದನಳಾಗಿ ಕುಳಿತು ನೋಡುತಿದ್ದಳು. ಅವಳು 'ದೇವದಾಸಬಾಬೂ, ಕುಡಿಯಬೇಡಿರಿ' ಎಂದಳು.

ದೇವದಾಸ ಸುರೆಯ ಬಟ್ಟಲನ್ನು ಕೆಳಗಿಟ್ಟು ಕೇಳಿದ 'ಏಕೆ?'

'ಬಹಳ ಸ್ವಲ್ಪ ದಿನಗಳಿಂದ ಕುಡಿಯಲಾರಂಭಿಸಿದ್ದೀರಿ. ಈಗಲೇ ಅಷ್ಟು ತಡೆದುಕೊಳ್ಳಲಾರಿರಿ'

'ತಡೆದುಕೊಳ್ಳುವುದಕ್ಕಾಗಿ ಸರಾಯಿ ಕುಡಿಯುವುದಿಲ್ಲ. ಇಲ್ಲಿ ಇರುವುದಕ್ಕಾಗಿ ಕುಡಿಯುತ್ತೇನೆ'

ಈ ಮಾತನ್ನು ಚಂದ್ರಮುಖಿ ಎಷ್ಟೋ ಸಲ ಕೇಳಿದ್ದಾಳೆ. ಗೋಡೆಗೆ ಎಲ್ಲಿಯಾದರೂ ಹಾಯ್ದು ರಕ್ತವನ್ನು ಹರಿಯಿಸಿ ಸತ್ತರೇನು ಗತಿ? ಎಂದು ಒಂದೆರಡು ಸಲ ಯೋಚಿಸಿದಳು. ದೇವದಾಸನನ್ನು ಅವಳು ಪ್ರೀತಿಸುತಿದ್ದಳು. ದೇವದಾಸ ಸರಾಯಿಯ ಬಟ್ಟಲನ್ನು ಮೇಲಕ್ಕೆತ್ತಿದ. ಅದು ಮಂಚದ ಕಾಲಿಗೆ ತಗುಲಿ ಒಡೆದು ಚೂರಾಯಿತು. ಬಳಿಕ ದಿಂಬಿನ ಮೇಲೆ ಒರಗಿ ಭಗ್ನಸ್ವರದಲ್ಲಿ ಎಂದ 'ಏಳುವ ಶಕ್ತಿ ನನ್ನಲ್ಲಿಲ್ಲ. ಆದುದರಿಂದಲೇ ಇಲ್ಲಿ ಬಿದ್ದುಕೊಂಡಿರುತ್ತೇನೆ. ಜ್ಞಾನವಿಲ್ಲ. ಅದಕ್ಕೇ ನಿನ್ನ ಮುಖದ ಕಡೆಗೆ ನೋಡಿ ಮಾತನಾಡುತ್ತಿರುತ್ತೇನೆ, ಚಂದ್ರ..ಮು..! ಆಗ ಕೂಡ ಅಜ್ಞಾನವಿರುವುದಿಲ್ಲ. ಸ್ವಲ್ಪ ಜ್ಞಾನವಿರುತ್ತದೆ. ನಿನ್ನನ್ನು ಮುಟ್ಟಲಾರೆ—ನನಗೆ ಬಹಳ ತಿರಸ್ಕಾರವುಂಟಾಗುತ್ತದೆ!'

ಚಂದ್ರಮುಖಿ ಕಣ್ಣು ಒರಿಸಿಕೊಳ್ಳುತ್ತ ಮೆಲ್ಲನೆ 'ದೇವದಾಸ ಬಾಬೂ, ಇಲ್ಲಿಗೆ ಎಷ್ಟೋ ಜನರು ಬರುತ್ತಾರೆ. ಆದರೆ ಅವರು ಸರಾಯಿ ಮುಟ್ಟುವುದಿಲ್ಲ ಸಹ' ಎಂದಳು.

ದೇವದಾಸ ಕಣ್ಣುಕೆರಳಿಸಿಕೊಂಡು ಕುಳಿತ. ಸ್ವಲ್ಪ ಜೋಲಿ ಹೊಡೆಯುತ್ತ, ಅತ್ತಿತ್ತ ಕೈಚೆಲ್ಲುತ್ತ, 'ಮುಟ್ಟುವುದಿಲ್ಲವೆ? ನನ್ನ ಬಳಿ ಬಂದೂಕು ಇದ್ದಿದ್ದರೆ ಗುಂಡುಹಾಕಿ ಬಿಡುತ್ತಿದ್ದೆ. ಅವರು ನನಗಿಂತಲೂ ಹೆಚ್ಚು ಪಾಪಿಷ್ಠರು ಚಂದ್ರಮುಖೀ!' ಎಂದ.

ಸ್ವಲ್ಪ ಹೊತ್ತು ತಡೆದು, ಯೋಚಿಸತೊಡಗಿದ. ಬಳಿಕ 'ಒಂದು ವೇಳೆ ನಾನು ಸರಾಯಿ ಕುಡಿಯುವುದನ್ನು ಬಿಟ್ಟರೆ–ಬಿಡುವುದಿಲ್ಲ–ಇಲ್ಲಿಗೆ ಎಂದಿಗೂ ಬರಲಿಕ್ಕಿಲ್ಲ. ನನಗೆ ಉಪಾಯವು ಗೊತ್ತುಂಟು; ಆದರೆ ಅವರಿಗೇನಾಗಬೇಕಾಗಿದೆ? ' ಎಂದ.

ಸ್ವಲ್ಪ ಹೊತ್ತು ತಡೆದು ಪುನಃ 'ಅತ್ಯಂತ ಕಷ್ಟದಿಂದ ಸಾರಾಯಿಯನ್ನು ಒಗ್ಗಿಸಿಕೊಂಡಿದ್ದೇನೆ. ನನ್ನ ದುಃಖದ, ವಿಪತ್ತಿನ ಗೆಳತೀ! ಇನ್ನು ನಾನು ನಿನ್ನನ್ನು ಎಂದೂ ಬಿಡುವುದಿಲ್ಲ' ಎಂದು ತನ್ನ ಬಾಯಿಯನ್ನು ದಿಂಬಿಗೆ ತಿಕ್ಕಲಾರಂಭಿಸಿದ. ಚಂದ್ರಮುಖಿ ಬೇಗನೆ ಎದ್ದು ಬಂದು ಅವನ ಮುಖವನ್ನು ಎತ್ತಿಹಿಡಿದಳು. ದೇವದಾಸ ಹುಬ್ಬುಗಂಟಿಕ್ಕಿ ಎಂದ 'ಛೀ, ಮುಟ್ಟಬೇಡ. ನನ್ನಲ್ಲಿ ಇನ್ನೂ ಜ್ಞಾನವಿದೆ. ಚಂದ್ರಮುಖೀ, ನಿನಗೆ ಗೊತ್ತಿಲ್ಲ. ನಿನ್ನನ್ನು ನಾನು ಎಷ್ಟು ತಿರಸ್ಕರಿಸುತ್ತೇನೆಂಬುದನ್ನು ನೀನು ಬಲ್ಲೆ ಮಾತ್ರ. ನಿನ್ನನ್ನು ನಾನು ಸದಾ ತಿರಸ್ಕರಿಸುತ್ತೇನೆ. ಆದರೂ ಬರುತ್ತೇನೆ, ಕುಳಿತುಕೊಳ್ಳುತ್ತೇನೆ, ಮಾತಾಡುತ್ತೇನೆ. ಇದನ್ನು ನೀವು ಯಾರಾದರೂ ಅರಿಯಬಲ್ಲಿರಾ? ಹಾ:, ಹಾ: ! ಜನರು ಪಾಪಕರ್ಮವನ್ನು ಕತ್ತಲೆಯಲ್ಲಿ ಮಾಡುತ್ತಾರೆ. ಆದರೆ ನಾನು ಇಲ್ಲಿ ಸೆರೆ ಕುಡಿದು ಉನ್ಮತ್ತನಾಗುತ್ತೇನೆ. ಇಂತಹ ಉಪಯುಕ್ತ ಸ್ಥಳವು ಜಗತ್ತಿನಲ್ಲಿ ಇನ್ನೆಲ್ಲಿದೆ? ಮತ್ತು ನೀವು. . . .'

ದೇವದಾಸ ತನ್ನ ದೃಷ್ಟಿಯನ್ನು ತೀಕ್ಷ್ಣಮಾಡಿ ಸ್ವಲ್ಪ ಹೊತ್ತು ಅವಳ ಮುಖವನ್ನು ನೋಡುತ್ತ 'ನಾಚಿಕೆ, ಬೈಗಳು, ಅಪಮಾನ, ಅತ್ಯಾಚಾರ, ಉಪದ್ರವ, ಇವುಗಳನ್ನು ಸ್ತ್ರೀಯು ಸಹಿಸಬಲ್ಲಳು. ಅಹಾ ತಾಳ್ಮೆಯ ಪ್ರತಿಮೂರ್ತಿ! ನೀನೆ ಇವೆಲ್ಲಕ್ಕೂ ಉದಾಹರಣೆ! ' ಎಂದ.

ಪುನಃ ಧೊಪ್ಪನೆ ಬಿದ್ದ. ಮಲಗಿಕೊಂಡೇ ಮೆಲ್ಲಮೆಲ್ಲನೆ ಎನ್ನಲಾರಂಭಿಸಿದ' ಚಂದ್ರಮುಖಿ ನನ್ನನ್ನು ಪ್ರೀತಿಸುತ್ತೇನೆಂದೆನ್ನುತ್ತಾಳೆ. ನನಗಿದು ಬೇಡ–ಬೇಡ, ಬೇಡ. ಜನರು ನಾಟಕವಾಡುತ್ತಾರೆ. ಮುಖಕ್ಕೆ ಸುಣ್ಣಬಡಿದುಕೊಳ್ಳುತ್ತಾರೆ, ಕಾಡಿಗೆ ಹಚ್ಚಿಕೊಳ್ಳುತ್ತಾರೆ, ಭಿಕ್ಷೆ ಬೇಡುತ್ತಾರೆ, ರಾಜರಾಗುತ್ತಾರೆ– ರಾಣಿಯಾಗುತ್ತಾರೆ– ಪ್ರೀತಿಸುತ್ತಾರೆ–

ಪ್ರೀತಿಯ ಮಾತನ್ನಾಡುತ್ತಾರೆ– ಆ ಮೇಲೆ ಅಳುತ್ತಾರೆ; ಎಲ್ಲವೂ ನಿಜವೆಂಬಂತೆ ನಟಿಸುತ್ತಾರೆ! ನನ್ನ ಚಂದ್ರಮುಖಿಯೂ ನಾಟಕವಾಡುತ್ತಾಳೆ. ನಾನು ನೋಡುತ್ತೇನೆ. ಬಳಿಕ ಅದು ನೆನಪಾಗುತ್ತದೆ. ಕ್ಷಣದಲ್ಲಿ ಎಲ್ಲವೂ ಮುಗಿದುಹೋಗುತ್ತದೆ. ಅವಳೆಲ್ಲಿಗೆ ಹೋದಳು? ಮತ್ತು ನಾನು ಯಾವ ದಾರಿಯನ್ನು ಹಿಡಿದೆ! ಈಗ ಸರ್ವ ಜೀವನವ್ಯಾಪಿಯಾದ ಮದೋನ್ಮತ್ತ ಅಭಿನಯ ಆರಂಭವಾಗಿದೆ. ಒಬ್ಬನು ಅತ್ಯಂತ ಕುಡುಕ. ಇದೇ–ಇದೇ ನಡೆಯಲಿ. ಅಡ್ಡಿಯಾದರೂ ಏನು? ಆಸೆ ಇಲ್ಲ. ಅದೇ ಭರವಸೆ. ಸುಖವಿಲ್ಲ, ಸಾಧನವೂ ಇಲ್ಲ. ಭಲೆ! ಬಹಳ ಚೆನ್ನಾಗಿದೆ!'

ಬಳಿಕ ದೇವದಾಸ ಮಗ್ಗುಲು ಹೊರಳಿಸಿ ಏನೇನೊ ಬಡಬಡಿಸಲಾರಂಭಿಸಿದ. ಚಂದ್ರಮುಖಿಗೆ ಅದು ತಿಳಿಯಲಿಲ್ಲ. ಸ್ವಲ್ಪ ಹೊತ್ತಿನಲ್ಲಿ ಅವನಿಗೆ ನಿದ್ದೆ ಬಂದಿತು. ಚಂದ್ರಮುಖಿ ಅವನ ಬಳಿಗೆ ಬಂದು ಕುಳಿತಳು. ಸೆರಗನ್ನು ತೋಯಿಸಿಕೊಂಡು ಬಂದು ಅವನ ಮುಖವನ್ನು ಒರೆಸಿದಳು. ದಿಂಬನ್ನು ಬದಲು ಮಾಡಿದಳು. ಒಂದು ಬೀಸಣಿಕೆಯನ್ನು ತೆಗೆದುಕೊಂಡು ಸ್ವಲ್ಪ ಹೊತ್ತು ಗಾಳಿ ಹಾಕಿದಳು. ಬಹಳ ಹೊತ್ತಿನ ವರೆಗೂ ಮುಖ ತಗ್ಗಿಸಿಕೊಂಡು ಅವನ ಬಳಿಯಲ್ಲೇ ಕುಳಿತಿದ್ದಳು. ಆಗ ರಾತ್ರಿ ಒಂದು ಗಂಟೆಯಾಗಿತ್ತು. ಅವಳು ದೀಪ ಆರಿಸಿ ಬಾಗಿಲು ಮುಚ್ಚಿ, ಬೇರೆ ಕೋಣೆಗೆ ಹೊರಟು ಹೋದಳು.

## ೧೨

ದ್ವಿಜದಾಸ, ದೇವದಾಸ, ಈ ಇಬ್ಬರು ಸಹೋದರರೂ ಗ್ರಾಮದ ಅನೇಕ ಜನರೂ ನಾರಾಯಣ ಮುಖ್ಯೋಪಾಧ್ಯಾಯರ ಅಂತ್ಯಕ್ರಿಯೆ ಯನ್ನು ಮುಗಿಸಿಕೊಂಡು ಮನೆಗೆ ಬಂದರು. ದ್ವಿಜದಾಸ ಕಿರಿಚಿಕೊಂಡು ಅತ್ತು ಅತ್ತು ಹುಚ್ಚನಂತಾಗಿದ್ದ. ಐದಾರು ಜನರಿಗೂ ಅವನನ್ನು ಹಿಡಿದು ಕುಳ್ಳಿರಿಸುವುದಕ್ಕಾಗುತ್ತಿರಲಿಲ್ಲ. ದೇವದಾಸ ಶಾಂತಚಿತ್ತದಿಂದ ಕಂಬದ ಬಳಿ ಕುಳಿತಿದ್ದ. ಮುಖದಲ್ಲಿ ಒಂದು ಶಬ್ದವೂ ಇದ್ದಿಲ್ಲ. ಕಣ್ಣಲ್ಲಿ ಒಂದು ಕಂಬನಿಯೂ ಇರಲಿಲ್ಲ. ಯಾರೂ ಅವನನ್ನು ಹಿಡಿಯಲು ಬೇಕಾ ಗಿರಲಿಲ್ಲ, ಸಮಾಧಾನಪಡಿಸಲೂ ಹೋಗುತ್ತಿರಲಿಲ್ಲ. ಮಧುಸೂದನ ಘೋಷರು ಒಬ್ಬರು ಮಾತ್ರ ಒಂದು ಸಲ ದೇವದಾಸನ ಬಳಿಗೆ ಬಂದು ಎಂದರು 'ಮಗೂ, ಇದೆಲ್ಲವೂ ಈಶ್ವರನ ಆಟ. ಇದರಲ್ಲಿ....'

ದ್ವಿಜದಾಸನ ಕಡೆಗೆ ಬೆರಳು ಮಾಡಿ ತೋರಿಸಿ ದೇವದಾಸ ಎಂದ 'ಅಲ್ಲಿ....'

ಘೋಷ ಮಹಾಶಯರು ಅಪ್ರತಿಭರಾಗಿ 'ಹೌದು ಹೌದು! ಅವನಿಗೆ ಬಹಳ ದುಃಖ..' ಎಂದು ಒಟಗುಡುತ್ತ ಹೊರಟು ಹೋದರು. ಮತ್ಯಾರೂ ದೇವದಾಸನ ಬಳಿಗೆ ಬರಲಿಲ್ಲ. ಮಧ್ಯಾಹ್ನ ದೇವದಾಸ ಮೂರ್ಛೆಹೋದ ತಾಯಿಯ ಪಾದದ ಬಳಿ ಹೋಗಿ ಕುಳಿತ. ಅಲ್ಲಿ ಅನೇಕ ಸ್ತ್ರೀಯರು ಅವರನ್ನು ಸುತ್ತುಗಟ್ಟಿ ಕುಳಿತಿದ್ದರು. ಪಾರ್ವತಿಯ ಅಜ್ಜಿಯೂ ಕೂತುಕೊಂಡಿದ್ದಳು. ಶೋಕಾರ್ತ ವಿಧವಾ ಮಾತೆಗೆ ಭಗ್ನ ಸ್ವರದಿಂದ ಹೇಳಿದಳು 'ನೋಡಮ್ಮಾ, ದೇವದಾಸ ಬಂದಿದ್ದಾನೆ'

ದೇವದಾಸ 'ಅಮ್ಮಾ!' ಎಂದ.

ಅವರು ಒಂದು ಸಲ ದೇವದಾಸನನ್ನು ನೋಡಿ 'ದೇವದಾಸ' ಎಂದರು. ಅವರ ಕಣ್ಣುಗಳು ಹನಿಗಳಲ್ಲಿ ತೇಲಲಾರಂಭಿಸಿದುವು. ಕಂಬನಿ ಗಳು ಬಳಬಳನೆ ಉದುರ ತೊಡಗಿದುವು. ಸ್ತ್ರೀಯರೂ ಶೋಕದಿಂದ

ಕಂಗೆಟ್ಟರು. ದೇವದಾಸ ಕ್ಷಣಹೊತ್ತು ತಾಯ ಪಾದಗಳಲ್ಲಿ ಮುಖವನ್ನು ಮುಚ್ಚಿಕೊಂಡಿದ್ದ. ಬಳಿಕ ಎದ್ದು ಹೊರಟು ಹೋದ. ತಂದೆಯ ಕೋಣೆಯನ್ನು ಪ್ರವೇಶಿಸಿದ. ಕಣ್ಣುಗಳಲ್ಲಿ ನೀರಿದ್ದಿಲ್ಲ. ಮುಖ ಗಂಭೀರವಾಗಿದ್ದಿತು; ಶಾಂತವಾಗಿದ್ದಿತು. ಕೆಂಪಾದ ಕಣ್ಣುಗಳನ್ನು ಕೆರಳಿಸಿಕೊಂಡು ಭೂಮಿಯ ಮೇಲೆ ಹೋಗಿ ಕುಳಿತ. ಆ ಮೂರ್ತಿಯನ್ನು ಯಾರಾದರೂ ನೋಡಿದ್ದರೆ ಭಯಪಡುತ್ತಿದ್ದರು. ಎರಡೂ ಕೆನ್ನೆಗಳು ಉಬ್ಬಿದ್ದುವು. ಒಣಗಿದ ದೊಡ್ಡ ದೊಡ್ಡ ಕೂದಲುಗಳು ನಿಮಿರಿ ನಿಂತಿದ್ದುವು. ಬಂಗಾರದಂತಹ ಮೈ ಕಪ್ಪಾಗಿತ್ತು. ಹಿಂದಿನ ರಾತ್ರಿಯನ್ನು ಕಲಕತ್ತೆಯಲ್ಲಿ ಹೇಯ ಅತ್ಯಾಚಾರದಲ್ಲಿ ಕಳೆದಿದ್ದ. ಅನಂತರ ತಂದೆಯ ಮೃತ್ಯುವೂ ಆಯಿತು. ಒಂದು ವರ್ಷದ ಹಿಂದೆ ದೇವದಾಸನನ್ನು ನೋಡಿದವರು ಇಂದು ಅವನನ್ನು ಗುರುತಿಸುವಂತಿದ್ದಿಲ್ಲ.

ಸ್ವಲ್ಪ ಹೊತ್ತಿನ ಬಳಿಕ ಪಾರ್ವತಿಯ ತಾಯಿ ಅವನನ್ನು ಹುಡುಕುತ್ತ ಬಾಗಿಲು ನೂಕಿ ಒಳಗೆ ಬಂದು 'ದೇವದಾಸ!' ಎಂದರು

'ಏನು ಚಿಕ್ಕಮ್ಮ!'

'ಹೀಗೆ ಮಾಡಿದರೆ ಹೇಗಪ್ಪ?'

ದೇವದಾಸ ಅವರ ಮುಖದ ಕಡೆ ನೋಡಿ ಎಂದ 'ಏನು ಮಾಡುತಿದ್ದೇನೆ ಚಿಕ್ಕಮ್ಮ?'

ಚಿಕ್ಕಮ್ಮನಿಗೆ ಎಲ್ಲವೂ ಗೊತ್ತಿತ್ತು. ಆದರೆ ಬಾಯಿಂದ ಮಾತುಗಳು ಹೊರಡದಾದುವು. ದೇವದಾಸನ ತಲೆಯ ಮೇಲೆ ಕೈಯಾಡಿಸುತ್ತ ಎಂದರು 'ಅಪ್ಪಾ, ದೇವದಾಸ–'

'ಏನು ಚಿಕ್ಕಮ್ಮ!'

'ದೇವದಾಸ–'

ಈಗ ಮಾತ್ರ ದೇವದಾಸ ಅವರ ತೊಡೆಯ ಮೇಲೆ ತನ್ನ ಮುಖವನ್ನಿಟ್ಟು ನಾಲ್ಕು ಹನಿ ಕಣ್ಣೀರು ಸುರಿಸಿದ.

ಶೋಕಾರ್ತ ಪರಿವಾರದ ಆ ದಿನವಂತೂ ಕಳೆಯಿತು. ಯಥಾ ರೀತಿ ಸೂರ್ಯೋದಯವಾಯಿತು. ಅಳುವುದು ಎಷ್ಟೋ ಕಡಿಮೆಯಾಯಿತು.

ದ್ವಿಜದಾಸನಲ್ಲಿ ಮೆಲ್ಲಮೆಲ್ಲನೆ ಪ್ರಜ್ಞೆ ಬರಲಾರಂಭಿಸಿತು. ತಾಯಿಯೂ ಸ್ವಲ್ಪ ಎದ್ದು ಕುಳಿತರು. ಕಣ್ಣೀರನ್ನು ಮಿಡಿದುಕೊಳ್ಳುತ್ತ ಅಗತ್ಯವಿದ್ದ ಕೆಲಸಗಳನ್ನು ಮಾಡಲಾರಂಭಿಸಿದರು. ಎರಡು ದಿನಗಳ ನಂತರ ದ್ವಿಜದಾಸ ದೇವದಾಸನನ್ನು ಕರೆದು 'ದೇವದಾಸ, ತಂದೆಯುವರ ಉತ್ತರಕ್ರಿಯೆಗಾಗಿ ಎಷ್ಟು ಖರ್ಚು ಮಾಡೋಣ?' ಎಂದು ಕೇಳಿದ.

ದೇವದಾಸ ಅಣ್ಣನ ಮುಖದ ಕಡೆ ನೋಡಿ 'ನಿಮಗೆ ಸರಿದೋರಿದಷ್ಟು ಮಾಡಿರಿ' ಎಂದ.

'ಇಲ್ಲ ತಮ್ಮಾ, ನನ್ನ ಅಭಿಪ್ರಾಯದಂತೆಯೇ ನಡೆಯುವುದು ತರವಲ್ಲ. ನೀನೂ ದೊಡ್ಡವನಾಗಿರುವೆ. ನಿನ್ನ ಒಪ್ಪಿಗೆಯೂ ಬೇಕು'

'ಈಗ ಎಷ್ಟು ರೂಪಾಯಿಗಳಿವೆ?'

'ತಂದೆಯುವರ ಟ್ರೆಝರಿಯಲ್ಲಿ ಒಂದೂವರೆ ಲಕ್ಷ ರೂಪಾಯಿಗಳಿವೆ. ಹತ್ತು ಸಾವಿರ ರೂಪಾಯಿ ವೆಚ್ಚ ಮಾಡುವುದು ಸರಿಯೆಂದು ನನಗೆ ತೋರುತ್ತದೆ. ನಿನ್ನ ಅಭಿಪ್ರಾಯವೇನು?'

'ನನ್ನ ಪಾಲಿಗೆಷ್ಟು ಸಿಗುವುವು?'

ದ್ವಿಜದಾಸ ಅತ್ತಿತ್ತ ನೋಡಿ 'ನಿನಗೂ ಅರ್ಧ ಸಿಗುವುವು. ಹತ್ತು ಸಾವಿರ ವೆಚ್ಚ ಮಾಡಿದರೆ ಪ್ರತಿಯೊಬ್ಬರಿಗೆ ಸರಿಯಾಗಿ ಎಪ್ಪತ್ತು ಸಾವಿರ ಸಿಗುತ್ತವೆ' ಎಂದ.

'ತಾಯಿಗೆ ಏನು ದೊರೆಯುವುದು?'

'ತಾಯಿ ನಗದು ರೂಪಾಯಿಗಳನ್ನು ತೆಗೆದುಕೊಂಡು ಏನು ಮಾಡುವಳು? ಅವಳು ಮನೆಯ ಯಜಮಾನಿ. ನಾವು ಅವಳ ವೆಚ್ಚವನ್ನು ನೋಡಿಕೊಳ್ಳೋಣ'

ದೇವದಾಸ ಸ್ವಲ್ಪ ಯೋಚಿಸಿ ಎಂದ 'ನಿಮ್ಮ ಪಾಲಿನಲ್ಲಿ ಐದು ಸಾವಿರ ನನ್ನ ಪಾಲಿನಲ್ಲಿ ಇಪ್ಪತ್ತೈದು ಸಾವಿರ ವೆಚ್ಚವಾಗಲಿ. ಇನ್ನಿಪ್ಪತ್ತೈದು ಸಾವಿರ ರೂಪಾಯಿಗಳನ್ನು ತಾಯಿಯ ಹೆಸರಿನಲ್ಲಿಡುತ್ತೇನೆ. ತಮ್ಮ ಅಭಿಪ್ರಾಯವೇನು?'

ಮೊದಲು ದ್ವಿಜದಾಸನಿಗೆ ಸ್ವಲ್ಪ ನಾಚಿಕೆಯಾಯಿತು. ಪುನಃ

ಎಂದ 'ಸರಿ, ನನಗೆ ಹೆಂಡತಿ–ಮಕ್ಕಳಿದ್ದಾರೆ, ನಿನಗೆ ಗೊತ್ತೇ ಇದೆ. ಅವರ ವಿವಾಹ, ಉಪನಯನಕ್ಕಾಗಿ ಹೆಚ್ಚು ವೆಚ್ಚ ಮಾಡಬೇಕಾಗುವುದು. ಅದರಿಂದ ನಿನ್ನ ಮಾತೇ ಸರಿಯಾಗಿದೆ' ಎಂದು ಸ್ವಲ್ಪ ಹೊತ್ತು ನಿಧಾನಿಸಿ 'ಇರಲಿ, ಇದನ್ನಷ್ಟು ಬರೆದುಕೊಡುವಿಯಾ?' ಎಂದು ಕೇಳಿದ.

'ಬರೆದುಕೊಡುವ ಅವಶ್ಯಕತೆಯೇನಿದೆ ಈಗ? ಇದು ಸರಿಯೆನಿಸುವುದಿಲ್ಲ. ಈಗ ರೂಪಾಯಿಗಳ ಮಾತು ರಹಸ್ಯವಾಗಿಯೆ ಇರಬೇಕೆಂದು ನನ್ನ ಇಚ್ಛೆ.'

'ಅದೆಲ್ಲ ನಿಜ. ಆದರೆ ನೋಡು....'

'ಸರಿ, ಬರೆದುಕೊಡುತ್ತೇನೆ' ಎಂದು ದೇವದಾಸ ಅಂದೇ ಬರೆದು ಕೊಟ್ಟ.

ಮರು ದಿನ ದೇವದಾಸ ಉಪ್ಪರಿಗೆಯ ಮೇಲಿನಿಂದ ಇಳಿಯುತಿದ್ದ. ಮಧ್ಯದಲ್ಲಿ ಪಾರ್ವತಿಯ ಬೆಟ್ಟಿಯಾಯಿತು, ನಿಂತ! ಪಾರ್ವತಿ ಅವನ ಮುಖದ ಕಡೆ ನೋಡಿದಳು. ನೋಡಿ ಗುರುತಿಸುವಾಗ ಅವಳಿಗೆ ಕಸಿವಿಸಿಯಾಯಿತು. ದೇವದಾಸ ಅವಳ ಬಳಿಗೆ ಬಂದು ಗಾಂಭೀರ್ಯದಿಂದ ಕೇಳಿದ, 'ಯಾವಾಗ ಬಂದೆ ಪಾರ್ವತಿ?'

ಅದೇ ಕಂಠಸ್ವರ! ಇಂದಿಗೆ ಮೂರು ವರ್ಷಗಳ ಹಿಂದೆ ಅದನ್ನು ಕೇಳಿದ್ದಳು. ತಲೆ ಬಾಗಿಸಿಕೊಂಡೇ ಪಾರ್ವತಿ 'ಇಂದು ಬೆಳಿಗ್ಗೆ ಬಂದೆ' ಎಂದಳು.

'ನಿನ್ನನ್ನು ನೋಡಿ ಬಹಳ ದಿನಗಳಾದುವು. ಚೆನ್ನಾಗಿರುವೆಯಷ್ಟೆ?'

ಪಾರ್ವತಿ ಮುಖ ಕೆಳಗೆ ಮಾಡಿಕೊಂಡಿದ್ದಳು.

'ಚೌಧುರೀ ಮಹಾಶಯರು ಚೆನ್ನಾಗಿರುವರೆ? ಮಕ್ಕಳು ಕುಶಲವಾಗಿದ್ದಾರಷ್ಟೆ?'

'ಎಲ್ಲರೂ ಒಳಿತಾಗಿದ್ದಾರೆ' ಎಂದು, ಒಂದು ಸಲ ದೇವದಾಸನ ಮುಖದ ಕಡೆ ನೋಡಿದಳು. ಮತ್ತೊಂದು ಮಾತನ್ನು ಕೇಳುವುದಾಗಲಿಲ್ಲ ಪಾರ್ವತಿಯಿಂದ—'ನೀವು ಹೇಗಿದ್ದೀರಿ, ಏನು ಮಾಡುತ್ತೀರಿ?' ಎಂದು.

'ಇನ್ನೂ ಕೆಲವು ದಿನ ಇಲ್ಲಿ ಇರುವೆಯಲ್ಲವೆ?'

'ಹೂಂ'

'ಸರಿ ಹಾಗಾದರೆ' ಎಂದು ದೇವದಾಸ ಹೊರಟುಹೋದ.

ಉತ್ತರಕ್ರಿಯೆಗಳೆಲ್ಲ ಮುಗಿದುವು. ಅದನ್ನು ಸಂಕ್ಷಿಪ್ತವಾಗಿ ಬಣ್ಣಿಸುವುದು ಸಾಧ್ಯವಿಲ್ಲ. ಅದು ಇಲ್ಲಿ ಅನಾವಶ್ಯಕ. ಉತ್ತರಕ್ರಿಯೆ ಮುಗಿದ ಮರುದಿನ ಪಾರ್ವತಿ ಧರ್ಮದಾಸನೊಬ್ಬನನ್ನೆ ಕರೆದು ಅವನಿಗೆ ಒಂದು ಬಂಗಾರದ ಹಾರವನ್ನು ಕೊಟ್ಟು 'ಧರ್ಮ, ನಿನ್ನ ಮಗಳಿಗೆ ಇದನ್ನು ಹಾಕು' ಎಂದಳು.

ಧರ್ಮದಾಸ ಅವಳ ಮುಖದ ಕಡೆಗೆ ನೋಡಿ ಒದ್ದೆಯಾದ ಕಣ್ಣು ಗಳಿಂದ, ಕರುಣಾಸ್ವರದಲ್ಲಿ 'ಅಹಾ! ಬಹಳ ದಿನಗಳಿಂದ ನಿಮ್ಮನ್ನು ಕಂಡೇ ಇಲ್ಲ. ಎಲ್ಲವೂ ಕುಶಲವಷ್ಟೆ?' ಎಂದ.

'ಎಲ್ಲವೂ ಕುಶಲವಾಗಿದೆ. ನಿನ್ನ ಹೆಣ್ಣು ಮಕ್ಕಳು, ಗಂಡು ಹುಡು ಗರು, ಎಲ್ಲರೂ ಕ್ಷೇಮವಾಗಿದ್ದಾರೆಯೆ?'

'ಹೌದು ಪಾರ್ವತೀ, ಎಲ್ಲರೂ ಚೆನ್ನಾಗಿದ್ದಾರೆ'

'ನೀನು ಒಳಿತಾಗಿದ್ದಿಯಾ?'

ಈ ಸಲ ಧರ್ಮದಾಸ ದೀರ್ಘವಾದ ಉಸಿರನ್ನು ಬಿಟ್ಟು ಎಂದ 'ಒಳಿತಾಗಿರುವುದೇನು? ಈಗ ಈ ಜೀವನ ಭಾರವಾದ ಹಾಗೆ ತೋರು ತ್ತದೆ. ಯಜಮಾನರೇ ಹೊರಟು ಹೋದರು....'

ಧರ್ಮದಾಸ ಶೋಕದ ಆವೇಗದಲ್ಲಿ ಏನನ್ನೋ ನುಡಿಯಬೇಕೆನ್ನು ತಿದ್ದ; ಆದರೆ ಪಾರ್ವತಿ ಅವನನ್ನು ತಡೆದಳು. ಇವೆಲ್ಲ ಮಾತುಗಳನ್ನು ಕೇಳಲಿಕ್ಕೆ ಅವಳು ಹಾರವನ್ನು ಕೊಟ್ಟಿರಲಿಲ್ಲ.

'ಇದೇನು ಧರ್ಮದಾಸ, ನೀನು ಹೋಗಿಬಿಟ್ಟರೆ ದೇವದಾಸರನ್ನು ನೋಡಿಕೊಳ್ಳುವವರಾರು?'

'ಚಿಕ್ಕವರಿದ್ದಾಗ ನೋಡಿಕೊಳ್ಳುವುದು ಅವಶ್ಯವಿತ್ತು. ಈಗ ನೋಡದಿರುವುದೇ ಮೇಲು' ಎಂದು ಹಣೆಗಟ್ಟಿಸಿಕೊಂಡ ಧರ್ಮದಾಸ.

ಪಾರ್ವತಿ ಧರ್ಮದಾಸನ ತೀರ ಹತ್ತಿರ ಬಂದು 'ಧರ್ಮ, ಒಂದು ಮಾತಿದೆ. ನಿಜ ಹೇಳುವೆಯಾ?' ಎಂದು ಕೇಳಿದಳು.

'ಏಕೆ ಹೇಳುವುದಿಲ್ಲ, ಪಾರ್ವತೀ. ಅವಶ್ಯವಾಗಿ ಹೇಳುತ್ತೇನೆ'

'ಈಗ ದೇವದಾಸರು ಏನು ಮಾಡುತ್ತಾರೆ? ನಿಜವಾಗಿರುವುದನ್ನು ಮರೆಮಾಜದೆ ಹೇಳು'

'ಏನು ಮಾಡುತ್ತಾರೆ, ನನ್ನ ತಲೆ!'

'ಧರ್ಮದಾಸ! ಸ್ಪಷ್ಟವಾಗಿ ಏಕೆ ಹೇಳುವುದಿಲ್ಲ?'

ಧರ್ಮದಾಸ ಹಣೆ ಬಡೆದುಕೊಂಡು 'ಸ್ಪಷ್ಟವಾಗಿ ಏನು ಹೇಳಲಿ? ಹೇಳುವಂತಹ ಮಾತೆ? ಈಗ ಹಿರಿಯರಿಲ್ಲ. ದೇವದಾಸರ ಕೈಗೆ ಅಪಾರ ಸಂಪತ್ತು ಸಿಕ್ಕಿಬಿಟ್ಟಿದೆ. ಇನ್ನೇನು ಉಳಿಯುವ ಹಂಚಿಕೆಯಿಲ್ಲ' ಎಂದ.

ಪಾರ್ವತಿಯ ಮುಖ ಒಮ್ಮೆಲೇ ನಿಸ್ತೇಜವಾಯಿತು. ಅವಳು ದುಃಖಿತಳಾಗಿ ಕೇಳಿದಳು 'ಏನು ಹೇಳುತ್ತಿ ಧರ್ಮದಾಸ?'

ಅವಳಿಗೆ ಮನೋರಮೆಯ ಪತ್ರಗಳಿಂದ ದೇವದಾಸನ ಸಮಾಚಾರ ಗೊತ್ತಾಗಿತ್ತು. ಆದರೆ ಅದರ ಮೇಲೆ ವಿಶ್ವಾಸವುಂಟಾಗಿದ್ದಿಲ್ಲ. ಧರ್ಮದಾಸ ತಲೆ ತಗ್ಗಿಸಿಕೊಂಡು ಹೇಳಲಾರಂಭಿಸಿದ 'ಊಟವಿಲ್ಲ–ಉಡಿಗೆ ಇಲ್ಲ; ನಿದ್ದೆ ಇಲ್ಲ–ನೀರಡಿಕೆಯಿಲ್ಲ; ಬಾಟ್ಲಿಯ ಮೇಲೆ ಬಾಟ್ಲಿ ಸರೆ ಕುಡಿಯುತ್ತಾರೆ. ಮೂರು–ನಾಲ್ಕು ದಿನಗಳ ವರೆಗೆ ಎಲ್ಲಿರುತ್ತಾರೊ, ಯಾರಿಗೆ ಗೊತ್ತು? ಎಷ್ಟೋ ರೂಪಾಯಿಗಳನ್ನು ಕಳೆದು ಬಿಟ್ಟರು. ಎಷ್ಟೋ ಸಾವಿರ ರೂಪಾಯಿಗಳ ಆಭರಣ ಮಾಡಿಸಿ ಕೊಟ್ಟಿದ್ದಾರೆಂದು ಕೇಳಿದ್ದೇನೆ'

ಪಾರ್ವತಿ ತಲೆಯಿಂದ ಪಾದದ ವರೆಗೂ ನಡುಗಿದಳು. 'ಧರ್ಮದಾಸ, ನಿಜವೇ ಇದೆಲ್ಲ?' ಎಂದಳು.

ಧರ್ಮದಾಸ ಹಾಗೆಯೇ ಹೇಳತೊಡಗಿದ. 'ನಿನ್ನ ಮಾತನ್ನು ದೇವದಾಸರು ಕೇಳಿದರೂ ಕೇಳಬಹುದು. ಬೇಡವೆಂದು ಹೇಳಿನೋಡು. ಅವರ ದೇಹ ಹೇಗಿತ್ತು? ಈಗ ಹೇಗಾಗಿ ಹೋಗಿದೆ! ಇಷ್ಟು ಅಸಂಯಮಿಯಾಗಿ, ಅತ್ಯಾಚಾರಿಯಾಗಿ ಎಷ್ಟು ದಿನ ಬದುಕಿ ಉಳಿದಾರು? ಯಾರಿಗೆ ಇದನ್ನು ಹೇಳಲಿ? ತಾಯಿಗೆ, ತಂದೆಗೆ, ಅಣ್ಣನಿಗೆ ಇಂತಹ ಮಾತುಗಳನ್ನು ಹೇಳಲಾಗದು' ಹಣೆ ಹಣೆ ಬಡಿದುಕೊಂಡು 'ವಿಷ ತಿಂದು ಸಾಯಬೇಕೆಂದು ಮನಸ್ಸಾಗುತ್ತದೆ ಪಾರೂ! ಇನ್ನು ಜೀವಿಸಿರುವ ಇಚ್ಛೆ ಇಲ್ಲ!' ಎಂದ.

ಪಾರ್ವತಿ ಎದ್ದು ಹೊರಟುಹೋದಳು. ನಾರಾಯಣಬಾಬುಗಳು ತೀರಿದ ಸುದ್ದಿ ತಿಳಿದು ಅವಳು ಇಲ್ಲಿಗೆ ಬಂದಿದ್ದಳು. ಈ ವಿಪತ್ತಿನಲ್ಲಿ ದೇವದಾಸನ ಬಳಿಗೆ ಹೋಗುವುದು ಆವಶ್ಯಕವೆಂದು ತಿಳಿದಿದ್ದಳು. ಆದರೆ ಅವಳ ಪರಮಪ್ರಿಯ ದೇವದಾಸನ ಅವಸ್ಥೆ ಹೀಗೆ! ಅನಂತವಿಚಾರಗಳು ಅವಳ ಮನದಲ್ಲೆದ್ದುವು. ದೇವದಾಸನನ್ನು ಧಿಕ್ಕರಿಸಿದುದಕ್ಕಿಂತಲೂ ತನ್ನನ್ನು ಹೆಚ್ಚಾಗಿ ಧಿಕ್ಕರಿಸಿಕೊಂಡಳು. 'ನಾನು ಅವರವಳಾಗಿದ್ದರೆ ಅವರು ಇಷ್ಟು ಕೆಡುತಿದ್ದರೆ?' ಎಂದು ಸಾವಿರಾರು ಸಲ ಎಂದು ಕೊಂಡಳು. ಈ ಮೊದಲೇ ಅವಳು ತನ್ನ ಕಾಲ ಮೇಲೆ ತಾನೇ ಕಲ್ಲನ್ನು ಹಾಕಿಕೊಂಡಿದ್ದಳು. ಅದೀಗ ಅವನ ತಲೆಗೂ ಹೋಗಿ ತಗುಲಿತು. ಅವಳ ದೇವದಾಸ ಈ ರೀತಿಯಾಗುತಿದ್ದಾನೆ; ಈ ರೀತಿ ಹಾಳಾಗುತಿದ್ದಾನೆ. ಆದರೆ ಈಗ ಅವಳು ಪರರ ಗೃಹಿಣಿಯಾಗಿದ್ದಾಳೆ. ಎರಡನೆಯವರನ್ನು ತನ್ನವರೆಂದು ತಿಳಿದುಕೊಂಡು ದಿನಾಲು ಅನ್ನಸಂತರ್ಪಣೆ ನಡೆಸಿದ್ದಾಳೆ. ಆದರೆ ಅವಳ ಸರ್ವಸ್ವವಾದ ದೇವದಾಸ ಹೊಟ್ಟೆಗಿಲ್ಲದೆ ಸಾಯುತ್ತಿದ್ದಾನೆ! ಈ ಹೊತ್ತು ದೇವದಾಸರ ಚರಣಗಳಲ್ಲಿ ತಲೆಯಿಟ್ಟು ಪ್ರಾಣಬಿಡುವೆನೆಂದು ಪ್ರತಿಜ್ಞೆ ಮಾಡಿದಳು.

ಸಂಜೆಯಾಗಲು ಇನ್ನೂ ಸ್ವಲ್ಪ ಹೊತ್ತಿದೆ. ಪಾರ್ವತಿ ದೇವದಾಸನ ಕೋಣೆಯನ್ನು ಹೊಕ್ಕಳು. ದೇವದಾಸ ಮಂಚದ ಮೇಲೆ ಕುಳಿತು ಕೊಂಡು ಲೆಕ್ಕ ನೋಡುತಿದ್ದ. ಪಾರ್ವತಿ ಅವನ ಕಣ್ಣಿಗೆ ಬಿದ್ದಳು. ಅವಳು ಬಾಗಿಲನ್ನು ಮುಚ್ಚಿ ಕೆಳಗೆ ಕುಳಿತುಕೊಂಡಳು. ಕತ್ತೆತ್ತಿ ನೋಡಿ ದೇವ ದಾಸ ನಕ್ಕ. ಅವನ ಮುಖ ವಿಷಣ್ಣವಾಗಿದ್ದರೂ ಶಾಂತವಾಗಿತ್ತು. ಒಮ್ಮೊಂದೊಮ್ಮೆ ಚೇಷ್ಟೆಯಿಂದ ಅವನೆಂದ 'ನಾನು ನಿನಗೆ ಅಮರ್ಯಾದೆ ಮಾಡಿದರೆ ಹೇಗೆ?'

ಪಾರ್ವತಿ ತನ್ನ ನೀಲಕಮಲದಂತಹ ಕಣ್ಣುಗಳನ್ನು ಒಂದು ಸಲ ನಾಚಿಕೆಯಿಂದ ಮೇಲ್ಮಾಡಿ ಪುನಃ ಕೆಳಗೆ ದೃಷ್ಟಿಯನ್ನಿಟ್ಟಳು. ದೇವ ದಾಸನ ಈ ಮಾತು ಅವಳ ಅಂತರಂಗದಲ್ಲಿ ಆಳವಾಗಿ ನಟ್ಟಿದೆಯೆಂಬುದು ಈ ದೃಷ್ಟಿಯಿಂದ ತಿಳಿಯುವಂತಿತ್ತು. ಅವಳು, ದೇವದಾಸನಿಗೆ ಎಷ್ಟೋ

13

ಮಾತುಗಳನ್ನು ಹೇಳಲು ಬಂದಿದ್ದಳು. ಆದರೆ ಎಲ್ಲವನ್ನೂ ಮರೆತು ಬಿಟ್ಟಳು. ಒಂದನ್ನೂ ಆಡಲಾರದವಳಾದಳು. ದೇವದಾಸ ನಕ್ಕು ಮತ್ತೆ ನುಡಿದ 'ತಿಳಿಯಿತು, ತಿಳಿಯಿತು. ನಾಚಿಕೆಯಾಗುತ್ತದೆ ಅಲ್ಲವೆ ?'

ಆಗಲೂ ಪಾರ್ವತಿ ಏನೂ ಮಾತನಾಡಲಿಲ್ಲ. ದೇವದಾಸನೆಂದ 'ಇದರಲ್ಲಿ ಲಜ್ಜೆಯೇನು ? ಚಿಕ್ಕಂದಿನಲ್ಲಿ ನಾವಿಬ್ಬರೂ ಒಂದುಗೂಡಿ ಇರುತ್ತಿದ್ದೆವು; ಒಂದುಗೂಡಿ ಆಡುತಿದ್ದೆವು. ಮಧ್ಯದಲ್ಲಿ ಒಂದು ಗೊಂದಲ ವಾಗಿ ಬಿಟ್ಟಿತು. ಸಿಟ್ಟಿನಿಂದ ನೀನೂ ಏನನ್ನೊ ಹೇಳಿಬಿಟ್ಟೆ. ನಾನೂ ಕ್ರೋಧದಿಂದ ಈ ಕಲೆಯನ್ನು ಕೊಟ್ಟುಬಿಟ್ಟೆ. ಹೇಗಾಯಿತು ?'

ದೇವದಾಸನ ಮಾತಿನಲ್ಲಿ ಕೊಂಕು, ದ್ವೇಷ ಎಳ್ಳಷ್ಟೂ ಇದ್ದಿಲ್ಲ. ನಗುನಗುತ್ತ ಹಿಂದಿನ ಕತೆಯನ್ನು ಹೇಳಿದ. ಪಾರ್ವತಿಯ ಹೃದಯ ಕರಗಿ ನೀರಾಗಿ ಹರಿಯಲಾರಂಭಿಸಿತು. ಮುಖವನ್ನು ಮುಚ್ಚಿಕೊಂಡು ಮನ ದಲ್ಲಿಯೆ ಒಂದು ನಿಟ್ಟುಸುರುಬಿಟ್ಟು ಎಂದುಕೊಂಡಳು, 'ದೇವದಾಸ, ನನ್ನ ಉದ್ಧತ ಸ್ವಭಾವದ ಸಾಕ್ಷಿಯಾಗಿ ಈ ಕಲಂಕವೊಂದೇ ನನ್ನ ಹತ್ತಿರ ಉಳಿದಿದೆ. ನೀವು ನನ್ನನ್ನು ಪ್ರೀತಿಸುತಿದ್ದಿರಿ. ಆದುದರಿಂದಲೇ ಅತುಲ ದಯೆಯಿಂದ ನನ್ನ ಬಾಲ್ಯಜೀವನದ ಇತಿಹಾಸವನ್ನು ಈ ರೂಪದಲ್ಲಿ ಹಣೆಯಲ್ಲಿ ಬರೆದಿದ್ದೀರಿ. ಇದರಿಂದ ನನಗೆ ನಾಚಿಕೆಯಾಗುವುದಿಲ್ಲ; ಕಲಂಕ ತಟ್ಟುವುದಿಲ್ಲ. ಇದು ನನ್ನ ಗೌರವದ ಗುರುತು'

'ಪಾರೂ !'

ಪಾರ್ವತಿ ಮುಖದ ಮೇಲಿನ ಮುಸುಕು ತೆಗೆಯದೆ 'ಏನು ?' ಎಂದಳು.

'ನಿನ್ನನ್ನು ಕಂಡರೆ ನನಗೆ ಬಹಳ ಕೋಪಬರುತ್ತದೆ'

ದೇವದಾಸನ ಸ್ವರ ಸ್ವಲ್ಪ ವಿಕೃತವಾಯಿತು. 'ತಂದೆಯವರಿಲ್ಲ, ನನಗೆ ಈಗ ವಿಪತ್ತಿನ ಸಮಯ. ನೀನು ಇದ್ದರೆ ನನಗೆ ಯಾವ ಚಿಂತೆಯೂ ಇರುತ್ತಿರಲಿಲ್ಲ ! ಅತ್ತಿಗೆಯನ್ನು ನೀನು ಬಲ್ಲೆ; ಅಣ್ಣನ ಸ್ವಭಾವ ನಿನಗೆ ಗೊತ್ತೇ ಇದೆ. ನೀನೇ ವಿಚಾರಿಸಿ ನೋಡು, ಈಗ ಅಮ್ಮನನ್ನು ಎಲ್ಲಿಗೆ ಕರೆದುಕೊಂಡು ಹೋಗಲಿ ? ನನ್ನ ಅವಸ್ಥೆ ಮುಂದೆ ಏನಾಗುವುದೊ

ಯಾರು ಬಲ್ಲರು? ನೀನು ನನ್ನವಳಾಗಿದ್ದಿದ್ದರೆ ನಾನು ಎಲ್ಲವನ್ನೂ ನಿನಗೊಪ್ಪಿಸಿ ನಿಶ್ಚಿಂತನಾಗಿರುತ್ತಿದ್ದೆ. 'ಏಕೆ ಪಾರೂ?' ಎಂದ.

ಪಾರ್ವತಿ ಬಿದ್ದುಬಿದ್ದು ಅಳತೊಡಗಿದಳು. ದೇವದಾಸ 'ಅಳುತ್ತೀಯೇಕೆ? ಇನ್ನು ಹೆಚ್ಚಿಗೆ ಏನನ್ನೂ ಹೇಳುವುದಿಲ್ಲ' ಎಂದ.

ಪಾರ್ವತಿ ಕಣ್ಣೀರನ್ನು ಒರಿಸಿಕೊಳ್ಳುತ್ತ 'ಇಲ್ಲ, ಹೇಳಿ' ಎಂದಳು.

ದೇವದಾಸ ತನ್ನ ಸ್ವರವನ್ನು ಸರಿಪಡಿಸಿಕೊಂಡು 'ಈಗ ನೀನು ಒಳ್ಳೇ ಗೃಹಿಣಿಯಾಗಿರುವೆಯಲ್ಲವೆ?' ಎಂದ.

ಮುಸುಕಿನಲ್ಲಿಯೆ ತುಟಿಕಚ್ಚಿಕೊಂಡು ಮನಸಲ್ಲಿಯೇ ಅಂದು ಕೊಂಡಳು 'ಗೃಹಿಣಿಯಾಗಿದ್ದೇನೆ. ನಿರ್ಮಾಲ್ಯಪುಷ್ಪ ದೇವರ ಸೇವೆಗೆ ಬರುವುದೇನು?'

ದೇವದಾಸ ನಗುನಗುತ್ತ ಎಂದ 'ಬಹಳ ನಗು ಬರುತ್ತದೆ. ನೀನು ಎಷ್ಟು ಚಿಕ್ಕವಳಿದ್ದೆ; ಈಗ ಎಷ್ಟು ದೊಡ್ಡವಳಾಗಿರುವೆ! ದೊಡ್ಡ ಮನೆ ಇದೆ, ದೊಡ್ಡ ಜಮೀನದಾರಿಯಿದೆ, ದೊಡ್ಡ ದೊಡ್ಡ ಮಕ್ಕಳಿದ್ದಾರೆ. ಮತ್ತು ಎಲ್ಲರಿಗಿಂತಲೂ ದೊಡ್ಡವರು ಚೌಧುರೀಬಾಬುಗಳಿದ್ದಾರೆ. ಏಕೆ ಪಾರೂ?'

ಚೌಧುರಿಯವರು ಪಾರ್ವತಿಗೆ ಒಂದು ನಗೆಯ ವಸ್ತು. ಅವರನ್ನು ನೆನಿಸಿದ ಕೂಡಲೇ ಪಾರ್ವತಿಗೆ ನಗುಬರುತ್ತದೆ. ಇಷ್ಟು ಕಷ್ಟದಲ್ಲೂ ಅವರನ್ನು ನೆನಿಸಿದ ಕೂಡಲೇ ಅವಳಿಗೆ ನಗುಬಂದುಬಿಟ್ಟಿತು. ದೇವದಾಸ ತೋರಿಕೆಗೆ ಗಂಭೀರವಾಗಿ 'ಒಂದು ಉಪಕಾರ ಮಾಡುವಿಯಾ?' ಎಂದ.

'ಏನು?'

'ನಿಮ್ಮ ಊರಲ್ಲಿ ಒಳ್ಳೆ ಹುಡುಗಿ ಸಿಕ್ಕಬಹುದೇನು?'

ಪಾರ್ವತಿ ಕೆಮ್ಮಿ ಕೇಳಿದಳು 'ಒಳ್ಳೇ ಹುಡುಗಿ! ಕಟ್ಟಿಕೊಂಡು ಏನು ಮಾಡುವಿರಿ?'

'ಸಿಕ್ಕರೆ ಮದುವೆಮಾಡಿಕೊಳ್ಳುವೆ. ಒಂದೊಂದು ಸಲ, ಗೃಹಸ್ಥನಾಗಬೇಕೆಂದು ಬಯಕೆಯಾಗುತ್ತದೆ'

ಪಾರ್ವತಿ ಗಂಭೀರಳಾಗಿ ಕೇಳಿದಳು 'ಅತ್ಯಂತ ಸುಂದರಿಯಾಗಿರ ಬೇಕಲ್ಲವೆ?'

'ಹೌದು, ನಿನ್ನಂತೆಯೆ!'

'ಮತ್ತು ಅತ್ಯಂತ ಶಾಂತಳೂ?'

'ಇಲ್ಲ. ಅತ್ಯಂತ ಶಾಂತಳಾಗಿದ್ದರೆ ನನ್ನ ಮನವೊಪ್ಪಲಾರದು. ನಿನ್ನಂತೆ ಜಗಳವಾಡಲು ಬರುತ್ತಿರಬೇಕು.'

ಪಾರ್ವತಿ ಮನದಲ್ಲಿಯೆ ಎಂದುಕೊಂಡಳು 'ಹೀಗೆ ಯಾವಳೂ ಮಾಡಲಾರಳು. ಅದಕ್ಕೆ ನನ್ನಂತೆ ಪ್ರೇಮಬೇಕು. ಆ ಮೇಲೆ 'ನಾನು ಅಭಾಗಿನಿ. ನಿಮ್ಮ ಪಾದಧೂಳಿಯನ್ನು ಪಡೆದು ತಮ್ಮನ್ನು ಧನ್ಯರೆಂದು ತಿಳಿಯುವ ನನ್ನಂತಹ ಸಾವಿರಾರು ಹುಡುಗಿಯರು ನಿಮಗೆ ಸಿಕ್ಕ ಬಹುದು' ಎಂದಳು.

ದೇವದಾಸ ತಮಾಷೆಯಿಂದ ನಗುತ್ತ 'ಈಗಲೇ ಒಂದು ಹುಡುಗಿ ಯನ್ನು ತರುವಿಯಾ?' ಎಂದ.

'ದೇವದಾಸ, ನಿಜವಾಗಿಯೂ ವಿವಾಹ ಮಾಡಿಕೊಳ್ಳುತ್ತೀರಾ?'

'ನಾನು ಹೇಳಿದಂತಹಳೇ ಬೇಕು.'

ಅವನು ಇಷ್ಟು ಮಾತ್ರ ಬಿಚ್ಚಿ ಹೇಳಲಿಲ್ಲ—ಪಾರ್ವತಿಯನ್ನು ಬಿಟ್ಟರೆ ಜಗತ್ತಿನಲ್ಲಿ ಉಳಿದವರಾರೂ ನನ್ನ ಜೀವನ ಸಂಗಿನಿಯಾಗಲಾರರು!

'ದೇವದಾಸ, ಒಂದು ಸಂಗತಿಯನ್ನು ಕೇಳುತ್ತೇನೆ; ಹೇಳು ತ್ತೀರಾ?'

'ಏನದು?'

ಪಾರ್ವತಿ ಉದ್ವೇಗವನ್ನು ತಡೆಹಿಡಿದು 'ನೀವು ಸರಾಯಿ ಕುಡಿ ಯಲು ಹೇಗೆ ಕಲಿತಿರಿ?' ಎಂದಳು.

'ಕುಡಿಯುವುದನ್ನು ಕಲಿಯಬೇಕಾಗುವುದೆ?' ದೇವದಾಸ ನಗುತ್ತ ಎಂದ.

'ಅದಲ್ಲ. ಅಭ್ಯಾಸ ಹೇಗಾಯಿತು?'

'ಯಾರು ಹೇಳಿದರು? ಧರ್ಮದಾಸನೆ?'

'ಯಾರೇ ಹೇಳಲಿ. ನೀವು ಕುಡಿಯುತ್ತಿರುವುದು ನಿಜವೆ?'

ದೇವದಾಸ ಬಚ್ಚಿಡಲಿಲ್ಲ. 'ಅಹುದು ನಿಜ' ಎಂದ.

ಪಾರ್ವತಿ ಸ್ವಲ್ಪ ಹೊತ್ತು ಸುಮ್ಮನಿದ್ದು ಬಳಿಕ ಕೇಳಿದಳು 'ಎಷ್ಟು ಸಾವಿರ ರೂಪಾಯಿಗಳ ಆಭರಣ ಮಾಡಿಸಿ ಕೊಟ್ಟಿದ್ದೀರಿ?'

'ಮಾಡಿಸಿ ಕೊಟ್ಟಿಲ್ಲ; ಮಾಡಿಸಿಟ್ಟಿದ್ದೇನೆ. ನಿನಗೆ ಬೇಕೆ?' ಎಂದು ದೇವದಾಸ ಗಂಭೀರವಾಗಿ ಕೇಳಿದ.

ಕೈ ತೋರಿಸಿ 'ನೋಡಿ, ಒಂದೂ ಆಭರಣವಿಲ್ಲ, ಕೊಡಿ' ಎಂದಳು.

'ಚೌಧರಿಯುವರು ನಿನಗೆ ಕೊಡಲಿಲ್ಲವೆ?'

'ಕೊಟ್ಟಿದ್ದರು. ಆದರೆ ಎಲ್ಲವನ್ನೂ ಅವರ ಹಿರಿಯ ಮಗಳಿಗೆ ಕೊಟ್ಟುಬಿಟ್ಟೆ.'

'ನಿನಗೆ ಅವು ಇನ್ನು ಬೇಕಾಗಿಲ್ಲವೆಂದು ತೋರುತ್ತದೆ.'

ಪಾರ್ವತಿ ತಲೆಯಲ್ಲಾಡಿಸಿ ಮುಖವನ್ನು ಕೆಳಗೆ ಮಾಡಿಕೊಂಡಳು. ದೇವದಾಸನ ಕಣ್ಣುಗಳಲ್ಲಿ ನೀರು ತುಂಬಿ ಬಂದವು. ಸಾಧಾರಣ ದುಃಖ ದಿಂದ ಸ್ತ್ರೀಯರು ತಮ್ಮ ಒಡವೆಗಳನ್ನು ಬಿಚ್ಚಿಕೊಡುವುದಿಲ್ಲವೆಂದು ದೇವದಾಸ ಮನಸ್ಸಿನಲ್ಲಿಯೇ ಅರಿತುಕೊಂಡ. ಕಣ್ಣುಗಳಿಂದ ಹೊರ ಬೀಳುವ ಕಂಬನಿಗಳನ್ನು ತಡೆದು 'ಸುಳ್ಳು; ನಾನು ಯಾವ ಸ್ತ್ರೀಯನ್ನೂ ಪ್ರೀತಿಸಿಲ್ಲ. ಯಾರಿಗೂ ನಾನು ಆಭರಣಗಳನ್ನೂ ಮಾಡಿಸಿ ಕೊಡಲಿಲ್ಲ' ಎಂದು ಹೇಳಿದ.

ಪಾರ್ವತಿ ದೀರ್ಘವಾದ ಉಸಿರನ್ನು ಬಿಟ್ಟು ಮನಸ್ಸಿನಲ್ಲಿಯೆ ಎಂದಳು 'ನನಗೂ ಇದೇ ರೀತಿಯಾದ ವಿಶ್ವಾಸವುಂಟು.'

ಸ್ವಲ್ಪ ಹೊತ್ತು ಇಬ್ಬರೂ ಸುಮ್ಮನಿದ್ದರು. ಪುನಃ ಪಾರ್ವತಿ 'ಆದರೆ ಸರಾಯಿ ಕುಡಿಯುವುದಿಲ್ಲವೆಂದು ಪ್ರತಿಜ್ಞೆ ಮಾಡಿರಿ' ಎಂದಳು.

'ಇದನ್ನು ಮಾಡಲಾರೆ. ನನ್ನನ್ನು ಮರೆಯುವೆನೆಂದು ನೀನು ಪ್ರತಿಜ್ಞೆ ಮಾಡಬಲ್ಲೆಯಾ?'

ಪಾರ್ವತಿ ಏನನ್ನೂ ಮಾತನಾಡಲಿಲ್ಲ. ಇದೇ ವೇಳೆಗೆ ಸಾಯಂ ಕಾಲದ ಘಂಟೆಯಾಯಿತು. ದೇವದಾಸ ಕಿಡಿಕಿಯ ಹೊರಗೆ ನೋಡಿ 'ಸಾಯಂಕಾಲವಾಯಿತು. ಮನೆಗೆ ಹೋಗು ಪಾರೂ!' ಎಂದ.

'ನಾನು ಹೋಗುವುದಿಲ್ಲ. ನೀವು ಪ್ರತಿಜ್ಞೆ ಮಾಡಿರಿ'

'ಏಕೆ? ನಾನು ಮಾಡಲಾರೆ'

'ಏಕೆ ಮಾಡಲಾರಿರಿ?'

'ಎಲ್ಲರೂ ಎಲ್ಲ ಕೆಲಸವನ್ನೂ ಮಾಡಬಲ್ಲರೆ?'

'ಮನಸ್ಸು ಮಾಡಿದರೆ ಮಾಡಬಲ್ಲರು'

'ಇಂದು ರಾತ್ರಿ ನೀನು ನನ್ನೊಡನೆ ಓಡಿ ಬರುವೆಯಾ?'

ಪಾರ್ವತಿಯ ಹೃದಯಸ್ಪಂದನ ಒಮ್ಮೆಲೆ ನಿಂತುಬಿಟ್ಟಿತು. ತಿಳಿಯದಂತೆಯೆ ಅವಳ ಮುಖದಿಂದ 'ಇದಾಗಬಲ್ಲುದೆ?' ಎಂಬ ಶಬ್ದಗಳು ಹೊರಬಿದ್ದುವು.

ದೇವದಾಸ ಮಂಚದ ಮೇಲೆ ಕುಳಿತು ಹೇಳಿದ 'ಪಾರ್ವತೀ, ಬಾಗಿಲು ತೆರೆ'

ದೇವದಾಸ ನಿಂತು ಧೀರಭಾವದಿಂದ ನುಡಿಯಲಾರಂಭಿಸಿದ 'ಪಾರೂ, ಒತ್ತಾಯದಿಂದ ಪ್ರತಿಜ್ಞೆ ಮಾಡಿಸುವುದು ಒಳಿತಾದುದೇ? ಅದರಿಂದ ವಿಶೇಷ ಲಾಭವಾದರೂ ಇದೆಯೇ? ಇಂದು ಮಾಡಿದ ಪ್ರತಿಜ್ಞೆ ಬಹುಶಃ ನಾಳೆ ಉಳಿಯಲಿಕ್ಕಿಲ್ಲ. ನನ್ನನ್ನು ತಪ್ಪುಗಾರನನ್ನಾಗಿ ಏಕೆ ಮಾಡುತ್ತಿ?'

ಹೀಗೆಯೆ ಕೆಲವು ಕ್ಷಣಗಳು ನಿಃಶಬ್ದವಾಗಿ ಕಳೆದು ಹೋದುವು. ಇದೇ ಹೊತ್ತಿಗೆ ಯಾವುದೊ ಮನೆಯಿಂದ ಟನ್ ಟನ್ ಎಂದು ಒಂಬತ್ತು ಬಾರಿಸಿದ್ದು ಕೇಳಬಂದಿತು. ದೇವದಾಸ ವ್ಯಸ್ತ ಭಾವದಿಂದ ಎನ್ನತೊಡಗಿದ. 'ಪಾರೂ, ಬಾಗಿಲು ತೆರೆದು ಬಿಡು'

ಪಾರ್ವತಿ ಮಾತನಾಡಲಿಲ್ಲ,

'ಹೋಗು ಪಾರೂ!'

'ನಾನು ಏನು ಮಾಡಿದರೂ ಹೋಗುವುದಿಲ್ಲ' ಎಂದು ಪಾರ್ವತಿ ಒಮ್ಮೆಲೆ ಬಿದ್ದುಬಿಟ್ಟಳು. ಬಹಳ ಹೊತ್ತಿನ ವರೆಗೆ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಕೋಣೆಯಲ್ಲಿ ಗಾಢವಾದ ಕತ್ತಲು. ಯಾವುದೂ ಕಾಣುತ್ತಿರಲಿಲ್ಲ. ಪಾರ್ವತಿ ನೆಲದ ಮೇಲೆ ಬಿದ್ದು ಅಳುತ್ತಿರುವಳೆಂದು ದೇವದಾಸನಿಗೆ ಎನಿಸಿತು. ಅವನು ಕೂಗಿದ 'ಪಾರೂ!'

ಪಾರ್ವತಿ ಉತ್ತರ ಕೊಡುತ್ತ ಅಳತೊಡಗಿದಳು 'ದೇವದಾಸ, ನನಗೆ ಬಹಳ ಕಷ್ಟವಾಗುತ್ತಿದೆ'

ದೇವದಾಸ ಬಳಿಗೆ ಬಂದ. ಅವನ ಕಣ್ಣುಗಳಲ್ಲಿಯೂ ನೀರು ತುಂಬಿದ್ದುವು. ಆದರೆ ಸ್ವರ ಮಾತ್ರ ವಿಕೃತವಾಗಿರಲಿಲ್ಲ.

'ಪಾರೂ! ಇದು ನನಗೆ ಗೊತ್ತಿಲ್ಲವೇನು?' ಎಂದ.

'ದೇವದಾಸ, ನಾನು ಸಾಯುವೆ. ಆದರೆ ನಾನೇನೂ ನಿಮ್ಮ ಸೇವೆ ಮಾಡಲಿಲ್ಲ—ಇದು ನನ್ನ ಜನ್ಮದ ಆಸೆ....'

ಕತ್ತಲಲ್ಲಿ ಕಣ್ಣು ಒರೆಸುತ್ತ ದೇವದಾಸನೆಂದ 'ಆ ಸಮಯವೂ ಬರುವುದು'

'ಹಾಗಾದರೆ ನನ್ನ ಜೊತೆಯಲ್ಲಿ ಬನ್ನಿ. ಇಲ್ಲಿ ನಿಮ್ಮನ್ನು ಯಾರೂ ನೋಡುವವರಿಲ್ಲ'

'ನಿನ್ನ ಮನೆಗೆ ಬಂದರೆ ಚೆನ್ನಾಗಿ, ಬಹಳವಾಗಿ ಸೇವೆ ಮಾಡುವೆಯಾ?'

'ಚಿಕ್ಕಂದಿನಿಂದಲೂ ಇದೇ ನನ್ನ ಬಯಕೆ. ನನ್ನ ದೇವತೆಯೆ! ನನ್ನ ಬಯಕೆಯನ್ನು ಪೂರ್ತಿಗೊಳಿಸು. ಬಳಿಕ ನಾನು ಸತ್ತರೂ ದುಃಖವಿಲ್ಲ'

ಈ ಸಲ ದೇವದಾಸನ ಕಣ್ಣುಗಳು ಪೂರ್ಣವಾಗಿ ನೀರಿನಲ್ಲಿ ಮುಳುಗಿ ಹೋದುವು. ಪಾರ್ವತಿ ಪುನಃ ಎಂದಳು 'ದೇವದಾಸ, ನಡೆಯಿರಿ ನಮ್ಮಲ್ಲಿಗೆ'

ದೇವದಾಸ ಕಣ್ಣು ಒರೆಸಿ ಹೇಳಿದ 'ಒಳ್ಳೇದು ಬರುವೆ'

'ನನ್ನ ತಲೆಯ ಮೇಲೆ ಕೈಯಿಟ್ಟು ಬರುವೆನೆಂದು ಹೇಳಿರಿ'

ದೇವದಾಸ ಅನುಮಾನದಿಂದ ಪಾರ್ವತಿಯ ಕಾಲು ಮುಟ್ಟಿ ಎಂದ 'ಇದನ್ನು ನಾನೆಂದೂ ಮರೆಯುವುದಿಲ್ಲ. ನಾನು ಬರುವುದರಿಂದ ನಿನ್ನ ದುಃಖ ದೂರವಾಗುತ್ತಿದ್ದರೆ ಅವಶ್ಯವಾಗಿ ಬರುವೆ. ಸಾಯುವ ವೊದಲೂ ನನ್ನ ಸ್ಮರಣೆಯಲ್ಲಿರುವುದು ಈ ಮಾತು'

ತಂದೆಯುವರು ತೀರಿದ ಆರು ತಿಂಗಳ ವರೆಗೂ ದೇವದಾಸನಿಗೆ ಮನೆ ಯಲ್ಲಿ ಇದ್ದು ಇದ್ದು ಬೇಸರ ಬಂದಿತು. ದೇಹಕ್ಕೆ ಸುಖವಿಲ್ಲ; ಮನಸ್ಸಿಗೆ ಶಾಂತಿಯಿಲ್ಲ. ಪ್ರತಿ ದಿನವೂ ಒಂದೇ ತರಹದ ಜೀವನ ಚರ್ಯೆ. ಮನಸ್ಸು ವಿರಕ್ತವಾಗಿ ಹೋಯಿತು. ಮೇಲಾಗಿ ಪಾರ್ವತಿಯ ಚಿಂತನೆಯಿಂದ ಚಿತ್ತ ಇನ್ನಷ್ಟು ಅವ್ಯವಸ್ಥಿತವಾಗುತ್ತ ನಡೆಯಿತು. ಅವಳ ಪ್ರತಿಯೊಂದು ಕೆಲಸದ, ಪ್ರತಿಯೊಂದು ಹಾವಭಾವದ ಚಿತ್ರಗಳು ಈಗ ಅವನ ಕಣ್ಣೆದುರು ನಲಿದಾಡುತಿದ್ದುವು. ಅಣ್ಣ, ಅತ್ತಿಗೆಯುವರ ಉದಾಸೀನ ವ್ಯವಹಾರ ದೇವದಾಸನ ಸಂತಾಪವನ್ನು ಇನ್ನಿಷ್ಟು ಹೆಚ್ಚಿಸಿತು.

ತಾಯಿಯ ಪರಿಸ್ಥಿತಿಯೂ ದೇವದಾಸನಂತೆಯೆ. ಪತಿಯ ಮರಣ ದೊಡನೆಯೆ ಅವರ ಸುಖವೂ ಹೊರಟು ಹೋಯಿತು. ಪರಾಧೀನತೆಯಲ್ಲಿ ಇದ್ದು ಇದ್ದು ಅವರ ಜೀವನವೂ ಅಸಹ್ಯವಾಗತೊಡಗಿತು. ಇತ್ತ ಕೆಲವು ದಿನಗಳಿಂದ ಅವರು ಕಾಶೀವಾಸದ ವಿಚಾರ ಮಾಡುತ್ತಿದ್ದಾರೆ. ದೇವದಾಸ ಅವಿವಾಹಿತನಿದ್ದ ಮೂಲಕ ಅವರು ಕಾಶಿಗೆ ಹೋಗಲು ಬಯಸುತ್ತಿಲ್ಲ. ಆಗಾಗ್ಗೆ 'ದೇವದಾಸ, ನೀನು ಮದುವೆ ಮಾಡಿಕೊ. ನನ್ನ ಬಯಕೆ ಪೂರ್ಣವಾಗುವುದು' ಎನ್ನುವರು. ಆದರೆ ಆಗುವ ಬಗೆಯಂತು? ತಂದೆ ಯುವರ ವರ್ಷ ಶ್ರಾದ್ಧವಿನ್ನೂ ಆಗಿಲ್ಲ. ಅಲ್ಲದೆ ಅನುರೂಪಳಾದ ಕನ್ಯೆಯೂ ಸಿಕ್ಕಲಿಲ್ಲ. ಅದರಿಂದಲೇ ದೇವದಾಸನ ತಾಯಿಯುವರ ದುಃಖ ಇಮ್ಮಡಿ ಸಿತ್ತು. ಇಷ್ಟರಲ್ಲೆ ಪಾರ್ವತಿಯೊಡನೆ ಮದುವೆಯಾಗಿ ಹೋಗಿದ್ದರೆ ಎಷ್ಟು ಒಳಿತಾಗುತಿತ್ತು! ಎಂದೂ ಅವರು ಈಗ ಮಿಡುಕುತ್ತಾರೆ.

ಒಂದು ದಿನ ಅವರು ದೇವದಾಸನನ್ನು ಕರೆದು 'ನನಗೆ ಇಲ್ಲಿ ಇರುವ ಇಚ್ಛೆಯಿಲ್ಲ. ಕೆಲವು ದಿನ ಕಾಶಿಯಲ್ಲಿರಬೇಕೆಂದಿದ್ದೇನೆ' ಎಂದರು. ದೇವದಾಸನೂ ಇದನ್ನೇ ಬಯಸುತಿದ್ದ.

'ನನಗಾದರೂ ಅದೇ ಸರಿಯೆನಿಸುತ್ತದೆ. ಆರು ತಿಂಗಳಾದ ಬಳಿಕ ತಿರಿಗಿ ಬಾ' ಎಂದ ದೇವದಾಸ.

'ಹಾಗೆಯೇ ಮಾಡುವೆ. ತಿರಿಗಿ ಬಂದು ಅವರ ಕ್ರಿಯಾಕರ್ಮಗಳನ್ನು ತೀರಿಸಿ, ಬಳಿಕ ನಿನ್ನ ಮದುವೆಮಾಡಿ ನೀನು ಗೃಹಸ್ಥನಾದುದನ್ನು ಕಂಡು ನಾನು ಮತ್ತೆ ಕಾಶೀವಾಸ ಮಾಡುವೆ.'

ದೇವದಾಸ ಇದಕ್ಕೊಪ್ಪಿ, ತಾಯಿಯನ್ನು ಕಾಶಿಗೆ ಕಳಿಸಿ ತಾನು ಕಲಕತ್ತೆಗೆ ಹೊರಟು ಹೋದ. ಕಲಕತ್ತೆಗೆ ಬಂದ ನಂತರ ನಾಲ್ಕಾರು ದಿನ ಚುನ್ನೀಲಾಲನನ್ನು ಹುಡುಕಿದ. ಆದರೆ ಅವನು ಸಿಕ್ಕಲಿಲ್ಲ. ಆ ಹೊಟೇಲನ್ನು ಬಿಟ್ಟು ಬೇರೆ ಕಡೆಗೆ ಹೋಗಿಬಿಟ್ಟಿದ್ದ.

ಒಂದು ದಿನ ಸಂಜೆ ದೇವದಾಸನಿಗೆ ಚಂದ್ರಮುಖಿಯ ನೆನಪಾಯಿತು. 'ಒಂದು ಸಲ ಹೋಗಿ ಕಂಡುಬರುವುದು ಒಳಿತು' ಎಂದುಕೊಂಡ. ಇಷ್ಟು ದಿನ ಅವಳ ನೆನಪಾಗಿರಲಿಲ್ಲವಾದುದರಿಂದ ಅವನಿಗೆ ಸ್ವಲ್ಪ ನಾಚಿಕೆಯೆನಿಸಿತು. ಒಂದು ಗಾಡಿಯನ್ನು ಬಾಡಿಗೆಗೆ ಗೊತ್ತು ಮಾಡಿ ಹೊರಟ. ಸ್ವಲ್ಪ ಕತ್ತಲಾಗಿತ್ತು. ಗಾಡಿ ಚಂದ್ರಮುಖಿಯ ಮನೆಯ ಎದುರಿಗೆ ನಿಂತಿತು. ಬಹಳ ಹೊತ್ತು ಕೂಗಿದ ಬಳಿಕ ಒಳಗಿನಿಂದ ಸ್ತ್ರೀಯ ಸ್ವರ ಕೇಳಬಂದಿತು 'ಇಲ್ಲಿ ಇಲ್ಲ' ಎಂದು.

ಎದುರಿನಲ್ಲಿ ವಿದ್ಯುದ್ದೀಪದ ಕಂಬವಿತ್ತು. ಅದರ ಬಳಿ ನಿಂತು 'ಎಲ್ಲಿದ್ದಾಳೆ ಹೇಳಬಲ್ಲಿರಾ?' ಎಂದು ಕೇಳಿದ.

ಒಳಗಿನಿಂದ ಒಬ್ಬ ಹೆಂಗಸು ಬಂದು ಕಿಡಿಕಿಯನ್ನು ತೆರೆದು 'ತಾವು ದೇವದಾಸರೇನು?' ಎಂದು ಕೇಳಿದಳು.

'ಹೌದು.'

'ನಿಲ್ಲಿರಿ, ಬಾಗಿಲು ತೆರೆಯುತ್ತೇನೆ' ಎಂದು ಬಾಗಿಲು ತೆರೆದು ಅವಳೆಂದಳು 'ಬನ್ನಿ!'

ಧ್ವನಿಯ ಗುರುತು ಕೊಂಚ ಸಿಕ್ಕರೂ, ಅವಳ ಗುರುತು ಚೆನ್ನಾಗಿ ಸಿಕ್ಕಲಿಲ್ಲ. ಕತ್ತಲೂ ಆಗಿತ್ತು. ಸಂದೇಹದಿಂದ ಕೇಳಿದ 'ಚಂದ್ರಮುಖಿ ಎಲ್ಲಿರುತ್ತಾಳೆ? ಹೇಳಬಲ್ಲಿಯಾ?'

ಅವಳು ಸ್ವಲ್ಪ ಮುಗುಳುನಗೆ ನಕ್ಕು 'ಹೇಳುತ್ತೇನೆ. ಮೇಲಕ್ಕೆ ನಡೆಯಿರಿ' ಎಂದಳು.

ಈಗ ದೇವದಾಸ ಗುರುತಿಸಿದ. 'ಓಹೋ ನೀನೆ ಏನು?' ಎಂದ.

'ಹೌದು. ನಾನೇ ಚಂದ್ರಮುಖಿ. ದೇವದಾಸಬಾಬೂ, ನನ್ನನ್ನು ಪೂರ್ಣ ಮರೆತಿರಾ?'

ಮೇಲೆ ಹೋಗಿ ದೇವದಾಸ ನೋಡಿದ. ಚಂದ್ರಮುಖಿ ಕಪ್ಪು ಅಂಚಿನದೊಂದು ತುಸು ಹೊಲಸಾದ ಸೀರೆಯನ್ನುಟ್ಟಿದ್ದಳು. ಕೈಯಲ್ಲಿ ಎರಡು ಬಂಗಾರದ ಬಳೆಗಳ ಹೊರತು ದೇಹದ ಮೇಲೆ ಬೇರೆ ಯಾವ ಆಭರಣವೂ ಇರಲಿಲ್ಲ. ತಲೆಯ ಕೂದಲು ಅತ್ತಿತ್ತ ಹರಡಿ ಅಸ್ತವ್ಯಸ್ತ ವಾಗಿ ಬಿದ್ದಿದ್ದುವು. ವಿಸ್ಮಯದಿಂದ ದೇವದಾಸ ಕೇಳಿದ 'ನೀನೆ?'

ಚೆನ್ನಾಗಿ ನೋಡಿದ; ಚಂದ್ರಮುಖಿ ಮೊದಲಿಗಿಂತಲೂ ಬಹಳ ಸೊರಗಿದ್ದಳು.

'ಕಾಯಿಲೆಯಾಗಿತ್ತೇನು?'

'ಯಾವ ಶಾರೀರಿಕ ಕಾಯಿಲೆಯೂ ಇಲ್ಲ. ನೀವು ಸ್ವಲ್ಪ ಚೆನ್ನಾಗಿ ಕುಳಿತುಕೊಳ್ಳಿರಿ.'

ದೇವದಾಸ ಮಂಚದ ಮೇಲೆ ಕುಳಿತುಕೊಂಡು ನೋಡಿದ. ಮನೆ ಯಲ್ಲಿ ಭೂವ್ಯಾಕಾಶದಷ್ಟು ಅಂತರವಾಗಿದೆ. ಚಂದ್ರಮುಖಿಯ ದುರ್ದೆ ಸೆಗೂ ಸೀಮೆ ಇಲ್ಲ. ಒಂದೂ ಸಾಮಾನು ಇಲ್ಲ ಅವಳ ಮನೆಯಲ್ಲಿ. ಮೇಜು, ಕುರ್ಚಿ, ಅಲ್‌ಮಿರಾ ಮೊದಲಾದವುಗಳ ಸ್ಥಾನಗಳು ಬರಿದಾ ಗಿವೆ. ಬರೇ ಒಂದು ಹಾಸಿಗೆ ಮಾತ್ರ ಉಳಿದುಕೊಂಡಿದೆ. ಹೊದ್ದು ಕೊಳ್ಳುವ ಚದ್ದರವೂ ಮಾಸಿತ್ತು. ಗೋಡೆಯ ಮೇಲೆ ಚಿತ್ರಗಳೂ ಇಲ್ಲ. ಆದರೆ ಕಬ್ಬಿಣದ ಮೊಳೆಗಳು ಮಾತ್ರ ಇನ್ನೂ ಉಳಿದಿವೆ. ಕೆಂಪು ಅರಿವೆಯ ಉದ್ದವಾದ ಒಂದೆರಡು ಚೂರುಗಳು ತೂಗಾಡುತ್ತಿವೆ. ಬ್ರಾಕೆಟ್ಟಿನ ಮೇಲೆ ಗಡಿಯಾರ ಮೊದಲಿನಂತೆಯೆ ಇತ್ತು. ಆದರೆ ಅದು ನಿಃಶಬ್ದ. ಸುತ್ತಲೂ ಜೇಡಹುಳ ತನ್ನ ಜಾಲವನ್ನು ಹರಡಿದೆ. ಒಂದು ಮೂಲೆಯಲ್ಲಿ ಸೀಮೆ ಎಣ್ಣೆಯ ದೀಪವೊಂದು ಮಂದ ಪ್ರಕಾಶವನ್ನು ಹರಡುತ್ತಿದೆ.

ಈ ಮುಸಕುಮುಸಕಾದ ಬೆಳಕಿನಲ್ಲಿಯೆ ದೇವದಾಸ ಮನೆಯ ನವೀನ ಶೀವಿಯನ್ನು ನೋಡಿದ. ಸ್ವಲ್ಪ ವಿಸ್ಮಿತನಾಗಿ ಸ್ವಲ್ಪ ಕ್ಷುಬ್ಧನಾಗಿ ಕೇಳಿದ 'ಚಂದ್ರ! ಇಂತಹ ದುರ್ದೆಸೆ ಹೇಗಾಯಿತು?'

ಚಂದ್ರಮುಖಿ ಮಲಿನ ನಗುಬೀರಿ 'ದುರ್ದೆಸೆ! ನಿಮಗಾರು ಹೇಳಿದರು? ನನ್ನ ಭಾಗ್ಯ ನನ್ನ ಮೇಲೆ ಪ್ರಸನ್ನವಾಗಿದೆ' ಎಂದಳು.

ದೇವದಾಸನಿಗೆ ತಿಳಿಯಲಿಲ್ಲ. 'ನಿನ್ನ ಒಡವೆಗಳೆಲ್ಲ ಏನಾದುವು?' ಎಂದ.

'ಮಾರಿದೆ.'

'ಸಾಮಾನುಗಳು?'

'ಅವುಗಳನ್ನೂ ಮಾರಿದೆ.'

'ಮನೆಯ ತಸವೀರುಗಳನ್ನೂ ಮಾರಿದೆಯಾ?'

ಚಂದ್ರಮುಖಿ ನಕ್ಕು ಎದುರಿಗೆ ಬೆರಳುಮಾಡಿ ತೋರಿಸಿ 'ಆ ಮನೆಯವರಿಗೆಲ್ಲಾ ಮಾರಿಬಿಟ್ಟೆ' ಎಂದಳು.

ಸ್ವಲ್ಪ ಸಮಯ ಅವಳ ಮುಖನೋಡಿ ದೇವದಾಸ ಕೇಳಿದ 'ಚುನ್ನೀಬಾಬು ಎಲ್ಲಿ?'

'ಹೇಳಲಾರೆ. ಎರಡು ತಿಂಗಳಾಯಿತು, ಜಗಳವಾಡಿ ಹೋಗಿಬಿಟ್ಟರು. ಅಂದಿನಿಂದ ಪುನಃ ಬಂದಿಲ್ಲ.'

ದೇವದಾಸನಿಗೆ ಮತ್ತಿಷ್ಟು ಆಶ್ಚರ್ಯ. ಅವನು ಕೇಳಿದ 'ಜಗಳವೇಕೆ ಆಯಿತು?'

'ಜಗಳವಾಗುವುದೆ ಇಲ್ಲವೆ?'

'ಆಗುತ್ತದೆ. ಆದರೆ ಏಕೆ?'

'ದಲಾಲಿ ಮಾಡಲು ಬಂದಿದ್ದರು. ದಲಾಲಿ ಮಾಡಬೇಡಿ ಎಂದು ನಾನಂದೆ.'

'ಯಾರ ದಲಾಲಿ?'

ಚಂದ್ರಮುಖಿ ನಕ್ಕು 'ಪಟ್ಟು ವಸ್ತ್ರದ ದಲಾಲಿ' ಎಂದು ಪುನಃ 'ನಿಮಗೆ ತಿಳಿಯದೆ? ಒಬ್ಬ ದೊಡ್ಡ ಮನುಷ್ಯರನ್ನು ಹಿಡಿದು ತಂದಿದ್ದರು.

ತಿಂಗಳಿಗೆ ಇನ್ನೂರು ರೂಪಾಯಿ, ಒಂದು ಸೆಟ್ಟು ಆಭರಣ, ಮನೆಯ ಬಾಗಿಲಿನಲ್ಲಿ ಇರುವುದಕ್ಕೆ ಒಬ್ಬ ಸಿಪಾಯಿ, ದೊರೆಯುವಂತಿತ್ತು. ತಿಳಿಯಿತೇ !' ಎಂದಳು.

ದೇವದಾಸ ಎಲ್ಲವನ್ನೂ ತಿಳಿದು ನಕ್ಕು 'ಅದೆಲ್ಲಾ ಇಲ್ಲಿ ಕಾಣುವುದಿಲ್ಲವಲ್ಲ' ಎಂದ.

'ಇದ್ದಿದ್ದರೆ ನೋಡುತಿದ್ದಿರಿ ಅಲ್ಲವೆ? ನಾನು ಅವರನ್ನು ಓಡಿಸಿಬಿಟ್ಟೆ.'

'ಅವರು ಮಾಡಿದ ಅಪರಾಧ?'

'ಅವರ ಅಪರಾಧ ದೊಡ್ಡದೇನೂ ಇರಲಿಲ್ಲ. ಆದರೆ ನನ್ನ ಮನಸ್ಸಿಗೇ ಒರಲಿಲ್ಲ.'

ಬಹಳ ಹೊತ್ತು ಯೋಚಿಸಿ 'ಅಂದಿನಿಂದ ಯಾರೂ ಇಲ್ಲಿಗೆ ಬರಲಿಲ್ಲವೆ?' ಎಂದ ದೇವದಾಸ.

'ಇಲ್ಲ. ಅಂದಿನಿಂದಲೇ ಏಕೆ? ನೀವು ಹೋದಂದಿನಿಂದಲೂ ಇಲ್ಲಿಗೆ ಯಾರೂ ಬಂದಿಲ್ಲ. ಆದರೆ ಆಗಾಗ ಚುನ್ನೀಲಾಲರು ಮಾತ್ರ ಬರುತಿದ್ದರು. ಈಗ ಎರಡು ತಿಂಗಳಿನಿಂದ ಅವರೂ ಬಂದಿಲ್ಲ.'

ದೇವದಾಸ ಹಾಸಿಗೆಯ ಮೇಲೆ ಮಲಗಿಕೊಂಡು ಒಂದೆಡೆ ನೋಡಲಾರಂಭಿಸಿದ. ಸ್ವಲ್ಪ ಹೊತ್ತು ಸುಮ್ಮನಿದ್ದು ಮೆಲ್ಲನೆ ನುಡಿದ 'ಚಂದ್ರಮುಖಿ, ಹಾಗಾದರೆ ನೀನು ನಿನ್ನ ಅಂಗಡಿಯನ್ನು ಮುಚ್ಚಿಬಿಟ್ಟೆಯಾ?'

'ಹೌದು ದಿವಾಳಿ ತೆಗೆದೆ.'

ದೇವದಾಸ ಈ ಮಾತಿಗೆ ಉತ್ತರಕೊಡದೆ 'ಹಾಗಾದರೆ ನಿನ್ನ ಉಪಜೀವನ ಹೇಗೆ ಸಾಗುತ್ತದೆ?' ಎಂದು ಕೇಳಿದ.

'ಅದಕ್ಕಾಗಿಯೆ, ಇದ್ದ ಆಭರಣಗಳನ್ನೆಲ್ಲ ಮಾರಿದೆ.'

'ಅದರಲ್ಲಿ ಈಗ ಏನು ಉಳಿದಿದೆ?'

'ಹೆಚ್ಚು ಇಲ್ಲ. ಏಳೆಂಟುನೂರು ರೂಪಾಯಿ ಉಳಿದಿರಬಹುದು. ಅವನ್ನು ಒಬ್ಬ ಸಾಹುಕಾರನ ಬಳಿ ಇಟ್ಟಿದ್ದೇನೆ. ಪ್ರತಿ ತಿಂಗಳೂ ಅವನು ನನಗೆ ಇಪ್ಪತ್ತು ರೂಪಾಯಿ ಕೊಡುತ್ತಾನೆ.'

‘ಮೊದಲು ಹೆಚ್ಚಿಗೆ ಬೇಕಾಗುತ್ತಿರಲಿಲ್ಲವೆ ?’

‘ಹೌದು. ಇಂದಿಗೂ ಇಪ್ಪತ್ತು ರೂಪಾಯಿಗಿಂತ ಹೆಚ್ಚು ಬೇಕು. ಮೂರು ತಿಂಗಳಿಂದ ಮನೆ ಬಾಡಿಗೆ ಕೊಟ್ಟಿಲ್ಲ. ಇನ್ನೂ ಉಳಿದಿದೆ. ಆದುದರಿಂದ ಈ ಎರಡೂ ಬಂಗಾರದ ಬಳೆ ಮಾರಬೇಕೆಂದು ಇಚ್ಛೆಯಾಗುತ್ತದೆ. ಎಲ್ಲವನ್ನೂ ತೀರಿಸಿ ಎಲ್ಲಿಗಾದರೂ ಹೋಗಬೇಕೆನ್ನುತ್ತೇನೆ.’

‘ಎಲ್ಲಿಗೆ ಹೋಗುವೆ ?’

‘ಇನ್ನೂ ನಿಶ್ಚಯವಾಗಿಲ್ಲ. ಇಪ್ಪತ್ತು ರೂಪಾಯಿಯನ್ನು ತಿಂಗಳಿಗೆ ವೆಚ್ಚ ಮಾಡಿದರೆ ಉಪಜೀವನ ಚೆನ್ನಾಗಿ ಸಾಗುವಂತಹ ಯಾವುದಾದರೊಂದು ಹಳ್ಳಿಗೆ, ಅಥವಾ ಪಟ್ಟಣಕ್ಕೆ ಹೋಗಬೇಕೆನ್ನುತ್ತೇನೆ.’

‘ಇಷ್ಟು ದಿನಗಳಾದುವು, ಏಕೆ ಹೋಗಲಿಲ್ಲ ? ನೀನು ಇಲ್ಲಿರುವುದರಲ್ಲಿ ಏನಾದರೂ ರಹಸ್ಯ–ತಥ್ಯ ಇರದಿದ್ದರೆ ಇಷ್ಟು ದಿನ ಇಲ್ಲಿದ್ದುಕೊಂಡು ಸಾಲವನ್ನೇಕೆ ಹೆಚ್ಚಿಸಿಕೊಂಡೆ ?’

ಚಂದ್ರಮುಖಿ ಮುಖ ಕೆಳಗೆ ಮಾಡಿಕೊಂಡು ಸ್ವಲ್ಪ ಯೋಚಿಸತೊಡಗಿದಳು. ತನ್ನ ಜೀವನದಲ್ಲಿ ಮಾತನಾಡಲು ಅವಳು ನಾಚಿಕೆಪಟ್ಟುದು ಇದೇ ಮೊದಲು.

ದೇವದಾಸ ಕೇಳಿದ ‘ಸುಮ್ಮನೆ ಏಕೆ ಇರುವೆ ?’

ಚಂದ್ರಮುಖಿ ಹಾಸಿಗೆಯ ಒಂದು ಬದಿಯಲ್ಲಿ ಕುಳಿತು ಸಂಕೋಚದಿಂದ ಎಂದಳು ‘ಕೋಪಗೊಳ್ಳಬೇಡಿ. ಹೋಗುವ ಮೊದಲು ನಿಮ್ಮನ್ನು ಕಂಡು ಹೋಗಬೇಕೆಂದು ಇಚ್ಛೆ ಇದ್ದಿತು ! ನೀವು ಒಂದು ಸಲ ಇಲ್ಲಿಗೆ ಬರುವಿರೆಂದು ಆಸೆಪಟ್ಟಿದ್ದೆ. ಇಂದು ನೀವು ಬಂದೇಬಿಟ್ಟಿರಿ. ಇನ್ನು ನಾಳೆಯೆ ಹೊರಡುವ ಸಿದ್ಧತೆ ಮಾಡುವೆ. ಎಲ್ಲಿಗೆ ಹೋಗಲಿ, ಹೇಳಿ ಸ್ವಲ್ಪ.’

ದೇವದಾಸ ಆಶ್ಚರ್ಯಚಕಿತನಾಗಿ ಚಟ್ಟನೆ ಎದ್ದು ಕುಳಿತು ‘ಏನು ? ನನ್ನನ್ನು ಕಾಣುವ ಇಚ್ಛೆಯಿಂದಲೇ ಇಷ್ಟು ದಿನ ತಡೆದಿದ್ದೆಯಾ ? ಏಕೆ–ಅದೇಕೆ ?’ ಎಂದು ಕೇಳಿದ.

‘ಹೀಗೆಯೆ, ಅದೇನೊ ಒಂದು ಬಯಕೆ–ಅಷ್ಟೆ ! ನೀವು ನನ್ನನ್ನು

ಬಹಳವಾಗಿ ತಿರಸ್ಕರಿಸುತ್ತೀರಿ. ಇದು ವರೆಗೆ ಇಷ್ಟು ಯಾರೂ ತಿರಸ್ಕರಿಸಿರಲಿಲ್ಲ. ಅಂತೆಯೋ ಏನೊ, ನನ್ನ ಮನಸ್ಸು ನಿಮ್ಮ ಕಡೆಗೆ ಇಷ್ಟು ಒಲಿದಿರಬಹುದು. ನಿಮಗೆ ನೆನಪಿದೆಯೊ ಇಲ್ಲವೊ ಹೇಳಲಾರೆ, ಆದರೆ ಅಂದಿನ ನೋಟ ನನ್ನ ಕಣ್ಣೆದುರಿಗೆ ಕಟ್ಟಿದಂತಾಗಿದೆ. ಅಂದೇ ಮೊದಲ ಸಲ ನೀವು ಇಲ್ಲಿಗೆ ಬಂದುದು. ಅಂದಿನಿಂದ ನನ್ನ ಮನಸ್ಸು ನಿಮ್ಮ ಕಡೆಗೆ ಎಳೆಯತೊಡಗಿತು! ನೀವು ಶ್ರೀಮಂತ ಮನೆತನದವರೆಂಬುದು ನನಗೆ ಗೊತ್ತಿತ್ತು. ಆದರೆ ಹಣದ ಆಸೆಯ ಮೂಲಕ ನನ್ನ ಮನಸ್ಸು ನಿಮ್ಮ ಕಡೆಗೆ ಆಕರ್ಷಿತವಾಗಲಿಲ್ಲ. ನೀವು ಬರುವ ಮೊದಲು ಇಲ್ಲಿ ಎಷ್ಟೋ ಜನ ಬಂದಿದ್ದರು—ಹೋಗಿದ್ದರು!—ಆದರೆ ಯಾರಲ್ಲಿಯೂ ಇಂತಹ ತೇಜವನ್ನು ನಾನು ಕಂಡಿರಲಿಲ್ಲ. ನೀವು ಬಂದ ಕೂಡಲೇ ನನ್ನ ಮೇಲೆ ಆಘಾತ ಮಾಡಿದಿರಿ! ಅನಾವಶ್ಯಕವಾಗಿ, ಅನುಚಿತವಾಗಿ, ಯೋಗ್ಯವಿದ್ದರೂ ಬಹು ಕಠೋರವಾಗಿ ನನ್ನೊಂದಿಗೆ ನೀವು ವರ್ತಿಸಿದಿರಿ. ತಿರಸ್ಕಾರದಿಂದ ನೀವು ಮುಖ ತಿರಿವಿಕೊಂಡು ಕುಳಿತಿರಿ! ಕೊನೆಗೆ, ನಾನೇನೊ ಒಂದು ತಮಾಷೆಯೆಂಬಂತೆ ತಿಳಿದು ಒಂದು ನೋಟು ಒಗೆದು ಹೋಗಿಬಿಟ್ಟಿರಿ! ಇದೆಲ್ಲ ನಿಮಗೆ ನೆನಪಿದೆಯೆ ?'

ಏನೂ ಉತ್ತರಕೊಡದೆ ದೇವದಾಸ ಸುಮ್ಮನೆ ಕುಳಿತ.

ಚಂದ್ರಮುಖಿ ಮತ್ತೆ ಹೇಳತೊಡಗಿದಳು :

'ಅಂದಿನಿಂದ ನಾನು ನಿಮ್ಮ ಮೇಲೆ ಕಣ್ಣಿಟ್ಟಿದ್ದೇನೆ. ಪ್ರೀತಿಸತೊಡಗಿದೆನೆಂದಲ್ಲ, ಅಥವಾ ನಿಮ್ಮ ಬಗೆಗೆ ತಿರಸ್ಕಾರವೆನಿಸಿದೆಯೆಂದೂ ಅಲ್ಲ! ಒಂದು ಅದ್ಭುತವಾದ ವಸ್ತು ಕಣ್ಣಿಗೆ ಬಿದ್ದಿತೆಂದರೆ ಅದು ಮನಸ್ಸಿನಲ್ಲಿ ಹೇಗೆ ಸ್ಥಿರವಾಗಿ ನೆಲಿಸಿಬಿಡುವುದೊ, ಹಾಗೆಯೆ, ನಿಮ್ಮನ್ನು ಮರೆಯುವುದು ಏನು ಮಾಡಿದರೂ ಸಾಧ್ಯವಾಗದಾಯಿತು. ನೀವು ಬಂದರೆ ನಾನು ಗಾಬರಿಗಾಬರಿಯಾಗಿ ಸ್ವಲ್ಪ 'ಹುಷಾರಾಗಿಯೆ' ಇರುತಿದ್ದೆ.—ಆದರೆ ನೀವು ಬರದಿದ್ದರೆ ಅದರಿಂದಲೂ ನನಗೆ ಸಮಾಧಾನವೆನಿಸುತಿದ್ದಿಲ್ಲ! ಆ ಮೇಲೆ ನನಗೆ ಹುಚ್ಚೇಹಿಡಿಯಿತೆನ್ನಬೇಕು! ಇದೇ ಕಣ್ಣುಗಳಿಗೆ ಎಲ್ಲ ವಸ್ತುಗಳು ಬೇರೆ ರೀತಿಯಾಗಿ ಕಾಣತೊಗಿದುವು! ನಾನು

ಮೊದಲಿನ ನಾನಾಗಿ ಉಳಿಯಲಿಲ್ಲ ! ನೀವು ಆ ಮೇಲೆ ಸರಾಯಿ ಕುಡಿಯ ತೊಡಗಿದಿರಿ. ಸರಾಯಿಯ ಬಗ್ಗೆ ನನಗೆ ಬಹಳ ತಿರಸ್ಕಾರವೆನಿಸುತ್ತದೆ. ಯಾರಾದರೂ ಸರಾಯಿ ಕುಡಿದು ಮತ್ತರಾಗಿದ್ದುದನ್ನು ಕಂಡರೆ ನನಗೆ ಅತಿಶಯ ಸಂತಾಪವಾಗುತಿತ್ತು. ನೀವು ಸರಾಯಿ ಕುಡಿದು ದುಂದಾಗಿದ್ದರೂ ನನಗೆ ಸಿಟ್ಟುಬರುತಿದ್ದಿಲ್ಲ !-ದುಃಖ ಮಾತ್ರ ಬಹಳವಾಗುತ್ತಿತ್ತು!'

ಇಷ್ಟು ನುಡಿದ ನಂತರ ಚಂದ್ರಮುಖಿ ದೇವದಾಸನ ಕಾಲುಗಳ ಮೇಲೆ ಕೈಯಿಟ್ಟು ಕಂಬನಿದುಂಬಿದ ಕಣ್ಣುಗಳಿಂದ 'ನಾನು ಅಧಮಳು. ನನ್ನ ತಪ್ಪುಗಳ ಕಡೆಗೆ ಗಮನಕೊಡಬೇಡಿರಿ. ನೀವು ನನ್ನೊಡನೆ ಮಾತನಾಡಿದಷ್ಟೂ, ನನ್ನನ್ನು ತಿರಸ್ಕರಿಸಿದಷ್ಟೂ ನಾನು ನಿಮ್ಮ ಸಮೀಪಕ್ಕೆ ಬರಲು ಇಚ್ಛಿಸುತಿದ್ದೆ. ಕೊನೆಗೆ ನೀವು ಮಲಗಿದ ಮೇಲೆ–ಇರಲಿ, ಈ ಮಾತುಗಳನ್ನು ಹೇಳುವುದಿಲ್ಲ. ನೀವು ಕೋಪಿಸಿಕೊಳ್ಳಬಹುದು' ಎಂದಳು.

ದೇವದಾಸ ಏನೂ ನುಡಿಯಲಿಲ್ಲ. ಹೊಸತೆರನಾದ ಮಾತುಗಳು ಇವು. ಅವನನ್ನು ಬಹಳ ನೋಯಿಸುತಿದ್ದುವು. ಚಂದ್ರಮುಖಿ ದೇವದಾಸನಿಗೆ ಕಾಣದಂತೆ ಕಂಬನಿಗಳನ್ನು ಒರೆಸಿಕೊಂಡು ಎಂದಳು 'ನೀವೆ ಒಮ್ಮೆ ಎಂದಿದ್ದಿರಿ 'ಸ್ತ್ರೀಯರು ನೀವು ಎಷ್ಟೊಂದು ಸಹನಮಾಡಿಕೊಳ್ಳುತ್ತೀರಿ !–ಅಪಮಾನ, ಅತ್ಯಾಚಾರ, ನಿಂದೆ, ಕಲಂಕ, ಉಪದ್ರವ !' ಅಂದಿನಿಂದ ನನ್ನ ಮನಸ್ಸಿನಲ್ಲಿ ಹೊಸ ಭಾವನೆಯ ಸಂಚಾರವಾಯಿತು. ಅಂದಿನಿಂದ ಎಲ್ಲವನ್ನೂ ನಿಲ್ಲಿಸಿಬಿಟ್ಟೆ.'

ದೇವದಾಸ ಕುಳಿತುಕೊಂಡೇ 'ಇನ್ನು ನಿನ್ನ ಉಪಜೀವನ ಹೇಗೆ ಸಾಗಬೇಕು ?' ಎಂದು ಕೇಳಿದ.

'ಅದನ್ನೋ! ಮೊದಲೇ ಹೇಳಿಬಿಟ್ಟಿದ್ದೇನೆ.'

'ಆ ವ್ಯಾಪಾರಿ ನಿನ್ನ ರೂಪಾಯಿಗಳನ್ನೆಲ್ಲ ಮುಳುಗಿಸಿ ಬಿಟ್ಟರೆ?'

ಚಂದ್ರಮುಖಿಗೆ ಇದರಿಂದ ಭಯವಾಗಲಿಲ್ಲ. ಶಾಂತ, ಸಹಜ ಭಾವದಿಂದ ಎಂದಳು. 'ಆಶ್ಚರ್ಯವೇನೂ ಇಲ್ಲ. ಸಂಕಟ ಬಂದರೆ ನಿಮ್ಮಿಂದ ಭಿಕ್ಷೆ ಬೇಡಿ ಜೀವಿಸಬೇಕೆಂದೂ ಯೋಚಿಸಿದ್ದೇನೆ.'

'ಆ ಮೇಲೆ ತೆಗೆದುಕೊಳ್ಳಬಹುದು. ಈಗ ಎಲ್ಲಿಗಾದರೂ ಹೊರಡುವ ಉದ್ಯೋಗ ಮಾಡು' ಎಂದು ಯೋಚಿಸಿ ಹೇಳಿದ ದೇವದಾಸ.

'ನಾಳೆಯೇ ಹೊರಡುವ ಉದ್ಯೋಗ ಮಾಡುವೆ. ಈ ಬಂಗಾರದ ಬಳೆಗಳನ್ನು ಮಾರಿ ಆ ಸಾಹುಕಾರನನ್ನು ಸ್ವಲ್ಪ ಬೆಟ್ಟಿಯಾಗಿ ಬರುವೆ.'

ದೇವದಾಸ ಜೇಬಿನೊಳಗಿಂದ ನೂರು ರೂಪಾಯಿಗಳ ಐದು ನೋಟುಗಳನ್ನು ತೆಗೆದು ದಿಂಬಿನ ಕೆಳಗಿಟ್ಟು ಬಳೆಗಳನ್ನು ಮಾರಬೇಡ. ಸಾಹುಕಾರನನ್ನು ಸುಮ್ಮನೆ ಕಂಡುಬಾ' ಎಂದು ಹೇಳಿ ಆ ಮೇಲೆ 'ಆದರೆ ನೀನು ಹೋಗುವುದಾದರೂ ಎಲ್ಲಿಗೆ? ತೀರ್ಥ ಯಾತ್ರೆಗೆ?' ಎಂದು ಕೇಳಿದ.

'ಇಲ್ಲ ದೇವದಾಸಬಾಬೂ, ತೀರ್ಥಯಾತ್ರೆಯಲ್ಲಾಗಲಿ, ಧರ್ಮದಲ್ಲಾಗಲಿ ನನಗೆ ಅಷ್ಟು ಶ್ರದ್ಧೆ ಇಲ್ಲ. ಕಲಕತ್ತೆಯಿಂದ ಬಹಳ ದೂರ ಹೋಗುವುದಿಲ್ಲ. ಹತ್ತಿರದ ಯಾವುದಾದರೂ ಒಂದು ಹಳ್ಳಿಯಲ್ಲಿರುವೆ.'

'ಒಳ್ಳೇಯವರ ಮನೆಯಲ್ಲಿ ದಾಸಿಯಾಗಿರುವೆಯಾ?'

ಚಂದ್ರಮುಖಿಯ ಕಣ್ಣುಗಳಲ್ಲಿ ಪುನಃ ನೀರು ಬಂತು. ಒರೆಸಿಕೊಂಡು 'ಇಲ್ಲ, ಸ್ವತಂತ್ರಳಾಗಿ ಸ್ವಚ್ಛಂದವಾಗಿರುವೆ. ನಾನೇಕೆ ಒಣ ತೊಂದರೆಗೆ ಒಳಗಾಗಬೇಕು? ನಾನೆಂದೂ ಶಾರೀರಿಕ ಪರಿಶ್ರಮ ಪಟ್ಟಿಲ್ಲ. ಇನ್ನು ಮೇಲೆ ಅದು ಸಹನವಾಗುವುದೂ ಇಲ್ಲ. ಹೆಚ್ಚಿಗೆ ಶ್ರಮಪಟ್ಟರೆ ನಾನು ಉಳಿಯುವಂತೆಯೇ ಇಲ್ಲ' ಎಂದಳು.

ದೇವದಾಸ ವಿಷಣ್ಣವದನದಿಂದ ಸ್ವಲ್ಪ ನಕ್ಕು 'ಪಟ್ಟಣದ ಸಮೀಪದಲ್ಲಿರುವುದರಿಂದ ಪುನಃ ಆಸೆಯುಂಟಾಗುವ ಸಂಭವವಿದೆ. ಮನುಷ್ಯನ ಮನಸ್ಸಿನ ಮೇಲೆ ವಿಶ್ವಾಸವಿಡಲಾಗದು!' ಎಂದ.

ಈ ಸಲ ಚಂದ್ರಮುಖಿಯ ಮುಖ ಅರಳಿತು. ನಕ್ಕು ನುಡಿದಳು. 'ಈ ಮಾತು ನಿಜ. ಮನುಷ್ಯನ ಮನಸ್ಸಿನ ಮೇಲೆ ವಿಶ್ವಾಸವಿಡಲಾಗದು! ಆದರೆ ನಾನು ಇನ್ನು ಈ ಪ್ರಲೋಭದಲ್ಲಿ ಬೀಳುವುದಿಲ್ಲ. ಸ್ತ್ರೀಯರಲ್ಲಿ ಲೋಭವಿರುವುದೆಂಬುದನ್ನು ನಾನು ಒಪ್ಪುತ್ತೇನೆ. ಯಾವುದರ ಲೋಭವುಂಟಾಗುವುದೊ ಅದನ್ನು ಇಚ್ಛಾಪೂರ್ವಕವಾಗಿ ಬಿಟ್ಟುಬಿಟ್ಟಿದ್ದೇನೆ.

ಆದುದರಿಂದ ಪುನಃ ಅದರಲ್ಲಿ ಸಿಗುವ ಭಯ ನನಗಿಲ್ಲ. ಒಮ್ಮೆಲೇ ಯಾವುದಾದರೂ ಕಾರಣದಿಂದ ಬಿಟ್ಟುಬಿಟ್ಟಿದ್ದರೆ ಎಚ್ಚರದಿಂದ ಇರಬೇಕಾಗುತಿತ್ತು. ಇಷ್ಟು ದಿನಗಳಲ್ಲಿ, ಬಿಟ್ಟುದಕ್ಕಾಗಿ ಒಂದು ದಿನವೂ ಪಶ್ಚಾತ್ತಾಪವಾಗಿಲ್ಲ. ನಾನು ಸುಖಿಯಾಗಿದ್ದೇನೆ.'

ದೇವದಾಸ ತಲೆಯಲ್ಲಾಡಿಸಿ ಎಂದ 'ಸ್ತ್ರೀಯರ ಮನಸ್ಸು ಬಹಳ ಚಂಚಲ. ವಿಶ್ವಾಸವಿಡಲು ಅಯೋಗ್ಯವಾಗಿರುತ್ತದೆ.'

ಈಗ ಚಂದ್ರಮುಖಿ ಸರಿದು ದೇವದಾಸನ ಬಳಿಗೆ ಬಂದು ಕುಳಿತು, ಅವನ ಕೈಹಿಡಿದು ಎಂದಳು 'ದೇವದಾಸಬಾಬೂ!'

ದೇವದಾಸ ಅವಳ ಮುಖವನ್ನು ನೋಡುತಿದ್ದ. 'ನನ್ನನ್ನು ಮುಟ್ಟಬೇಡ, ಸರಿ ಹಿಂದಕ್ಕೆ' ಎನ್ನುವುದಾಗಲಿಲ್ಲ ಅವನಿಂದ.

ಚಂದ್ರಮುಖಿ ಅತ್ಯಂತ ಸ್ನೇಹದಿಂದ ಕಣ್ಣುಗಳನ್ನರಳಿಸಿ ಸ್ವಲ್ಪ ಕಂಪಿತ ಕಂಠದಿಂದ, ಅವನ ಕೈಗಳನ್ನು ತನ್ನ ತೊಡೆಯ ಬಳಿಯಲ್ಲಿಟ್ಟುಕೊಂಡು 'ಇಂದು ಕೊನೆಯ ದಿನ, ಕೋಪಿಸಬೇಡಿರಿ. ಒಂದು ಮಾತನ್ನು ಕೇಳುವ ಬಯಕೆಯಾಗಿದೆ' ಎಂದು ದೇವದಾಸನ ಮುಖವನ್ನು ಸ್ವಲ್ಪ ಹೊತ್ತು ನೋಡಿ 'ಪಾರ್ವತಿ ನಿಮಗೆ ಬಹಳ ತೊಂದರೆಯನ್ನುಂಟು ಮಾಡಿದಳೆ?' ಎಂದು ಕೇಳಿದಳು.

ದೇವದಾಸ ಸ್ವಲ್ಪ ಹುಬ್ಬುಗಂಟಿಕ್ಕಿ 'ಇದನ್ನೇಕೆ ಕೇಳುತ್ತೀ?' ಎಂದು ಕೇಳಿದ.

ಚಂದ್ರಮುಖಿ ವಿಚಲಿತಳಾಗಲಿಲ್ಲ. ಶಾಂತ, ದೃಢಸ್ವರದಿಂದ ಎಂದಳು. 'ನನಗೆ ಬೇಕಾಗಿದೆ. ನಿಮಗೆ ದುಃಖವಾದರೆ ನನಗೂ ದುಃಖವಾಗುತ್ತದೆ. ಇದು ನಿಜವೆಂದು ತಿಳಿದುಕೊಳ್ಳಿ. ಇದನ್ನುಳಿದು ನನಗೆ ಇನ್ನೂ ಕೆಲವು ಸಂಗತಿಗಳು ತಿಳಿದಿವೆ. ಆಗಾಗ ನೀವು ಸರಾಯಿ ಕುಡಿದಾಗ ನಿಮ್ಮ ಬಾಯಿಯಿಂದ ಹೊರಬೀಳುತಿದ್ದ ಅನೇಕ ಮಾತುಗಳನ್ನು ಕೇಳಿದ್ದೇನೆ. ಆದರೂ ಪಾರ್ವತಿ ನಿಮಗೆ ಮೋಸ ಮಾಡಿದ್ದಾಳೆಂದು ವಿಶ್ವಾಸವಾಗುವುದಿಲ್ಲ. ನೀವೆ ಮೋಸಹೋಗಿರುವಿರೆಂದು ನನಗೆನಿಸುತ್ತದೆ. ದೇವದಾಸ ಬಾಬೂ, ವಯಸ್ಸಿನಿಂದ ನಾನು ನಿಮಗಿಂತಲೂ ಹಿರಿಯಳು. ಈ ಜಗತ್ತಿನಲ್ಲಿ

ಬಹಳ ಕಂಡಿದ್ದೇನೆ, ಕೇಳಿದ್ದೇನೆ. ಇದರಲ್ಲಿ 'ತಪ್ಪು ನಿಮ್ಮದೇ ಎಂದು ನಾನು ಧೈರ್ಯದಿಂದ ಹೇಳುತ್ತೇನೆ. ಸ್ತ್ರೀಯರು ಚಂಚಲರು, ಅಸ್ಥಿರ ಚಿತ್ತವುಳ್ಳವರೆಂದು ಅವರನ್ನು ನಿಂದಿಸುತ್ತಾರೆ. ಆದರೆ ಅವರು ಹಾಗಿಲ್ಲ ವೆಂದು ಎನಿಸುತ್ತದೆ. ನಿಂದಿಸುವವರೂ ನೀವೇ. ಪ್ರಶಂಸೆ ಮಾಡುವವರೂ ನೀವೆ! ನಿಮ್ಮ ಮನಸ್ಸಿಗೆ ಬಂದುದನ್ನು ಸಹಜವಾಗಿ ಹೇಳಿಬಿಡುತ್ತೀರಿ. ಆದರೆ ಸ್ತ್ರೀಯರು ಹಾಗೆ ಮಾಡಲಾರರು. ತಮ್ಮ ಮನಸ್ಸಿನೊಳಗಿನ ಮಾತನ್ನು ಪ್ರಕಟಮಾಡಲಾರರು. ಅವರು ಪ್ರಕಟಮಾಡಿದರೂ ಎಲ್ಲರೂ ಅದನ್ನು ಚೆನ್ನಾಗಿ ತಿಳಿದುಕೊಳ್ಳುವುದಿಲ್ಲ. ಏಕೆಂದರೆ ಅವರ ಮಾತುಗಳು ಬಹಳ ಅಸ್ಪಷ್ಟವಾಗಿರುತ್ತವೆ. ನಿಮ್ಮ ತರ್ಕದ ಎದುರಿನಲ್ಲಿ ಅವರ ಮಾತುಗಳು ಹೂತುಹೋಗುತ್ತವೆ. ಬಳಿಕ ಅವರ ನಿಂದೆಯೆ ಮನುಷ್ಯರ ಬಾಯಿಂದ ಸ್ಪಷ್ಟವಾಗಿ ಹೊರಬೀಳತೊಡಗುತ್ತದೆ.'

ಚಂದ್ರಮುಖಿ ತನ್ನ ಕಂಠವನ್ನು ಸ್ವಲ್ಪ ಸರಿಪಡಿಸಿಕೊಂಡು ಎಂದಳು 'ಈ ಜೀವನದಲ್ಲಿ ಪ್ರೇಮದ ವ್ಯವಸಾಯವನ್ನು ಬಹಳ ದಿನಗಳ ವರೆಗೆ ಮಾಡಿದ್ದೇನೆ. ಆದರೂ ನಿಜವಾಗಿ ಪ್ರೇಮಮಾಡಿದ್ದು ಒಂದೇ ಸಲ. ಆ ಪ್ರೇಮದ ಬೆಲೆ ಬಹು ದೊಡ್ಡದು. ಅದರಿಂದ ಬಹಳ ಪಾಠಗಳು ಕಲಿಯಲು ದೊರೆಯುತ್ತವೆ. ಪ್ರೇಮ ಬೇರೆ ಮತ್ತು ರೂಪದ ಮೋಹ ಬೇರೆ ಎಂಬುದು ನಿಮಗೆ ಗೊತ್ತಿದ್ದೆಯೆ? ರೂಪದ ಮೋಹ ನಿಮ್ಮಲ್ಲಿ ಗಿಂತಲೂ ನಮ್ಮಲ್ಲಿ ಕಡಿಮೆ ಇರುತ್ತದೆ. ಆದುದರಿಂದ ನಾವು ನಿಮ್ಮಂತೆ ಒಂದೇ ಸಲ ಉನ್ಮತ್ತರಾಗುವುದಿಲ್ಲ. ನೀವು ಬಂದು ಪ್ರೇಮವನ್ನು ತೋರಿಸುವಾಗ, ನಾನಾ ರೀತಿಯ ಭಾವಗಳನ್ನು ವ್ಯಕ್ತಮಾಡುವಾಗ, ನಾವು ಸುಮ್ಮನಿರುತ್ತೇವೆ. ಎಷ್ಟೋ ಸಲ, ನಿಮ್ಮ ಮನಸ್ಸಿಗೆ ದುಃಖ ಕೊಡಲು ನಮಗೆ ನಾಚಿಕೆಯಾಗುತ್ತದೆ; ದುಃಖವಾಗುತ್ತದೆ; ಮತ್ತು ಸಂಕೋಚವಾಗುತ್ತದೆ. ಮುಖವನ್ನು ನೋಡುತ್ತಲೆ ತಿರಸ್ಕಾರವುಂಟಾ ದರೂ ವಿಶೇಷತಃ ನಾಚಿಕೆಯಿಂದ ನಮ್ಮಿಂದ 'ನಿಮ್ಮನ್ನು ಪ್ರೀತಿಸುವುದಿಲ್ಲ' ವೆಂದು ಹೇಳಲಾಗುವುದಿಲ್ಲ. ಬಳಿಕ ಒಂದು ಬಾಹ್ಯಪ್ರೇಮದ ಅಭಿನಯವು ಆರಂಭವಾಗುತ್ತದೆ. ಅದು ಒಂದು ದಿನ ಇಲ್ಲದಂತಾದಾಗ ನೀವು

ಪುರುಷರು ಅಸ್ಥಿರರಾಗಿ ಎಷ್ಟು ವಿಶ್ವಾಸಘಾತಕಿಯಾಗಿದ್ದಾಳೆ ಇವಳು! ಎಂದುಬಿಡುತ್ತೀರಿ. ಎಲ್ಲರೂ ಅದನ್ನೇ ಕೇಳುತ್ತಾರೆ; ನಂಬಿಬಿಡುತ್ತಾರೆ. ನಾವು ಆಗಲೂ ಸುಮ್ಮನಿರುತ್ತೇವೆ. ಮನಸ್ಸಿನಲ್ಲಿ ಎಷ್ಟೋ ವೇದನೆಯಾಗುತ್ತದೆ. ಆದರೆ ಅದನ್ನು ಲಕ್ಷಿಸುವವರು ಯಾರು?'

ದೇವದಾಸ ಏನನ್ನೂ ನುಡಿಯಲಿಲ್ಲ. ಅವಳು ಅವನ ನಿಃಶಬ್ದ ಮುಖದ ಕಡೆಗೆ ನೋಡಿ ಪುನಃ ಎಂದಳು 'ಪುರುಷರಲ್ಲಿ ಸ್ವಲ್ಪ ಮಮತೆಯೂ ಹುಟ್ಟುತ್ತಿರಬಹುದು. ಅದನ್ನೆ ಸ್ತ್ರೀಯರು ಮನಸ್ಸಿನಲ್ಲಿ ಪ್ರೇಮವೆಂದು ತಿಳಿಯುತ್ತಾರೆ. ಶಾಂತತೆಯಿಂದ, ಧೈರ್ಯದಿಂದ, ಗೃಹಿಣೀ ಜೀವನವನ್ನು ಕಳೆಯುತ್ತಾರೆ. ದುಃಖದ ಸಮಯದಲ್ಲಿ ಪ್ರಾಣದ ಹಂಗುದೊರೆದು ಸಹಾಯ ಮಾಡುತ್ತಾರೆ. ಅದನ್ನು ನೀವು ಚೆನ್ನಾಗಿ ಹೊಗಳಿದಿರೆಂದರೆ ಎಲ್ಲರ ಬಾಯಿಯಿಂದ 'ಧನ್ಯ ಧನ್ಯ!' ವೆಂಬ ಶಬ್ದಗಳು ಹೊರಡುತ್ತವೆ. ಆದರೆ ಆಗ ಪ್ರೇಮದ ಅಲ್ಪ ಪರಿಚಯವೂ ಅವಳಿಗಾಗಿರುವುದಿಲ್ಲ. ಬಳಿಕ ಯಾವತ್ತಾದರೂ ಅಶುಭ ಮುಹೂರ್ತದಲ್ಲಿ ಅವಳು ತನ್ನ ಅಂತರಂಗದಲ್ಲಿಯ ಅಸಹ್ಯ ವೇದನೆಯನ್ನು ಹೊರಗೆಡಹಿದಳೆಂದರೆ ಆಗ..' ಹೀಗೆಂದು ಚಂದ್ರಮುಖಿ ದೇವದಾಸನ ಕಡೆಗೆ ತೀಕ್ಷ್ಣ ದೃಷ್ಟಿಯಿಂದ ನೋಡತೊಡಗಿದಳು. ಬಳಿಕ ಅವಳೆಂದಳು '..ಆಗ ನೀವು 'ಇವಳು ಪಾಪಿ, ಕಲಂಕಿನಿ' ಎಂದೆನ್ನುತ್ತೀರಿ..'

ಒಮ್ಮೆಂದೊಮ್ಮೆ ದೇವದಾಸ ಅವಳ ಬಾಯ ಮೇಲೆ ಕೈಯಿಟ್ಟು 'ಚಂದ್ರಮುಖೀ, ಇದೇನು?' ಎಂದ.

ಚಂದ್ರಮುಖಿ ಮೆಲ್ಲಮೆಲ್ಲನೆ ಅವನ ಕೈಯನ್ನು ಸರಿಸಿ 'ಹೆದರಬೇಡಿ, ನಾನು ಪಾರ್ವತಿಯ ವಿಷಯವನ್ನು ಹೇಳುತ್ತಿಲ್ಲ' ಎಂದಳು.

ಇಷ್ಟು ಹೇಳಿ ಚಂದ್ರಮುಖಿ ಸುಮ್ಮನಾದಳು. ದೇವದಾಸ ಕೂತು ಕೊಂಚ ಕಾಲ ಸುಮ್ಮನಿದ್ದು ಅನ್ಯಮನಸ್ಕನಾಗಿ 'ಆದರೆ ಕರ್ತವ್ಯವಿದೆ, ಧರ್ಮ–ಅಧರ್ಮವಿದೆಯಲ್ಲವೆ?' ಎಂದ.

ಚಂದ್ರಮುಖಿ ಪುನಃ ನುಡಿದಳು. 'ಹೌದು, ಅದೂ ಇದೆ. ಅಂತೆಯೆ

ನಿಜವಾಗಿ ಪ್ರೇಮ ಮಾಡುವವರು ಸಹನೆ ಮಾಡಿಕೊಳ್ಳಲೂ ಸಿದ್ಧರಿರು ತ್ತಾರೆ. ದೇವದಾಸ! ಒಳಗಿಂದೊಳಗೇ ಪ್ರೀತಿಸಿ ಸಹ ಎಷ್ಟು ಸುಖ, ಎಂತಹ ಆತ್ಮತೃಪ್ತಿ ದೊರೆಯುವುದೆಂಬುದು ಯಾರಿಗೆ ಗೊತ್ತಿದೆಯೊ ಆ ವ್ಯಕ್ತಿ ಸಂಸಾರದಲ್ಲಿ ಅನಾವಶ್ಯಕವಾದ ದುಃಖ ಅಥವಾ ಅಶಾಂತಿ ಯುಂಟಾಗದಂತೆ ಎಚ್ಚರಪಡುತ್ತದೆ. ಇರಲಿ. ನಾನು ಏನು ಹೇಳುತಿದ್ದೆ! ದೇವದಾಸ, ನಾನು ನಿಮಗೆ ನಿಶ್ಚಯವಾಗಿ ಹೇಳಬಲ್ಲೆ; ಪಾರ್ವತಿ ನಿಮ್ಮನ್ನು ಸ್ವಲ್ಪವೂ ಮೋಸಗೊಳಿಸಿಲ್ಲ. ನಿಮ್ಮಿಂದ ನೀವೇ ಮೋಸ ಹೊಂದಿದ್ದೀರಿ. ಇದನ್ನರಿಯುವ ಶಕ್ತಿ ಇಂದು ನಿಮ್ಮಲ್ಲಿಲ್ಲವೆಂದೂ ನಾನು ಬಲ್ಲೆ. ನಾನು ಹೇಳಿದುದು ನಿಜವೆಂದು ಮುಂದೆ ಕಂಡುಬಂದೀತು.'

ದೇವದಾಸನ ಎರಡೂ ಕಣ್ಣುಗಳಲ್ಲಿ ಕಂಬನಿ ತುಂಬಿದುವು. ಅವನು ಚಂದ್ರಮುಖಿಯ ಮಾತುಗಳು ನಿಜವೆಂದು ಯೋಚಿಸಲಾರಂಭಿಸಿದ. ಕಂಬನಿಗಳನ್ನು ಚಂದ್ರಮುಖಿ ನೋಡಿದಳು; ಆದರೆ ಒರೆಸಲು ಯತ್ನಿಸ ಲಿಲ್ಲ. ಅವಳು ಮನದಲ್ಲಿ ಎನ್ನತೊಡಗಿದಳು 'ನಿಮ್ಮನ್ನು ನಾನು ಅನೇಕ ಸಲ ಅನೇಕ ರೂಪಗಳಲ್ಲಿ ಕಂಡಿದ್ದೇನೆ. ಆದುದರಿಂದ ನಿಮ್ಮ ಮನದ ಗತಿಯನ್ನು ಚೆನ್ನಾಗಿ ತಿಳಿದಿದ್ದೇನೆ. ಸಾಧಾರಣ ಪುರುಷರಂತೆ ನೀವು ಬೇಡಿ ಪ್ರೇಮವನ್ನು ವ್ಯಕ್ತ ಮಾಡುವುದಿಲ್ಲ. ಇನ್ನು ರೂಪ! ರೂಪ ವನ್ನು ಯಾರು ಬಯಸುವುದಿಲ್ಲ? ಅದಕ್ಕಾಗಿ ಇಷ್ಟು ತೇಜಸ್ಸನ್ನು ಸೂರೆ ಮಾಡುವಿರೆಂದು ನಾನು ನಂಬುವುದಿಲ್ಲ. ಪಾರ್ವತಿ ಬಹಳ ರೂಪವತಿ ಯಾದರೂ ಅವಳೇ ಪ್ರೇಮದ ಬಾಗಿಲನ್ನು ತೆರೆದಳು, ಮತ್ತು ಅವಳೇ ಪ್ರೇಮಾಲಾಪವನ್ನಾರಂಭಿಸಿದಳೆಂದು ಎನಿಸುತ್ತದೆ. ಇದು ನಿಜವಿರ ಬೇಕು.'

ಮನದಲ್ಲಿ ಈ ರೀತಿ ಯೋಚಿಸುತ್ತಿರುವಾಗ ಅವಳ ಬಾಯಿಯಿಂದ ಅಸ್ಫುಟ ಸ್ವರದಿಂದ ಕೆಲವು ಶಬ್ದಗಳು ಹೊರಬಿದ್ದುವು. 'ನನ್ನನ್ನು ನೋಡಿಕೊಂಡು, ಅವಳು ನಿಮ್ಮನ್ನು ಎಷ್ಟು ಪ್ರೀತಿಸುತ್ತಿರಬಹುದು ಎಂಬುದನ್ನು ಊಹಿಸುತ್ತೇನೆ.'

'ಏನೆನ್ನುತ್ತಿ?' ಎಂದು ದೇವದಾಸ ಕೂಡಲೇ ಕೇಳಿದ.

'ಏನೂ ಇಲ್ಲ. ಅವಳು ನಿಮ್ಮ ರೂಪ ನೋಡಿ, ಮರೆಯಲಾರಳು ಎಂದು ಎನ್ನುತಿದ್ದೆ. ನಿಮಗೆ ರೂಪವಿದೆ. ಇದರಲ್ಲಿ ಸಂದೇಹವಿಲ್ಲ. ಆದರೆ ಈ ಅತಿ ರುಕ್ಷ ರೂಪದ ಮೇಲೆ ಎಲ್ಲರ ದೃಷ್ಟಿ ಬೀಳುವುದಿಲ್ಲ. ಒಂದು ಸಲ ಯಾರದೇ ಆಗಲಿ, ದೃಷ್ಟಿ ಬಿದ್ದರೆ ಅವಳು ತನ್ನ ದೃಷ್ಟಿಯನ್ನು ಹಿಂದೆಗೆಯಳು.'

ಚಂದ್ರಮುಖಿ ದೀರ್ಘವಾದ ಉಸಿರು ಬಿಟ್ಟು ಪುನಃ 'ನಿಮ್ಮಲ್ಲಿ ಯಾವುದೊ ಒಂದು ಆಕರ್ಷಣವಿದೆ. ನಿಮ್ಮನ್ನು ಎಂದಾದರೂ ಪ್ರೀತಿಸಿದವರಿಗೇ ಇದು ತಿಳಿಯುವುದು. ಈ ಸ್ವರ್ಗವನ್ನು ಹೊಂದಲು ಬಯಸಿ ಬಳಿಕ ಅದರಿಂದ ಯಾರು ವಿಮುಖರಾಗಬಲ್ಲರು? ಅಂತಹ ಸ್ತ್ರೀಯು ಈ ಪೃಥ್ವಿಯಲ್ಲಿ ಎಲ್ಲಿರುವಳು?' ಎಂದಳು.

ಸ್ವಲ್ಪ ಹೊತ್ತು ನೀರವವಾಗಿದ್ದು ದೇವದಾಸನ ಮುಖದ ಕಡೆ ನೋಡಿ ಮೆಲ್ಲಮೆಲ್ಲನೆ 'ಈ ರೂಪ ನಾಲ್ಕು ದಿನದ ಬೆಳುದಿಂಗಳಂತೆ ನೋಡನೋಡುತ್ತಲೆ ಕೊನೆಯಾಗುವುದು. ಚಿತೆಯಲ್ಲಿ ಸುಟ್ಟು ಭಸ್ಮವಾಗಿ ಹೋಗುವುದು' ಎಂದಳು.

ದೇವದಾಸ ವಿಹ್ವಲ ದೃಷ್ಟಿಯಿಂದ ಚಂದ್ರಮುಖಿಯ ಕಡೆಗೆ ನೋಡಿ 'ಇದೇನು, ಇಂದು ನೀನು ಹೀಗೆ ಹರಟೆ ಹೊಡೆಯುತ್ತಿರುವೆ?' ಎಂದ.

ಚಂದ್ರಮುಖಿ ಸ್ವಲ್ಪ ಮಧುರ ನಗೆಯಿಂದ 'ಇದಕ್ಕೂ ಹೆಚ್ಚು ಬೇಸರ ಬರುವಂತಹ ಮಾತು ಯಾವುದೂ ಇಲ್ಲ ದೇವದಾಸಬಾಬೂ. ನಾವು ಪ್ರೀತಿಸದೆ ಇದ್ದರೂ ಅವರೇ ಪ್ರೇಮದ ಮಾತುಗಳನ್ನಾಡುವರು. ನಾನು ಕೇವಲ ಪಾರ್ವತಿಯ ಪರವಾಗಿ ವಕಾಲತ್ತನ್ನು ಮಾಡುತ್ತಿದ್ದೇನೆ; ನನಗೋಸ್ಕರವಲ್ಲ' ಎಂದಳು.

ದೇವದಾಸ ಹೊರಡಲು ಸಿದ್ಧನಾಗಿ 'ಈಗ ನಾನು ಹೋಗುತ್ತೇನೆ' ಎಂದ.

'ಇನ್ನೊಂದಿಷ್ಟು ಕುಳಿತುಕೊಳ್ಳಿ. ನೀವು ಇಷ್ಟು ಪ್ರಜ್ಞಾವಂತರಾಗಿದ್ದುದನ್ನು ನಾನು ಕಂಡಿರಲಿಲ್ಲ. ಮತ್ತು ನಾವೆಂದೂ ಈ ರೀತಿ

ಕೈ ಹಿಡಿದು ಕುಳಿತುಕೊಂಡು ಮಾತನಾಡಿದ್ದಿಲ್ಲ. ಇದೆಂತಹ ತೃಪ್ತಿ ಎಂದು ನಕ್ಕುಬಿಟ್ಟಳು ಅವಳು.

ದೇವದಾಸ ಆಶ್ಚರ್ಯದಿಂದ 'ಏಕೆ ನಕ್ಕೆ?' ಎಂದ.

'ಏತಕ್ಕೂ ಇಲ್ಲ. ಹಿಂದಿನ ಒಂದು ಮಾತು ನೆನಪಾಯಿತು. ಹತ್ತು ವರ್ಷದ ಹಿಂದಿನ ಮಾತು. ಆಗ ನಾನು ಪ್ರೇಮದ ವಶಳಾಗಿ ಮನೆ ಬಿಡಲೂ ಸಿದ್ಧಳಾಗಿದ್ದೆ. ಎಷ್ಟು ಪ್ರೀತಿಸಿದರೂ ಕಡಿಮೆಯೆ ಎಂದು ತಿಳಿದು ಕೊಂಡಿದ್ದೆ. ಪ್ರೇಮಕ್ಕೆ ಪ್ರಾಣವನ್ನಾದರೂ ಕೊಡಲು ನಾನು ಸಿದ್ಧಳಾಗಿದ್ದೆ. ಒಂದು ದಿನ ತುಚ್ಛ ಆಭರಣಕ್ಕಾಗಿ ಜಗಳವಾಯಿತು. ಅಂದಿನಿಂದ ನಾವು ಪರಸ್ಪರರ ಮುಖನೋಡಲಿಲ್ಲ. 'ಅವರು ನನ್ನನ್ನು ಅಷ್ಟು ಪ್ರೀತಿಸುವುದಿಲ್ಲ. ಇಲ್ಲದಿದ್ದರೆ ಒಂದು ಆಭರಣವನ್ನು ಕೊಡುತಿದ್ದಿಲ್ಲವೆ?' ಎಂದು ಕೊಂಡು ಆಗ ನಾನು ಮನಸ್ಸನ್ನು ಸಂತೋಷಪಡಿಸಿಕೊಂಡೆ.

ಪುನಃ ಒಂದು ಸಲ ಮನದಲ್ಲಿಯೇ ನಕ್ಕಳು. ಮರುಕ್ಷಣವೇ ಶಾಂತ, ಗಂಭೀರತೆಯಿಂದ ಮೆಲ್ಲಮೆಲ್ಲನೆ ಎಂದಳು 'ಸುಟ್ಟು ಹೋಗಲಿ ಆ ಆಭರಣ. ಒಂದು ತಲೆ ನೋವಿಗಾಗಿ ಪ್ರಾಣವನ್ನರ್ಪಿಸಬೇಕಾಗುತಿತ್ತೆಂಬುದು ಆಗ ತಿಳಿಯುತ್ತಿರಲಿಲ್ಲ. ಸೀತೆ, ದಮಯಂತಿಯರ ವ್ಯಥೆಯ ಅನುಭವ ಆಗ ಆಗಲಿಲ್ಲ. ಒಳ್ಳೇದು ದೇವದಾಸಬಾಬೂ, ಈ ಜಗತ್ತಿನಲ್ಲಿ ಇಂತಹದೆಲ್ಲವೂ ಸಂಭವವಿದೆಯಲ್ಲವೆ?'

ದೇವದಾಸ ಉತ್ತರ ಕೊಡದೆ ಹತಬುದ್ಧನಾಗಿ ಕೆಲವು ಕ್ಷಣ ಚಂದ್ರಮುಖಿಯನ್ನು ನೋಡಿ 'ಹೋಗುತ್ತೇನೆ' ಎಂದ.

'ಅಂಜಿಕೆಯೇನಿದೆ ಇಲ್ಲಿ? ಸ್ವಲ್ಪ ಕುಳಿತುಕೊಳ್ಳಿ. ನಿಮ್ಮನ್ನು ನಾನು ಇನ್ನು ಭ್ರಮೆಯಲ್ಲಿ ನೂಕುವುದಿಲ್ಲ. ಮೊದಲು ನೀವು ನನ್ನನ್ನು ಎಷ್ಟು ತಿರಸ್ಕರಿಸುತಿದ್ದಿರೊ ಅಷ್ಟೇ ಈಗ ನಾನು ನನ್ನನ್ನು ತಿರಸ್ಕರಿಸಿ ಕೊಳ್ಳುತಿದ್ದೇನೆ. ಆದರೆ ನೀವು ವಿವಾಹವನ್ನೇಕೆ ಮಾಡಿಕೊಳ್ಳುವುದಿಲ್ಲ?'

ದೇವದಾಸ 'ಅದೇಕೊ ಇಚ್ಛೆಯಾಗಲೊಲ್ಲದು' ಎಂದು ನಕ್ಕು ನುಡಿದ.

'ಇಚ್ಛೆ ಇರದಿದ್ದರೂ ಮಾಡಿಕೊಳ್ಳಿ. ಸ್ತ್ರೀ ಮುಖವನ್ನು ನೋಡಿದ

ಮೇಲೆ ಎಷ್ಟೋ ಶಾಂತಿಯುಂಟಾಗುವುದು. ಅಲ್ಲದೆ ನನಗೊಂದು ದಾರಿ ಸಿಕ್ಕುವುದು. ನಿಮ್ಮ ಮನೆಯಲ್ಲಿ ದಾಸಿಯಂತೆ ಇದ್ದುಕೊಂಡು ಸ್ವಚ್ಛಂದವಾಗಿ ಜೀವನ ಕಳೆಯುವೆ.'

ದೇವದಾಸ ನಕ್ಕು 'ಸರಿ, ಆಗ ನಿನ್ನನ್ನು ಬರಮಾಡಿಕೊಳ್ಳುವೆ' ಎಂದ.

ಚಂದ್ರಮುಖಿ ಅವನ ನಗುವನ್ನು ನೋಡದೆಯೆ 'ದೇವದಾಸ ಬಾಬೂ, ಇನ್ನೊಂದು ಮಾತು ಕೇಳಬೇಕೆನ್ನುತ್ತೇನೆ' ಎಂದಳು.

'ಏನು ?'

'ಇಷ್ಟು ಹೊತ್ತಿನ ವರೆಗೆ ನೀವು ನನ್ನೊಡನೆ ಮಾತನ್ನೇಕೆ ಆಡಿದಿರಿ ?'

'ಅನುಚಿತವೇನು ಇದರಲ್ಲಿ ?'

'ಅದು ತಿಳಿಯದು. ಆದರೆ ಇದರಲ್ಲಿ ಹೊಸದೊಂದು ಮಾತಿದೆ. ನೀವು ಸರಾಯಿ ಕುಡಿಯಲಾರಂಭಿಸುವ ಮೊದಲು ಸಜ್ಜನರಾಗಿದ್ದಾಗ ನನ್ನೊಡನೆ ಎಂದೂ ಮಾತನಾಡಲಿಲ್ಲ.'

ದೇವದಾಸ ಈ ಪ್ರಶ್ನೆಗೆ ಉತ್ತರವನ್ನೀಯದೆ ವಿಷಣ್ಣ ವದನದಿಂದ 'ಈಗ ನಾನು ಸರಾಯಿ ಮುಟ್ಟುವುದಿಲ್ಲ. ನನ್ನ ತಂದೆಯವರು ತೀರಿ ಹೋಗಿದ್ದಾರೆ' ಎಂದ.

ಚಂದ್ರಮುಖಿ ದೇವದಾಸನ ಮುಖದ ಕಡೆಗೆ ಬಹಳ ಹೊತ್ತಿನ ವರೆಗೆ ಕರುಣಾಪೂರಿತ ನಯನಗಳಿಂದ ನೋಡುತ್ತಿದ್ದು 'ಇನ್ನು ಮುಂದೆ ಕುಡಿಯುವಿರಾ ?' ಎಂದು ಕೇಳಿದಳು.

'ಹೇಳಲಾಗದು.'

ಚಂದ್ರಮುಖಿ ದೇವದಾಸನ ಎರಡೂ ಕೈಗಳನ್ನು ಹಿಡಿದು ಅಶ್ರುಪೂರ್ಣ ನೇತ್ರಗಳಿಂದ ಮತ್ತು ವ್ಯಾಕುಲ ಸ್ವರದಿಂದ 'ನೀವು ಸಾಧ್ಯವಾದರೆ ಅದನ್ನು ಬಿಟ್ಟು ಬಿಡಿರಿ. ಇಂತಹ ಅಮೂಲ್ಯ ಜೀವ ರತ್ನವನ್ನು ನಷ್ಟ ಮಾಡಿಕೊಳ್ಳಬೇಡಿ' ಎಂದಳು.

ದೇವದಾಸ ಹೊರಡಲು ಎದ್ದುನಿಂತು 'ನಾನು ಹೊರಡುತ್ತೇನೆ.

ನೀನು ಎಲ್ಲಿಗೆ ಹೋಗುವಿಯೊ ಅಲ್ಲಿಂದಲೇ ಸಮಾಚಾರ ತಿಳಿಸುತ್ತಿರು. ಏನಾದರೂ ಕೆಲಸವಿದ್ದರೆ ಬರೆ. ನನ್ನೊಡನೆ ನಾಚಿಕೆ, ಸಂಕೋಚ ಬೇಡ' ಎಂದ.

ಚಂದ್ರಮುಖಿ ನಮಸ್ಕರಿಸಿ ಪಾದಧೂಲಿಯನ್ನು ಸ್ವೀಕರಿಸಿ 'ನಾನು ಸುಖಿಯಾಗಿರುವಂತೆ ಹರಸಿರಿ! ಇನ್ನೊಂದು ಭಿಕ್ಷೆಯನ್ನು ಬೇಡುತ್ತೇನೆ. ಎಂದಾದರೂ ನಿಮಗೆ ಈ ದಾಸಿಯ ಅವಶ್ಯಕತೆಯುಂಟಾದರೆ, ನನ್ನನ್ನು ಮರೆಯಕೂಡದು' ಎಂದಳು.

'ಒಳ್ಳೇದು' ಎಂದು ದೇವದಾಸ ಹೊರಟುಹೋದ. ಚಂದ್ರಮುಖಿ ಎರಡೂ ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಬಿಕ್ಕಿಬಿಕ್ಕಿ ಅಳುತ್ತ 'ಪರಮಾತ್ಮಾ, ಅವರ ಬೆಟ್ಟಿ ಇನ್ನೊಮ್ಮೆ ಆಗುವಂತೆ ಕರುಣಿಸು!' ಎಂದಳು.

೧೪

ಎರಡು ವರ್ಷಗಳಾದುವು. ಪಾರ್ವತಿ ಮಹೇಂದ್ರನ ಮದುವೆಯನ್ನು ಮಾಡಿ ನಿಶ್ಚಿಂತಳಾಗಿದ್ದಾಳೆ. ಜಲದಬಾಲೆ ಬುದ್ಧಿವಂತೆ, ಕಾರ್ಯದಕ್ಷಳು. ಈಗ ಪಾರ್ವತಿಯ ಬದಲು ಅವಳೇ ಮನೆತನದ ಎಲ್ಲ ಕೆಲಸವನ್ನು ಮಾಡುತಿದ್ದಾಳೆ. ಪಾರ್ವತಿ ಈಗ ತನ್ನ ಮನಸ್ಸನ್ನು ಬೇರೆ ಕಡೆಗೆ ತಿರುಗಿಸಿದ್ದಾಳೆ. ಪಾರ್ವತಿಯ ಮದುವೆಯಾಗಿ ಐದು ವರ್ಷಗಳಾದುವು. ಆದರೆ ಇನ್ನೂ ಅವಳಿಗೆ ಮಕ್ಕಳಾಗಲಿಲ್ಲ. ತನಗೆ ಮಕ್ಕಳಿಲ್ಲದುದರಿಂದ ಪರರ ಮಕ್ಕಳನ್ನು ಅವಳು ಬಹಳವಾಗಿ ಪ್ರೀತಿಸುತ್ತಾಳೆ. ಬಡವರ ಮಕ್ಕಳನ್ನಷ್ಟೇ ಅಲ್ಲ; ಸ್ವಲ್ಪ ಶ್ರೀಮಂತರ ಮಕ್ಕಳನ್ನೂ ಪ್ರೀತಿಸುತ್ತಾಳೆ. ಅವರ ರಕ್ಷಣೆ ಮಾಡುತ್ತಾಳೆ. ಅಲ್ಲದೆ ದೇವರ ಕೆಲಸ, ಸಾಧು-ಸನ್ಯಾಸಿಗಳ ಸೇವೆ, ಕುರುಡರು, ಕುಂಟರು, ಹೆಳವರು, ಮೂಕರು ಮೊದಲಾದವರ ಯೋಗಕ್ಷೇಮಗಳಲ್ಲಿ ತನ್ನ ದಿನವೆಲ್ಲವನ್ನೂ ವೆಚ್ಚ ಮಾಡುತ್ತಾಳೆ. ಈ ಕೆಲಸದ ಕಡೆಗೇ ಪತಿಯ ಮನಸ್ಸನ್ನು ತಿರುಗಿಸಿ ಇನ್ನೊಂದು ಅತಿಥಿ ಶಾಲೆಯನ್ನೂ ಕಟ್ಟಿಸಿದ್ದಾಳೆ. ಅದರಲ್ಲಿ ನಿರಾಶ್ರಿತರೂ ಅಸಹಾಯರೂ, ತಮಗೆ ಬೇಕಾದ ರೀತಿಯಲ್ಲಿ ಇರುತ್ತಾರೆ. ಜಮೀನುದಾರರ ಮನೆಯಿಂದಲೇ ಅವರಿಗೆ ಆಹಾರ ದೊರೆಯುತ್ತದೆ. ಇನ್ನೊಂದು ಕೆಲಸವನ್ನು ಪಾರ್ವತಿ ಅತ್ಯಂತ ಗುಪ್ತವಾಗಿ ಮಾಡುತ್ತಾಳೆ. ತನ್ನ ಪತಿಗೂ ತಿಳಿಯದಂತೆ ಅದನ್ನು ಮಾಡುತ್ತಾಳೆ. ಉಚ್ಚ ಕುಲದ ಬಡವರ ಮಕ್ಕಳಿಗೆ ರೂಪಾಯಿಗಳನ್ನು ಕೊಟ್ಟು ಸಹಾಯ ಮಾಡುತ್ತಾಳೆ. ಇದೇ ಅವಳು ತನ್ನ ಸ್ವಂತಕ್ಕಾಗಿ ಮಾಡುವ ವೆಚ್ಚ. ಪತಿಯಿಂದ ತನಗೆ ಪ್ರತಿ ತಿಂಗಳೂ ದೊರೆತುದನ್ನು ಇದಕ್ಕಾಗಿಯೆ ವೆಚ್ಚ ಮಾಡುತ್ತಾಳೆ. ಆದರೆ ಈ ವೆಚ್ಚದ ಸುದ್ದಿ ಕಚೇರಿಯ ಆಳುಮಕ್ಕಳಿಗೆ ಮಾತ್ರ ಯಾವುದೊ ಬಗೆಯಿಂದ ಗೊತ್ತಾಗುತ್ತಿತ್ತು. ಅವರು ಆಗಾಗ ತಮ್ಮ-ತಮ್ಮಲ್ಲಿ ಈ

ವಿಷಯವನ್ನು ಚರ್ಚಿಸುತಿದ್ದರು. ಮೊದಲಿಗಿಂತಲೂ ಈಗ ಮನೆತನಕ್ಕೆ ಹೆಚ್ಚು ವೆಚ್ಚವಾಗುವುದೆಂದು ದಾಸಿಯರಿಗೂ ತಿಳಿದಿದೆ. ಕಾಳು-ಕಡಿ ಏನೂ ಉಳಿಯುವುದಿಲ್ಲ. ದಾಸದಾಸಿಯರಿಗೆ ಇದರಿಂದ ಅತ್ಯಂತ ವೇದನೆಯಾಗುತ್ತದೆ. ಅವರು ಇವೆಲ್ಲ ಮಾತುಗಳನ್ನು ಜಲದ ಬಾಲೆಗೆ ತಿಳಿಸುತ್ತಾರೆ. ಅವಳು ಒಂದು ರಾತ್ರಿ ತನ್ನ ಪತಿಗೆ ಇದನ್ನೆಲ್ಲ ತಿಳಿಸಿ ಕೇಳಿದಳು 'ನೀವು ಈ ಮನೆಗೆ ಯಾರು? ಇದರಲ್ಲಿ ನಿಮಗೆ ಯಾವ ಅಧಿಕಾರವೂ ಇಲ್ಲವೆ?'

'ಏಕೆ? ಏನಾಗಿದೆ?'

'ದಾಸ-ದಾಸಿಯರಿಗೂ ಗೊತ್ತಾಗಿದೆ. ನಿಮಗೆ ಗೊತ್ತಿಲ್ಲವೆ? ಮಾವನವರಿಗೆ ನಿಮ್ಮ ಹೊಸ ತಾಯಿ ಪ್ರಾಣಕ್ಕಿಂತಲೂ ಪ್ರಿಯಳು. ಅವರು ಅವಳಿಗೆ ಏನೂ ಎನ್ನುವುದಿಲ್ಲ. ಆದರೆ ನೀವು ಹೇಳುವುದು ಉಚಿತವಾದುದು.'

ಮಹೇಂದ್ರನಿಗೆ ಏನೆಂಬುದು ತಿಳಿಯಲಿಲ್ಲ. ಉತ್ಸುಕನಾಗಿ ಕೇಳಿದ 'ಏನು? ಯಾರ ವಿಷಯವಾಗಿ ಹೇಳುತ್ತಿರುವೆ?'

ಜಲದ ಬಾಲೆ ಗಂಭೀರಳಾಗಿ ಪತಿಗೆ ಮಂತ್ರಾಲೋಚನೆ ಹೇಳಲಾರಂಭಿಸಿದಳು. 'ಹೊಸ ತಾಯಿಗೆ ಮಕ್ಕಳುಮರಿಗಳಂತೂ ಇಲ್ಲ. ಎಂದ ಮೇಲೆ ಅವರಿಗೆ ಮನೆಯ ಬಗ್ಗೆ ಪ್ರೇಮ ಹೇಗುಂಟಾದೀತು? ಎಲ್ಲವನ್ನೂ ಸೂರೆಮಾಡುತ್ತಾರೆ. ನೋಡುವುದಿಲ್ಲವೆ?'

'ಏಕೆ? ಹೇಗೆ?' ಎಂದು ಹುಬ್ಬುಗಂಟಿಕ್ಕಿ ಕೇಳಿದ ಮಹೇಂದ್ರ.

'ನಿಮಗೆ ಕಣ್ಣಿದ್ದಿದ್ದರೆ ನೋಡುತಿದ್ದಿರಿ. ಈಗ ಮನೆತನದ ವೆಚ್ಚ ಇಮ್ಮಡಿಯಾಗಿದೆ. ದಾನ-ಧರ್ಮ, ಅತಿಥಿ ಸತ್ಕಾರ ಇತ್ಯಾದಿಗಳಿಗೆ ಮಿತಿ ಮೀರಿ ವೆಚ್ಚವಾಗುತ್ತಿದೆ. ಅವರು ತಮ್ಮ ಪರಲೋಕವನ್ನು ಸಾಧಿಸಿಕೊಳ್ಳುತಿದ್ದಾರೆ. ಆದರೆ ನಿಮ್ಮ ಪ್ರಪಂಚ ಇನ್ನೂ ಬೆಳೆಯುವುದು. ಬಂಡವಾಳವನ್ನು ಕಳೆದುಕೊಂಡು ಬಳಿಕ ತಿರಿದುಕೊಳ್ಳುವಿರೇನು?'

ಮಹೇಂದ್ರ ಹಾಸಿಗೆಯ ಮೇಲೆ ಎದ್ದು ಕುಳಿತು ಕೇಳಿದ 'ನೀನು ಯಾರ ವಿಷಯವನ್ನು ಹೇಳುತ್ತಿರುವೆ? ತಾಯಿಯ ವಿಷಯವಾಗಿಯೆ?'

'ನನ್ನ ದುರ್ಭಾಗ್ಯ; ನಿಮಗೆ ಇದೆಲ್ಲವನ್ನೂ ಹೇಳಬೇಕಾಗಿ ಬಂತು.'

'ಅದರಿಂದಲೇ ನೀನು ನನ್ನ ತಾಯಿಯ ವಿರುದ್ಧ ದೂರು ಹೇಳಲು ಬಂದಿರುವೆಯಾ ?'

ಜಲದ ಬಾಲೆ ಕ್ರೋಧದಿಂದ 'ದೂರು, ಮೊಕದ್ದಮೆಯಿಂದ ನನ ಗೇನು ? ಒಳಗಿನ ಮಾತುಗಳನ್ನು ಮಾತ್ರ ಹೇಳಿದೆ. ಇಲ್ಲದೆ ಹೋದರೆ ಆ ಮೇಲೆ ನೀವು ನನ್ನನ್ನು ದೋಷಿಯನ್ನಾಗಿ ಮಾಡುತಿದ್ದಿರಿ' ಎಂದಳು.

ಮಹೇಂದ್ರ ಸ್ವಲ್ಪ ಹೊತ್ತು ಸುಮ್ಮನೆ ಕುಳಿತು ಬಳಿಕ ಎಂದ 'ನಿಮ್ಮಪ್ಪನ ಮನೆಯಲ್ಲಿ ದಿನಾಲು ಚಿಕ್ಕ ತಪ್ಪಲೆಯನ್ನು ಕೂಡ ಒಲೆಯ ಮೇಲೆ ಏರಿಸುವುದಿಲ್ಲ. ಜಮೀನುದ್ದಾರರ ಮನೆಯ ಕೆಲಸ ನಿನಗೇನು ಗೊತ್ತು ?'

ಅವಳು ಇನ್ನಷ್ಟು ಸಿಟ್ಟಿನಿಂದ 'ಆ ನಿಮ್ಮ ತಾಯಿಯ ಅಪ್ಪನ ಮನೆಯಲ್ಲಿ ಎಷ್ಟು ಅತಿಥಿ-ಶಾಲೆಗಳಿವೆ ಹೇಳಿರಿ ನೋಡೋಣ ?' ಎಂದಳು.

ಮಹೇಂದ್ರ ತರ್ಕವಿತರ್ಕ ಮಾಡಲಿಲ್ಲ; ಮಲಗಿಬಿಟ್ಟ. ಬೆಳಿಗ್ಗೆ ಎದ್ದು ಪಾರ್ವತಿಯ ಬಳಿಗೆ ಬಂದು 'ಎಂತಹಳ ಕೂಡ ನನ್ನ ಮದುವೆ ಮಾಡಿದೆ ಯಮ್ಮಾ ? ಅವಳೊಡನೆ ಸಂಸಾರ ನಡೆಸುವುದು ನನ್ನಿಂದಾಗದು. ನಾನು ನಾಳೆ ಕಲಕತ್ತೆಗೆ ಹೋಗುವೆ' ಎಂದ ಮಹೇಂದ್ರ.

ಪಾರ್ವತಿಗೆ ಅತ್ಯಂತ ಆಶ್ಚರ್ಯವಾಯಿತು. 'ಏಕೆ ?' ಎಂದಳು.

'ನಿಮಗೆ ಅವಳು ಬಿರುನುಡಿಗಳನ್ನಾಡುತ್ತಾಳೆ. ಆದುದರಿಂದ ಅವ ಳನ್ನು ತ್ಯಜಿಸಿಬಿಟ್ಟೆ.'

ಪಾರ್ವತಿ ಹಿರಿಯ ಸೊಸೆಯ ಆಚರಣೆಯನ್ನು ಬಹಳ ದಿನಗಳಿಂದಲೂ ನೋಡುತ್ತಿದ್ದಾಳೆ. ಆದರೆ ಈ ಮಾತನ್ನು ಅವಳು ಬಚ್ಚಿಟ್ಟು 'ಛಿ: ! ಅವಳು ಬಹಳ ಒಳ್ಳೆಯ ಹುಡುಗಿ. ಹೀಗೆನ್ನಬೇಡ !' ಎಂದಳು.

ಬಳಿಕ ಪಾರ್ವತಿ ಜಲದಬಾಲೆಯನ್ನು ಏಕಾಂತದಲ್ಲಿ ಕರೆದು 'ಮಗೂ ಜಗಳವಾಡಿರುವೆಯೇನು ?' ಎಂದು ಕೇಳಿದಳು.

ಬೆಳಗಿನಿಂದಲೇ ತನ್ನ ಪತಿ ಕಲಕತ್ತೆಗೆ ಹೋಗುವ ಸಿದ್ಧತೆಯಲ್ಲಿರು ವುದನ್ನು ತಿಳಿದು ಜಲದಬಾಲೆ ಹೆದರಲಾರಂಭಿಸಿದ್ದಳು. ಅತ್ತೆಯ

ಮಾತನ್ನು ಕೇಳಿ ಅಳುತ್ತ ಎಂದಳು 'ನನ್ನ ತಪ್ಪೇನೂ ಇಲ್ಲಮ್ಮಾ! ಆದರೆ ಈ ದಾಸಿಯರೇ ವೆಚ್ಚದ ಮಾತನ್ನು ಹೇಳಿದ್ದು.'

ಪಾರ್ವತಿ ಆಗ ಎಲ್ಲ ಮಾತುಗಳನ್ನು ಕೇಳಿದಳು. ಬಳಿಕ ನಾಚಿಕೆಯಿಂದ ಸೊಸೆಯ ಕಂಬನಿಗಳನ್ನು ಒರೆಸಿ 'ಮಗೂ, ನೀನು ಹೇಳುವುದು ನಿಜ. ನಾನು ಅಂತಹ ಚತುರ ಗೃಹಿಣಿಯಲ್ಲ. ಆದುದರಿಂದಲೇ ವೆಚ್ಚದ ಕಡೆಗೆ ಲಕ್ಷ್ಯಬೀಳಲಿಲ್ಲ' ಎಂದಳು.

ನಂತರ ಮಹೇಂದ್ರನನ್ನು ಕರೆಯಿಸಿ 'ಮಹೇಂದ್ರ, ಅಪರಾಧವನ್ನು ನೋಡದೆ ಕೋಪಿಸಿಕೊಳ್ಳಬಾರದು. ನೀನು ಪತಿ. ಪತಿಯ ಹಿತಚಿಂತನೆಯು ಹೊರತು ಸ್ತ್ರೀಯರಿಗೆ ಎಲ್ಲವೂ ತುಚ್ಛ. ಅವಳು ಸಾಕ್ಷಾತ್ ಲಕ್ಷ್ಮಿಯಂತಿದ್ದಾಳೆ' ಎಂದಳು.

ಅಂದಿನಿಂದಲೇ ಪಾರ್ವತಿ ತನ್ನ ಕೈ ಬಿಗಿಹಿಡಿದಳು. ಈಗ ಮೊದಲಿನಂತೆ ಅತಿಥಿ ಸೇವೆ ಆಗುವುದಿಲ್ಲ. ಕುರುಡರು, ಕುಂಟರು, ಸಾಧುಗಳು ಹಿಂದಿರುಗಲಾರಂಭಿಸಿದರು. ಭುವನಚೌಧುರಿಯವರು ಪಾರ್ವತಿಯನ್ನು ಕರೆದು 'ಲಕ್ಷ್ಮಿಯ ಭಾಂಡಾರ ಬರಿದಾಯಿತೇನು?' ಎಂದು ಕೇಳಿದರು.

ಪಾರ್ವತಿ ಸಾಹಸದಿಂದ ಉತ್ತರವಿತ್ತಳು. 'ಕೇವಲ ದಾನ ಮಾಡುವುದರಿಂದಲೇ ಕೆಲಸ ಸಾಗದು. ಕೆಲವು ದಿನ ಕೂಡಿಹಾಕಲೂ ಬೇಕು. ಕಾಣುವುದಿಲ್ಲವೆ, ವೆಚ್ಚ ಎಷ್ಟು ಬೆಳೆದಿದೆ?'

'ಇದರಿಂದ ನನಗೇನಾಗಬೇಕಾಗಿದೆ? ಇನ್ನೆಷ್ಟು ದಿನ ನಾನು ಜೀವಿಸಿರುವೆನು? ದಾನ–ಧರ್ಮಮಾಡಿ ಪುಣ್ಯಪಡೆದು ಸದ್ಗತಿಯ ಸಿದ್ಧತೆ ಮಾಡಿಕೊಳ್ಳಬೇಕಾಗಿಲ್ಲವೆ?'

ಪಾರ್ವತಿ ನಕ್ಕು ನುಡಿದಳು 'ಇದು ಬರೇ ಸ್ವಾರ್ಥದ ಮಾತು. ನೀವು ನಿಮ್ಮದನ್ನೆ ನೋಡಿಕೊಳ್ಳುವಿರಿ. ಮಕ್ಕಳು ಮರಿಗಳನ್ನು ಹೊಳೆಯಲ್ಲಿ ಹರಿಯ ಬಿಡುವಿರೇನು? ಸ್ವಲ್ಪ ದಿನ ಸುಮ್ಮನಿರಿ. ಬಳಿಕ ಮೊದಲಿನಂತೆಯೇ ನಡೆಯುವುದು. ಮನುಷ್ಯನ ಬಯಕೆಯ ಕೊನೆ ಎಂದಿಗೂ ಆಗುವುದಿಲ್ಲ.'

ಚೌಧುರಿಯವರು ಸುಮ್ಮನಾದರು.

ಪಾರ್ವತಿಗೆ ಕೆಲಸವೇನೂ ಇರಲಿಲ್ಲ. ಆದುದರಿಂದ ಸ್ವಲ್ಪ ಚಿಂತೆಯೂ ಬೆಳೆಯಿತು. ಆದರೆ ಎಲ್ಲ ಚಿಂತೆಯ ವಿಷಯ ಒಂದೇ ಆಗಿದೆ. ಆಸೆ ಇದ್ದವರ ಚಿಂತೆ ಒಂದು ರೀತಿಯದು. ಆಸೆ ಇಲ್ಲದಿರುವವರದು ಇನ್ನೊಂದು ಬಗೆಯದು. ಮೊದಲನೆಯ ಚಿಂತೆಯಲ್ಲಿ ಜೀವನವಿರುತ್ತದೆ; ಸುಖವಿರುತ್ತದೆ; ತೃಪ್ತಿ ಇರುತ್ತದೆ; ದುಃಖವೂ ಇರುತ್ತದೆ-ಉತ್ಕಂಠೆಯೂ ಇರುತ್ತದೆ. ಇದರಿಂದಲೇ ಮನುಷ್ಯರು ಶ್ರಾಂತರಾಗುತ್ತಾರೆ. ಅದಕ್ಕೋಸ್ಕರ ಅವರು ಹೆಚ್ಚು ಕಾಲ ಚಿಂತೆ ಮಾಡುವುದಿಲ್ಲ. ಆದರೆ ನಿರಾಶೆಯಲ್ಲಿ ಸುಖವಿಲ್ಲ, ದುಃಖವಿಲ್ಲ, ಉತ್ಕಂಠೆಯಿಲ್ಲ. ಆದರೆ ಬರೇ ತೃಪ್ತಿ ಮಾತ್ರ ಇರುತ್ತದೆ. ಕಣ್ಣುಗಳಿಂದ ಕಂಬನಿಗಳು ಹರಿಯುತ್ತವೆ; ಗಾಂಭೀರ್ಯವಿರುತ್ತದೆ. ನಿತ್ಯದಲ್ಲಿ ಹೊಸ ಹೊಸ ಮರ್ಮವೇದನೆಯಾಗುವುದಿಲ್ಲ. ಮನಸ್ಸು ಆಕಾಶದಲ್ಲಿಯ ಮೋಡಗಳಂತೆ ಅತ್ತಿತ್ತ ಹರಿದಾಡುತ್ತಿರುತ್ತದೆ; ಗಾಳಿ ತಗಲುವ ವರೆಗೆ ಸ್ಥಿರವಾಗಿರುತ್ತದೆ. ಗಾಳಿ ತಟ್ಟುತ್ತಲೆ ಇಲ್ಲದಂತಾಗುತ್ತದೆ. ತನ್ಮಯವಾದ ಮನಸ್ಸು ಉದ್ವೇಗ ರಹಿತ ಚಿಂತನೆಯಲ್ಲಿ ಒಂದು ಸಾರ್ಥಕ್ಯವನ್ನು ಪಡೆಯುತ್ತದೆ. ಪಾರ್ವತಿಯ ಸ್ಥಿತಿಯೂ ಸರಿಯಾಗಿ ಇದೇ ರೀತಿಯಾಗಿದೆ. ಪೂಜೆ ಅಥವಾ ಆಹ್ನಿಕ ನಡೆಸಿದಾಗ ಒಮ್ಮೊಮ್ಮೆ ಅವಳ ಅಸ್ಥಿರ, ಉದ್ವೇಗಹೀನ, ಹತಾಶ ಮನಸ್ಸು ತಾಲಸೋನಾಪುರದ ಗಿಡಗಳ ಗುಂಪು, ಮಾವಿನ ತೋಪು, ಪಾಠಶಾಲೆ, ಮನೆ, ಕೆರೆ ಇತ್ಯಾದಿ ಸ್ಥಳಗಳನ್ನು ಸುತ್ತಿಕೊಂಡು ಬರುತ್ತದೆ. ಬಳಿಕ ಅದು ಎಷ್ಟು ಪ್ರಯತ್ನ ಪಟ್ಟರೂ ಸಿಗದಂತಹ ಸ್ಥಳಕ್ಕೆ ಹೋಗಿ ಅಡಗಿಕೊಂಡು ಬಿಡುತ್ತದೆ. ಮೊದಲು ಅಧರಗಳ ಮೇಲೆ ನಸುನಗೆಯೊಂದು ಸುಳಿದಾಡುತ್ತದೆ. ಆದರೆ ತಕ್ಷಣದಲ್ಲಿಯೆ ಕಂಬನಿಯೊಂದು ಪಂಚಪಾತ್ರೆಯ ನೀರಿನಲ್ಲಿ ಬಿದ್ದು, ಕೂಡಿಹೋಗುತ್ತದೆ. ಆದರೂ ದಿನವು ಕಳೆಯುತ್ತದೆ. ಮೊದಲು ಕೆಲಸ–ಬೊಗಸೆಗಳಲ್ಲಿ, ಮಾತು–ಕತೆಗಳಲ್ಲಿ, ಪರೋಪಕಾರ ಸೇವಾ ಶುಶ್ರೂಷೆಗಳಲ್ಲಿ, ದಿನಗಳು ಕಳೆಯುತಿದ್ದುವು. ಈಗ ಅದೆಲ್ಲವನ್ನೂ ಬಿಟ್ಟು ಧ್ಯಾನ–ಮಗ್ನ ಯೋಗಿನಿಯಂತೆ ಕಾಲ ಕಳೆಯುತ್ತಾಳೆ. ಕೆಲವರು ಅವಳಿಗೆ 'ಲಕ್ಷ್ಮಿಯ ಅವತಾರ', 'ಅನ್ನಪೂರ್ಣೆ' ಎನ್ನುತಿದ್ದರು. ಕೆಲವರು 'ಅನ್ಯ ಮನಸ್ಕಳು, ಉನ್ಮಾದಿನಿ' ಎನ್ನುತಿದ್ದರು.

ಆದರೆ ನಿನ್ನೆ ಮುಂಜಾವಿನಿಂದ ಅವಳಲ್ಲಿ ಬೇರೆ ತರದ ಪರಿವರ್ತನೆಯಾದುದು ಕಂಡುಬರುತ್ತದೆ. ಅವಳು ಕೊಂಚ ತೀಕ್ಷ್ಣ ಸ್ವಭಾವದವಳೂ ಕಠೋರಳೂ ಆಗಿದ್ದಾಳೆ. ಪ್ರಶಾಂತ ಗಂಗೆಯಲ್ಲಿ ಅಲೆಯೆದ್ದಂತೆ ಆಗಿದೆ ಅವಳಲ್ಲಿ. ಇದರ ಕಾರಣ ಮನೆಯಲ್ಲಿ ಯಾರಿಗೂ ತಿಳಿದಿಲ್ಲ. ಆದರೆ ನಮಗೆ ಮಾತ್ರ ತಿಳಿದಿದೆ. ಮನೋರಮೆ ಪಾರ್ವತಿಗೆ ಒಂದು ಕಾಗದ ಬರೆದಿದ್ದಾಳೆ. ಅದು ಹೀಗಿದೆ :—

'ಪಾರ್ವತೀ, ಬಹಳ ದಿನಗಳಾದುವು. ಇತ್ತೀಚೆ ನಾವು ಪರಸ್ಪರರು ಕಾಗದವನ್ನೇ ಬರೆದಿಲ್ಲ. ಈ ಬಗ್ಗೆ ನಾವಿಬ್ಬರೂ ದೋಷಿಗಳು. ನಾವಿಬ್ಬರೂ ದೋಷವನ್ನು ಸ್ವೀಕರಿಸಿ ಅಭಿಮಾನವನ್ನು ಬಿಟ್ಟುಬಿಡಬೇಕು. ನಾನು ಸ್ವಲ್ಪ ಹಿರಿಯಳು. ಆದುದರಿಂದ ನಾನೇ ಮೊದಲು ಕ್ಷಮೆ ಬೇಡುತ್ತೇನೆ. ಬೇಗನೆ ಉತ್ತರ ಕೊಡುವಿಯೆಂದು ಆಶಿಸುತ್ತೇನೆ.

'ಸುಮಾರು ಒಂದು ತಿಂಗಳಾಯಿತು ನಾನಿಲ್ಲಿಗೆ ಬಂದು. ನಾವು ಸದ್–ಗೃಹಸ್ಥರ ಮನೆತನದ ಹುಡುಗಿಯರು. ಶಾರೀರಿಕ ಸುಖ–ದುಃಖಗಳ ಕಡೆಗೆ ಅಷ್ಟು ಗಮನ ಕೊಡುವುದಿಲ್ಲ. ಸತ್ತರೆ ಸ್ವರ್ಗ ಕಂಡಳೆನ್ನುತ್ತೇವೆ. ಜೀವಿಸಿದ್ದರೆ ಚೆನ್ನಾಗಿದ್ದೇವೆಂದೂ ಹೇಳುತ್ತೇವೆ. ನಾನೂ ಅದೇ ರೀತಿಯಿಂದ ಚೆನ್ನಾಗಿದ್ದೇನೆ. ಇದು ನನ್ನ ಮಾತಾಯಿತು. ಇನ್ನು ಇತರರ ಮಾತು. ಅಂತಹ ಮಾತಾಗಿರದಿದ್ದರೂ ಒಂದು ಸಂಗತಿಯನ್ನು ನಿನಗೆ ತಿಳಿಸಬೇಕೆಂದು ಬಯಕೆಯಾಗುತ್ತಿದೆ. ನಿನಗೆ ತಿಳಿಸಬೇಕೋ ಬೇಡವೋ ಎಂದು ನಿನ್ನೆಯಿಂದಲೂ ಯೋಚಿಸುತಿದ್ದೇನೆ. ತಿಳಿಸುವುದರಿಂದ ನಿನಗೆ ದುಃಖವಾಗುವುದು. ಆದರೂ ನಾನು ತಿಳಿಸದಿರಲಾರೆ. ಮಾರೀಚನಂತೆ ನನ್ನ ಗತಿಯಾಗಿದೆ. ದೇವದಾಸಬಾಬುಗಳ ಸ್ಥಿತಿಯನ್ನು ಕೇಳಿದರೆ ನಿನಗೆ ಖಂಡಿತವಾಗಿಯೂ ದುಃಖವಾಗುವುದು. ನಿನ್ನನ್ನು ನೆನಿಸಿಕೊಂಡು, ನಿನ್ನ ಮಾತುಗಳನ್ನು ನೆನಿಸಿಕೊಂಡು ಅಳುತ್ತೇನೆ. ಅಳದೆ ಇರಲಾರೆ. ದೇವರು ನಿನ್ನನ್ನು ಪಾರು ಮಾಡಿದ. ಇಲ್ಲದಿದ್ದರೆ ನಿನ್ನಂತಹ ಅಭಿಮಾನಿ ಹುಡುಗಿ ಅವನ ಕೈಯಲ್ಲಿ ಸಿಕ್ಕು ಇಷ್ಟು ಹೊತ್ತಿಗೆ ಗಂಗೆಯಲ್ಲಿ ಮುಳುಗಿಯಾದರೂ ಸಾಯುತಿದ್ದಳು. ಇಲ್ಲವೆ ವಿಷಪಾನ

ಮಾಡಿಯಾದರೂ ಪ್ರಾಣ ಬಿಡುತಿದ್ದಳು. ಅವನ ವಿಷಯವನ್ನು ಇಂದು, ಇಂದಲ್ಲದಿದ್ದರೆ ನಾಳೆಯಾದರೂ ನೀನು ಕೇಳಲೇಬೇಕು. ಏಕೆಂದರೆ ಎಲ್ಲರೂ ತಿಳಿದ ಮಾತನ್ನು ಮುಚ್ಚುವುದರಿಂದ ಲಾಭವಾದರೂ ಏನು?

'ಇಂದಿಗೆ ಐದಾರು ದಿನಗಳಾದುವು. ದೇವದಾಸರು ಇಲ್ಲಿಗೆ ಬಂದಿದ್ದಾರೆ. ಅವರ ತಾಯಿಯವರು ಕಾಶೀವಾಸಕ್ಕೆ ಹೋಗಿದ್ದಾರೆಂದು ನಿನಗೆ ಗೊತ್ತೇ ಇದೆ. ದೇವದಾಸಬಾಬುಗಳು ಕಲಕತ್ತೆಯಲ್ಲಿರುತ್ತಾರೆಂಬುದನ್ನೂ ನೀನು ಬಲ್ಲೆ. ಆದರೆ ಅಣ್ಣನೊಡನೆ ಬರೇ ಜಗಳಾಡುವುದಕ್ಕೂ, ರೂಪಾಯಿಗಳನ್ನು ತೆಗೆದುಕೊಂಡು ಹೋಗುವುದಕ್ಕೂ ಮನೆಗೆ ಬರುತ್ತಾರೆ. ಇದಕ್ಕಾಗಿಯೇ ಆಗಾಗ ಮನೆಗೆ ಬರುತ್ತಾರೆಂದು ನಾನು ಕೇಳಿದ್ದೇನೆ. ರೂಪಾಯಿ ಕೈಗೆ ಸಿಗುವ ವರೆಗೂ ಊರಲ್ಲಿರುತ್ತಾರೆ. ಬಳಿಕ ಹೊರಟುಹೋಗುತ್ತಾರೆ.

'ಅವರ ತಂದೆಯವರು ತೀರಿ ಹೋಗಿ ಎರಡೂವರೆ ವರ್ಷಗಳಾದುವು. ಇಷ್ಟು ಅಲ್ಪಾವಧಿಯಲ್ಲಿಯೆ ತನ್ನ ಅರ್ಧ ಸಂಪತ್ತನ್ನು ಹಾಳು ಮಾಡಿಕೊಂಡಿರುವರೆಂದು ಹೇಳಿದರೆ ಆಶ್ಚರ್ಯವಾಗುತ್ತದೆ. ದ್ವಿಜದಾಸರು ಬಹಳ ಎಚ್ಚರದಿಂದಿದ್ದು ಕೈ ಬಿಗಿಹಿಡಿಯುತ್ತಾರೆ. ಆದುದರಿಂದಲೇ ತಂದೆಯವರು ಕೊಟ್ಟ ಆಸ್ತಿಯನ್ನು ಕಾಯ್ದುಕೊಂಡಿದ್ದಾರೆ. ಇಲ್ಲದಿದ್ದರೆ ಬೇರೆಯವರು ಅದನ್ನು ನುಂಗಿಬಿಡುತಿದ್ದರು. ದೇವದಾಸಬಾಬು ಸರಾಯಿ ಮತ್ತು ವೇಶ್ಯೆಯರಿಗಾಗಿ ಧನವನ್ನು ಹೊಳೆಯಂತೆ ಹರಿಸುತಿದ್ದಾರೆ. ಇದನ್ನು ಯಾರು ಬಿಡಿಸಬಹುದು?—ಬಿಡಿಸಿದರೆ ಯಮನೇ ಬಿಡಿಸಬೇಕು. ಆದರೆ ಅದಕ್ಕೆ ಇನ್ನೂ ಸಮಯಬೇಕು. ಅದೂ ದೂರವಿದೆ! ಅವರೊಡನೆ ನಿನ್ನ ಮದುವೆಯಾಗದಿದ್ದುದೇ ಬಹಳ ಚೆನ್ನಾಯಿತು.

'ಹಾಯ್ ಹಾಯ್! ದೇವದಾಸಬಾಬುಗಳನ್ನು ನೋಡಿದರೆ ದುಃಖವೂ ಆಗುತ್ತದೆ. ಬಂಗಾರದಂತಹ ಆ ಬಣ್ಣವಿಲ್ಲ, ಆ ರೂಪವಿಲ್ಲ, ಆ ಕಾಂತಿಯಿಲ್ಲ. ಅವರು ದೇವದಾಸರಲ್ಲ, ಪರಕೀಯರಾರೊ ಎಂಬಂತೆ ತೋರುತ್ತಾರೆ. ಒಣಗಿದ ಕೂದಲು ಗಾಳಿಯಲ್ಲಿ ಹಾರಾಡುತ್ತಿರುತ್ತವೆ.

ಕಣ್ಣುಗಳು ಒಳಸಿಕ್ಕಿವೆ. ಮೂಗು ಖಡ್ಗದಂತೆ ಹೊರಗೆ ಎದ್ದು ಕಾಣು ತ್ತಿದೆ. ಅವರ ರೂಪವೆಷ್ಟು ಅಸಹ್ಯವಾಗಿದೆ ಗೊತ್ತೆ? ನೋಡಿದರೆ ತಿರಸ್ಕಾರವುಂಟಾಗುತ್ತದೆ; ಹೆದರಿಕೆಯಾಗುತ್ತದೆ. ಇಡೀ ದಿನವೂ ನದಿಯ ತೀರದ ಮೇಲೆ ಇಲ್ಲವೆ ಕೆರೆಯ ದಂಡೆಯ ಮೇಲೆ ಕೈಯಲ್ಲಿ ಬಂದೂಕು ಹಿಡಿದುಕೊಂಡು ತಿರುಗುತ್ತಾರೆ; ಪಕ್ಷಿಗಳನ್ನು ಕೊಲ್ಲುತ್ತಾರೆ. ಬಿಸಿಲಿನಿಂದ ಬಳಲಿದ ಮೇಲೆ, ತಲೆಗೆ ಬಿಸಿ ತಗುಲಿದ ಮೇಲೆ, ಕಣ್ಣು ಕತ್ತಲು ಗೂಡಿಸುತ್ತಿದ್ದಾಗ, ಅಲ್ಲಿಯೆ ಇದ್ದ ಒಂದು ಮರದ ನೆಳಲಿನಲ್ಲಿ ಬಂದು ತಲೆ ಕೆಳಗೆ ಹಾಕಿಕೊಂಡು ಕುಳಿತುಕೊಂಡಿರುತ್ತಾರೆ. ಸಂಜೆಯಾದ ಮೇಲೆ ಮನೆಗೆ ಹೋಗಿ ಚೆನ್ನಾಗಿ ಸರಾಯಿ ಕುಡಿಯುತ್ತಾರೆ. ರಾತ್ರಿ ಮಲಗಿ ಕೊಳ್ಳುತ್ತಾರೊ ತಿರುಗಾಡಲು ಹೋಗುತ್ತಾರೊ ಪರಮಾತ್ಮನೇ ಬಲ್ಲ.

'ಆ ದಿನ ನೀರು ತರಲು ನಾನು ಕೆರೆಗೆ ಹೋದೆ. ಕೈಯಲ್ಲಿ ಬಂದೂಕು ಹಿಡಿದುಕೊಂಡು ಅವರು ಅತ್ತಿತ್ತ ತಿರುಗಾಡುವುದನ್ನೂ, ಅವರ ಮುಖ ಬಾಡಿ ಬತ್ತಿರುವುದನ್ನೂ ನೋಡಿದೆ. ನನ್ನನ್ನು ಗುರುತಿಸಿ ನನ್ನ ಬಳಿಗೆ ಬಂದು ನಿಂತರು. ನಾನು ಹೆದರಿಕೆಯಿಂದ ಸತ್ತೇಹೋದೆ! ಕೆರೆಯ ಕಟ್ಟೆಯ ಮೇಲೆ ಯಾರೂ ಇರಲಿಲ್ಲ. ಆಗ ನನ್ನ ಮೈಮೇಲೆ ಎಚ್ಚರವೇ ಇಲ್ಲದಂತಾಯಿತು. ದೇವರು ಕಾಪಾಡಿದ. ಅಂದು ಅವರು ನನ್ನೊಡನೆ ಯಾವ ತರಹದ ಕೆಟ್ಟ ನಡತೆಯಿಂದಲೂ ನಡೆಯಲಿಲ್ಲ. ಒಳ್ಳೇ ಸಜ್ಜನರಂತೆ ಶಾಂತ ಭಾವದಿಂದ ಕೇಳಿದರು 'ಮನೊ, ಚೆನ್ನಾಗಿರುವೆಯಾ?' ಎಂದು.

'ನಾನೇನು ಹೇಳಬಲ್ಲೆ? ಅಂಜುತ್ತ ಅಂಜುತ್ತ ತಲೆ ಬಾಗಿಸಿಕೊಂಡೆ ಎಂದೆ 'ಚೆನ್ನಾಗಿದ್ದೇನೆ.'

'ಆಗ ಅವರು ದೀರ್ಘವಾದ ಒಂದು ಉಸಿರು ಬಿಟ್ಟು 'ಸುಖಿಯಾಗಿರು ತಂಗೀ! ನಿನ್ನನ್ನು ಕಂಡು ನನಗೆ ಬಹಳ ಹರ್ಷವಾಯಿತು' ಎಂದು ಮೆಲ್ಲನೆ ಹೊರಟು ಹೋದರು. ನಾನು ಅಲ್ಲಿಂದ ಎಡವುತ್ತ ಬೀಳುತ್ತ ಸರಸರನೆ ಓಡಿದೆ. ಅಯ್ಯೋ! ನನ್ನ ಸೌಭಾಗ್ಯ, ಅವರು ನನ್ನ

ಮ್ಮೆ ಮುಟ್ಟಲಿಲ್ಲ. ಇರಲಿ ಈ ಮಾತುಗಳು. ಈ ಎಲ್ಲ ದುರ್ವೃತ್ತಿಯ ವಿಷಯವನ್ನೆಲ್ಲ ಬರೆಯಲು ಈ ಕಾಗದದಲ್ಲಿ ಸ್ಥಳವಿಲ್ಲ.

'ಬಹಳ ತೊಂದರೆ ಕೊಟ್ಟೆನಲ್ಲವೆ ತಂಗೀ ? ಇಂದಿಗೂ ನೀನು ಅವರನ್ನು ಮರೆಯದೆ ಇದ್ದರೆ ನಿನಗೆ ಬಹಳ ಕಷ್ಟವಾಗುವುದು. ಮಾಡುವುದೇನು ? ಏನಾದರೂ ಅಸಾವಧಾನದಿಂದ ಅಪರಾಧವಾಗಿದ್ದರೆ ನಿನ್ನ ಸಹಜಗುಣದಿಂದ ಈ ಸ್ನೇಹಾಕಾಂಕ್ಷಿಣೀ ಮನೋರಮೆಯನ್ನು ಕ್ಷಮಿಸಿ ಬಿಡು.'

ನಿನ್ನೆ ಕಾಗದ ಬಂದಿತ್ತು. ಇಂದು ಅವಳು ಮಹೇಂದ್ರನನ್ನು ಕರೆದು 'ಎರಡು ಪಲ್ಲಕ್ಕಿ ಮತ್ತು ಇಪ್ಪತ್ತು ಜನ ಆಳುಮಕ್ಕಳನ್ನು ಕಳಿಸು. ನಾನು ಈಗಲೇ ತಾಲಸೋನಾಪುರಕ್ಕೆ ಹೋಗಬೇಕಾಗಿದೆ' ಎಂದಳು.

ಮಹೇಂದ್ರ ಆಶ್ಚರ್ಯದಿಂದ 'ಪಲ್ಲಕ್ಕಿ ಮತ್ತು ಆಳುಮನುಷ್ಯರನ್ನು ಕಳಿಸುವೆ. ಆದರೆ ಏತಕ್ಕೆ ?' ಎಂದು ಕೇಳಿದ.

'ನೀನೂ ಜೊತೆಯಲ್ಲಿ ಬರಬೇಕು. ಮಧ್ಯದಲ್ಲಿಯೇ ನಾನು ಪ್ರಾಣ ಬಿಟ್ಟರೆ ನನಗೆ ಬೆಂಕಿಕೊಡಲು ನನ್ನ ಹಿರಿಯ ಮಗನು ಇರಬೇಕು.'

ಮಹೇಂದ್ರ ಏನೂ ಹೇಳಲಿಲ್ಲ. ಪಲ್ಲಕ್ಕಿ, ಆಳುಮಕ್ಕಳು ಬಂದರು. ಇಬ್ಬರೂ ಹೊರಟರು.

ಚೌಧುರಿಯವರಿಗೆ ಇದನ್ನು ಕೇಳಿ ಬಹಳ ದುಃಖವಾಯಿತು. ದಾಸ-ದಾಸಿಯರನ್ನು ವಿಚಾರಿಸಿದರು. ಯಾರೂ ಸರಿಯಾದ ಕಾರಣವನ್ನು ಹೇಳದಾದರು. ಆದರೂ ಚೌಧುರಿಯವರು ಮತ್ತೆ ಐವರು ಆಳುಗಳನ್ನೂ ದಾಸ–ದಾಸಿಯರನ್ನೂ ಕಳಿಸಿದರು.

ಒಬ್ಬ ಆಳು ಕೇಳಿದ 'ದಾರಿಯಲ್ಲಿ ಬೆಟ್ಟಿಯಾದರೆ ಪಲ್ಲಕ್ಕಿಯನ್ನು ಹಿಂದಿರುಗಿಸಬೇಕೆ ?'

'ಇಲ್ಲ. ಹಿಂದಿರುಗಿ ತರುವ ಕಾರಣವಿಲ್ಲ, ನೀವು ಜೊತೆಯಲ್ಲಿಯೇ ಹೋಗಬೇಕು. ಅವರಿಗೆ ತೊಂದರೆಯಾಗದಂತೆ ದಕ್ಷತೆಯಿಂದ, ಎಚ್ಚರದಿಂದ ಇರಬೇಕು.'

ಅದೇ ದಿನ ಹೊತ್ತುಮುಳುಗಿದ ಬಳಿಕ ಎರಡೂ ಪಲ್ಲಕ್ಕಿಗಳು ತಾಲ ಸೋನಾಪುರವನ್ನು ತಲುಪಿದುವು. ಆದರೆ ದೇವದಾಸ ಊರಲ್ಲಿರಲಿಲ್ಲ. ಅದೇ ದಿನ ಮಧ್ಯಾಹ್ನ ಕಲಕತ್ತೆಗೆ ಹೋಗಿಬಿಟ್ಟಿದ್ದ.

'ನನ್ನ ದುರ್ಭಾಗ್ಯ!' ಎಂದು ಪಾರ್ವತಿ ಹಣೆ ಹಣೆ ಬಡೆದು ಕೊಂಡಳು. ಬಳಿಕ ಮನೋರಮೆಯನ್ನು ಕಂಡಳು.

'ದೇವದಾಸನನ್ನು ಕಾಣಲು ಬಂದಿದ್ದೆಯಾ?'

'ಇಲ್ಲ, ಜೊತೆಯಲ್ಲಿ ಕರೆದುಕೊಂಡು ಹೋಗಲು ಬಂದಿದ್ದೆ. ಅವರ ಆಪ್ತರು ಇಷ್ಟರು ಯಾರೂ ಇಲ್ಲಿ ಇಲ್ಲ.'

'ಏನು ಹೇಳುತ್ತೀಯಾ? ಸ್ವಲ್ಪಾದರೂ ನಾಚಿಕೆ ಬರುವುದಿಲ್ಲವೆ?' ಎಂದಳು ಮನೋರಮಾ ಅತ್ಯಾಶ್ಚರ್ಯದಿಂದ.

'ನಾಚಿಕೆಯೆ? ನನ್ನ ವಸ್ತುವನ್ನು ನನ್ನ ಜೊತೆಯಲ್ಲಿ ಕರೆದು ಕೊಂಡು ಹೋಗುವೆ. ಇದರಲ್ಲಿ ನಾಚಿಕೆಯೇನು?'

'ಛೀ! ಛೀ! ಏನು ನುಡಿಯುವೆ? ಸ್ವಲ್ಪವೂ ಸಂಬಂಧವಿಲ್ಲ-ಇಂತಹ ಮಾತುಗಳನ್ನಾಡಬೇಡ!'

ಪಾರ್ವತಿ ಮಲಿನ ನಗೆಯಿಂದ 'ಮನೋರಮಾ, ನನ್ನಲ್ಲಿ ತಿಳುವಳಿಕೆ ಹುಟ್ಟಿದಾಗಿನಿಂದಲೂ ನನ್ನ ಮನಸ್ಸಿನಲ್ಲಿ ಆ ಮಾತು ಸ್ಥಿರವಾಗಿ, ಒಂದೊಂದು ಸಾರೆ ಬಾಯಿಂದ ಹೊರಬೀಳುವುದು ಸಹಜವಾದದ್ದೆ! ಅಂತೆಯೆ ನೀನದನ್ನು ಕೇಳುವ ಪ್ರಸಂಗ ಬಂದಿತು' ಎಂದಳು.

ಮರುದಿನ ಪಾರ್ವತಿ ತಂದೆ-ತಾಯಿಗಳಿಗೆ ನಮಸ್ಕರಿಸಿ ಪಲ್ಲಕ್ಕಿ ಯಲ್ಲಿ ಕುಳಿತು ತನ್ನ ಊರಿಗೆ ಹೊರಟುಹೋದಳು.

## ೧೫

ಇಂದಿಗೆ ಎರಡು ವರ್ಷಗಳಾದುವು. ಚಂದ್ರಮುಖಿ ತಾನು ವಾಸಿಸುವುದಕ್ಕಾಗಿ ಅಶಥಝುರೀ ಗ್ರಾಮದ, ಚಿಕ್ಕ ನದೀ ತೀರದ ಎತ್ತರವಾದ ಸ್ಥಾನದಲ್ಲಿ ಎರಡು ಚಿಕ್ಕ ಗುಡಿಸಿಲುಗಳನ್ನು ಕಟ್ಟಿಸಿಕೊಂಡಿದ್ದಾಳೆ. ಬಳಿಯಲ್ಲಿಯೆ ದನದ ಮನೆ. ಅಲ್ಲಿಯೆ ಅವಳ ಹೃಷ್ಟ–ಪುಷ್ಟವಾದ ಕರಿಯ ಆಕಳು ಕಟ್ಟಲ್ಪಟ್ಟಿದೆ. ಒಂದು ಗುಡಿಸಲು ಅಡಿಗೆಮನೆಯಾಗಿದೆ. ಇನ್ನೊಂದರಲ್ಲಿ ಅವಳು ಮಲಗುತ್ತಾಳೆ. ಬೆಳಿಗ್ಗೆ ಆಳುಮಗನ ಹೆಂಡತಿ ಮನೆಯ ಕಸ ಗುಡಿಸಿ ಸ್ವಚ್ಛ ಮಾಡುತ್ತಾಳೆ. ಮನೆಯ ಸುತ್ತಲೂ ಬೇಲಿ ಇದೆ. ಮಧ್ಯದಲ್ಲಿ ಒಂದು ಬೋರೇಹಣ್ಣಿನ ಮರವಿದೆ. ಒಂದು ಪಕ್ಕದಲ್ಲಿ ತುಲಸೀಕಟ್ಟೆ ಇದೆ. ಎದುರಿನಲ್ಲಿ ನದಿಯ ಪ್ರವಾಹ. ಅದರ ಬಳಿಯಲ್ಲಿಯೇ ಖರ್ಜೂರದ ಮತ್ತು ಬಾಳೆಯ ಗಿಡಗಳನ್ನು ಬೆಳಸಿದ್ದಾರೆ. ಚಂದ್ರಮುಖಿಯ ಹೊರತು ಈ ಘಟ್ಟದ ಉಪಯೋಗವನ್ನು ಯಾರೂ ಮಾಡುವುದಿಲ್ಲ. ಮಳೆಗಾಲದಲ್ಲಿ ನದಿಗೆ ನೆರೆ ಬಂದಾಗ ನೀರು ಚಂದ್ರಮುಖಿಯ ಮನೆಯ ಬೇಲಿಯ ವರೆಗೂ ಬರುತ್ತದೆ. ಆಗ ಜನರು ಹೌಹಾರಿ ಭೂಮಿಯನ್ನು ಎತ್ತರ ಮಾಡುವುದಕ್ಕೆ ಸಲಿಕೆ ಗುದ್ದಲಿ ತೆಗೆದುಕೊಂಡು ಓಡಿ ಬರುತ್ತಾರೆ. ಆ ಗ್ರಾಮದಲ್ಲಿ ಉಚ್ಚ ಜಾತಿಯವರಾರೂ ಇಲ್ಲ. ಅಲ್ಲಿ ಇರುವುದು ಒಕ್ಕಲಿಗರು, ಗೌಡರು, ಒಡ್ಡರು, ತಳವಾರರು ಮತ್ತು ಮಾದರು. ಚಂದ್ರಮುಖಿ ಈ ಊರಿಗೆ ಬಂದ ಮೇಲೆ ತನ್ನ ಇಲ್ಲಿಯ ವಾಸದ ಸುದ್ದಿಯನ್ನು ದೇವದಾಸನಿಗೆ ತಿಳಿಸಿದಳು. ಉತ್ತರ ಬರೆಯದೆ ಅವನು ಮತ್ತೆ ರೂಪಾಯಿಗಳನ್ನು ಕಳಿಸಿಕೊಟ್ಟ. ಈ ರೂಪಾಯಿಗಳನ್ನೆ ತನ್ನ ಬಂಡವಲು ಮಾಡಿಕೊಂಡು ಜನರಿಗೆ ಚಂದ್ರಮುಖಿ ಸಾಲ ಕೊಡುತ್ತಾಳೆ. ಜನರು ತಮ್ಮ ಆಪತ್ತು–ವಿಪತ್ತುಗಳಲ್ಲಿ ಅವಳಿಂದಲೇ ಸಾಲ ತೆಗೆಯುತ್ತಾರೆ. ಅವಳು ಬಡ್ಡಿಯನ್ನು ಮಾತ್ರ ತೆಗೆದುಕೊಳ್ಳುವುದಿಲ್ಲ.

ಅದರ ಬದಲು ಜನರು ತಮಗೆ ಇಚ್ಛೆಯಾದಂತೆ ಅವಳಿಗೆ ಕಾಯಿಪಲ್ಲೆಗಳನ್ನು ಕೊಡುತ್ತಾರೆ. ಅಸಲಿನ ವಸೂಲಿಯಲ್ಲಿಯೂ ಬಲಾತ್ಕಾರ ಮಾಡುವುದಿಲ್ಲ. ಕೊಡಲು ಸಮರ್ಥರಿದ್ದವರು ತಾವೇ ತಂದು ಕೊಡುತ್ತಾರೆ; ಇಲ್ಲದಿದ್ದವರು ಇಲ್ಲ.

'ಇನ್ನು ನಾನು ನಿಮಗೆ ಸಾಲಕೊಡುವುದಿಲ್ಲ' ಎಂದು ತಂದು ಕೊಡದಿದ್ದವರಿಗೆ ನಸುನಕ್ಕು ಹೇಳುತ್ತಾಳೆ. ಆಗ ಅವರು ನಮ್ರಭಾವದಿಂದ 'ಈ ಸಲ ಬೆಳೆ ಚೆನ್ನಾಗಿ ಬರಲೆಂದು ಹರಸಮ್ಮಾ' ಎನ್ನುತ್ತಾರೆ.

ಚಂದ್ರಮುಖಿ ಆಶೀರ್ವದಿಸುತ್ತಾಳೆ. ಒಂದು ವೇಳೆ ಬೆಳೆ ಬರದಿದ್ದರೆ ಅವರು ಅಳುತ್ತ ಬಂದು ಬೇಡುತ್ತಾರೆ. ಚಂದ್ರಮುಖಿ ಪುನಃ ಸಾಲ ಕೊಡುತ್ತಾಳೆ. ಅವಳು ಮನದಲ್ಲಿಯೆ ನಕ್ಕು ಎಂದುಕೊಳ್ಳುತ್ತಾಳೆ 'ಅವರು ಸುಖದಿಂದ ಇರಲಿ! ನನಗೆಲ್ಲಿದೆ ಹಣದ ಕೊರತೆ?'

ಆದರೆ ದೇವದಾಸನೆಲ್ಲಿದ್ದಾನೆ? ಸುಮಾರು ಆರು ತಿಂಗಳಾಯಿತು. ಅವನ ಸುದ್ದಿಯಿಲ್ಲ. ಕಾಗದ ಬರೆದಳು. ಉತ್ತರ ಬರಲಿಲ್ಲ. ರೆಜಿಸ್ಟರ್ ಮಾಡಿದಳು. ಅದು ತಿರಿಗಿ ಬಂದಿತು. ಚಂದ್ರಮುಖಿ ತನ್ನ ಮನೆಯ ಬಳಿಯಲ್ಲಿಯೇ ಒಬ್ಬ ಗೌಳಿಗನಿಗೂ ಅನುಕೂಲ ಮಾಡಿ ಕೊಟ್ಟಿದ್ದಳು. ಅವನ ಮಗನ ಮದುವೆಯ ವೆಚ್ಚವನ್ನು ಅವಳೆ ಮಾಡಿದುದಲ್ಲದೆ ಒಂದು ಜೋಡು ಬಂಗಾರದ ಬಳೆಯನ್ನೂ ಮಾಡಿಸಿ ಕೊಟ್ಟಿದ್ದಳು. ಆದರಿಂದ ಆ ಗೌಳಿಗನ ಪರಿವಾರವೆಲ್ಲ ಅವಳ ಆಶ್ರಯದಲ್ಲಿದ್ದುಕೊಂಡು ಅವಳು ಹೇಳಿದುದನ್ನು ಮಾಡುತಿತ್ತು. ಒಂದು ದಿನ ಮುಂಜಾನೆ ಚಂದ್ರಮುಖಿ ಆ ಗೌಳಿಗನನ್ನು ಕರೆದು ಕೇಳಿದಳು 'ಭೈರವ, ಇಲ್ಲಿಂದ ತಾಲಸೋನಾಪುರ ಎಷ್ಟು ದೂರದಲ್ಲಿದೆ?'

ಭೈರವ ಸ್ವಲ್ಪ ಯೋಚಿಸಿ 'ಸುಮಾರು ಎರಡು ಗಾವುದ ಇರಬಹುದಮ್ಮಾ' ಎಂದ.

'ಅಲ್ಲಿ ಜಮೀನುದಾರರಿರುವರೆ?'

'ಹೌದು. ಬಹಳ ದೊಡ್ಡ ಜಮೀನುದಾರರು. ಆ ಊರೆಲ್ಲವೂ ಅವರದೇ. ಅವರು ತೀರಿಕೊಂಡು ಬಹಳ ವರ್ಷಗಳಾದುವು. ಅವರ

ಶ್ರಾದ್ಧದಲ್ಲಿ ಅವರ ಪ್ರಜೆಗಳು ಒಂದು ತಿಂಗಳ ವರೆಗೆ ದಿನಂಪ್ರತಿ ಪುರಿ ಪಲ್ಲೆಯನ್ನು ತಿಂದಿದ್ದರು! ಅವರಿಗೆ ಇಬ್ಬರು ಮಕ್ಕಳು. ಅವರೂ ಬಹಳ ದಯಾಳುಗಳು!'

'ನನ್ನನ್ನು ಅಲ್ಲಿಯ ವರೆಗೆ ಕರೆದೊಯ್ದು ಮುಟ್ಟಿಸುವೆಯಾ?'

'ಏಕೆ ಮುಟ್ಟಿಸಲಾರೆನಮ್ಮಾ? ನಿಮಗೆ ಎಂದು ಹೋಗಬೇಕೊ ಹೇಳಿ. ಮುಟ್ಟಿಸಿ ಬರುತ್ತೇನೆ.'

'ಹಾಗಾದರೆ ನಡೆ, ನಾನು ಇಂದೇ ಹೊರಡುವೆ.'

ಭೈರವ ವಿಸ್ಮಯದಿಂದ 'ಇಂದೆ?' ಎಂದು ಪುನಃ ಚಂದ್ರಮುಖಿಯ ಮುಖದ ಕಡೆಗೆ ನೋಡಿ 'ಹಾಗಾದರೆ ನೀವು ಬೇಗನೆ ಊಟ-ಉಡಿಗೆ ಮುಗಿಸಿಕೊಳ್ಳಿ. ನಾನು ಅಲ್ಲಿಯ ವರೆಗೆ ಸ್ವಲ್ಪ ಬುತ್ತಿ ಕಟ್ಟಿಕೊಂಡು ಬರುತ್ತೇನೆ' ಎಂದು ಹೇಳಿದ.

'ಇಂದು ನಾನು ಅಡಿಗೆ ಮಾಡುವುದಿಲ್ಲ. ಭೈರವ, ನೀನು ಬುತ್ತಿ ಕಟ್ಟಿಕೊಂಡು ಬಾ.'

ಭೈರವ ಮನೆಗೆ ಹೋಗಿ ಪಂಚೆಯಲ್ಲಿ ಬುತ್ತಿ ಕಟ್ಟಿಕೊಂಡು ಕೂಡಲೇ ಕೈಯಲ್ಲೊಂದು ಕೋಲನ್ನು ತೆಗೆದುಕೊಂಡು ಬಂದು 'ಹೊರಡಿ ಅಮ್ಮಾ! ನೀವು ಊಟ ಮಾಡುವುದಿಲ್ಲವೆ?' ಎಂದ.

'ಇಲ್ಲ ಭೈರವ; ನನ್ನ ಪಾಠ, ಪೂಜೆ ಇನ್ನೂ ಮುಗಿದಿಲ್ಲ. ಹೊತ್ತು ಸಿಕ್ಕರೆ ಅಲ್ಲಿಯೇ ಎಲ್ಲವನ್ನೂ ಮುಗಿಸುವೆ.'

ದಾರಿ ತೋರಿಸುತ್ತ ಭೈರವ ಮುಂದೆ ಮುಂದೆ ನಡೆದ. ಚಂದ್ರಮುಖಿ ಅತ್ಯಂತ ಕಷ್ಟದಿಂದ ಕಾಲುದಾರಿಯನ್ನು ನಡೆಯಲಾರಂಭಿಸಿದಳು. ರೂಢಿಯಿಲ್ಲದುದರಿಂದ ಅವಳ ಎರಡೂ ಕೋಮಲ ಪಾದಗಳು ಕ್ಷತ-ವಿಕ್ಷತವಾದುವು. ಅವಳ ಮುಖವೆಲ್ಲ ಬಿಸಿಲಿನಿಂದ ಇನ್ನಷ್ಟು ಕೆಂಪಗಾಯಿತು. ಊಟ ಮಾಡಿರದಿದ್ದರೂ ಚಂದ್ರಮುಖಿ ಹಾಗೆಯೇ ಸಾಗಿದ್ದಳು. ಒಕ್ಕಲಿಗರು ಆಶ್ಚರ್ಯಚಕಿತರಾಗಿ ಅವಳ ಮುಖವನ್ನೆ ನೋಡುತ್ತ ನಿಂತಿದ್ದರು.

ಚಂದ್ರಮುಖಿ ಒಂದು ನಸುಗೆಂಪಾದ ಸೀರೆಯನ್ನುಟ್ಟಿದ್ದಳು. ಕೈಯಲ್ಲಿ ಎರಡು ಬಳೆಗಳಿದ್ದುವು. ಹಣೆಯ ವರೆಗೂ ತಲೆಯ ಮೇಲೆ ಸೆರಗಿತ್ತು. ಇಡೀ ದೇಹ ಒಂದು ದಪ್ಪವಾದ ಉಪ್ಪರಣೆಯಿಂದ ಮುಚ್ಚಲ್ಪಟ್ಟಿತ್ತು. ಸೂರ್ಯಾಸ್ತಕ್ಕೆ ಇನ್ನು ಬಹಳ ಹೊತ್ತು ಉಳಿದಿರಲಿಲ್ಲ. ಆಗ ಇಬ್ಬರೂ ಊರನ್ನು ಪ್ರವೇಶಿಸಿದರು. ಚಂದ್ರಮುಖಿ ನಕ್ಕು 'ಭೈರವ, ಎರಡು ಗಾವುದ ದಾರಿ ಇಷ್ಟು ಬೇಗ ಹೇಗೆ ತೀರಿತು?' ಎಂದಳು.

ಅವನಿಗೆ ಈ ಪರಿಹಾಸ ತಿಳಿಯಲಿಲ್ಲ. ಅವನು ಸರಲ ಭಾವದಿಂದ 'ಅಂತೂ ನಾವು ಬಂದುಬಿಟ್ಟೆವಲ್ಲ! ಸುಖದಿಂದ ಬೆಳೆದ ನೀವು ಇಂದೇ ಹಿಂದಿರುಗಲು ಸಮರ್ಥರಿರುವಿರಾ?' ಎಂದ.

'ಇಂದೇ? ನಾಳೆಯೂ ನಾನು ಇಷ್ಟು ಹಾದಿಯನ್ನು ನಡೆಯಲಾರೆ' ಹೀಗೆ ಮನದಲ್ಲೆಂದುಕೊಂಡು 'ಭೈರವ, ಇಲ್ಲಿ ಗಾಡಿಗಳು ಸಿಕ್ಕುವುದಿಲ್ಲವೇ?' ಎಂದು ಕೇಳಿದಳು.

'ಸಿಗದೆ ಏನು? ಇಲ್ಲಿ ಎತ್ತಿನ ಗಾಡಿ ಸಿಗಬಹುದು. ಅಪ್ಪಣೆ ಕೊಟ್ಟರೆ ಗಾಡಿ ತರುವೆ' ಎಂದ.

ಗಾಡಿಯನ್ನು ತರಲು ಅವನಿಗೆ ಅಪ್ಪಣೆ ಕೊಟ್ಟು ಚಂದ್ರಮುಖಿ ಜಮೀನುದಾರರ ಮನೆ ಹೊಕ್ಕಳು.

ಭೈರವ ಗಾಡಿಯ ವ್ಯವಸ್ಥೆ ಮಾಡಲು ಹೊರಟುಹೋದ. ಇತ್ತ ಚಂದ್ರಮುಖಿ, ದಾಸಿಯೊಡನೆ ಮನೆಯ ಮೇಲ್ಭಾಗದಲ್ಲಿ ಕುಳಿತ, ಸದ್ಯದ ಜಮೀನುದಾರರ ಹೆಂಡತಿಯ ಬಳಿಗೆ ಹೋದಳು. ಚಂದ್ರಮುಖಿಯನ್ನು ಅಲ್ಲಿಗೇ ಕರೆತರಲು ಹೇಳಿದುದರಿಂದ ದಾಸಿ ಅಲ್ಲಿಗೇ ಕರೆದುಕೊಂಡು ಹೋದಳು. ಇಬ್ಬರೂ ಪರಸ್ಪರರನ್ನು ಲಕ್ಷ್ಯಪೂರ್ವಕವಾಗಿ ಒಂದು ಸಲ ನೋಡಿದರು.

ಚಂದ್ರಮುಖಿ ನಮಸ್ಕರಿಸಿದಳು. ಜಮೀನುದಾರರ ಹೆಂಡತಿ ಬಹಳ ಆಭರಣಗಳನ್ನು ಧರಿಸಿರಲಿಲ್ಲ. ಆದರೆ ಕಣ್ಣಿನ ಕುಡಿಯೊಳಗಿಂದ ಅಹಂಕಾರ ಮಾತ್ರ ಹೊರಹೊಮ್ಮುತ್ತಿತ್ತು. ಎರಡೂ ತುಟಿಗಳೂ,

ಹಲ್ಲುಗಳೂ, ತಾಂಬೂಲ ಸೇವನೆಯಿಂದ ಕೆಂಪಾಗಿದ್ದುವು. ತಾಂಬೂಲ ತುಂಬಿದ್ದುದರಿಂದಲೋ ಏನೋ? ಎರಡೂ ಗಲ್ಲಗಳು ಸ್ವಲ್ಪ ಉಬ್ಬಿದ್ದುವು. ಕೂದಲುಗಳನ್ನು ಚೆನ್ನಾಗಿ ಬಿಗಿದು ಕಟ್ಟಿಕೊಂಡಿದ್ದುದರಿಂದ ಮುಡಿ ನೆತ್ತಿಗೆ ಬಂದಿತ್ತು. ಎರಡೂ ಕಿವಿಗಳಲ್ಲಿ ಬಹು ಮೂಲ್ಯದ ಓಲೆಗಳಿದ್ದುವು. ಮೂಗಿನ ತುದಿಯಲ್ಲೊಂದು ಬುಲಾಕು. ಮೂಗಿನ ಮತ್ತೊಂದು ಕಡೆಯ ತೂತಿನಲ್ಲಿ ಬೇವಿನ ಕಡ್ಡಿ ಇತ್ತು. ಈ ತೂತು ನತ್ತಿನ ಸಲುವಾಗಿ ಎಂಬಂತೆ ತೋರುತ್ತದೆ.

ಚಂದ್ರಮುಖಿ ಹಿರಿಯ ಸೊಸೆಯನ್ನು ನೋಡಿದಳು. ಬಹಳ ದಪ್ಪಗಿದ್ದಾಳೆ. ಬಣ್ಣ ವಿಶೇಷ ಶ್ಯಾಮಲ. ಕಣ್ಣುಗಳು ದೊಡ್ಡವು. ದುಂಡಗಿನ ಮುಖ. ಕರಿಯ ಸೀರೆಯನ್ನುಟ್ಟಿದ್ದಾಳೆ. ಕಿತ್ತಳೆ ಬಣ್ಣದ ಕುಪ್ಪುಸ ತೊಟ್ಟಿದ್ದಾಳೆ. ಇದೆಲ್ಲವನ್ನೂ ನೋಡಿ ಚಂದ್ರಮುಖಿಯ ಮನದಲ್ಲಿ ಸ್ವಲ್ಪ ತಿರಸ್ಕಾರವುಂಟಾಯಿತು. ಹಿರಿಯ ಸೊಸೆ ನೋಡಿದಳು—ಚಂದ್ರಮುಖಿಗೆ ವಯಸ್ಸಾಗಿದ್ದರೂ ಅವಳ ಸೌಂದರ್ಯ ಕಡಿಮೆಯಾಗಿರಲಿಲ್ಲ. ಬಹುಶಃ ಇಬ್ಬರೂ ಒಂದೇ ವಯಸ್ಸಿನವರಿರಬಹುದು. ಆದರೆ ಹಿರಿಯ ಸೊಸೆ ಇದನ್ನೊಪ್ಪಲಿಲ್ಲ. ಈ ಊರಲ್ಲಿ ಪಾರ್ವತಿಯ ಹೊರತು ಇಷ್ಟು ಚೆಲುವು ಮತ್ತಾರಲ್ಲಿಯೂ ಇಲ್ಲ. ಜಮೀನುದಾರರ ಹೆಂಡತಿ ಆಶ್ಚರ್ಯದಿಂದ 'ನೀನು ಯಾರು?' ಎಂದಳು.

'ನಾನು ತಮ್ಮ ಪ್ರಜೆ. ಸ್ವಲ್ಪ ಬಾಕಿ ಕೊಡುವುದಿದ್ದಿತು. ಅದನ್ನು ಕೊಡಲು ಬಂದಿದ್ದೇನೆ.'

ಹಿರಿಯ ಸೊಸೆ ಮನದಲ್ಲಿಯೆ ಸಂತೋಷಪಟ್ಟು 'ಇಲ್ಲಿಗೇಕೆ ಬಂದೆ? ಕಚೇರಿಯೊಳಕ್ಕೆ ಹೋಗು' ಎಂದಳು.

ಚಂದ್ರಮುಖಿ ಸವಿ ನಗು ನಕ್ಕು 'ಅಮ್ಮಾ ನಾನು ಬಡವಿ, ದುಃಖಿತಳು, ಎಲ್ಲವನ್ನೂ ತೀರಿಸಲಾರೆ. ನೀವು ದಯಾವತಿಯೆಂದು ಕೇಳಿದ್ದೇನೆ. ಆದುದರಿಂದಲೇ ಸ್ವಲ್ಪ ಬಿಡಿಸಿಕೊಳ್ಳಬೇಕೆಂದು ತಮ್ಮ ಬಳಿ ಬಂದಿದ್ದೇನೆ' ಎಂದಳು.

ಹಿರಿಯ ಸೊಸೆಗೆ ಈ ತರಹದ ಮಾತು ಅವಳ ಜೀವನದಲ್ಲಿ ಕೇಳ ಬಂದುದು ಇದೇ ಮೊದಲು. ತನ್ನಲ್ಲಿ ದಯೆಯಿದೆ, ತಾನು ಸಾಲ ಕಡಿಮೆ ಮಾಡಬಲ್ಲಳು, ಎಂದಕೂಡಲೆ ಚಂದ್ರಮುಖಿಯಲ್ಲಿ ಅವಳಿಗೆ ಅನುರಾಗ ವುಂಟಾಯಿತು. ಚಂದ್ರಮುಖಿ ಅವಳ ಪ್ರೀತಿಗೆ ಪಾತ್ರಳಾದಳು. ಆಗ ಹಿರಿಯ ಸೊಸೆ 'ದಿನವೆಲ್ಲವೂ ಎಷ್ಟೋ ರೂಪಾಯಿಗಳನ್ನು ನಾನು ಬಿಡ ಬೇಕಾಗುತ್ತದೆ. ಎಷ್ಟೋ ಜನಗಳು ನನ್ನನ್ನು ಬಂದು ಮುತ್ತುತ್ತಾರೆ. ಅವರಿಗೆ 'ಇಲ್ಲ' ಎನ್ನಲಾರೆ. ಆದುದರಿಂದ ಯಜಮಾನರು ನನ್ನ ಮೇಲೆ ಕೋಪಿಸುತ್ತಾರೆ. ಎಷ್ಟು ರೂಪಾಯಿಗಳು ಬಾಕಿ ಇವೆ ನಿನ್ನವು?'

'ಹೆಚ್ಚಿಲ್ಲ. ಒಟ್ಟಿನಲ್ಲಿ ಎರಡು ರೂಪಾಯಿ. ಆದರೆ ನನಗೆ ಈ ಎರಡು ರೂಪಾಯಿಗಳೇ ಗುಡ್ಡವಾಗಿವೆ! ಇಡೀ ದಿನ ನಡೆದು ಇಲ್ಲಿಗೆ ಬಂದಿದ್ದೇನೆ.'

'ಅಯ್ಯೋ! ನೀನು ದುಃಖಿತಳು. ನಾನು ನಿನ್ನ ಮೇಲೆ ದಯೆದೋರು ವುದು ಒಳಿತು. ಏ ಬಿಂದೂ, ಇವಳನ್ನು ಹೊರಗೆ ಕರೆದುಕೊಂಡು ಹೋಗು. ದಿವಾನರಿಗೆ ನನ್ನ ಹೆಸರನ್ನು ಹೇಳಿ ಇವಳ ಎರಡು ರೂಪಾಯಿ ಬಾಕಿಯನ್ನು ತೊಡೆದು ಬಿಡಲು ಹೇಳು' ಎಂದು 'ನಿನ್ನ ಮನೆಯೆಲ್ಲಿ?' ಎಂದು ಚಂದ್ರಮುಖಿಯನ್ನು ಕೇಳಿದಳು.

'ತಮ್ಮ ರಾಜ್ಯದಲ್ಲೆ—ಇದೇ ಅಶಥಝುರೀ ಗ್ರಾಮದಲ್ಲಿ. ಒಳ್ಳೇದು ಅಮ್ಮಾ, ಈ ಊರಿನ ಜಮೀನುದಾರಿಯ ಒಡೆಯರು ಇಬ್ಬರಲ್ಲವೆ?'

'ಅದೇನೊ ನಿಜ. ಆದರೆ ಚಿಕ್ಕ ಒಡೆಯರು ಇನ್ನೆಷ್ಟು ದಿನದವರು? ಇನ್ನು ಸ್ವಲ್ಪ ದಿನಗಳಲ್ಲಿ ನಾವೊಬ್ಬರೇ ಒಡೆಯರಾಗುವೆವು.'

ಚಂದ್ರಮುಖಿ ಉದ್ವಿಗ್ನಳಾಗಿ 'ಏಕೆ? ಚಿಕ್ಕ ದೊರೆಗಳ ಮೇಲೆ ಬಹಳ ಸಾಲವಿದೆಯೆಂದು ತೋರುತ್ತದೆ' ಎಂದಳು.

ಹಿರಿಯ ಸೊಸೆ ಸ್ವಲ್ಪ ನಕ್ಕು 'ನಮ್ಮ ಬಳಿಯಲ್ಲಿ ಎಷ್ಟೋ ಗ್ರಾಮ ಗಳು ಅಡವು ಇವೆ. ಇಲ್ಲದೆ ಹೋಗಿದ್ದರೆ ಎಲ್ಲವೂ ಮಾರಿಹೋಗುತಿದ್ದುವು. ಕಲಕತ್ತೆಯಲ್ಲಿ ಸರಾಯಿ ಮತ್ತು ವೇಶ್ಯೆಯರಿಗಾಗಿ ಎಲ್ಲ ಹಣ ಹಾಳು ಮಾಡುತಿದ್ದಾರೆ. ಲೆಕ್ಕವಿಲ್ಲ, ಮಿತಿಯಿಲ್ಲ' ಎಂದಳು.

ಚಂದ್ರಮುಖಿಯ ಮುಖ ಒಣಗಿತು. ಸ್ವಲ್ಪ ತಡೆದು 'ಹೌದಮ್ಮ, ಇದಕ್ಕೋಸ್ಕರವೇ ಅವರು ಮನೆಗೆ ಬರುವುದಿಲ್ಲವೇನು?' ಎಂದು ಕೇಳಿದಳು.

'ಬರುವುದಿಲ್ಲವೇಕೆ? ಹಣ ಬೇಕಾದಾಗ ಬರುತ್ತಾರೆ. ಸಾಲ ತೆಗೆಯುತ್ತಾರೆ, ಜಮೀನು ಅಡವಿಡುತ್ತಾರೆ. ಪುನಃ ಹೊರಟುಹೋಗುತ್ತಾರೆ. ಎರಡು ತಿಂಗಳ ಹಿಂದೆ ಬಂದಿದ್ದರು. ಹನ್ನೆರಡು ಸಾವಿರ ರೂಪಾಯಿ ತೆಗೆದುಕೊಂಡು ಹೋದರು. ಬದುಕುವ ಸಂಭವವೂ ಇಲ್ಲ! ಎಷ್ಟೋ ಕೆಟ್ಟ ರೋಗಗಳು ಅಂಟಿಕೊಂಡಿವೆ. ಛೀ! ಛೀ!'

'ಚಂದ್ರಮುಖಿ ನಡುಗಿದಳು. ಮಲಿನ ಮುಖದಿಂದ ಕೇಳಿದಳು 'ಕಲಕತ್ತೆಯಲ್ಲಿ ಅವರು ಇರುವುದು ಎಲ್ಲಿ?'

ಹಿರಿಯ ಸೊಸೆ ಹಣೆ ಒಡೆದುಕೊಂಡು ಪ್ರಸನ್ನವದನದಿಂದ 'ಬಹಳ ದುರ್ದೆಸೆಯಾಗಿದೆ! ಯಾರು ಬಲ್ಲರು ಎಲ್ಲಿರುತ್ತಾರೆಂದು? ಯಾವ ಹೋಟೆಲಿನಲ್ಲಿರುತ್ತಾರೊ, ಯಾವ ಗೆಳೆಯನ ಮನೆಯಲ್ಲಿ ಬಿದ್ದುಕೊಂಡಿರುತ್ತಾರೊ? ಇದು ಅವರಿಗೇ ಗೊತ್ತು. ಅವರ ದುರ್ಭಾಗ್ಯಕ್ಕೇ ಗೊತ್ತು.'

ಚಂದ್ರಮುಖಿ ಎದ್ದು ನಿಂತು 'ನಾನು ಹೊರಡುತ್ತೇನಮ್ಮಾ' ಎಂದಳು.

ಹಿರಿಯ ಸೊಸೆ ಸ್ವಲ್ಪ ಆಶ್ಚರ್ಯಚಕಿತಳಾಗಿ ಕೇಳಿದಳು 'ಹೊರಡುವಿಯಾ?' 'ಏ ಬಿಂದೂ, ಏ ಬಿಂದೂ....' ಎಂದು ಕೂಗಿದಳು.

ಚಂದ್ರಮುಖಿ ಮುಂದೆ ಮಾತಾಡಗೊಡದೆ 'ಇರಲಿ ಬಿಡಿರಿ. ನಾನೇ ಕಚೇರಿಗೆ ಹೋಗುವೆ' ಎಂದು ಮೆಲ್ಲಮೆಲ್ಲನೆ ಹೋಗಿಬಿಟ್ಟಳು. ಮನೆಯ ಹೊರಗೆ ಬಂದು ಭೈರವ ತನ್ನ ಹಾದಿ ಕಾಯುತ್ತ ಕುಳಿತಿದ್ದುದನ್ನು ನೋಡಿದಳು. ಗಾಡಿ ದಾರಿಯ ಒಂದು ಬದಿಯಲ್ಲಿ ನಿಂತಿತ್ತು. ಅದೇ ರಾತ್ರಿ ಚಂದ್ರಮುಖಿ ಮನೆಗೆ ಹಿಂದಿರುಗಿ ಬಂದಳು. ಬೆಳಿಗ್ಗೆ ಪುನಃ ಭೈರವವನ್ನು ಕರೆದು 'ಭೈರವ ನಾನು ಇಂದು ಕಲಕತ್ತೆಗೆ ಹೋಗುವೆ. ನೀನು ನನ್ನ ಜೊತೆಯಲ್ಲಿ ಬರಲಾರೆ. ನಿನ್ನ ಮಗನನ್ನು ಕರೆದುಕೊಂಡು ಹೋಗುತ್ತೇನೆ. ಹೇಳು, ಏನೆನ್ನುವೆ?' ಎಂದಳು.

'ನಿಮ್ಮ ಇಚ್ಛೆ ಇದ್ದಂತೆ ಆಗಲಮ್ಮ! ಆದರೆ ಕಲಕತ್ತೆಗೆ ಏಕೆ ಹೋಗುತ್ತೀರಿ? ಏನಾದರೂ ಹೆಚ್ಚಿನ ಕೆಲಸವಿದೆಯೆ?'

'ಹೌದು, ವಿಶೇಷ ಕೆಲಸವಿದೆ.'

'ಎಂದು ಬರುವಿರಿ?'

'ಹೇಳಲಾಗುವುದಿಲ್ಲ ಭೈರವ! ಸಾಧ್ಯವಾದರೆ ಬೇಗನೆ ಬರುವೆ. ಇಲ್ಲವಾದರೆ ತಡವಾಗುವುದು. ನಾನು ಬರದಿದ್ದರೆ ನನ್ನ ಮನೆ–ಮಾರು ಎಲ್ಲವೂ ನಿನ್ನದೇ ಆಗುವುದು.'

ಭೈರವನಿಗೆ ಮೊದಲು ಆಶ್ಚರ್ಯವಾಯಿತು. ಬಳಿಕ ಅವನಿಗೆ ದುಃಖ ವಾಯಿತು. ಕಂಬನಿದುಂಬಿದ ಕಣ್ಣುಗಳಿಂದ 'ಎಂತಹ ಮಾತಮ್ಮಾ ಇದು! ನೀವು ಬರದಿದ್ದರೆ ಈ ಊರ ಜನರು ಹೇಗೆ ಬದುಕಬೇಕಮ್ಮಾ?' ಎಂದ ಭೈರವ.

ಚಂದ್ರಮುಖಿಯ ಕಣ್ಣುಗಳೂ ನೀರು ತುಂಬಿದುವು. ಮಧುರ ನಗೆ ನಕ್ಕು 'ಇದೇನು ಭೈರವ? ನಾನು ಬಂದು ಎರಡೇ ಎರಡು ವರ್ಷಗಳಾದುವು. ಇದಕ್ಕೂ ಮೊದಲು ನೀವು ಹೇಗೆ ಇರುತಿದ್ದಿರಿ?' ಎಂದಳು.

ಇದರ ಉತ್ತರವನ್ನು ಅಜ್ಞಾನಿ ಭೈರವ ಕೊಡಲಾರ. ಆದರೆ ಚಂದ್ರಮುಖಿಗೆ ಎಲ್ಲವೂ ಗೊತ್ತಾಯಿತು. ಭೈರವನ ಮಗನೆ ಅವಳ ಜೊತೆಯಲ್ಲಿ ಹೋಗುವುದೆಂದು ನಿಶ್ಚಯವಾಯಿತು. ಗಾಡಿಯ ಮೇಲೆ ವಸ್ತುಗಳೆಲ್ಲವನ್ನೂ ಹೇರಿಕೊಂಡು ಹೋಗುವಾಗ ಸ್ತ್ರೀ–ಪುರುಷರೆಲ್ಲರೂ ಅವಳನ್ನು ಕಾಣುವುದಕ್ಕೆ ಬಂದು, ಕಂಬನಿ ಸುರಿಸಿದರು. ಚಂದ್ರಮುಖಿಯೂ ತನ್ನ ಕಂಬನಿಗಳನ್ನು ತಡೆಯದಾದಳು. ದೇವದಾಸ ಅಲ್ಲಿರದಿದ್ದರೆ, ಕಲಕತ್ತೆಯ ರಾಣೀಪದ ದೊರಕುತಿದ್ದರೂ, ಈ ಹಳ್ಳಿಗರ ಪ್ರೇಮವನ್ನು ನಿರಾಕರಿಸಿ ಅವಳು ಅಲ್ಲಿಗೆ ಹೋಗುತಿದ್ದಿಲ್ಲ.

ಮರುದಿನ ಅವಳು ಕ್ಷೇತ್ರಮಣಿಯ ಮನೆಗೆ ಬಂದಳು. ಈಗ ಆ ಮನೆಯಲ್ಲಿ ಬೇರೆ ಜನರು ಇರುತಿದ್ದರು. ಕ್ಷೇತ್ರಮಣಿಗೆ ಆಶ್ಚರ್ಯ ವಾಯಿತು. 'ಇಷ್ಟು ದಿನ ಎಲ್ಲಿದ್ದೆ ತಂಗಿ?' ಎಂದು ಕೇಳಿದ.

ಚಂದ್ರಮುಖಿ ನಿಜ ಸಂಗತಿಯನ್ನು ಬಚ್ಚಿಟ್ಟು 'ಅಲಹಾಬಾದಿನಲ್ಲಿದ್ದೆ' ಎಂದಳು.

ಕ್ಷೇತ್ರಮಣಿ ಅವಳ ಶರೀರವನ್ನೆಲ್ಲ ಒಂದು ಸಲ ನೋಡಿ 'ನಿನ್ನ ಆಭರಣಗಳೆಲ್ಲಾ ಏನಾದುವು?' ಎಂದು ಕೇಳಿದ.

ಚಂದ್ರಮುಖಿ ನಕ್ಕು 'ಎಲ್ಲವೂ ಇವೆ' ಎಂದು ಸಂಕ್ಷೇಪವಾಗಿಯೆ ಹೇಳಿದಳು.

ಆ ದಿನವೇ ಸಾಹುಕಾರನನ್ನು ಕಂಡು ಕೇಳಿದಳು 'ದಯಾಲ, ನನಗೆ ಇನ್ನೆಷ್ಟು ರೂಪಾಯಿಗಳನ್ನು ನೀನು ಕೊಡಬೇಕಾಗುವುದು?'

ದಯಾಲ ಬಹಳ ಗೊಂದಲಕ್ಕೊಳಗಾಗಿ '೬೦–೭೦ ರೂಪಾಯಿ ಆಗಬಹುದು. ಆದರೆ ಇಂದು ಸಾಧ್ಯವಿಲ್ಲ. ನಾಳೆ ಕೊಡುವೆ' ಎಂದ.

'ಏನೂ ಕೊಡಬೇಕಾದುದಿಲ್ಲ. ನನ್ನದೊಂದು ಕೆಲಸವನ್ನು ಮಾತ್ರ ಮಾಡಿಕೊಡಬೇಕು.'

'ಯಾವ ಕೆಲಸ?'

'ಎರಡು–ಮೂರು ದಿನಗಳಲ್ಲಿ ಒಂದು ಒಳ್ಳೇ ಮನೆಯನ್ನು ಬಾಡಿಗೆಯಿಂದ ಗೊತ್ತುಮಾಡಿ ಕೊಡಬೇಕು. ಮನೆ, ನಮ್ಮ ಜನರ ಓಣಿಯಲ್ಲಿಯೆ ಇರಬೇಕು. ತಿಳಿಯಿತೆ?'

ದಯಾಲ ನಕ್ಕು 'ತಿಳಿಯಿತು' ಎಂದ.

'ಮನೆ ಚೆನ್ನಾಗಿರಬೇಕು. ಒಳ್ಳೇ ಹಾಸಿಗೆ, ಹೊದಿಕೆ, ಪಲಂಗ, ದೀಪ, ಎರಡು ಕುರ್ಚಿ, ಒಂದು ಮೇಜು ಕೂಡ ಇರಬೇಕು; ತಿಳಿಯಿತೆ?'

ದಯಾಲ ಮುಖ ಕೆಳಗೆ ಮಾಡಿಕೊಂಡ.

'ಸೀರೆ, ಕುಪ್ಪುಸ, ಒಳ್ಳೇ ಗಿಲಿಟಿನ ಆಭರಣ, ಎಲ್ಲಿ ದೊರೆಯುತ್ತವೆ?'

ದಯಾಲ ಮೋದಿ, ಸಾಮಾನು ಸಿಕ್ಕುವ ವಿಳಾಸ ಹೇಳಿದ.

'ಅವನ್ನೆಲ್ಲ ಕೊಂಡುಕೊಳ್ಳಬೇಕಾಗಿದೆ. ನಾನು ನಿನ್ನ ಜೊತೆಯಲ್ಲಿ ಬಂದು ನನಗೆ ಒಪ್ಪಿದುದನ್ನು ಕೊಳ್ಳುವೆ' ಎಂದು ಸ್ವಲ್ಪ ನಕ್ಕು 'ನನಗೆ

ಏನೇನು ಬೇಕೆನ್ನುವುದು ನಿನಗೆ ಗೊತ್ತೇ ಇದೆ. ಒಬ್ಬ ದಾಸಿಯನ್ನು ಗೊತ್ತು ಮಾಡಬೇಕು' ಎಂದಳು.

'ಎಂದು ಬೇಕು?'

'ಎಷ್ಟು ಬೇಗ ನಿನಗೆ ಸಾಧ್ಯವಾಗುವುದೊ ಅಷ್ಟು ಬೇಗ. ಎರಡೇ ದಿನಗಳಲ್ಲಿ ಎಲ್ಲ ವ್ಯವಸ್ಥೆ ಮಾಡಿಕೊಟ್ಟರೆ ತುಂಬ ಉಪಕಾರ' ಎಂದು ಅವನಲ್ಲಿ ನೂರು ರೂಪಾಯಿಗಳನ್ನು ಕೊಟ್ಟು 'ಚೆನ್ನಾದ ಸಾಮಾನು ತೆಗೆದುಕೊಂಡು ಬಾ. ಬೆಲೆ ನೋಡಬೇಡ' ಎಂದಳು.

ಮೂರನೆ ದಿನ ಅವಳು ಹೊಸ ಮನೆಗೆ ಬಂದಳು. ಇಡೀ ದಿನವೂ ರಾಮುನನ್ನು ಮಾತ್ರ ಸಂಗಡ ಕರೆದುಕೊಂಡು ಮನೆಯನ್ನು ತನ್ನ ಇಚ್ಛೆಯಂತೆ ಶೃಂಗರಿಸಿದಳು. ಸಂಜೆಯಲ್ಲಿ ತನ್ನನ್ನು ಶೃಂಗರಿಸಿಕೊಳ್ಳಲು ಆರಂಭಿಸಿದಳು. ಚೆನ್ನಾಗಿ ಮುಖ ತೊಳೆದುಕೊಂಡಳು; ಸುಗಂಧವನ್ನು ಲೇಪಿಸಿಕೊಂಡಳು. ಕೆಂಪು ಬಣ್ಣದಿಂದ ಕಾಲನ್ನು ಶೃಂಗರಿಸಿಕೊಂಡಳು; ವೀಳ್ಯ ಸೇವಿಸಿ ತುಟಿ ಕೆಂಪಗೆ ಮಾಡಿಕೊಂಡಳು. ಬಳಿಕ ಎಲ್ಲ ಅಂಗಗಳಲ್ಲೂ ಆಭರಣಗಳನ್ನಿಟ್ಟುಕೊಂಡಳು. ಸೀರೆ–ಕುಪ್ಪಸ ಧರಿಸಿಕೊಂಡಳು. ಬಹಳ ದಿನಗಳ ಮೇಲೆ ಇಂದು ತಲೆ ಬಾಚಿಕೊಂಡು ಹಣೆಯ ಮೇಲೆ ಕುಂಕುಮವನ್ನಿಟ್ಟುಕೊಂಡಳು. ಕನ್ನಡಿಯಲ್ಲಿ ಮುಖ ನೋಡಿಕೊಂಡು ಮನದಲ್ಲಿಯೇ ಎಂದುಕೊಂಡಳು. 'ನನ್ನ ಭಾಗ್ಯದಲ್ಲಿ ಇನ್ನೂ ಏನೇನು ಬರೆದಿದೆಯೋ!'

ಹಳ್ಳಿಯ ಹುಡುಗನಾದ ಕೇವಲರಾಮು ಈ ಶೃಂಗಾರವನ್ನೆಲ್ಲ ನೋಡಿ ಭೀತಿಯಿಂದ ಕೇಳಿದ 'ಇದೇನಮ್ಮಾ?' ಎಂದು.

ಚಂದ್ರಮುಖಿ ನಕ್ಕು 'ಕೇವಲ, ಇಂದು ನನ್ನ ಪತಿದೇವರು ಬರುವರು' ಎಂದಳು.

ಕೇವಲರಾಮು ವಿಸ್ಮಯನೇತ್ರಗಳಿಂದ ನೋಡುತ್ತ ನಿಂತ.

ಸಾಯಂಕಾಲದಲ್ಲಿ ಕ್ಷೇತ್ರಮಣಿ ಬಂದು 'ತಂಗೀ, ಇದೆಲ್ಲವೂ ಇನ್ನೇಕೆ?' ಎಂದ.

'ಏಕೆ? ಇದೆಲ್ಲವೂ ಇನ್ನು ಬೇಡವೆ?' ಎಂದು ಚಂದ್ರಮುಖಿ ಮುಖ ಕೆಳಗೆ ಮಾಡಿ ಕೊಂಚ ನಕ್ಕು ನುಡಿದಳು.

ಕ್ಷೇತ್ರಮಣಿ ಸ್ವಲ್ಪ ಹೊತ್ತು ಸುಮ್ಮನಿದ್ದು 'ವಯಸ್ಸು ಆದಂತೆ ಸೌಂದರ್ಯವೂ ಹೆಚ್ಚುತ್ತಿದೆ' ಎಂದ.

ಅವನು ಹೊರಟುಹೋದ. ಬಹಳ ದಿನಗಳ ಹಿಂದಿನ ಪದ್ಧತಿಯಂತೆ ಇಂದು ಪುನಃ ಚಂದ್ರಮುಖಿ ಕಿಡಿಕಿಯಲ್ಲಿ ಬಂದು ಕುಳಿತಳು. ಒಂದೇ ಸಮನಾಗಿ ಹಾದಿಯನ್ನು ನೋಡುತಿದ್ದಳು. ನೋಡುವುದೇ ಅವಳ ಕೆಲಸ. ಇದನ್ನು ಮಾಡುವುದಕ್ಕಾಗಿಯೆ ಅವಳು ಬಂದದ್ದು. ಇಲ್ಲಿ ಇದ್ದಷ್ಟು ದಿನವೂ ಇದನ್ನೆ ಮಾಡುವಳು. ಎಷ್ಟೊ ಹೊಸ ಹೊಸ ಜನರು ಬರುತ್ತಿದ್ದರು. ಬಾಗಿಲು ತೆರೆಯಲು ಹೇಳುತ್ತಿದ್ದರು. ಅವರಿಗೆ ಕೇವಲ-ರಾಮು 'ಇಲ್ಲಿ ಬರಬೇಡಿ' ಎಂದು ಉತ್ತರ ಕೊಡುತ್ತಿದ್ದ.

ಹಳೆಯ ಪರಿಚಯದವರಾರಾದರೂ ಬಂದರೆ ಅವರೊಡನೆ ನಗು ನಗುತ್ತ ಮಾತನಾಡುವಳು. ಮಾತುಮಾತಿನಲ್ಲಿ ದೇವದಾಸನ ಸಮಾಚಾರ ವನ್ನು ವಿಚಾರಿಸುವಳು. ಅವರು ಹೇಳದಾದರೆ ಅವರನ್ನು ಉದಾಸೀನ ಮನದಿಂದ ಕಳಿಸಿಬಿಡುವಳು. ರಾತ್ರಿ ಹೆಚ್ಚಾದ ಮೇಲೆ ತಾನೇ ಸ್ವತಃ ಹೊರಗೆ ಹೊರಡುವಳು. ಓಣಿ–ಓಣಿ, ಮನೆ–ಮನೆ ತಿರಿಗಿ, ಬಾಗಿಲುಗಳಿಗೆ ಕಿವಿಗೊಟ್ಟು, ಜನರಾಡುವ ಮಾತುಗಳನ್ನು ಕೇಳುವಳು. ಅವಳಿಗೆ ಬೇಕಾದ ಮಾತು ಕೇಳಬರುತ್ತಿದ್ದಿಲ್ಲ. ಹೋಗು–ಬರುವವರಲ್ಲಿ ದೇವದಾಸನಂತೆ ಕಂಡವರ ಬಳಿ ಹೋಗುವಳು. ದೇವದಾಸ ಅಲ್ಲವೆಂದು ಗೊತ್ತಾದ ಮೇಲೆ ತಿರಿಗಿ ಬರುವಳು. ಮಧ್ಯಾಹ್ನ ತನ್ನ ಹಳೇ ಗೆಳತಿಯರ ಮನೆಗೆ ಹೋಗು ವುದು. ಮಾತು–ಮಾತಿಗೆ 'ನಿಮಗೆ ದೇವದಾಸನ ಸುದ್ದಿ ಗೊತ್ತಿದೆಯೆ?' ಎಂದು ಕೇಳುವುದು.

ಅವರು ಕೇಳುತಿದ್ದರು 'ಯಾವ ದೇವದಾಸ?' ಎಂದು.

ಚಂದ್ರಮುಖಿ ಉತ್ಸುಕಳಾಗಿ ಅವನ ಪರಿಚಯ ಮಾಡಿಕೊಡುತ್ತಿ ದ್ದಳು:– 'ಕೆಂಪು ಬಣ್ಣ, ತಲೆಯ ಮೇಲೆ ಉಂಗುರುಗೂದಲು, ಹಣೆಯ

ಒಂದು ಭಾಗದಲ್ಲಿ ಗಾಯಕರ ಕಲೆ, ಶ್ರೀಮಂತರು. ಬಹಳ ಹಣ ವೆಚ್ಚ ಮಾಡುತ್ತಾರೆ. ನೀವು ಗುರುತಿಸಬಲ್ಲಿರಾ ?'

ಯಾರೂ ಏನೂ ಹೇಳುತ್ತಿದ್ದಿಲ್ಲ. ಚಂದ್ರಮುಖಿ ಹತಾಶಳಾಗಿ ಉದಾಸೀನಮನಸ್ಸಿನಿಂದ ತಿರಿಗಿ ಬರುತ್ತಿದ್ದಳು. ರಾತ್ರಿ ಬಹಳಹೊತ್ತಿನ ವರೆಗೆ ಮಾರ್ಗದ ಕಡೆಗೆ ನೋಡುತ್ತಿದ್ದಳು. ನಿದ್ದೆ ಬಂದ ಬಳಿಕ ವಿರಕ್ತ ಭಾವನೆಯಿಂದ ಮನದಲ್ಲಿಯೆ 'ಇದು ನೀನು ಮಲಗುವ ಸಮಯವೆ ?' ಎಂದುಕೊಳ್ಳುತಿದ್ದಳು.

ಹೀಗೆ, ಒಂದು ತಿಂಗಳು ಕಳೆಯಿತು. ಕೇವಲರಾಮನಿಗೂ ಬೇಸರ ಬಂದಿತು. ದೇವದಾಸನು ಇಲ್ಲಿ ಇಲ್ಲವೆಂಬ ಸಂಶಯು ಚಂದ್ರಮುಖಿಗೂ ಬಂದಿತು. ಆದರೂ ಆಸೆ-ಭರವಸೆಯಲ್ಲಿಯೆ ದಿನಗಳ ಮೇಲೆ ದಿನಗಳು ಉರುಳಿದುವು.

ಚಂದ್ರಮುಖಿ ಕಲಕತ್ತೆಗೆ ಬಂದು ಒಂದುವರೆ ತಿಂಗಳಾಯಿತು. ಇಂದು ಅವಳ ದೇವ ಪ್ರಸನ್ನನಾದ. ರಾತ್ರಿ ಹನ್ನೊಂದು ಬಾರಿಸಿತ್ತು. ನಿರಾಶಳಾಗಿ ಅವಳು ಮನೆಗೆ ಹಿಂದಿರುಗುತ್ತಿದ್ದಳು.

ಇಷ್ಟರಲ್ಲಿ ಒಬ್ಬ ಒಂದು ಮನೆಯ ಬಾಗಿಲ ಮುಂದೆ ತನ್ನಷ್ಟಕ್ಕೆ ತಾನೇ ಬಡಬಡಿಸುವುದನ್ನು ನೋಡಿದಳು. ಈ ಕಂಠಸ್ವರದ ಪರಿಚಯ ಅವಳಿಗೆ ಚೆನ್ನಾಗಿದೆ. ಕೋಟ್ಯಂತರ ಜನಗಳಲ್ಲೂ ಈ ಧ್ವನಿಯನ್ನು ಅವಳು ಗುರುತಿಸಬಲ್ಲಳು. ಆ ಸ್ಥಳದಲ್ಲಿ ಸ್ವಲ್ಪ ಕತ್ತಲೆ. ಅಲ್ಲಿಯೆ ಒಬ್ಬ ಸರಾಯಿ ಕುಡಿದು ಮತ್ತನಾಗಿ ಬಿದ್ದಿದ್ದ. ಚಂದ್ರಮುಖಿ ಅವನ ಬಳಿಗೆ ಹೋಗಿ ಮೈಮೇಲೆ ಕೈಯಿಟ್ಟು 'ನೀನು ಯಾರು ? ಇಲ್ಲಿ ಹೀಗೆ ಯಾಕೆ ಬಿದ್ದು ಕೊಂಡಿರುವೆ ?' ಎಂದು ಕೇಳಿದಳು.

ಆ ಕುಡುಕ ಗುಂಗಿನಲ್ಲಿ ತೊದಲುತ್ತ ಹಾಡತೊಡಗಿದ, 'ಕಾಣೆನೆ ಸಖಿಯಾ ಹೃದಯ ದೇವಿಯಾ. . . .'

ಚಂದ್ರಮುಖಿಯ ಸಂದೇಹ ದೂರವಾಯಿತು. ಅವಳು 'ದೇವದಾಸ ಬಾಬೂ !' ಎಂದು ಕೂಗಿದಳು.

ದೇವದಾಸ ಮೊದಲಿನಂತೆಯೇ 'ಓ' ಎಂದ.

'ಇಲ್ಲಿ ಏಕೆ ಬಿದ್ದುಕೊಂಡಿರುವಿರಿ? ಮನೆಗೆ ಬರುವಿರಾ?'

'ಇಲ್ಲ, ಇಲ್ಲಿಯೆ ಚೆನ್ನಾಗಿದ್ದೇನೆ.'

'ತುಸು ಸರಾಯಿ ಬೇಕೊ?'

'ಹೂಂ. ಸ್ವಲ್ಪ ಬೇಕು' ಎಂದವನೆ ಚಂದ್ರಮುಖಿಯನ್ನು ತಬ್ಬಿಕೊಂಡು 'ಇಷ್ಟು ಉಪಕಾರ ಮಾಡುವಂತಹನು ನೀನು ಯಾರಪ್ಪಾ!' ಎಂದು ಕೇಳಿದ.

ಚಂದ್ರಮುಖಿಯ ಕಣ್ಣುಗಳಿಂದ ಅಶ್ರುಧಾರೆ ಹರಿಯತೊಡಗಿತು. ದೇವದಾಸ ಏಳುತ್ತ ಬೀಳುತ್ತ ಬಹಳ ಕಷ್ಟದಿಂದ ಚಂದ್ರಮುಖಿಯ ಭುಜವನ್ನು ಹಿಡಿದುಕೊಂಡು ಎದ್ದುನಿಂತ. ಆ ಮೇಲೆ ಕೊಂಚ ಹೊತ್ತು ಅವಳ ಮುಖವನ್ನು ದಿಟ್ಟಿಸಿ 'ಓಹೊ! ಇದಂತೂ ಬಹು ಷೋಕಾಗಿದೆ!' ಎಂದ.

ಚಂದ್ರಮುಖಿ ವೇದನೆಯೊಡಗೂಡಿದ ನಗು ನಕ್ಕು 'ಹೌದು, ಬಹಳ ಚೆನ್ನಾಗಿದೆ. ನನ್ನ ಭುಜದ ಮೇಲೆ ಕೈಯೂರಿ ಸ್ವಲ್ಪ ಮುಂದೆ ನಡೆಯಿರಿ. ಗಾಡಿ ಮಾಡಬೇಕಾಗಿದೆ' ಎಂದಳು.

'ಗಾಡಿಯೇಕೆ?'

ದಾರಿಯಲ್ಲಿ ಬರುವಾಗ ದೇವದಾಸ ಕುಗ್ಗಿದ ದನಿಯಲ್ಲಿ 'ಸುಂದರಿ, ನೀನು ನನ್ನನ್ನು ಗುರುತಿಸುವೆಯಾ?' ಎಂದ.

'ಹೌದು, ಗುರುತಿಸುವೆ.'

ದೇವದಾಸ ಹಾಗೆಯೇ ಶಬ್ದಗಳನ್ನು ಎಳೆದೆಳೆದು ಕುಗ್ಗಿದ ದನಿಯಲ್ಲಿ 'ಜನರೆಲ್ಲರೂ ನನ್ನನ್ನು ಮರೆತುಬಿಟ್ಟರು. ನೀನು ನನ್ನನ್ನು ಗುರುತಿಸುತ್ತಿರುವುದು ಭಾಗ್ಯದ ಮಾತು!' ಎಂದ.

ಬಳಿಕ ಚಂದ್ರಮುಖಿಯ ಭುಜದ ಮೇಲೆಯೆ ಭಾರ ಹಾಕಿ ಗಾಡಿಯಲ್ಲಿ ಕುಳಿತುಕೊಂಡು ಮನೆಗೆ ಬಂದ. ಬಾಗಿಲ ಬಳಿ ನಿಂತುಕೊಂಡು ಜೇಬಿನಲ್ಲಿ ಕೈ ಹಾಕಿ 'ಸುಂದರೀ, ಗಾಡಿಯಲ್ಲಿ ಕರೆದುಕೊಂಡು ಬಂದೆ. ಆದರೆ ಜೇಬಿನಲ್ಲಿ ಏನೂ ಇಲ್ಲ' ಎಂದ.

ಚಂದ್ರಮುಖಿ ಉತ್ತರವೀಯಲಿಲ್ಲ. ಸುಮ್ಮನೆ ಮೇಲೆ ಕರೆದು ಕೊಂಡು ಹೋಗಿ ಮಂಚದ ಮೇಲೆ ಮಲಗಿಸಿ 'ಮಲಗಿಕೊಳ್ಳಿರಿ' ಎಂದಳು.

ದೇವದಾಸ ಪುನಃ ಅದೇ ರೀತಿಯಲ್ಲಿ 'ಏನೂ ಬೇಡವೇ? ಜೇಬಿನಲ್ಲಿ ನಾನು ಏನೂ ಇಲ್ಲವೆಂದೆ–ಏನೂ ಸಿಕ್ಕುವ ಆಸೆ ಕೂಡ ಇಲ್ಲ. ತಿಳಿಯಿತೇ ಸುಂದರೀ?' ಎಂದ.

ಸುಂದರಿ ತಿಳಿದುಕೊಂಡು 'ನಾಳೆ ಕೊಡಬಹುದು' ಎಂದಳು.

'ಇಷ್ಟು ವಿಶ್ವಾಸವಿಡುವುದು ಸರಿಯಲ್ಲ. ಏನು ಬೇಕು ಮರೆ ಮಾಜದೆ ಹೇಳು!' ಎಂದು ಕೇಳಿದ ದೇವದಾಸ.

'ನಾಳೆ ಹೇಳುವೆ' ಎಂದು ಚಂದ್ರಮುಖಿ ಪಕ್ಕದ ಕೋಣೆಗೆ ಹೊರಟುಹೋದಳು.

ದೇವದಾಸ ಎಚ್ಚತ್ತಾಗ ಹೊತ್ತು ಏರಿತ್ತು. ಕೋಣೆಯಲ್ಲಿ ಯಾರೂ ಇರಲಿಲ್ಲ. ಚಂದ್ರಮುಖಿ ಸ್ನಾನ ಮಾಡಿ ಅಡಿಗೆಯ ಸಿದ್ಧತೆಯಲ್ಲಿದ್ದಳು. ದೇವದಾಸ ಈ ಸ್ಥಳಕ್ಕೆ ಎಂದೂ ಬಂದಿರಲಿಲ್ಲ. ಆಶ್ಚರ್ಯದಿಂದ ಎಲ್ಲವನ್ನೂ ನೋಡಿದ. ಯಾವ ವಸ್ತುಗಳ ಗುರುತೂ ಸಿಗಲಿಲ್ಲ. ಕಳೆದ ರಾತ್ರಿಯ ಸಂಗತಿಗಳ ನೆನಪೂ ಆಗಲಿಲ್ಲ. ಆದರೆ ಯಾರದೊ ಅಂತಃಕರಣ ಪೂರ್ವಕ ಸೇವೆಯ ಸ್ಮರಣೆ ಮಾತ್ರ ಆಗುತ್ತಿತ್ತು. ಸ್ನೇಹದಿಂದ ಯಾರೊ ಮಲಗಿಸಿದಂತೆ ಎನಿಸಿತು. ಇಷ್ಟರಲ್ಲಿ ಚಂದ್ರಮುಖಿ ಅಲ್ಲಿಗೆ ಬಂದಳು. ರಾತ್ರಿಯ ಶೃಂಗಾರದಲ್ಲಿ ಈಗ ಸ್ವಲ್ಪ ಬದಲಾವಣೆಯಾಗಿತ್ತು. ಮೈಮೇಲೆ ಈಗಲೂ ಅವೇ ಆಭರಣಗಳಿದ್ದುವು. ಬಣ್ಣದ ಸೀರೆ, ಹಣೆಯ ಮೇಲಿನ ಕುಂಕುಮ, ತುಟಿಯ ಮೇಲೆ ತಾಂಬೂಲದ ಚಿಹ್ನ ಇತ್ಯಾದಿ ಯಾವುದೂ ಇರಲಿಲ್ಲ. ಕೇವಲ ಒಂದು ಒಗೆದ ಬಿಳಿಯ ಸೀರೆಯನ್ನುಟ್ಟುಕೊಂಡು ಅವಳು ಕೋಣೆಗೆ ಬಂದಳು. ದೇವದಾಸ ಚಂದ್ರಮುಖಿಯನ್ನು ಕಂಡು ಅತ್ಯಂತ ಹರ್ಷಿತನಾಗಿ 'ಇಲ್ಲಿಗೆ ನನ್ನನ್ನು ಎಲ್ಲಿಂದ ಕರೆತಂದೆ?' ಎಂದು ಕೇಳಿದ.

'ಕರೆದುಕೊಂಡು ಬರಲಿಲ್ಲ. ದಾರಿಯಲ್ಲಿ ಬಿದ್ದುಕೊಂಡಿದ್ದಿರಿ. ಎತ್ತಿಕೊಂಡು ಬಂದೆ.'

'ಸರಿ. ಆದುದು ಆಗಿಹೋಯಿತು. ಆದರೆ ನೀನು ಇಲ್ಲಿ ಹೇಗೆ, ಎಂದು ಬಂದೆ? ನೀನು ಒಡವೆಗಳನ್ನು ಧರಿಸುತ್ತಿರಲಿಲ್ಲ. ಪುನಃ ಏಕೆ ಧರಿಸಲಾರಂಭಿಸಿದೆ?'

ದೇವದಾಸನ ಕಡೆಗೆ ತೀಕ್ಷ್ಣದೃಷ್ಟಿಯಿಂದ ನೋಡಿ 'ಪುನಃ....' ಎಂದಳು.

ದೇವದಾಸ ನಕ್ಕು 'ಹೀಗೆ ಮಾತಬಾರದು, ಈ ರೀತಿ ತಮಾಷೆ ಮಾಡುವುದರಲ್ಲಿ ದೋಷವಿದೆ. ಇರಲಿ, ಇಲ್ಲಿಗೆ ನೀನು ಎಂದು ಬಂದೆ?' ಎಂದು ಆ ಮೇಲೆ ಮನಸ್ಸಿನಲ್ಲಿಯೆ ಲೆಕ್ಕ ಮಾಡಿ 'ನನ್ನ ಮನೆಯಿಂದ ನೀನು ಇಲ್ಲಿಗೇ ಬಂದೆಯಾ?' ಎಂದು ಕೇಳಿದ.

ಚಂದ್ರಮುಖಿ ವಿಸ್ಮಯದಿಂದ 'ನಾನು ನಿಮ್ಮ ಮನೆಗೆ ಹೋದುದು ನಿಮಗೆ ಹೇಗೆ ತಿಳಿಯಿತು?' ಎಂದು ಕೇಳಿದಳು.

'ನೀನು ಹಿಂದಿರುಗಿ ಹೋದ ಮೇಲೆ ನಾನು ಮನೆಗೆ ಹೋಗಿದ್ದೆ. ನಿನ್ನನ್ನು ನನ್ನ ಅತ್ತಿಗೆಯ ಬಳಿ ಕರೆದುಕೊಂಡು ಹೋದ ದಾಸಿಯೆ 'ನಿನ್ನೆ ಅಶಥಝುರೀ ಗ್ರಾಮದಿಂದ ಓರ್ವ ಸುಂದರ ಸ್ತ್ರೀ ಬಂದಿದ್ದಳೆ'ಂದು ಹೇಳಿದಳು. ಬಳಿಕ ಗೊತ್ತಾಗಲು ತಡವೆ? ಆದರೆ ಇಷ್ಟು ಆಭರಣಗಳನ್ನೆಲ್ಲಿ ಮಾಡಿಸಿದೆ?'

'ಮಾಡಿಸಿಲ್ಲ. ಇವೆಲ್ಲವೂ ಗಿಲಿಟಿನವು. ಇಲ್ಲಿಗೆ ಬಂದೇ ಕೊಂಡುಕೊಂಡೆ. ನಿಮ್ಮನ್ನು ಕಾಣುವುದಕ್ಕಾಗಿ ಇಷ್ಟೆಲ್ಲವನ್ನೂ ಸುಮ್ಮನೆ ವೆಚ್ಚಮಾಡಿ ಕೊಂಡುಕೊಂಡೆ. ನೀವು ಗುರುತಿಸಲೇ ಇಲ್ಲ ನನ್ನನ್ನು ನಿನ್ನೆ!'

'ಒಮ್ಮೆಲೆ ಗುರುತಿಸಲಿಲ್ಲ. ಪ್ರಯತ್ನಪಟ್ಟ ಮೇಲೆ ಗುರುತು ಸಿಕ್ಕಿತ್ತು. ಚಂದ್ರಮುಖಿಯ ಹೊರತು ಇಷ್ಟು ಪ್ರೇಮದಿಂದ ನನ್ನ ಸೇವೆಯನ್ನು ಯಾರು ಮಾಡಬಲ್ಲರು? ಎಂದು ಎನಿಸುತ್ತಿತ್ತು' ಎಂದು ನಕ್ಕು ನುಡಿದ ದೇವದಾಸ.

ಚಂದ್ರಮುಖಿಗೆ ಹರ್ಷದಿಂದ ಅಳುವಂತಾಯಿತು. ಸ್ವಲ್ಪ ಹೊತ್ತು ಸುಮ್ಮನಿದ್ದ ಮೇಲೆ 'ದೇವದಾಸಬಾಬೂ, ನೀವು ಮೊದಲಿನಂತೆಯೆ ನನ್ನನ್ನು ತಿರಸ್ಕರಿಸುವಿರೊ?' ಎಂದು ಕೇಳಿದಳು.

'ಇಲ್ಲ. ಆದರೆ ನಾನು ನಿನ್ನನ್ನು ಪ್ರೀತಿಸುತ್ತೇನೆ.'

ಮಧ್ಯಾಹ್ನ ಸ್ನಾನ ಮಾಡುವಾಗ ದೇವದಾಸನ ಎದೆಯ ಮೇಲೆ ಒಂದು ಫ್ಲಾನಲ್ ಬಟ್ಟೆ ಕಟ್ಟಿದುದನ್ನು ನೋಡಿ ಚಂದ್ರಮುಖಿ ಭಯಭೀತಳಾಗಿ 'ಇದೇನು? ಈ ಫ್ಲಾನಲ್ ಬಟ್ಟೆ ಇಲ್ಲೇಕೆ?' ಎಂದು ಕೇಳಿದಳು.

'ಎದೆಯಲ್ಲಿ ಒಂದು ತರದ ನೋವಾಗುತ್ತಿದೆ. ನೀನು ಸುಖಿಯಾಗಿರುವೆಯಾ?'

ಚಂದ್ರಮುಖಿ ಹಣೆ ಗಟ್ಟಿಸಿಕೊಂಡು 'ಸರ್ವನಾಶವನ್ನೂ ಮಾಡಿಕೊಳ್ಳಲಿಚ್ಛಿಸುವಿರಾ? ಪುಪ್ಪುಸದಲ್ಲಿ ನೋವಿದೆಯೆ?' ಎಂದು ಕೇಳಿದಳು.

ದೇವದಾಸ ನಕ್ಕು ನುಡಿದ 'ಏನೋ ಸ್ವಲ್ಪ ಇದೆ.'

ಅಂದೇ ಡಾಕ್ಟರರು ಬಂದು ಬಹಳ ಹೊತ್ತಿನ ವರೆಗೆ ಪರೀಕ್ಷೆ ಮಾಡಿ ಅದೇ ಅಭಿಪ್ರಾಯ ವ್ಯಕ್ತಮಾಡಿದರು. ಔಷಧ ಬರೆದುಕೊಟ್ಟರು. ಹೆಚ್ಚು ಜಾಗರೂಕತೆ ತೆಗೆದುಕೊಳ್ಳದಿದ್ದರೆ ವಿಶೇಷ ಹಾನಿಯಾಗುವ ಸಂಭವವಿದೆಯೆಂದು ಹೇಳಿದರು. ಇದರ ತಾತ್ಪರ್ಯ ಇಬ್ಬರಿಗೂ ತಿಳಿಯಿತು. ಪತ್ರ ಬರೆದು ಧರ್ಮದಾಸನನ್ನು ಬರಮಾಡಿಕೊಂಡರು. ಚಿಕಿತ್ಸೆಗಾಗಿ ಬ್ಯಾಂಕಿನಿಂದ ರೂಪಾಯಿಗಳೂ ಬಂದುವು. ಎರಡು ದಿನ ಹೀಗೆಯೇ ಕಳೆಯಿತು. ಮೂರನೆಯ ದಿನ ದೇವದಾಸನಿಗೆ ಜ್ವರ ಹುಟ್ಟಿದುವು.

ದೇವದಾಸ ಚಂದ್ರಮುಖಿಯನ್ನು ಕರೆದು 'ಬಹಳ ಯೋಗ್ಯ ಸಮಯಕ್ಕೆ ಬಂದೆ. ಇಲ್ಲದಿದ್ದರೆ ನನ್ನನ್ನು ಯಾರು ನೋಡುತಿದ್ದರು?' ಎಂದ. ಚಂದ್ರಮುಖಿ ಕಣ್ಣೀರು ಒರೆಸಿಕೊಂಡು ಅಂತಃಕರಣಪೂರ್ವಕವಾಗಿ ಸೇವೆ ಮಾಡಲು ಕುಳಿತಳು. ಎರಡೂ ಕೈಗಳನ್ನು ಜೋಡಿಸಿ 'ಇಂತಹ ವೇಳೆಯಲ್ಲಿ ಇಷ್ಟು ಕೆಲಸ ಮಾಡಬೇಕಾಗುವುದೆಂದು ಕನಸಿನಲ್ಲಿಯೂ ಯೋಚಿಸಿದ್ದಿಲ್ಲ. ಬೇಗನೇ ದೇವದಾಸರಿಗೆ ಗುಣಮಾಡು ದೇವಾ!' ಎಂದು ಪ್ರಾರ್ಥಿಸಿದಳು.

ಒಂದು ತಿಂಗಳಾಗಿ ಹೋಯಿತು. ದೇವದಾಸ ಮಂಚವನ್ನು ಬಿಟ್ಟು ಏಳಲೇ ಇಲ್ಲ. ಒಳಿಕ ಸಾವಕಾಶವಾಗಿ ಅವನಿಗೆ ಗುಣವಾಗತೊಡಗಿತು. ರೋಗ ವಿಶೇಷ ಬೆಳೆಯಲಿಲ್ಲ.

ದೇವದಾಸ ಒಂದು ದಿನ 'ಚಂದ್ರಮುಖೀ, ನಿನ್ನ ಹೆಸರು ದೊಡ್ಡದಿದೆ. ಕರೆಯುವುದಕ್ಕೆ ತೊಂದರೆ. ಅದರಿಂದ ಅದನ್ನು ಚಿಕ್ಕದು ಮಾಡಬೇಕೆನ್ನುತ್ತೇನೆ' ಎಂದ.

'ಒಳ್ಳೇದು.'

'ಇಂದಿನಿಂದ ನಿನ್ನನ್ನು 'ಚಂದ್ರಾ' ಎಂದು ಕರೆಯುವೆನು.'

ಚಂದ್ರಮುಖಿ ನಕ್ಕು 'ಹೀಗೆ ಕರೆಯುವುದರಲ್ಲಿ ಒಂದು ಅರ್ಥವೇನಾದರೂ ಇರಬೇಕು' ಎಂದಳು.

'ಪ್ರತಿಯೊಂದು ಮಾತಿಗೂ ಅರ್ಥವಿರುವುದೇನು? ನನ್ನ ಇಚ್ಛೆ.'

'ಇಚ್ಛೆಯೆ ಇದ್ದರೆ ಕರೆಯಿರಿ. ಆದರೆ ಇದೆಂತಹ ಇಚ್ಛೆ? ಇದನ್ನಾದರೂ ಹೇಳಿ!'

'ಇಲ್ಲ. ಯಾವ ಕಾರಣವನ್ನೂ ಕೇಳಬೇಡ.'

ಚಂದ್ರಮುಖಿ ಕೆಳಗೆ ಮುಖ ಮಾಡಿ 'ಸರಿ. ಹಾಗೆಯೇ ಆಗಲಿ' ಎಂದಳು.

ಚಂದ್ರಮುಖಿಯನ್ನು ಬಹಳ ಹೊತ್ತು ನೋಡುತ್ತ ಕುಳಿತ ಮೇಲೆ ಗಂಭೀರ ಭಾವದಿಂದ ಹಠಾತ್ತಾಗಿ ಕೇಳಿದ 'ಚಂದ್ರಾ, ಇಷ್ಟು ಅಂತಃಕರಣದಿಂದ ನನ್ನ ಸೇವೆ ಮಾಡುತ್ತಿರುವೆ! ನೀನು ನನಗೇನಾಗಬೇಕು?'

ಚಂದ್ರಮುಖಿ ಲಜ್ಜಾಶೀಲ ವಧುವೂ ಅಲ್ಲ; ಮಾತನಾಡುವ ಅಭ್ಯಾಸವಿಲ್ಲದ ಬಾಲಿಕೆಯೂ ಅಲ್ಲ. ದೇವದಾಸನ ಮುಖವನ್ನು ಸ್ಥಿರವಾಗಿ, ಶಾಂತವಾಗಿ ನೋಡುತ್ತ ಸ್ನೇಹ ಬೆರೆತ ಕಂಠದಿಂದ 'ನೀವು ನನ್ನ ಸರ್ವಸ್ವ! ಇದು ಈಗಲೂ ನಿಮಗೆ ತಿಳಿಯಲಿಲ್ಲವೆ?' ಎಂದಳು.

ದೇವದಾಸ ಗೋಡೆಯ ಕಡೆಗೆ ನೋಡುತಿದ್ದ. ಅತ್ತಕಡೆಗೇ ನೋಡುತ್ತ ಸಾವಕಾಶವಾಗಿ 'ಇದೆಲ್ಲವನ್ನೂ ನಾನು ಒಲ್ಲೆ. ಆದರೆ

ಇದರಿಂದ ಅಷ್ಟು ಆನಂದವೇನೂ ಆಗುವುದಿಲ್ಲ. ಪಾರ್ವತಿಯನ್ನು ನಾನು ಎಷ್ಟು ಪ್ರೀತಿಸುತಿದ್ದೆ! ಅವಳು ನನ್ನನ್ನು ಎಷ್ಟು ಪ್ರೀತಿಸುತಿದ್ದಳು! ಆದರೆ ಅದರಿಂದ ಕೊನೆಗೆ ನಮಗೆ ಕಷ್ಟವೇ ಸಿಕ್ಕಿತು. ಬಹಳ ದುಃಖ-ಪಟ್ಟ ಮೇಲೆ ಇನ್ನು ಎಂದಿಗೂ ಪ್ರೇಮಜಾಲದಲ್ಲಿ ಬೀಳಬಾರದೆಂದು ಯೋಚಿಸಿದ್ದೆ. ತಿಳಿದೂ ತಿಳಿದೂ ಯಾರಿಗೂ ಪ್ರೇಮವನ್ನು ನೀಡಿಲ್ಲ. ಆದರೆ ನೀನು ಇದನ್ನೇನು ಮಾಡಿದೆ? ಒಲವಂತದಿಂದ ನನ್ನನ್ನು ಪ್ರೇಮ ದಲ್ಲಿ ಏಕೆ ತೊಡಕಿಸಿದೆ?' ಎಂದು ಸ್ವಲ್ಪ ಸುಮ್ಮನಿದ್ದು 'ಚಂದ್ರಾ, ನೀನೂ ಪಾರ್ವತಿಯಂತೆಯೇ ದುಃಖಕ್ಕೆ ಈಡಾಗುವೆಯೆಂದು ತೋರು ತ್ತದೆ' ಎಂದ.

ಚಂದ್ರಮುಖಿ ಮುಖವನ್ನು ಸೆರಗಿನಿಂದ ಮುಚ್ಚಿಕೊಂಡು ಮಂಚದ ಒಂದು ಒದಿಯಲ್ಲಿ ಕುಳಿತಿದ್ದಳು.

ಪುನಃ ಮೃದುವಾದ ಕಂಠದಿಂದ ದೇವದಾಸ ಹೇಳತೊಡಗಿದ, 'ನಿಮ್ಮಿಬ್ಬರಲ್ಲಿ ಎಷ್ಟು ವೈಷಮ್ಯವಿದೆ! ಒಬ್ಬಳು ಅತಿ ಅಭಿಮಾನಿನಿ; ಉದ್ಧತಳು! ಇನ್ನೊಬ್ಬಳು ಅಷ್ಟೆ ಶಾಂತಳು, ಸಂಯಮಿ! ಅವಳಿಂದ ಏನನ್ನೂ ಸಹಿಸಲಾಗುವುದಿಲ್ಲ! ನಿನ್ನ ಸಹನೆಗೆ ಮಿತಿಯಿಲ್ಲ! ಅವಳ ಕೀರ್ತಿ, ಹೆಸರು ಎಷ್ಟು! ನಿನ್ನ ದುಷ್ಕೀರ್ತಿ ಎಷ್ಟು! ಅವಳನ್ನು ಎಲ್ಲರೂ ಪ್ರೀತಿಸುತ್ತಾರೆ. ನಿನ್ನನ್ನು ಯಾರೂ ಪ್ರೀತಿಸುವುದಿಲ್ಲ. ಆದರೆ ನಾನು ಪ್ರೀತಿಸುತ್ತೇನೆ,—ಹೇಗೆ ಪ್ರೀತಿಸುತ್ತೇನೆ?' ದೀರ್ಘವಾದ ಉಸಿರು ಬಿಟ್ಟು ಪುನಃ 'ಪಾಪ—ಪುಣ್ಯಗಳ ವಿಚಾರಣೆ ಮಾಡುವವನು ನಿನಗಾವ ನ್ಯಾಯವನ್ನು ಕೊಡುವನೆಂದು ನಾನು ಹೇಳಲಾರೆ. ಆದರೆ ಸತ್ತಮೇಲೂ ಜೊತೆಗೂಡುವುದಾದರೆ ನಾನು ನಿನ್ನಿಂದ ಎಂದಿಗೂ ದೂರದಲ್ಲಿರಲಾರೆ' ಎಂದ.

ಚಂದ್ರಮುಖಿ ಮನದಲ್ಲಿಯೆ ಯಥೇಷ್ಟವಾಗಿ ಅತ್ತಳು. ಅವಳ ಹೃದಯ ಕಣ್ಣೀರಿನಿಂದ ತೊಯ್ದು ಹೋಯಿತು. ಮನದಲ್ಲಿಯೆ 'ದೇವಾ, ಎಂದೇ ಆಗಲಿ, ಯಾವ ಜನ್ಮದಲ್ಲಿಯೆ ಆಗಲಿ, ಈ ಪಾಪಿಣಿ ಸಂಪೂರ್ಣ

ಪ್ರಾಯಶ್ಚಿತ್ತ ಹೊಂದಿದ ಮೇಲೆ ಇವರನ್ನೆ ನನಗೆ ಕಾಣಿಕೆಯಾಗಿ ಅರ್ಪಿಸು!' ಎಂದು ಪ್ರಾರ್ಥಿಸಿದಳು.

‡ ‡ ‡ ‡

ಎರಡು ತಿಂಗಳಾದುವು. ದೇವದಾಸನಿಗೆ ಗುಣವಾಯಿತು. ಆದರೆ ಇನ್ನೂ ಶರೀರ ಅಷ್ಟು ಶಕ್ತಿಯುತವಾಗಿಲ್ಲ. ಗಾಳಿ–ನೀರಿನ ಬದಲಾವಣೆ ಅವಶ್ಯವಾಗಿ ಆಗಬೇಕಾಗಿತ್ತು. ನಾಳೆ ಪಶ್ಚಿಮದ ಕಡೆ ಹೊರಡುವನು. ಜೊತೆಯಲ್ಲಿ ಹೋಗುವವನು ಧರ್ಮದಾಸನೊಬ್ಬನು ಮಾತ್ರ.

ಚಂದ್ರಮುಖಿ ದೇವದಾಸನ ಕೈಹಿಡಿದು 'ನಿಮಗೆ ಒಬ್ಬ ದಾಸಿಯಾದರೂ ಬೇಕು. ನನ್ನನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಿರಿ' ಎಂದಳು.

'ಛೀ! ಅದಾಗದು. ಏನು ಮಾಡಿದರೂ ಚಿಂತೆಯಿಲ್ಲ. ಇಷ್ಟು ನಾಚಿಕೆಗೇಡಿತನದ ಕೆಲಸ ಮಾಡಲಾರೆ.'

ಚಂದ್ರಮುಖಿ ಸುಮ್ಮನಾದಳು. ಅವಳು ಈಗ ಅಜ್ಞಾನಿಯಲ್ಲ; ಎಲ್ಲವೂ ತಿಳಿಯುವುದು. ಏನೇ ಆಗಲಿ, ಅವಳಿಗೆ ಈ ಪ್ರಪಂಚದಲ್ಲಿ ಮರ್ಯಾದೆಯಿಲ್ಲ. ಅವಳ ಸಾನ್ನಿಧ್ಯದಲ್ಲಿ ದೇವದಾಸನಿಗೆ ಸುಖ ಸಿಗಬಹುದು. ಆದರೆ ಮರ್ಯಾದೆ ದೊರೆಯದು. ಸನ್ಮಾನ ಸಿಗದು. ಕಣ್ಣೀರು ಒರೆಸಿಕೊಂಡು 'ಇನ್ನು ಎಂದು ತಮ್ಮ ದರ್ಶನಲಾಭವಾಗುವುದು ಈ ಕಣ್ಣುಗಳಿಗೆ? ಎಂದಳು.

'ಹೇಳಲಾರೆ. ನಾನೆಲ್ಲಿದ್ದರೂ ನಿನ್ನನ್ನು ಮರೆಯಲಾರೆ. ನಿನ್ನನ್ನು ಕಾಣಬೇಕೆಂಬಾಸೆ ಎಂದಿಗೂ ಹಿಂಗದು.'

ಚಂದ್ರಮುಖಿ ನಮಿಸಿ ಒಂದೆಡೆಗೆ ಸರಿದು ನಿಂತಳು. ಮನದಲ್ಲಿಯೆ 'ಇಷ್ಟೇ ನನಗೆ ಸಾಕು! ಇದಕ್ಕಿಂತಲೂ ಹೆಚ್ಚು ಆಶಿಸುವುದು ವ್ಯರ್ಥ' ಎಂದುಕೊಂಡಳು.

ಹೋಗುವಾಗ ದೇವದಾಸ ಚಂದ್ರಮುಖಿಯ ಕೈಯಲ್ಲಿ ಮತ್ತೆ ಎರಡು ಸಾವಿರ ರೂಪಾಯಿ ಕೊಟ್ಟು 'ಇವುಗಳನ್ನು ಇಟ್ಟುಕೊ.

ಮನುಷ್ಯನ ಶರೀರ ನಶ್ವರವಾದದ್ದು. ಅದನ್ನು ನಂಬಲಾಗದು. ಕಷ್ಟಕಾಲದಲ್ಲಿ ಮತ್ತೆ ಯಾರಲ್ಲಿ ಕೈಯೊಡ್ಡುವಿ?' ಎಂದ.

ಚಂದ್ರಮುಖಿ ಇದನ್ನೂ ಅರಿತಳು. ಆದುದರಿಂದಲೇ ರೂಪಾಯಿಗಳನ್ನು ಸ್ವೀಕರಿಸಿದಳು. ಕಣ್ಣೀರು ಒರೆಸಿಕೊಂಡು 'ನನಗೆ ಇನ್ನೊಂದು ಮಾತನ್ನು ಹೇಳಿ ಹೋಗಿರಿ' ಎಂದಳು.

ದೇವದಾಸ 'ಏನು?' ಎಂದ ಅವಳ ಮುಖ ನೋಡಿ.

'ನಿಮ್ಮ ಅತ್ತಿಗೆ ನಿಮ್ಮ ಶರೀರದಲ್ಲಿ ಕೆಟ್ಟ ರೋಗವಿದೆಯೆಂದು ಹೇಳಿದ್ದಳು. ಅದು ನಿಜವೆ?'

ಪ್ರಶ್ನೆಯನ್ನು ಕೇಳಿ ದೇವದಾಸನಿಗೆ ದುಃಖವಾಯಿತು. 'ಅತ್ತಿಗೆ ಬೇಕಾದುದನ್ನು ಹೇಳಬಹುದು. ನಿನಗೆ ತಿಳಿಯುವುದಿಲ್ಲವೆ? ನನ್ನ ಯಾವ ರಹಸ್ಯ ನಿನಗೆ ಗೊತ್ತಿಲ್ಲ? ಒಂದು ವಿಷಯದಲ್ಲಿ ನೀನು ಪಾರ್ವತಿಗಿಂತಲೂ ಮುಂದೆ ಹೋಗಿರುವೆ' ಎಂದ.

ಚಂದ್ರಮುಖಿ ಕಣ್ಣು ಒರೆಸಿಕೊಂಡು 'ತಿಳಿಯಿತು. ಆದರೆ ನೀವು ಹೆಚ್ಚು ಜಾಗರೂಕರಾಗಿರಿ. ನಿಮ್ಮ ಶರೀರ ತುಂಬ ದುರ್ಬಲವಾಗಿದೆ. ನೋಡಿರಿ, ಯಾವ ತರಹದ ಅಲಕ್ಷ್ಯವೂ ಆಗಕೂಡದು!' ಎಂದಳು.

ದೇವದಾಸ ಪ್ರತ್ಯುತ್ತರವಾಗಿ ಬರೇ ನಕ್ಕುಬಿಟ್ಟ.

'ಇನ್ನೊಂದು ಭಿಕ್ಷೆಯಿದೆ. ನಿಮ್ಮ ಪ್ರಕೃತಿ ಸ್ವಲ್ಪವಾದರೂ ಕೆಟ್ಟರೆ ನನಗೆ ತಿಳಿಸಬೇಕು.'

ದೇವದಾಸ ಅವಳ ಮುಖದ ಕಡೆಗೆ ನೋಡಿ ತಲೆ ತಗ್ಗಿಸಿಕೊಂಡು 'ತಿಳಿಸುವೆ, ಅವಶ್ಯವಾಗಿ ತಿಳಿಸುವೆ, ಚಂದ್ರಾ!' ಎಂದ.

ಚಂದ್ರಮುಖಿ ಇನ್ನೊಂದು ಸಲ ವಂದಿಸಿ ಅಳುತ್ತ ಅಳುತ್ತ ಬೇರೆ ಕೋಣೆಗೆ ಹೋದಳು.

## ೧೬

ಕಲಕತ್ತೆಯಿಂದ ದೇವದಾಸ ಅಲ್ಹಾಬಾದಿಗೆ ಬಂದು ಕೆಲವು ದಿನಗಳ ವರೆಗೆ ಇದ್ದ. ಆಗ ಅವನು ಚಂದ್ರಮುಖಿಗೆ ಹೀಗೆ ಒಂದು ಕಾಗದ ಬರೆದ. 'ಚಂದ್ರಾ, ಇನ್ನು ಮೇಲೆ ಯಾರೊಡನೆಯೂ ಪ್ರೇಮ ಮಾಡ ಬಾರದೆಂದು ನಾನು ನಿಶ್ಚಯಿಸಿದ್ದೇನೆ. ಯಾಕೆಂದರೆ ಪ್ರೇಮ ಮಾಡಿ ಬರಿಗೈಯಿಂದ ಬರುವುದು ಬಹಳ ತಾಪಕರ. ಆ ಮೇಲೆ ಮತ್ತೆ ಪ್ರೇಮ ಮಾಡಹೋಗುವುದೆಂದರೆ ಅದರಂತಹ ವಿಡಂಬನೆ ಈ ಜಗತ್ತಿನಲ್ಲಿ ಮತ್ತೊಂದಿಲ್ಲ.'

ಚಂದ್ರಮುಖಿ ಇದಕ್ಕೆ ಏನೆಂದು ಉತ್ತರವಿತ್ತಳೆಂದು ಬರೆಯು ವುದು ಅನಾವಶ್ಯಕ. ಆದರೆ ದೇವದಾಸ, ಈಗ ಅವಳನ್ನು ತನ್ನಲ್ಲಿಗೆ ಬರಮಾಡಿಕೊಳ್ಳುವುದು ಸೂಕ್ತವೊ ಹೇಗೆಂಬುದನ್ನು ಮನದಲ್ಲಿಯೇ ಯೋಚಿಸುತಿದ್ದ.

ಮರುಕ್ಷಣದಲ್ಲಿಯೇ ಮತ್ತೆ ಯೋಚನೆ, 'ಇಲ್ಲ ಇಲ್ಲ; ಇಲ್ಲಿ ಅವ ಳಿಗೆ ಕೆಲಸವೇನೂ ಇಲ್ಲ. ಎಂದಾದರೂ ಪಾರ್ವತಿ ಕೇಳಿದರೆ ಏನೆಂದಾಳು ?'

ಹೀಗೆ ಅವನ ಹೃದಯದಲ್ಲಿ ಒಂದು ಸಲ ಪಾರ್ವತಿ, ಮತ್ತೊಂದು ಸಲ ಚಂದ್ರಮುಖಿ ನೆಲಿಸುತಿದ್ದರು. ಒಮ್ಮೊಮ್ಮೆ ಇಬ್ಬರ ಮುಖಗಳೂ ಅವನ ಹೃದಯ ಪಟಲದ ಮೇಲೆ ಮೂಡುತ್ತಿದ್ದುವು—ಅವನಿಗೆ ಇಬ್ಬ ರಲ್ಲಿಯೂ ಅಗಾಧ ಪ್ರೇಮವಿದೆಯೊ ಏನೊ ಎನ್ನಿಸುತಿತ್ತು. ಹೃದಯದಲ್ಲಿ ಇಬ್ಬರೂ ಒಂದೆಡೆಯಲ್ಲಿಯೇ ವಾಸಿಸುತಿದ್ದರು. ಇಬ್ಬರೂ ತನ್ನೊಂದಿಗೆ ಮಲಗಿರುವರೆಂದೇ ಒಂದೊಂದು ದಿನ ಭಾಸವಾಗುತಿತ್ತು. ಈಗ ಅವನ ಹೃದಯ ಶೂನ್ಯವಾಗುತಿತ್ತು. ಒಂದು ನಿರ್ಜೀವ ಅತೃಪ್ತಿ ಅವನ ಹೃದಯ ದಲ್ಲಿ ಸುಮ್ಮನೆ ಮರುದನಿಯನ್ನು ಇಡಿಗಿಸುತಿತ್ತು. ಬಳಿಕ ದೇವದಾಸ ಲಾಹೋರಿಗೆ ಹೋದ. ಅಲ್ಲಿ ನೌಕರಿ ಮಾಡುತಿದ್ದ ಚುನ್ನೀಲಾಲ ದೇವ ದಾಸ ಬಂದ ಸುದ್ದಿ ಕೇಳಿ ಕಾಣಲು ಬಂದ. ಬಹಳ ದಿನಗಳ ಬಳಿಕ

ಇಬ್ಬರೂ ಒಬ್ಬರನ್ನೊಬ್ಬರು ನೋಡಿ ಲಜ್ಜಿತರಾದರು. ಅದರೊಂದಿಗೆ ಇಬ್ಬರಿಗೂ ಆನಂದವಾಯಿತು.

ದೇವದಾಸ ಮತ್ತೆ ಕುಡಿಯಲಾರಂಭಿಸಿದ! ಸರಾಯಿಯ ಪಾತ್ರೆಯನ್ನು ಮುಟ್ಟಿದ ಕೂಡಲೇ ಚಂದ್ರಮುಖಿಯ ವಿಷಣ್ಣ ವದನ ಅವನ ಕಣ್ಣೆದುರಿಗೆ ಬಂದು ನಿಲ್ಲುತಿತ್ತು. ಅದರ ಸ್ಪರ್ಶವನ್ನು ಮಾಡಕೂಡದೆಂದು ಅವಳು ಪುನಃ ಪುನಃ ಹೇಳಿದ್ದಳು. ಆಗ ಅವನಿಗೆನಿಸುತಿತ್ತು: ಅವಳು ಎಂತಹ ಬುದ್ಧಿವಂತೆ! ಎಷ್ಟು ಶಾಂತ, ಗಂಭೀರ ಪ್ರಕೃತಿಯವಳದು! ಅವಳ ಸ್ನೇಹ, ಅವಳ ಪ್ರೇಮ ಎಷ್ಟು ಗಂಭೀರವಾದುದು!

ಪಾರ್ವತಿ ಈಗ ಮರೆತುಹೋಗಲಾರಂಭಿಸಿದ್ದಳು! ನಂದುವ ದೀಪದಂತೆ ಆಗಾಗ್ಗೆ ಅವಳ ನೆನಪು ಪ್ರದೀಪ್ತವಾಗುತಿತ್ತು.

ಲಾಹೋರಿನ ನೀರು, ಗಾಳಿ ಅವನಿಗೆ ಸರಿಯಾಗಲಿಲ್ಲ. ಆಗಾಗ ಕಾಯಿಲೆ ಬೀಳಲಾರಂಭಿಸಿದ. ಪುನಃ ಎದೆಯಲ್ಲಿ ನೋವು ಎನಿಸತೊಡಗಿತು. ಧರ್ಮದಾಸ ಒಂದು ದಿನ ಅಳುತಳುತ್ತ 'ದೇವಬಾಬೂ, ಮತ್ತೆ ನಿಮ್ಮ ಶರೀರ ಕ್ಷೀಣವಾಗತೊಡಗಿತು. ಅದರಿಂದ ಮತ್ತೆಲ್ಲಿಗಾದರೂ ಹೋಗೋಣ ನಡೆಯಿರಿ' ಎಂದ.

ದೇವದಾಸ ಅನ್ಯ ಮನಸ್ಕನಾಗಿ ನುಡಿದ 'ಒಳ್ಳೇದು, ಹೋಗೋಣ.'

ದೇವದಾಸ ಬಹುಶಃ ಮನೆಯಲ್ಲಿ ಕುಡಿಯುತ್ತಿರಲಿಲ್ಲ. ಚುನ್ನೀಲಾಲ ಬಂದಾಗ ಒಂದೊಂದು ದಿನ ಕುಡಿಯುತ್ತಿದ್ದ. ಒಂದೊಂದು ದಿನ ಹೊರಗೆ ಹೋಗುತ್ತಿದ್ದ. ಮನೆಗೆ ಬರುವುದು ರಾತ್ರಿ ಮೂರು ಗಂಟೆಗೆ. ಒಂದೊಂದು ದಿನ ಮನೆಗೆ ಬರುತ್ತಲೇ ಇರಲಿಲ್ಲ. ಈಗ ಎರಡು ದಿನಗಳಿಂದ ದೇವದಾಸ ಎಲ್ಲಿರುವನೊ ಗೊತ್ತಿಲ್ಲ. ಧರ್ಮದಾಸ ದುಃಖದಿಂದ ಊಟ ಮಾಡಲಿಲ್ಲ. ನೀರೂ ಕುಡಿಯಲಿಲ್ಲ. ಮೂರನೆ ದಿನ ಜ್ವರಸಮೇತನಾಗಿ ಬಂದು ಹಾಸಿಗೆ ಹಿಡಿದ ದೇವದಾಸ. ಮೂವರು ಡಾಕ್ಟರರು ಚಿಕಿತ್ಸೆ ಮಾಡತೊಡಗಿದರು.

ಧರ್ಮದಾಸ ಕೇಳಿದ 'ಬಾಬೂ, ತಾಯಿಗೆ ಈ ಸುದ್ದಿ ತಿಳಿಸಲೆ?'

'ಛೆ! ಈ ಮುಖ ತಾಯಿಗೆ ತೋರಿಸಲು ಯೋಗ್ಯವಿದೆಯೇ?'

'ಕಾಹಿಲೆ ಎಲ್ಲರಿಗೂ ಬರುತ್ತದೆ. ಆದರೆ ಇಂತಹ ದೊಡ್ಡ ದುಃಖದ ಸಂಗತಿಯನ್ನು ತಾಯಿಗೆ ತಿಳಿಸಕೂಡದೆ? ನಿಮಗೆ ನಾಚಿಕೆಯೇಕೆ? ದೇವಬಾಬೂ, ನಡೆಯಿರಿ ಕಾಶಿಗೆ' ಎಂದ ಧರ್ಮದಾಸ.

'ಇಲ್ಲ ಧರ್ಮದಾಸ, ಈಗ ಅವಳ ಬಳಿಗೆ ಹೋಗಲಾರೆ. ಗುಣವಾದ ಬಳಿಕ ನೋಡೋಣ' ಎಂದು ದೇವದಾಸ ಮುಖ ತಿರುಗಿಸಿದ.

ಧರ್ಮದಾಸ ಮನಸದಲ್ಲಿಯೆ 'ಚಂದ್ರಮುಖಿಯ ಮಾತನ್ನಾದರೂ ತೆಗೆಯುವ' ಎಂದುಕೊಂಡ. ಅವನು ಸ್ವತಃ ಅವಳನ್ನು ತಿರಸ್ಕರಿಸುತಿದ್ದ. ಅದರಿಂದ ಸುಮ್ಮನಾದ.

ಚಂದ್ರಮುಖಿಯನ್ನು ಕರೆಯಿಸಿಕೊಳ್ಳಬೇಕೆಂದು ದೇವದಾಸನಿಗೆ ಇಚ್ಛೆಯಾಗುತಿತ್ತು. ಆದರೆ ಅದನ್ನು ಬಾಯಿಯಿಂದ ಆಡಿ ತೋರಿಸಲು ಅವನಿಂದ ಆಗುತ್ತಿರಲೇ ಇಲ್ಲ. ಇರಲಿ. ದೇವದಾಸನ ಬಳಿ ಯಾರೂ ಬರಲಿಲ್ಲ. ಕೆಲವು ದಿನಗಳಾದ ಮೇಲೆ ಕಾಯಿಲೆ ಮತ್ತೆ ಸ್ವಲ್ಪ ಕಡಿಮೆಯಾಯಿತು. ಒಂದು ದಿನ ಅವನು 'ಧರ್ಮದಾಸ, ನಿನ್ನ ಇಚ್ಛೆ ಇದ್ದರೆ ಇನ್ನೆಲ್ಲಿಗಾದರೂ ಹೋಗೋಣ ನಡೆ' ಎಂದ.

'ಈಗ ಇನ್ನೆಲ್ಲಿಗೂ ಹೋಗುವ ಅವಶ್ಯಕತೆ ಇಲ್ಲ. ಹೋಗುವುದಾದರೆ ಮನೆಗೆ; ಇಲ್ಲವಾದರೆ ತಾಯಿಯ ಬಳಿಗೆ.'

ಸಾಮಾನುಗಳನ್ನು ಕಟ್ಟಿಕೊಂಡು, ಚುನ್ನೀಲಾಲನನ್ನು ಮತ್ತೊಮ್ಮೆ ಕಂಡು ಅವರು ಅಲಹಾಬಾದಿಗೆ ಬಂದರು. ಈಗ ದೇವದಾಸನ ಪ್ರಕೃತಿ ಚೆನ್ನಾಗಿತ್ತು. ಕೆಲವು ದಿನಗಳ ಬಳಿಕ 'ಧರ್ಮ, ಇನ್ನೊಂದು ಯಾವುದಾದರೂ ಸ್ಥಳಕ್ಕೆ ಹೋಗೋಣವೆ? ಈವರೆಗೂ ಮುಂಬಯಿ ನೋಡಿಲ್ಲ. ಅಲ್ಲಿಗೆ ಬರುವೆಯಾ?' ಎಂದ.

ಮನಸ್ಸಿಲ್ಲದಿದ್ದರೂ ದೇವದಾಸನ ಒತ್ತಾಯದಿಂದ ಮುಂಬಯಿಗೆ ಹೊರಡಲು ಸಿದ್ಧನಾದ ಧರ್ಮದಾಸ. ಆಗ ಜ್ಯೇಷ್ಠಮಾಸ. ಮುಂಬಯಿ ಇತರ ಪಟ್ಟಣಗಳಷ್ಟು ಶಕೆಯುಳ್ಳದಲ್ಲ. ಅಲ್ಲಿಗೆ ಹೋದ ಮೇಲೆ ದೇವದಾಸ ಇನ್ನಷ್ಟು ಸುಧಾರಿಸಿದ. ಅವನಿಗೆ ತುಂಬ ಉತ್ಸಾಹವೆನಿಸಿತು.

ಒಂದು ದಿನ ಧರ್ಮದಾಸ 'ಇಲ್ಲಿಗೆ ಬಂದು ಬಹಳ ದಿನಗಳಾದುವು. ಇನ್ನು ಮನೆಗೆ ಹೋಗಬೇಕು' ಎಂದ.

'ಇಲ್ಲ, ಇಲ್ಲಿ ನಾನು ಚೆನ್ನಾಗಿದ್ದೇನೆ. ಇನ್ನೂ ಕೆಲವು ದಿನ ಇಲ್ಲಿಯೆ ಇರುವೆ' ಎಂದ ದೇವದಾಸ.

† † † †

ಒಂದು ವರ್ಷ ಕಳೆಯಿತು. ಭಾದ್ರಪದ ಮಾಸ ಬಂದಿತು. ದೇವದಾಸ ಧರ್ಮದಾಸನ ಹೆಗಲ ಮೇಲೆ ಕೈಯೂರಿ, ಮುಂಬಯಿಯ ಆಸ್ಪತ್ರೆಯಿಂದ ಮೆಲ್ಲಮೆಲ್ಲನೆ ಹೊರಗೆ ಬಂದು ಗಾಡಿಯಲ್ಲಿ ಕುಳಿತ. ಧರ್ಮದಾಸ ಎಂದ 'ದೇವಬಾಬೂ, ಈಗ ತಾಯ ಬಳಿ ಹೋಗುವುದು ಒಳಿತು.'

ದೇವದಾಸನ ಕಣ್ಣಾಲಿಗಳು ನೀರಲ್ಲಿ ತೇಲಲಾರಂಭಿಸಿದುವು. ಎಷ್ಟೋ ದಿನಗಳಿಂದ ಅವನು ತಾಯಿಯನ್ನು ನೆನೆಯುತಿದ್ದ. ಆಸ್ಪತ್ರೆಯಲ್ಲಿ ಬಿದ್ದುಕೊಂಡು 'ನನಗೆ ಎಲ್ಲರೂ ಇದ್ದಾರೆ. ಆದರೂ, ನನಗೆ ಯಾರೂ ಇಲ್ಲ' ಎಂದು ಯೋಚಿಸುತಿದ್ದ. ತಾಯಿ ಇದ್ದಾಳೆ, ಅಣ್ಣನಿದ್ದಾನೆ, ಸೋದರಿಗಿಂತಲೂ ಹೆಚ್ಚಾಗಿ ಪಾರ್ವತಿ ಇದ್ದಾಳೆ! ಚಂದ್ರಮುಖಿಯೂ ಇದ್ದಾಳೆ! ಅವನಿಗೆ ಎಲ್ಲರೂ ಇದ್ದಾರೆ. ಆದರೆ ಅವನು ಯಾರವನೂ ಅಲ್ಲ.

ಧರ್ಮದಾಸ ಅಳುತ್ತ 'ತಾಯಿಯ ಬಳಿಗೆ ಹೋಗೋಣ ನಡೆಯಿರಿ' ಎಂದ.

ದೇವದಾಸ ಮುಖ ತಿರುಗಿಸಿಕೊಂಡು ಕಣ್ಣೀರು ಒರಿಸಿಕೊಳ್ಳುತ್ತ 'ಬೇಡ ಧರ್ಮ! ತಾಯಿಗೆ ಮುಖ ತೋರಿಸಲು ನಾನು ಯೋಗ್ಯನಲ್ಲ. ಇನ್ನೂ ಸಮಯ ಬಂದಿಲ್ಲವೆಂದು ತೋರುತ್ತದೆ' ಎಂದ.

ವೃದ್ಧ ಧರ್ಮದಾಸ ಬಿಕ್ಕಿ ಬಿಕ್ಕಿ ಅಳುತ್ತ 'ಬಾಬೂ, ಇನ್ನೂ ತಾಯಿ ಬದುಕಿ ಇದ್ದಾಳೆ' ಎಂದ.

ಈ ಮಾತಿನಲ್ಲಿ ಎಷ್ಟು ಭಾವ ತುಂಬಿತ್ತೆಂಬುದು ಅವರಿಬ್ಬರ ಅಂತರಾತ್ಮನೇ ತಿಳಿಯ ಬಲ್ಲ. ದೇವದಾಸನ ಗತಿ ಬಹಳ ಶೋಚನೀಯವಾಗಿತ್ತು.

ಪ್ಲೀಹ ಮತ್ತು ಯಕೃತ್ತುಗಳು ಬೆಳೆದು ಅವನ ಹೊಟ್ಟೆ ಡೊಳ್ಳಿನಂತಾಗಿತ್ತು. ಅಲ್ಲದೆ ಕೆಮ್ಮು ಮತ್ತು ಜ್ವರದ ಆಕ್ರಮಣ ಬಹಳವಾಗಿತ್ತು. ಮೈ ತೀರ ಕಪ್ಪಾಗಿತ್ತು. ಉಳಿದಿರುವುದು ಬರೇ ಅಸ್ಥಿಪಂಜರ. ಕಣ್ಣುಗಳು ಒಳಸಿಕ್ಕಿದ್ದುವು. ಅವುಗಳಿಂದ ಅಸ್ವಾಭಾವಿಕ ಉಜ್ವಲತೆ ಹೊರಬೀಳುತಿತ್ತು. ತಲೆಗೂದಲು ಅತ್ಯಂತ ರುಕ್ಷವಾಗಿದ್ದುವು; ಸ್ವಲ್ಪ ಯತ್ನಿಸಿದರೆ ಎಣಿಸಲೂ ಬರುವಂತಿದ್ದುವು. ಕೈಬೆರಳು ಬಹಳ ಸಣ್ಣಾಗಿದ್ದುವು. ಅವುಗಳ ಮೇಲೆ ಹೊಲಸು ರೋಗದ ಕಲೆಗಳು ಕಾಣುತಿದ್ದುವು. ಧರ್ಮದಾಸ ಸ್ಟೇಶನ್ನಿಗೆ ಬಂದು 'ಎಲ್ಲಿಯ ಟಿಕೀಟು ತೆಗಿಸಬೇಕು ದೇವದಾಸ ಬಾಬೂ?' ಎಂದು ಕೇಳಿದ.

ಸ್ವಲ್ಪ ಯೋಚಿಸಿ 'ಮೊದಲು ಮನೆಗೆ ನಡೆ; ಆ ಮೇಲೆ ನೋಡೋಣ' ಎಂದ ದೇವದಾಸ.

ಗಾಡಿ ಪ್ಲ್ಯಾಟ್‌ಫಾರ್ಮಿಗೆ ಬಂದಿತು. ಹುಗುಳಿಯ ತಿಕೇಟನ್ನು ಕೊಂಡು ಗಾಡಿಯಲ್ಲಿ ಕುಳಿತರು. ಧರ್ಮದಾಸ ದೇವದಾಸನ ಬಳಿಯಲ್ಲಿಯೆ ಇದ್ದ. ಸಂಜೆಯ ಹೊತ್ತಿಗೆ ದೇವದಾಸನ ಮೈಯಲ್ಲಿ ಮತ್ತೆ ಬಹಳ ಜ್ವರ ತುಂಬಿ ಬೆಂಕಿ ಬಿದ್ದಂತೆ ಎನಿಸತೊಡಗಿತು. ಅವನು ಧರ್ಮದಾಸನನ್ನು ಕರೆದು 'ಇಂದು ಮನೆ ಸೇರುವುದೂ ಕಷ್ಟವೆಂದು ತೋರುತ್ತದೆ' ಎಂದ.

ಧರ್ಮದಾಸ ಹೆದರಿ 'ಏಕೆ ದೇವದಾಸಬಾಬೂ? ಎಂದು ಕೇಳಿದ.

ದೇವದಾಸ ನಗಲು ಯತ್ನಿಸಿ 'ಪುನಃ ಜ್ವರ ಬಂದವು ಧರ್ಮದಾಸ!' ಎಂದ.

ಗಾಡಿ ಕಾಶಿಯನ್ನು ದಾಟಿ ಹೋಗುವ ವರೆಗೂ ದೇವದಾಸನಿಗೆ ಪ್ರಜ್ಞೆ ಇದ್ದಿಲ್ಲ. ಪಾಟಣಾದ ಹತ್ತಿರ ಬಂದ ಮೇಲೆ ಸ್ವಲ್ಪ ಪ್ರಜ್ಞೆ ಬಂದಿತು. ಆಗ ದೇವದಾಸ 'ಧರ್ಮದಾಸ! ತಾಯಿಯ ಬಳಿ ನಿಜವಾಗಿಯೂ ಹೋಗಲಾರೆವು' ಎಂದ.

'ಹಾಗಾದರೆ ಇಲ್ಲಿಯೆ ಪಾಟಣಾದಲ್ಲಿಳಿದು ಡಾಕ್ಟರರಿಗೆ ತೋರಿಸೋಣ.'

'ಇರಲಿ ಬಿಡು. ಇನ್ನು ನಾವು ಊರಿಗೆ ಹೋಗಿಯೆ ಗಾಡಿ ಇಳಿಯೋಣ.'

ಗಾಡಿ ಪಂಡುವಾ ನಿಲ್ದಾಣವನ್ನು ತಲ್ಪಿದಾಗ ನಸುಕಾಗಿತ್ತು. ರಾತ್ರಿಯೆಲ್ಲಾ ಮಳೆಯಾಗಿತ್ತು. ಮಳೆ ಬರುವುದು ನಿಂತು ಸ್ವಲ್ಪ ಹೊತ್ತಾಗಿತ್ತು. ದೇವದಾಸ ಎದ್ದು ನಿಂತ. ಕೆಳಗೆ ಧರ್ಮದಾಸ ಮಲಗಿದ್ದ. ಮೆಲ್ಲಗೆ ಅವನ ತಲೆಯ ಮೇಲೆ ಕೈಯಿಟ್ಟ. ಆದರೆ ನಾಚಿಕೆಯಿಂದ ಎಬ್ಬಿಸಲಿಲ್ಲ. ಬಳಿಕ ಮೆಲ್ಲನೆ ಬಾಗಿಲು ತೆರೆದು ಇಳಿದು ಪ್ಲ್ಯಾಟ್‌ಫಾರ್ಮಿನ ಮೇಲೆ ಬಂದ. ಗಾಡಿ, ಮಲಗಿದ ಧರ್ಮದಾಸನನ್ನು ಕರೆದುಕೊಂಡು ಹೊರಟು ಹೋಯಿತು. ದೇವದಾಸ ನಡುಗುತ್ತ ನಿಲ್ದಾಣದ ಹೊರಗೆ ಬಂದ. ಒಬ್ಬ ಕುದುರೆಗಾಡಿಯವನನ್ನು ಕರೆದು 'ಹಾಥಿಪೋತಾಕ್ಕೆ ಬರುವೆಯಾ?' ಎಂದು ಕೇಳಿದ.

ಗಾಡಿಯವನು ಒಂದು ಸಲ ದೇವದಾಸನ ಮುಖದ ಕಡೆ ನೋಡಿ 'ಇಲ್ಲ ಬಾಬೂ, ದಾರಿ ಚೆನ್ನಾಗಿಲ್ಲ. ಅಂತಹ ಕೆಸರಿನ ದಾರಿಯಲ್ಲಿ ಕುದುರೆ ಗಾಡಿ ಹೋಗುವುದಿಲ್ಲ' ಎಂದ.

ದೇವದಾಸ ಉದ್ವಿಗ್ನತೆಯಿಂದ 'ಪಲ್ಲಕ್ಕಿ ಸಿಕ್ಕುವುದಿಲ್ಲವೆ?' ಎಂದ.

'ಇಲ್ಲ' ಎಂದು ಉತ್ತರ ಬಂದಿತು.

ಇನ್ನು ಹೋಗುವುದಾಗುವುದಿಲ್ಲವೆ? ಎಂಬ ಸಂಶಯದಿಂದ ದೇವದಾಸ ಒಮ್ಮೆಲೇ ಕುಸಿದು ಬಿದ್ದುಬಿಟ್ಟ. ಅವನ ಮುಖ ಅವನ ಅಂತಿಮಾವಸ್ಥೆಯ ಗುರುತನ್ನು ತೋರಿಸುತ್ತಿತ್ತು. ಅದು ಒಬ್ಬ ಕುರುಡನಿಗೂ ಕಾಣುವ, ತಿಳಿಯುವ ಸಂಗತಿ.

ಗಾಡಿಯವನು ದಯಾರ್ದ್ರನಾಗಿ ಕೇಳಿದ 'ಬಾಬೂ, ಎತ್ತಿನಗಾಡಿ ಮಾಡಿಕೊಡಲೆ?'

'ಯಾವಾಗ ಮುಟ್ಟಬಹುದು?'

'ದಾರಿ ಚೆನ್ನಾಗಿಲ್ಲ. ಎರಡು ದಿನಗಳ ಮೇಲೆ ಮುಟ್ಟಬಹುದು.'

ದೇವದಾಸ ಮನಸ್ಸಿನಲ್ಲಿಯೆ ಯೋಚಿಸತೊಡಗಿದ: ಎರಡು ದಿನ

ಬದುಕಿ ಉಳಿಯುವೆನೊ ಇಲ್ಲವೊ ? ಆದರೆ ಪಾರ್ವತಿಯ ಬಳಿಗೆ ಹೋಗು ವುದು ಅವಶ್ಯವಿದೆ. ಅವನಿಗೆ ಈಗ ತನ್ನ ಹಿಂದಿನ ಆಯುಷ್ಯದಲ್ಲಿಯ ಅನಾಚಾರದ, ಸುಳ್ಳು ಆಶ್ವಾಸನಗಳ, ಅನೇಕ ಮೋಸಕೃತಿಗಳ ನೆನಪು ಆಗಲಾರಂಭಿಸಿತು. ಆದರೆ ಕೊನೆಯ ದಿನದ ಈ ಪ್ರತಿಜ್ಞೆಯನ್ನು ಮಾತ್ರ ನಿಜ ಮಾಡಿತೋರಿಸಬೇಕಾಗಿದೆ. ಏನೇ ಆಗಲಿ, ಅವಳನ್ನು ಕಾಣಲೇ ಬೇಕು. ಆದರೆ ಇನ್ನು ಈ ಜೀವ ಬಹಳ ಹೊತ್ತು ಉಳಿಯುವಂತಿಲ್ಲ. ಇದೇ ಅವನಿಗೆ ಚಿಂತೆಯಾಯಿತು.

ದೇವದಾಸ ಗಾಡಿಯಲ್ಲಿ ಕುಳಿತುಕೊಂಡಾಗ ಅವನಿಗೆ ತಾಯಿಯ ನೆನಪು ಬಂದಿತು. ಅವನು ವ್ಯಾಕುಲನಾಗಿ ಗಟ್ಟಿಯಾಗಿ ಅತ್ತುಬಿಟ್ಟ! ಜೀವನದ ಈ ಅಂತ್ಯಸಮಯದಲ್ಲಿ ಇನ್ನೊಂದು ಸ್ನೇಹಮಯೀ ಪವಿತ್ರ ಪ್ರತಿಮೆಯ ಛಾಯೆ ಕಂಡಿತು. ಈ ಛಾಯೆ ಚಂದ್ರಮುಖಿಯದು. ಯಾರನ್ನು ಪಾಪಿಷ್ಠಳೆಂದು ಯಾವಾಗಲೂ ತಿರಸ್ಕರಿಸಿದನೊ ಅವಳು ಇಂದು ತಾಯಿಯ ಪಕ್ಕದಲ್ಲಿ ಗೌರವಯುಕ್ತವಾದ ಆಸನದಲ್ಲಿ ಕುಳಿತಿರು ವುದನ್ನು ನೋಡಿ ದೇವದಾಸನ ಕಣ್ಣುಗಳಿಂದ ನೀರು ದಳದಳ ಹರಿಯಿತು. ಇನ್ನು ಈ ಜೀವನದಲ್ಲಿ ಅವಳನ್ನು ಕಾಣುವುದು ಎಂದೂ ಸಾಧ್ಯವಿಲ್ಲ. ಮತ್ತು ಅವಳಿಗೆ ದೇವದಾಸನ ವಿಷಯವೂ ಬಹಳ ದಿನಗಳವರೆಗೆ ತಿಳಿಯ ಲಿಕ್ಕಿಲ್ಲ ಕೂಡ. ಆದರೂ ಪಾರ್ವತಿಯ ಬಳಿಗೆ ಹೋಗಲೇಬೇಕು. ಅಂತಿಮ ಕಾಲದಲ್ಲಿ ಅವಳನ್ನು ಕಾಣುವೆನೆಂದು ಪ್ರತಿಜ್ಞೆ ಮಾಡಿದ್ದ. ಅದು ಇಂದು ಪೂರ್ತಿಯಾಗಬೇಕು. ದಾರಿ ಚೆನ್ನಾಗಿಲ್ಲ. ಅದು ಮಳೆಯಿಂದ ಕೆಸರಾಗಿ ಕೆಟ್ಟುಹೋಗಿದೆ. ಎತ್ತಿನ ಗಾಡಿ ಮೆಲ್ಲನೆ ಸಾಗಿದೆ. ಅಲ್ಲಲ್ಲಿ ಗಾಲಿಯನ್ನು ನೂಕಬೇಕಾಗುತ್ತದೆ. ಎತ್ತುಗಳನ್ನು ನಿರ್ದಯತನದಿಂದ ಹೊಡೆಯಬೇಕಾ ಗುತ್ತದೆ. ಆದರೆ ಈ ಹದಿನಾರು ಹರದಾರಿ ಹಾದಿಯನ್ನು ಮುಗಿಸಲೇಬೇಕು. ತಂಗಾಳಿ ಭರದಿಂದ ಬೀಸುತಿತ್ತು. ಇಂದು ಸಂಜೆಯಾದ ಮೇಲೆ ವಿಷಮ ಜ್ವರ ಬಂದುವು. ಅವನು ಗಾಬರಿಯಾಗಿ ಕೇಳಿದ 'ಗಾಡಿಕಾರ! ಇನ್ನೂ ಎಷ್ಟು ಹೋಗಬೇಕು ?'

'ಬಾಬೂ, ಇನ್ನೂ ೮–೧೦ ಹರದಾರಿ ಸಾಗಬೇಕು.'

'ಬೇಗನೇ ಮುಟ್ಟಿಸು. ನಿನಗೆ ಹೆಚ್ಚಾದ ಮೆಚ್ಚು ದೊರೆಯುವುದು' ಎಂದು ಜೇಬಿನಲ್ಲಿದ್ದ ನೂರು ರೂಪಾಯಿಗಳ ನೋಟನ್ನು ತೆಗೆದು ತೋರಿಸಿ 'ಬೇಗ ಗಾಡಿ ಹೊಡೆ. ನೂರು ರೂಪಾಯಿ ಮೆಚ್ಚನ್ನು ಕೊಡುವೆ' ಎಂದ.

ಬಳಿಕ ರಾತ್ರಿ ಹೇಗೆ ಯಾವಾಗ ಕಳೆಯಿತೊ ದೇವದಾಸನಿಗೆ ಗೊತ್ತಾಗಲಿಲ್ಲ. ಮೈಮೇಲೆ ಎಚ್ಚರವಿಲ್ಲದೆ ಅವನು ಮಲಗಿದ್ದ. ಬೆಳಗಾದ ಮೇಲೆ 'ಇನ್ನೂ ಎಷ್ಟು ದೂರ ಹೋಗಬೇಕು? ಏನು, ಈ ದಾರಿ ಮುಗಿಯುವುದಿಲ್ಲವೆ?' ಎಂದ.

'ಇನ್ನೂ ಆರು ಹರದಾರಿ ಇದೆ' ಎಂದ ಗಾಡಿಕಾರ.

ದೇವದಾಸ ನೀಳವಾದ ಉಸಿರುಬಿಟ್ಟು 'ಬೇಗನೆ ಹೊಡೆ. ಈಗ ಸಮಯವಿಲ್ಲ' ಎಂದ.

ಗಾಡಿಯವನಿಗೆ ಈ ಮಾತು ತಿಳಿಯಲಿಲ್ಲ. ಆದರೆ ಹೊಸ ಉತ್ಸಾಹದಿಂದ ಎತ್ತುಗಳನ್ನು ಹೊಡೆಯುತ್ತ, ಬೈಯುತ್ತ ಗಾಡಿ ಹೊಡೆಯತೊಡಗಿದ. ಗಾಡಿ ಮುಂದುವರಿಯುತಿದ್ದಿತು. ದೇವದಾಸ ಒಳಗೆ ಚಡಪಡಿಸುತ್ತಿದ್ದ. ಒಂದೇ ಒಂದು ಚಿಂತೆ 'ಮುಟ್ಟುವೆನೊ ಇಲ್ಲವೊ? ಕಾಣುವೆನೊ ಇಲ್ಲವೊ?' ಎಂದು.

ಮಧ್ಯಾಹ್ನ ಗಾಡಿ ನಿಂತಿತ್ತು. ಗಾಡಿಕಾರ ಎತ್ತುಗಳಿಗೆ ಮೇವು ಹಾಕಿ ಊಟ ಮುಗಿಸಿಕೊಂಡು 'ಬಾಬೂಜಿ, ನೀವು ಊಟ ಮಾಡುವುದಿಲ್ಲವೆ?' ಎಂದು ಕೇಳಿದ.

'ಇಲ್ಲ, ನೀರಡಿಕೆಯಾಗಿದೆ. ಸ್ವಲ್ಪ ನೀರು ಕೊಡುವೆಯಾ?'

ಅವನು ಬಳಿಯಲ್ಲಿಯ ಕೆರೆಯಿಂದ ನೀರು ತಂದು ಕೊಟ್ಟ. ಇಂದು ಸಂಜೆ ಜ್ವರದೊಡನೆ ದೇವದಾಸನ ಮೂಗಿನಿಂದ ಹನಿಹನಿಯಾಗಿ ರಕ್ತ ಬೀಳತೊಡಗಿತು. ಜೋರಿನಿಂದ ಮೂಗನ್ನು ಒತ್ತಿ ಹಿಡಿದ. ಬಳಿಕ ರಕ್ತ ಹಲ್ಲಿನೊಳಗಿಂದ ಬರತೊಡಗಿತು. ಉಸಿರಾಡಿಸುವುದಕ್ಕೂ ತೊಂದರೆ. ತೇಕುತ್ತ ತೇಕುತ್ತ 'ಎಷ್ಟು ದೂರ ಇನ್ನೂ?' ಎಂದ.

'ಎರಡು ಹರದಾರಿ. ರಾತ್ರಿ ಹತ್ತು ಗಂಟೆಗೆ ಸೇರುವೆವು.'

ದೇವದಾಸ ಬಹಳ ಕಷ್ಟದಿಂದ ದಾರಿಯ ಕಡೆಗೆ ನೋಡಿ 'ಪರಮಾತ್ಮಾ!' ಎಂದ.

'ಹೇಗಿದೆ ಮೈಯಲ್ಲಿ ಬಾಬೂ?'

ದೇವದಾಸ ಈ ಮಾತಿಗೆ ಉತ್ತರ ಕೊಡದಾದ. ಗಾಡಿ ಹಾಗೆಯೆ ನಡೆದಿತ್ತು. ಆದರೆ ರಾತ್ರಿ ಹತ್ತು ಗಂಟೆಗೆ ತಪ್ಪಲಿಲ್ಲ. ಸುಮಾರು ಹನ್ನೆರಡು ಗಂಟೆಗೆ ಹಾಥೀಪೋತಾ ಜಮೀನುದಾರರ ಮನೆಯ ಎದುರಿನಲ್ಲಿದ್ದ ಅಶ್ವತ್ಥ ಮರದ ಕೆಳಗೆ ಬಂದು ನಿಂತಿತು.

'ಬಾಬೂ, ಇಳಿಯಿರಿ.'

ಉತ್ತರ ಬರಲಿಲ್ಲ. ಪುನಃ ಕೂಗಿದ. ಆದರೂ ಉತ್ತರವಿಲ್ಲ. ಆಗ ಅವನು ಹೆದರಿ ದೀಪ ತಂದು ನೋಡಿ ಕೇಳಿದ 'ಬಾಬೂ, ಮಲಗಿಕೊಂಡಿರಾ?'

ದೇವದಾಸ ನೋಡುತ್ತಿದ್ದ. ಏನೋ ಹೇಳಬೇಕೆನ್ನುತ್ತಿದ್ದ. ತುಟಿಗಳು ಮಾತ್ರ ಅಲ್ಲಾಡುತ್ತಿದ್ದುವು. ಮಾತು ಹೊರಡಲೊಲ್ಲದು. ಬಂಡಿಯವನು ಮತ್ತೆ 'ಬಾಬೂಜಿ' ಎಂದು ಕೂಗಿದ.

ದೇವದಾಸ ಕೈ ಎತ್ತಬೇಕೆಂದ; ಎತ್ತುವುದಾಗಲಿಲ್ಲ. ಆದರೆ ಎರಡು ಹನಿಗಳು ಮಾತ್ರ ಕಣ್ಣಿನ ಕುಡಿಯಿಂದ ಪಳಕ್ಕನೆ ಬಿದ್ದುವು. ಆಗ ಬಂಡಿಯವನು ತನ್ನ ಬುದ್ಧಿಗೆ ತಿಳಿದಂತೆ ಬಿದಿರಿನ ಗಳಗಳಿಂದ ಒಂದು ಮಂಚವನ್ನು ಮಾಡಿದ. ಅದರ ಮೇಲೆ ಹಾಸಿ, ಬಹಳ ಕಷ್ಟದಿಂದ ದೇವದಾಸನನ್ನು ಹೊತ್ತು ಹೊರಗೆ ತಂದು ಮಲಗಿಸಿದ. ಹೊರಗೆ ಒಬ್ಬ ಮನುಷ್ಯನೂ ಕಾಣುತ್ತಿರಲಿಲ್ಲ. ಜಮೀನುದಾರರ ಮನೆಯಲ್ಲಿ ಎಲ್ಲರೂ ಮಲಗಿದ್ದರು. ದೇವದಾಸ ನೂರು ರೂಪಾಯಿಗಳ ನೋಟನ್ನು ಬಹಳ ಕಷ್ಟದಿಂದ ಹೊರಗೆ ತೆಗೆದ. ದೇವದಾಸ ತನ್ನ ಕಡೆಗೇ ನೋಡುತಿದ್ದಾನೆ; ಆದರೆ ಮಾತನಾಡಲಾರನೆಂಬುದನ್ನು ಗಾಡಿಕಾರ ಬೆಳಕಿನಲ್ಲಿ ಕಂಡು ಹಿಡಿದ. ಅವನು ನೋಟನ್ನು ತೆಗೆದುಕೊಂಡು ತನ್ನ ವಸ್ತ್ರದಲ್ಲಿ ಕಟ್ಟಿಕೊಂಡ. ದೇವದಾಸನ ಮೈಮೇಲೆ ಶಾಲು ಹೊದೆಸಿದ. ಎದುರಿಗೆ ಕಂದೀಲು ಉರಿಯುತಿದ್ದಿತು. ಬಳಿಯಲ್ಲಿ ಹೊಸ ಜೊತೆಗಾರ ಗಾಡಿಕಾರ ಕುಳಿತಿದ್ದ.

ಕತ್ತಲು ಹರಿಯಿತು. ಬೆಳಿಗ್ಗೆ ಜಮೀನುದಾರರ ಮನೆಯಿಂದ ಜನರು ಹೊರಬಿದ್ದರು. ಅವರು ಕಂಡುದು ಅದೊಂದು ಆಶ್ಚರ್ಯಕಾರಕ ದೃಶ್ಯ! ಮರದ ಕೆಳಗೆ ಒಬ್ಬ ಮನುಷ್ಯ ಸಾಯುತಿದ್ದ. ಸತ್ಕುಲ ಪ್ರಸೂತ ನಂತಿದ್ದಾನೆ! ಮೈಮೇಲೆ ಒಂದು ಶಾಲು ಇತ್ತು. ಕಾಲಿನಲ್ಲಿ ಮಿರುಗುವ ಚಪ್ಪಲಿಗಳು. ಕೈಯಲ್ಲಿ ಉಂಗುರ! ಒಬ್ಬೊಬ್ಬರಂತೆ ಬಹಳ ಜನರು ಒಟ್ಟುಸೇರಿದರು. ಈ ಸುದ್ದಿ ಭುವನಬಾಬುಗಳ ಕಿವಿಯ ವರೆಗೂ ಹೋಯಿತು. ಅವರು ಡಾಕ್ಟರುಗಳನ್ನು ಜೊತೆಯಲ್ಲಿ ಕರೆದುಕೊಂಡು ಸ್ವತಃ ಅಲ್ಲಿಗೆ ಬಂದರು. ದೇವದಾಸ ಎಲ್ಲರನ್ನೂ ನೋಡಿದ. ಆದರೆ ಅವನ ಕಂಠ ರುದ್ಧವಾಗಿತ್ತು. ಒಂದೂ ಮಾತನ್ನು ಆಡದಾದ. ಕಣ್ಣುಗಳಿಂದ ನೀರು ಒಂದೇ ಸಮನೆ ಹರಿಯುತಿತ್ತು. ಗಾಡಿಯವನು ತನಗೆ ಗೊತ್ತಿ ದ್ದುದನ್ನು ಹೇಳಿದ. ಅವನಿಂದ ಹೆಚ್ಚು ಸಮಾಚಾರವೇನೂ ತಿಳಿಯ ಲಿಲ್ಲ. ಡಾಕ್ಟರರು ಹೇಳಿದರು 'ಊರ್ಧ್ವಶ್ವಾಸ ಆರಂಭವಾಗಿದೆ. ಇನ್ನು ಕೂಡಲೇ ಮರಣವಾಗುವುದು' ಎಂದು.

ಎಲ್ಲರೂ 'ಅಯ್ಯೋ ಪಾಪ!' ಎಂದರು.

ಮನೆಯಲ್ಲಿ ಕುಳಿತುಕೊಂಡು ಈ ಕರುಣಾಜನಕ ಕತೆಯನ್ನು ಕೇಳಿ ಪಾರ್ವತಿಯೂ ಮಿಡುಕಿದಳು.

ಯಾವನೊ ಒಬ್ಬನು ಕರುಣೆಯಿಂದ ಒಂದು ಗುಟುಕು ನೀರು, ಒಂದು ತುಳಸೀದಳವನ್ನು ದೇವದಾಸನ ಬಾಯಿಯಲ್ಲಿ ಹಾಕಿದ. ದೇವ ದಾಸ ಅವನ ಕಡೆ ಕರುಣಾಪೂರಿತ ನೋಟದಿಂದ ನೋಡಿದ. ಬಳಿಕ ಕಣ್ಣು ಮುಚ್ಚಿಕೊಂಡ! ಸ್ವಲ್ಪ ಹೊತ್ತು ಉಸಿರಾಡುತಿತ್ತು. ಬಳಿಕ ಕೊನೆಯ ವರೆಗೂ ನಿಂತುಹೋಯಿತು! ಶಾಂತವಾಯಿತು!

ದಹನ ಕರ್ಮವನ್ನು ಯಾರು ಮಾಡಬೇಕು? ಯಾರು ಮುಟ್ಟ ಬೇಕು? ಯಾವ ಜಾತಿ? ಇತ್ಯಾದಿ ಪ್ರಶ್ನೆಗಳ ಮೇಲೆ ತರ್ಕ-ವಿತರ್ಕಗಳು ನಡೆದುವು. ಸಮೀಪದಲ್ಲಿದ್ದ ಪೋಲೀಸ್ ಸ್ಟೇಶನ್ನಿಗೆ ಭುವನಬಾಬುಗಳು ಸುದ್ದಿ ಮುಟ್ಟಿಸಿದರು. ಪೋಲೀಸ್ ಇನ್ಸ್‌ಪೆಕ್ಟರರು ಬಂದು ಎಲ್ಲವನ್ನೂ ನೋಡಿದರು. 'ಪ್ಲೀಹ ಮತ್ತು ಯಕೃತ್ತುಗಳು ಬೆಳೆದುದರಿಂದ

ಮರಣವಾಗಿದೆ. ಮೂಗು, ಬಾಯಿಗಳ ಮೇಲೆ ರಕ್ತದ ಕಲೆಗಳಿವೆ' ಎಂದು ಬರೆದುಕೊಂಡರು. ದೇವದಾಸನ ಜೇಬಿನಿಂದ ಎರಡು ಪತ್ರಗಳು ಹೊರ ಬಿದ್ದುವು. ಒಂದರಲ್ಲಿ ತಾಲಸೋನಾಪುರದ ದ್ವಿಜದಾಸ ಉಪಾಧ್ಯಾಯರು ದೇವದಾಸನಿಗೆ ಇನ್ನು ರೂಪಾಯಿಗಳು ಸಿಗಲಾರವೆಂದು ಬರೆದಿದ್ದರು. ಮತ್ತೊಂದು ಪತ್ರದಲ್ಲಿ ಕಾಶಿಯಿಂದ ಅವರ ತಾಯಿ ಹರಿಮತೀದೇವಿಯವರು 'ಹೇಗಿದ್ದೀಯಾ?' ಎಂದು ಕೇಳಿದ್ದರು.

ಎಡಗೈ ಮೇಲೆ ಇಂಗ್ಲೀಷಿನಲ್ಲಿ ದೇವದಾಸನ ಹೆಸರಿನ ಮೊದಲನೆ ಅಕ್ಷರದ ಹಚ್ಚೆಯಿದ್ದಿತು. ಇನ್ಸ್‌ಪೆಕ್ಟರರು ಇದನ್ನು ನೋಡಿ 'ಈ ಮನುಷ್ಯ ದೇವದಾಸ' ಎಂದು ನಿಶ್ಚೈಸಿದರು.

ಕೈಯಲ್ಲಿದ್ದ ಒಂದು ನೀಲಮಣಿಯ ಉಂಗುರದ ಬೆಲೆ ಸುಮಾರು ಒಂದುವರೆ ನೂರು ರೂಪಾಯಿ ಆಗಬಹುದು. ಎರಡು ಶಾಲು ಜೋಡಿಗಳಿದ್ದುವು. ಬೆಲೆ ಸುಮಾರು ಇನ್ನೂರು ರೂಪಾಯಿ. ಕೋಟು, ಶರ್ಟ್, ಪಂಚೆ ಇತ್ಯಾದಿ ಎಂದು ಬರೆದುಕೊಂಡರು. ಚೌಧುರಿಗಳು ಮತ್ತು ಮಹೇಂದ್ರ ಇಬ್ಬರೂ ಅಲ್ಲಿದ್ದರು. ತಾಲಸೋನಾಪುರದ ಹೆಸರು ಕೇಳಿ ಮಹೇಂದ್ರನೆಂದ 'ಚಿಕ್ಕಮ್ಮನ ಮನೆಯವರಾರಾದರೂ ಇರಲಿಕ್ಕಿಲ್ಲವಷ್ಟೆ?....'

ಚೌಧುರಿಯವರು ನಡುವೆ ಬಾಯಿ ಹಾಕಿ 'ಅವಳೇನು ಇಲ್ಲಿಗೆ ಗುರುತಿಸಲು ಬರಬೇಕೇ?' ಎಂದರು.

ಇನ್ಸ್‌ಪೆಕ್ಟರರು 'ಹುಚ್ಚನೇನೋ ನೀನು?' ಎಂದರು.

ಮೃತ ದೇಹ ಬ್ರಾಹ್ಮಣನದಿದ್ದರೂ ಊರಲ್ಲಿ ಯಾರೂ ಅದನ್ನು ಮುಟ್ಟಲು ಒಪ್ಪಲಿಲ್ಲ. ಅದರಿಂದ ಚಂಡಾಲರು ಅದನ್ನು ಕಟ್ಟಿಕೊಂಡು ತೆಗೆದುಕೊಂಡು ಹೋದರು. ಬತ್ತಿದ ಒಂದು ಕೆರೆಯ ದಡದ ಮೇಲೆ ಒಣಗಿದ ಶರೀರವನ್ನು ಚೆಲ್ಲಿಬಿಟ್ಟರು. ಹದ್ದು, ಕಾಗೆ, ನರಿ, ನಾಯಿಗಳು ತಿನ್ನಲಾರಂಭಿಸಿದುವು. ಆದರೂ ಕೇಳಿದವರ ಬಾಯಿಯಿಂದ 'ಅಯ್ಯೋ!' ಎಂದು ಉದ್ಗಾರ ಹೊರಡುತಿತ್ತು. ದಾಸ–ದಾಸಿಯರೂ ಅಲ್ಲಲ್ಲಿ ಚರ್ಚೆ

ಮಾಡುತಿದ್ದರು ದೊಡ್ಡ ಮನುಷ್ಯರಿದ್ದರೆಂದು ! ಇನ್ನೂರು ರೂಪಾಯಿಗಳ ಶಾಲು, ಒಂದುವರೆ ನೂರು ರೂಪಾಯಿಯ ಉಂಗುರ, ಇತ್ಯಾದಿ ಇನ್ಸ್‌ಪೆಕ್ಟರರಲ್ಲಿ ಜವಾ ಆದುವು. ಎರಡು ಪತ್ರಗಳಿದ್ದುವು. ಅವನ್ನೂ ಅವರೇ ತಮ್ಮಲ್ಲಿ ಇಟ್ಟುಕೊಂಡರು.

ಇದೆಲ್ಲ ಸುದ್ದಿ ಪಾರ್ವತಿಯ ಕಿವಿಯ ವರೆಗೂ ಹೋಯಿತು. ಆದರೆ ಇತ್ತೀಚೆ ಅವಳ ಮನದಲ್ಲಿಯೆ ನೆಮ್ಮದಿ ಇರಲಿಲ್ಲ. ಅವಳು ಯಾವ ವಿಷಯದ ಕಡೆಗೂ ಅಷ್ಟು ಗಮನಕೊಡುತ್ತಿಲ್ಲ. ಅದರಂತೆ ಈ ವಿಷಯ ಕೂಡ ಅವಳಿಗೆ ಚೆನ್ನಾಗಿ ತಿಳಿಯಲಿಲ್ಲ. ಆದರೆ ಎಲ್ಲರ ಬಾಯಲ್ಲೂ ಈ ವಿಷಯ ಚರ್ಚಿಸಲ್ಪಡುತಿದ್ದ ಕಾರಣ ಸ್ವಲ್ಪ ಹೆಚ್ಚಾಗಿ ತಿಳಿದುಕೊಳ್ಳಬೇಕೆಂದು ಒಬ್ಬ ದಾಸಿಯನ್ನು ಕೇಳಿದಳು. 'ಏನಾಯಿತು ? ಯಾರು ಸತ್ತರು ?'

'ಅಯ್ಯೋ ! ಯಾರಿಗೂ ಇದು ತಿಳಿಯದಮ್ಮಾ ! ಹಿಂದಿನ ಜನ್ಮದಲ್ಲಿ ಈ ಭೂಮಿಯ ಋಣ ತಿಂದಿರಬಹುದು. ಅದಕ್ಕೋಸುಗ ಇಲ್ಲಿ ಬಂದು ಸತ್ತ. ಯಾರೋ ಏನೋ ? ನಿನ್ನೆ ರಾತ್ರಿಯೆಲ್ಲಾ ಇಲ್ಲೇ ಬಿದ್ದುಕೊಂಡಿದ್ದ. ಇಂದು ಬೆಳಿಗ್ಗೆ ತೀರಿಕೊಂಡ.'

ಪಾರ್ವತಿ ಒಂದು ನೀಳವಾದ ಉಸಿರುಬಿಟ್ಟು 'ಅವನ ವಿಷಯ ಯಾರಿಗೂ ತಿಳಿಯದೆ ?' ಎಂದಳು.

'ಮಹೇಂದ್ರಬಾಬುಗಳಿಗೆ ಗೊತ್ತಿರಬಹುದು. ನನಗೆ ಗೊತ್ತಿಲ್ಲ.'

ಮಹೇಂದ್ರನನ್ನು ಕರೆಕಳಿಸಿದಳು. ಅವನು ಬಂದು 'ನಿಮ್ಮ ದೇಶದವರು. ದೇವದಾಸ ಮುಖ್ಯೋಪಾಧ್ಯಾಯರು ಸತ್ತವರು' ಎಂದ.

ಪಾರ್ವತಿ ಮಹೇಂದ್ರನ ತೀರ ಹತ್ತಿರಕ್ಕೆ ಬಂದಳು. ಒಂದು ತೀಕ್ಷ್ಣ ದೃಷ್ಟಿಯಿಂದ ನೋಡಿ 'ದೇವದಾಸರೆ ? ನಿನಗೆ ಹೇಗೆ ಗೊತ್ತಾಯಿತು ?' ಎಂದಳು.

'ಜೇಬಿನಲ್ಲಿ ಎರಡು ಕಾಗದಗಳಿದ್ದುವು. ಒಂದು ದ್ವಿಜದಾಸರದು....'

ಪಾರ್ವತಿ ನಡುವೇ ಬಾಯಿ ಹಾಕಿ 'ಹೌದು, ಅವರ ಅಣ್ಣನದು' ಎಂದಳು.

'ಇನ್ನೊಂದು, ಕಾಶಿಯಿಂದ ಹರಿಮತೀದೇವಿಯವರು ಬರೆದುದು.'

'ಹೌದು, ಅವರ ತಾಯಿ.'

'ಕೈಮೇಲೆ ಹೆಸರಿನ ಹಚ್ಚೆ ಇದ್ದಿತು.'

'ಹೌದು, ಮೊಟ್ಟಮೊದಲು ಕಲಕತ್ತೆಗೆ ಹೋದಾಗ ಚುಚ್ಚಿಸಿಕೊಂಡಿದ್ದರು.'

'ಒಂದು ನೀಲಮಣಿಯ ಉಂಗುರವಿತ್ತು....'

'ಅವರ ತಂದೆಯವರಿದ್ದಾಗ ಅವರ ದೊಡ್ಡಪ್ಪ ಅವರಿಗೆ ಕೊಟ್ಟಿದ್ದರು.. ನಾನು ಹೋಗುವೆ....' ಎಂದು ಎನ್ನುತ್ತ ಎನ್ನುತ್ತ ಪಾರ್ವತಿ ಓಡಿದಳು. ಮಹೇಂದ್ರ ಹತಬುದ್ಧನಾಗಿ ಎಂದ 'ಅಮ್ಮಾ! ಎಲ್ಲಿಗೆ ಹೋಗುತ್ತಿ?'

'ದೇವದಾಸರ ಹತ್ತಿರ!'

'ಈಗ ಅವರಿಲ್ಲ. ಮಾದಿಗರು ಹೊತ್ತುಕೊಂಡು ಹೋದರು.!'

'ಅಯ್ಯಯ್ಯೋ!' ಎಂದು ಅಳುತಳುತ್ತ ಪಾರ್ವತಿ ಓಡಿದಳು. ಮಹೇಂದ್ರನೂ ಓಡುತ್ತ ಬಂದು ಅವಳೆದುರಿಗೆ ನಿಂತ. 'ಏನಮ್ಮಾ, ಹುಚ್ಚು ಹಿಡಿಯಿತೆ?' ಎಂದ.

ಪಾರ್ವತಿ ಅವನ ಕಡೆ ತೀಕ್ಷ್ಣದೃಷ್ಟಿಯಿಂದ ನೋಡಿ 'ಏನು ಮಹೇಂದ್ರ, ನನ್ನನ್ನು ನಿಜವಾಗಿಯೂ ಹುಚ್ಚಿಯೆಂದು ಭಾವಿಸಿದೆಯಾ? ಸರಿ, ದಾರಿ ಬಿಡು' ಎಂದಳು.

ಅವಳ ಕಡೆಗೆ ನೋಡಿ ಮಹೇಂದ್ರ ದಾರಿಬಿಟ್ಟ. ಬಳಿಕ ಸುಮ್ಮನೆ ಹಿಂದಿನಿಂದ ಹೊರಟ. ಆಗ ಹೊರಗೆ ಆಳುಮಕ್ಕಳು ಕೆಲಸ ಮಾಡುತಿದ್ದರು. ಅವರೂ ನೋಡತೊಡಗಿದರು. ಚೌಧುರಿಯವರು ಕನ್ನಡಕ ಹಾಕಿಕೊಂಡು ನೋಡಿ 'ಯಾರು ಹೋಗುತಿದ್ದವರು?' ಎಂದು ಕೇಳಿದರು.

'ಚಿಕ್ಕಮ್ಮ.'

'ಅದೇಕೆ? ಎಲ್ಲಿಗೆ ಹೋಗುತ್ತಾಳೆ?'

'ದೇವದಾಸನನ್ನು ನೋಡುವುದಕ್ಕೆ.'

ಆಗ ಚೌಧುರಿಯವರು ಕೂಗಿ, ಉಚ್ಚ ಸ್ವರದಿಂದ 'ನಿಮ್ಮೆಲ್ಲರ ಬುದ್ಧಿ ಎಲ್ಲಿ ಹಾಳಾಗಿ ಹೋಯಿತು? ಹಿಡಿಯಿರಿ ಆಕೆಯನ್ನು, ಹಿಡಿಯಿರಿ. ಹಿಡಿದು ಕರೆದುಕೊಂಡು ಬನ್ನಿ ಇಲ್ಲಿಗೆ. ಎಲ್ಲರೂ ಹುಚ್ಚರಾಗಿರೇನು? ಮಹೇಂದ್ರ, ಓಡು ಬೇಗ!' ಎಂದರು.

ಬಳಿಕ ದಾಸ-ದಾಸಿಯರೆಲ್ಲರೂ ಹಿಡಿಹೋಗಿ ನಡುದಾರಿಯಲ್ಲಿ ಬಿದ್ದ ಪಾರ್ವತಿಯ ಮೂರ್ಛಿತ ಶರೀರವನ್ನು ಒಳಗೆ ತಂದು ಹಾಕಿದರು. ಮರುದಿನ ಅವಳ ಮೂರ್ಛೆ ಹೋಯಿತು. ಆದರೆ ಅವಳು ಒಂದು ಮಾತನ್ನೂ ಆಡಲಿಲ್ಲ. ಒಬ್ಬ ದಾಸಿಯನ್ನು ಮಾತ್ರ ಕರೆದು ಕೇಳಿದಳು 'ರಾತ್ರಿ ಬಂದಿದ್ದರು ಅಲ್ಲವೆ! ಅಂ, ಇಡೀ ರಾತ್ರಿ!'

ಬಳಿಕ ಪಾರ್ವತಿ ಸುಮ್ಮನಾದಳು.

‡ ‡ ‡ ‡

ಎಷ್ಟೋ ದಿನಗಳಾಗಿವೆ. ಪಾರ್ವತಿಯ ಗತಿ ಏನಾಗಿದೆಯೆಂಬುದು ಗೊತ್ತಿಲ್ಲ. ಅದನ್ನು ತಿಳಿಯಬೇಕೆಂದು ಇಚ್ಛೆಯೂ ಆಗುವುದಿಲ್ಲ. ಆದರೆ ದೇವದಾಸನ ಬಗ್ಗೆ ಮಾತ್ರ ದುಃಖವಾಗುತ್ತದೆ. ಈ ಕತೆಯನ್ನು ಓದಿದವರೂ ನಮ್ಮಂತೆಯೇ ದುಃಖಪಡಬಹುದು. ಆದರೆ ದೇವದಾಸನಂತಹ ನಿರ್ಭಾಗ್ಯ, ಸಂಯಮ ರಹಿತ, ಪಾಪೀವ್ಯಕ್ತಿಯ ಪರಿಚಯ ನಿಮಗೆ ಇದ್ದರೆ ಅವನಿಗಾಗಿ ನೀವು ಪರಮಾತ್ಮನನ್ನು ಪ್ರಾರ್ಥಿಸಬೇಕು: 'ದೇವದಾಸನಂತೆ ಯಾರ ಮರಣವೂ ಆಗದಿರಲಿ. ಸಾವು ಬಂದರೂ ಪರವಿಲ್ಲ. ಆದರೆ ಆ ಸಾವಿನ ಸಮಯದಲ್ಲಿ ಸ್ನೇಹಪೂರ್ಣವಾದ ಕರಸ್ಪರ್ಶ ಅವನ ತಲೆಯನ್ನು ತಟ್ಟುತ್ತಿರಲಿ. ಕರುಣಾಪೂರಿತವಾದ, ಸ್ನೇಹಪೂರ್ಣವಾದ ಮುಖವೊಂದನ್ನು ನೋಡುತ್ತ ಅವನ ಜೀವನದ ಕೊನೆಯಾಗಲಿ. ಸಾಯುವ ಕಾಲದಲ್ಲಿ ಯಾರ ಕಣ್ಣಲ್ಲಿಯೇ ಆಗಲಿ, ಒಂದೆರಡು ಕಂಬನಿಗಳನ್ನು ನೋಡಿ ಸಾಯಲಿ!'